ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ರಸ್ತೆಬದಿ ಗುರುತ್ವಾಕರ್ಷಣೆಗೆ ಅನುಗುಣವಾಗಿ ಹರಿಯುವ ನೀರನ್ನೇ ಬಳಸಿ ರಸ್ತೆಯ ಮೇಲೆ ಗುರುತ್ವಾಕರ್ಷಣೆಗೆ ವಿರುದ್ಧ ದಿಕ್ಕಿನಲ್ಲಿ ಕಾರು ಓಡಬಹುದು!

ಆಳ-ಅಗಲ
ಇಟಿಎಫ್ ಜನಪ್ರಿಯತೆಯ ನಾಗಾಲೋಟ

‘ಕಲಾಪ ಸ್ಥಗಿತಕ್ಕೆ ಸರ್ಕಾರವೇ ಹೊಣೆ’ 11

ಮತ ಖಚಿತಪಡಿಸಿಕೊಳ್ಳಲು ಆಣೆ, ಪ್ರಮಾಣ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
57,633 ▲	17,176 ▲	₹49,410 (ಬೆಂಗಳೂರು) ▲	₹62,900 (ಬೆಂಗಳೂರು) ▲	75.44 ▲

ಕೆನರಾ ಬ್ಯಾಂಕ್ Canara Bank
ಭಾರತ ಸರ್ಕಾರದ ಒಂದು ಉದ್ಯಮ
A Government of India Undertaking
Together We Can
ಗೃಹ ಸಾಲದ ಬಡ್ಡಿದರವನ್ನು ಕಡಿತಗೊಳಿಸಲಾಗಿದೆ
ಯಾವುದೇ ಮೊತ್ತಕ್ಕೆ
6.65% ಪ್ರ.ವ.
ಸೀಮಿತ ಅವಧಿಯ ಕೊಡುಗೆ
ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಸ್ಕ್ಯಾನ್ ಮಾಡಿ ಮತ್ತು ತಕ್ಷಣ ಅನುಮೋದನೆ ಪಡೆಯಿರಿ • ಸಂಸ್ಕರಣೆ ಮತ್ತು ದಸ್ತಾವೇಜು ಶುಲ್ಕಗಳಿಲ್ಲ
ಕೆನರಾ ಕರೆ ಮಾಡಿ ☎ 1800 425 0018

ಓಮೈಕ್ರಾನ್: ಸಿ.ಎಂ ಸಭೆ ಇಂದು

ಕೋವಿಡ್ ನಿಯಂತ್ರಣಕ್ಕೆ ಅಣಿ: 17 ಸದಸ್ಯರಿರುವ ತಜ್ಞರ ಹೊಸ ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಿಯಂತ್ರಣಕ್ಕೆ ತಜ್ಞರ ಸಮಿತಿಯನ್ನು ಹೊಸದಾಗಿ ರಚಿಸಿರುವ ರಾಜ್ಯ ಸರ್ಕಾರ, ಮತ್ತಷ್ಟು ಬಿಗಿ ಕ್ರಮಗಳನ್ನು ಕೈಗೊಳ್ಳಲು ಮುಂದಾಗಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ಬುಧವಾರ ಉನ್ನತ ಮಟ್ಟದ ಸಭೆ ನಡೆಯಲಿದ್ದು, ಬಳಿಕ ಹೊಸ ಮಾರ್ಗಸೂಚಿ ಪ್ರಕಟವಾಗುವ ಸಾಧ್ಯತೆ ಇದೆ.

ಕಂದಾಯ ಸಚಿವ ಆರ್. ಅಶೋಕ, ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, ಆರೋಗ್ಯ ಸಚಿವ ಡಾ.ಕೆ. ಸುಧಾಕರ್, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ, ವೈದ್ಯಕೀಯ ಶಿಕ್ಷಣ, ಕಂದಾಯ, ಹಣಕಾಸು, ನಗರಾಭಿವೃದ್ಧಿ ಇಲಾಖೆಗಳು ಹಾಗೂ ಬಿಬಿಎಂಪಿಯ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ವಿಧಾನ ಪರಿಷತ್‌ನ 25 ಕ್ಷೇತ್ರಗಳಿಗೆ ಚುನಾವಣೆ ನಡೆಯುತ್ತಿರುವುದರಿಂದ ಕೋವಿಡ್ ನಿಯಂತ್ರಣ ಮಾರ್ಗಸೂಚಿಗಳಲ್ಲಿ ಬದಲಾವಣೆ ಮಾಡಿರಲಿಲ್ಲ. ಆದರೆ, ಓಮೈಕ್ರಾನ್ ತಳಿಯ ಕೊರೊನಾ ವೈರಾಣು ಸೋಂಕು ರಾಜ್ಯದಲ್ಲಿ ಪತ್ತೆಯಾಗಿರುವುದು ಮತ್ತು ಕೆಲವು ಶಾಲೆ, ಕಾಲೇಜುಗಳಲ್ಲಿ ಗುಂಪಾಗಿ ಕೋವಿಡ್ ಪ್ರಕರಣಗಳು ಪತ್ತೆಯಾಗುತ್ತಿರುವುದು ರಾಜ್ಯ ಸರ್ಕಾರವನ್ನು ಚಿಂತೆಗೀಡು ಮಾಡಿದೆ. ಪರಿಸ್ಥಿತಿ ಕೈಮೀರದಂತೆ ತಡೆಯಲು ಬಿಗಿಯಾದ ಕ್ರಮಗಳಿರುವ ಹೊಸ ಮಾರ್ಗಸೂಚಿಯನ್ನು ಉನ್ನತ ಮಟ್ಟದ ಸಭೆಯ ಬಳಿಕ ಪ್ರಕಟಿಸುವ ಸಂಭವವಿದೆ ಎಂದು ಮೂಲಗಳು ತಿಳಿಸಿವೆ.

17 ಸದಸ್ಯರ ಸಮಿತಿ: ಕೋವಿಡ್ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ (ಬಿಎಂಸಿಆರ್‌ಐ) ಔಷಧಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ.ಕೆ. ರವಿ ಅಧ್ಯಕ್ಷತೆಯಲ್ಲಿ 17 ಮಂದಿ ಒಳಗೊಂಡ ಸಮಿತಿಯನ್ನು ವೈದ್ಯಕೀಯ ಶಿಕ್ಷಣ ಇಲಾಖೆ ರಚಿಸಿದೆ.

ವಿಶ್ವ ಆರೋಗ್ಯ ಸಂಸ್ಥೆ, ಕೇಂದ್ರ ಹಾಗೂ ರಾಜ್ಯ ಸರ್ಕಾರ ನೀಡುವ ಸೂಚನೆ, ಆದೇಶಗಳನ್ನು ಸಮಿತಿ ಕಾರ್ಯಗತಗೊಳಿಸಬೇಕು. ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳ ನಡುವೆ ಸಮನ್ವಯ ಸಾಧಿಸಲು ಕ್ರಮವಹಿಸಬೇಕು. ಆಸ್ಪತ್ರೆಗಳಿಗೆ ಅಗತ್ಯ ಸಲಹೆ ಮತ್ತು ಸೂಚನೆಗಳನ್ನು ನೀಡಿ, ಕೋವಿಡ್ ಪೀಡಿತರಿಗೆ ಹಾಸಿಗೆಗಳನ್ನು ವ್ಯವಸ್ಥೆ ಮಾಡಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ವೈದ್ಯಕೀಯ ಶಿಕ್ಷಣ ಇಲಾಖೆಯ ನಿರ್ದೇಶಕ ಡಾ.ಪಿ.ಜಿ. ಗಿರೀಶ್ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿದ್ದು, ಖಾಸಗಿ ಆಸ್ಪತ್ರೆಗಳ ವೈದ್ಯರು ಸೇರಿದಂತೆ 15 ಮಂದಿ ಸದಸ್ಯರು ಸಮಿತಿಯಲ್ಲಿ ಇದ್ದಾರೆ.

6ನೇ ಪುಟ ನೋಡಿ

‘ಶಾಲೆ ಬಂದ್ ಆಲೋಚನೆಯೇ ಇಲ್ಲ’

ಬಿ.ಸಿ.ನಾಗೇಶ್

‘ಮಕ್ಕಳ ಪರಿಣಾಮಕಾರಿ ಕಲಿಕೆಗೆ ಆನ್‌ಲೈನ್ ತರಗತಿಗಳು ತೊಡಕಾಗಿವೆ. ಹೀಗಾಗಿ ಭೌತಿಕ ತರಗತಿಗಳಿಗೆ ಒತ್ತು ನೀಡಲಾಗುತ್ತಿದ್ದು, ಶಾಲೆಗಳನ್ನು ಬಂದ್ ಮಾಡುವ ಆಲೋಚನೆ ಸದ್ಯಕ್ಕಂತೂ ಇಲ್ಲ’ ಎಂದು ಸಚಿವ ಬಿ.ಸಿ.ನಾಗೇಶ್ ಪ್ರತಿಪಾದಿಸಿದರು.

‘ಸರ್ಕಾರಿ ಶಾಲೆಗಳಿಗೆ ದಾಖಲಾಗುವವರಲ್ಲಿ ಬಡವರೇ ಹೆಚ್ಚಿರುತ್ತಾರೆ. ಆನ್‌ಲೈನ್ ತರಗತಿಗೆ ಅಗತ್ಯವಿರುವ ಸಾಧನ ಹಾಗೂ ಇಂಟರ್‌ನೆಟ್ ಸಂಪರ್ಕ ಕಲ್ಪಿಸಿಕೊಳ್ಳುವ ಸಾಮರ್ಥ್ಯ ಅವರಿಗೆ ಇರುವುದಿಲ್ಲ. ಆ ಮಕ್ಕಳ ಭವಿಷ್ಯವನ್ನೂ ಗಮನದಲ್ಲಿಟ್ಟುಕೊಳ್ಳಬೇಕು’ ಎಂದರು.

‘ಯಾವುದೇ ಕಾರಣಕ್ಕೂ ಶಾಲೆಗಳು ಬಂದ್ ಆಗಬಾರದು. ಮಕ್ಕಳ ಕಲಿಕೆಗೆ ತೊಡಕಾಗಬಾರದು. ಹೀಗಾಗಿ ಬಿಗಿಕ್ರಮ ಕೈಗೊಳ್ಳಲಾಗುತ್ತದೆ. ಹಿಂದಿನ ಎರಡು ದಿನಗಳಲ್ಲಿ ವಸತಿ ಶಾಲೆ ಸೇರಿ ರಾಜ್ಯದ ಯಾವ ಶಾಲೆಯ ಮಕ್ಕಳಿಗೂ ಸೋಂಕು ತಗುಲಿಲ್ಲ. ಹೀಗಾಗಿ ಪೋಷಕರು ಧೈರ್ಯದಿಂದ ಇರಬೇಕು’ ಎಂದು ತಿಳಿಸಿದರು.

ಕೋವಿಡ್ ಪರೀಕ್ಷೆಗೆ ಪರಿಷ್ಕೃತ ದರ

ಓಮೈಕ್ರಾನ್ ಪತ್ತೆಯಾದ ಬೆನ್ನಲ್ಲೇ ವಿಮಾನ ನಿಲ್ದಾಣಗಳಲ್ಲಿ ಕೋವಿಡ್ ಪರೀಕ್ಷೆಗಳನ್ನು ಹೆಚ್ಚಿಸಲಾಗಿದ್ದು, ಅಲ್ಲಿ ನಡೆಸಲಾಗುವ ವಿವಿಧ ಮಾದರಿಗಳ ಪರೀಕ್ಷಾ ದರವನ್ನು ಪರಿಷ್ಕರಿಸಲಾಗಿದೆ.

ಆರ್‌ಟಿ–ಪಿಸಿಆರ್ ಪರೀಕ್ಷೆಗೆ ₹500, ಡಿಜಿಟಲ್ ಮಾದರಿಯಲ್ಲಿ ಪರೀಕ್ಷೆ ನಡೆಸಿ ಕೇವಲ 15 ನಿಮಿಷದಲ್ಲಿ ಆರ್‌ಟಿ–ಪಿಸಿಆರ್ ವರದಿ ನೀಡುವ ‘ಅಬಾಟ್ ಐಡಿ’ಗೆ ₹3,000, ಥರ್ಮೊ ಫಿಷರ್ ಅಕ್ಯುಲಾ ₹1,500, ಟಾಟಾ ಎಂಡಿಎಕ್ಸ್‌ಎಫ್‌ಗೆ ₹1,200 ಹಾಗೂ ಸೆಫೀಡ್ ಜೀನ್ ಎಕ್ಸ್‌ಪರ್ಟ್ ಪರೀಕ್ಷೆಗೆ ₹2,750 ದರ ನಿಗದಿ ಪಡಿಸಿ ಸರ್ಕಾರ ಆದೇಶ ಹೊರಡಿಸಿದೆ.

‘ನಿಗದಿತ ದರಕ್ಕಿಂತ ಹೆಚ್ಚಿನ ಹಣ ಪಡೆದ ಬಗ್ಗೆ ದೂರುಗಳು ಬಂದರೆ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ’ ಎಂದು ಎಚ್ಚರಿಸಲಾಗಿದೆ.

‘ಸಕಾಲ’ ಕಾಲಮಿತಿಯೊಳಗೆ ಸಿಗದ ಸರ್ಕಾರಿ ಸೇವೆ

99 ಸಾವಿರ ಅರ್ಜಿಗಳು ಬಾಕಿ

• ಸಿದ್ದು ಆರ್.ಜಿ.ಹಳ್ಳಿ



ಹಾವೇರಿ: ‘ಇಂದು ನಾಳೆ ಇನ್ನಿಲ್ಲ, ಹೇಳಿದ ದಿನ ತಪ್ಪೊಲ್ಲ’ ಎಂಬ ‘ಸಕಾಲ’ ಯೋಜನೆಯ ಭರವಸೆ ಕೇವಲ ಕಡತಕ್ಕೆ ಮಾತ್ರ ಸೀಮಿತವಾಗಿದೆ. ಇದಕ್ಕೆ ಸಾಕ್ಷಿ ಎಂಬಂತೆ, ನವೆಂಬರ್ ಅಂತ್ಯಕ್ಕೆ ರಾಜ್ಯದಲ್ಲಿ ಒಟ್ಟು 99 ಸಾವಿರ ಅರ್ಜಿಗಳು ಕಾಲಮಿತಿ ಮುಗಿದರೂ ವಿಲೇವಾರಿಯಾಗದೇ ಕಚೇರಿಗಳಲ್ಲಿ ದೂಳು ಹಿಡಿಯುತ್ತಿವೆ.

ಪ್ರಜಾವಾಣಿ ವಿಶೇಷ

ಗೊತ್ತು ಮಾಡಿದ ಕಾಲಮಿತಿಯೊಳಗೆ ರಾಜ್ಯದ ನಾಗರಿಕರಿಗೆ ಸೇವೆಗಳ ಖಾತರಿಗಾಗಿ ‘ಸಕಾಲ’ ಯೋಜನೆಯನ್ನು 2011ರಲ್ಲಿ ಜಾರಿಗೆ ತರಲಾಗಿದೆ. ಈ ಯೋಜನೆಯು 99 ಇಲಾಖೆಗಳು ಮತ್ತು 1,115 ಸೇವೆಗಳನ್ನು ಒಳಗೊಂಡಿದೆ. ಆದರೆ, ಅಧಿಕಾರಿಗಳು ಅರ್ಜಿ ವಿಲೇವಾರಿಗೆ ಆಸಕ್ತಿ ತೋರಿಸದೇ ವಿವಿಧ ಕಾರಣಗಳನ್ನು ಹೇಳುತ್ತಾ, ಜನರನ್ನು ಕಚೇರಿಯಿಂದ ಕಚೇರಿಗೆ ಅಲೆದಾಡಿಸುತ್ತಿದ್ದಾರೆ ಎಂಬ ವ್ಯಾಪಕ ದೂರುಗಳು ಸಾರ್ವಜನಿಕರಿಂದ ಕೇಳಿಬರುತ್ತಿವೆ.

ಬೆಂಗಳೂರಿನಲ್ಲಿ ಹೆಚ್ಚು ಸಮಸ್ಯೆ: ಅರ್ಜಿಗಳನ್ನು ವಿಲೇವಾರಿ ಮಾಡದೇ, ಬಾಕಿ ಉಳಿಸಿಕೊಂಡಿರುವ ಜಿಲ್ಲೆಗಳಲ್ಲಿ ಬೆಂಗಳೂರು ನಗರ, ಬೆಳಗಾವಿ, ರಾಯಚೂರು, ಬಳ್ಳಾರಿ ಮತ್ತು ಮೈಸೂರು ಜಿಲ್ಲೆಗಳು ಮೊದಲ ಐದು ಸ್ಥಾನಗಳಲ್ಲಿವೆ.

ಉತ್ತರ ಕನ್ನಡ (771), ಬೆಂಗಳೂರು ಗ್ರಾಮೀಣ (547), ದಕ್ಷಿಣ ಕನ್ನಡ (365), ಕೊಡಗು (265) ಹಾಗೂ ಉಡುಪಿ (138) ಜಿಲ್ಲೆಗಳಲ್ಲಿ ಅತ್ಯಂತ ಕಡಿಮೆ ಅರ್ಜಿಗಳು ವಿಲೇವಾರಿಗೆ ಬಾಕಿ ಇವೆ. ಹಾವೇರಿ (2,479) ಜಿಲ್ಲೆ ರಾಜ್ಯದಲ್ಲಿ 12ನೇ ಸ್ಥಾನದಲ್ಲಿದೆ.

6ನೇ ಪುಟ ನೋಡಿ

ಫೂಕನ್, ಕೊಂಕಣಿಯ ಮೌಜೋಗೆ ಜ್ಞಾನಪೀಠ



ನೀಲಮಣಿ ಫೂಕನ್

ದಾಮೋದರ ಮೌಜೋ

ನವದೆಹಲಿ: ಅಸ್ಸಾಮಿ ಕವಿ ನೀಲಮಣಿ ಫೂಕನ್ ಮತ್ತು ಕೊಂಕಣಿ ಸಾಹಿತಿ ದಾಮೋದರ ಮೌಜೋ ಅವರಿಗೆ ಕ್ರಮವಾಗಿ 56 ಮತ್ತು 57ನೇ ಜ್ಞಾನಪೀಠ ಪ್ರಶಸ್ತಿ ಸಂದಿದೆ. ಫೂಕನ್ ಅವರು 2020ರ ಸಾಲಿನ ಜ್ಞಾನಪೀಠ ಪ್ರಶಸ್ತಿಗೆ ಭಾಜನರಾಗಿದ್ದರೆ, ಮೌಜೋ ಅವರನ್ನು 2021ನೇ ಸಾಲಿನ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

1933ರಲ್ಲಿ ಅಸ್ಸಾಂನ ದೇರ್ಗಾಂವ್‌ನಲ್ಲಿ ಜನಿಸಿದ ಫೂಕನ್ ಅವರು, ಅಸ್ಸಾಂ ಸಾಹಿತ್ಯಕ್ಕೆ ಫ್ರೆಂಚ್ ಪ್ರತಿಮಾ ಸಿದ್ಧಾಂತ ಆಧಾರಿತ ಆಧುನಿಕತೆಯನ್ನು ತಂದುಕೊಟ್ಟರು. ಇದು ಅಸ್ಸಾಮಿ ಭಾಷೆಗೆ ಸಂದಿರುವ ಮೂರನೇ ಜ್ಞಾನಪೀಠ ಪ್ರಶಸ್ತಿ.

1944ರಲ್ಲಿ ಗೋವಾದಲ್ಲಿ ಜನಿಸಿದ ದಾಮೋದರ ಮೌಜೋ ಅವರು ತಮ್ಮ ಸಣ್ಣ ಕತೆಗಳು ಮತ್ತು ಕಾದಂಬರಿಗಳಿಗೆ ಪ್ರಸಿದ್ಧರು. ಇದು ಕೊಂಕಣಿ ಭಾಷೆಗೆ ಸಂದಿರುವ ಎರಡನೇ ಜ್ಞಾನಪೀಠ. ಜಿ.ಎನ್. ದೇವಿ, ಎಂ.ಎಂ. ಕಲಬುರ್ಗಿ ಮೊದಲಾದವರೊಡನೆ ಮೌಜೋ ಕೆಲಸ ಮಾಡಿದ್ದಾರೆ. ಕಲಬುರ್ಗಿ ಅವರ ಸಂಪಾದಕತ್ವದ ‘ವಚನ ಸಂಪುಟ’ವನ್ನು ಕೊಂಕಣಿ ಭಾಷೆಗೆ ಅನುವಾದ ಮಾಡಿದ ತಂಡದ ಮುಖ್ಯಸ್ಥರಾಗಿದ್ದರು. ಜಿ.ಎನ್. ದೇವಿ ಅವರ ಜತೆ ಭಾಷಾಶಾಸ್ತ್ರಕ್ಕೆ ಸಂಬಂಧಿಸಿ ಕೆಲಸ ಮಾಡಿದ್ದಾರೆ.

ಪ್ರತಿಭಟನೆ ಹಿಂದಕ್ಕೆ: ನಿರ್ಧಾರ ಕೈಗೊಳ್ಳಲು ರೈತರ ಸಭೆ ಇಂದು

ನವದೆಹಲಿ (ಪಿಟಿಐ): ದೆಹಲಿಯ ಗಡಿಗಳಲ್ಲಿ ರೈತರು ನಡೆಸುತ್ತಿರುವ ಪ್ರತಿಭಟನೆಯನ್ನು ಕೈಬಿಡುವಂತೆ ಕೇಂದ್ರ ಸರ್ಕಾರ ಸಲ್ಲಿಸಿದ ಪ್ರಸ್ತಾವದ ಬಗ್ಗೆ ಬುಧವಾರ ಮಧ್ಯಾಹ್ನ 2 ಗಂಟೆಗೆ ಸಭೆ ನಡೆಸಿ ನಿರ್ಧಾರ ಕೈಗೊಳ್ಳಲಾಗುವುದು ಎಂದು ಪ್ರತಿಭಟನೆಯ ನೇತೃತ್ವ ವಹಿಸಿರುವ ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಹೇಳಿದೆ.

ಪ್ರತಿಭಟನೆ ಕೈಬಿಡಲು ಸರ್ಕಾರವು ಪ್ರಸ್ತಾವ ಮುಂದಿಟ್ಟಿದೆ. ಎಸ್‌ಕೆಎಂ ಸದಸ್ಯರು ಅದರ ಬಗ್ಗೆ ಚರ್ಚಿಸಿದ್ದಾರೆ ಎಂದು ರೈತ ಮುಖಂಡ ಬಲಬೀರ್ ಸಿಂಗ್ ರಾಜೇವಾಲ್ ತಿಳಿಸಿದ್ದಾರೆ.

‘ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಗೆ ಕಾನೂನು ಖಾತರಿ ಬಗ್ಗೆ ಪರಿಶೀಲಿಸಲು ಸಮಿತಿರಚಿಸುವುದಾಗಿಸರ್ಕಾರಹೇಳಿದೆ. ಇದನ್ನು ಎಸ್‌ಕೆಎಂ ವಿರೋಧಿಸಿದೆ’ ಎಂದು ರಾಜೇವಾಲ್ ಹೇಳಿದ್ದಾರೆ.

4.5 ಲಕ್ಷ ರೈತರಿಗೆ ₹330 ಕೋಟಿ ಪರಿಹಾರ

ಬೆಂಗಳೂರು: ಇತ್ತೀಚಿನ ಮಳೆ ಮತ್ತು ಪ್ರವಾಹದಿಂದ ಉಂಟಾದ ಬೆಳೆ ನಷ್ಟದ ಪರಿಹಾರವನ್ನು ರೈತರ ಖಾತೆಗಳಿಗೆ ಜಮೆ ಮಾಡುವ ಪ್ರಕ್ರಿಯೆಗೆ ಇನ್ನಷ್ಟು ಚುರುಕು ನೀಡಿದ್ದು, ಕಳೆದ 10 ದಿನಗಳಲ್ಲಿ 4.5 ಲಕ್ಷ ರೈತರ ಖಾತೆಗಳಿಗೆ ಒಟ್ಟು ₹330 ಕೋಟಿ ಜಮೆ ಮಾಡಿದೆ.

ಇದೇ 13ರಿಂದ ವಿಧಾನಮಂಡಲ ಅಧಿವೇಶನ ಬೆಳಗಾವಿಯಲ್ಲಿ ಆರಂಭವಾಗಲಿದ್ದು, ಅದಕ್ಕೆ ಮುನ್ನವೇ ಗರಿಷ್ಠ ಪ್ರಮಾಣದಲ್ಲಿ ಪರಿಹಾರ ವಿತರಿಸಲು ಸರ್ಕಾರ ನಿರ್ಧರಿಸಿದೆ.

6ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಕೇರಳದಿಂದ ಹಣದ ಕಂತೆ ತರುತ್ತಿದ್ದ ಜಾಲ

ಬೆಂಗಳೂರು: ರಾಜ್ಯವನ್ನು ಕೇಂದ್ರವಾಗಿಸಿಕೊಂಡು ಹವಾಲಾ ದಂಧೆ ನಡೆಸುತ್ತಿದ್ದ ಜಾಲವನ್ನು ಇತ್ತೀಚೆಗಷ್ಟೇ ಭೇದಿಸಿರುವ ಪುಟ್ಟೇನಹಳ್ಳಿ ಪೊಲೀಸರು, ಜಾಲದ ಪ್ರಮುಖ ಆರೋಪಿ ರಿಯಾಜ್ ಪತ್ತೆಗಾಗಿ ಶೋಧ ಕಾರ್ಯವನ್ನು ಮುಂದುವರಿಸಿದ್ದಾರೆ. 4

ತುಮಕೂರಿನಿಂದಲೇ ಲೋಕಸಭೆಗೆ ಮತ್ತೆ ಸ್ಪರ್ಧೆ: ದೇವೇಗೌಡ

ಪಾವಗಡ (ತುಮಕೂರು): ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಮತ್ತೆ ತುಮಕೂರಿನಿಂದಲೇ ಸ್ಪರ್ಧಿಸುವುದಾಗಿ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಮಂಗಳವಾರ ಘೋಷಿಸಿದ್ದಾರೆ. 5

‘ಗುರುತು ಖಚಿತಕ್ಕೆ ಯತ್ನವೇ ಮಾಡದ ಸೈನಿಕರು’

ಕೊಹಿಮಾ (ಪಿಟಿಐ): ‘ಟಿರು–ಒಟಿಂಗ್ ಕಾರ್ಯಾಚರಣೆ ವೇಳೆ ನಾಗರಿಕರ ಗುರುತು ಖಚಿತಪಡಿಸಿಕೊಳ್ಳಲು ಸೈನಿಕರು ಯತ್ನವನ್ನೇ ಮಾಡಿಲ್ಲ. ತಾವು ನಡೆಸಿದ ಹತ್ಯೆಗಳನ್ನು ಮರೆಮಾಚಲು ಶವಗಳನ್ನು ಬಚ್ಚಿಡಲು ಯತ್ನಿಸಿದ್ದರು’ ಎಂದು ಪೊಲೀಸರು ತನಿಖಾ ವರದಿಯಲ್ಲಿ ಆರೋಪಿಸಿದ್ದಾರೆ. 6

ತಗ್ಗಿದ ಓಮೈಕ್ರಾನ್ ಭೀತಿ ಜಿಗಿದ ಷೇರುಪೇಟೆ

ಮುಂಬೈ (ಪಿಟಿಐ): ಎರಡು ದಿನಗಳಿಂದ ಇಳಿಕೆಯ ಹಾದಿಯಲ್ಲಿದ್ದ ದೇಶದ ಷೇರುಪೇಟೆ ಸೂಚ್ಯಂಕಗಳು ಮಂಗಳವಾರ ಭರ್ಜರಿ ಏರಿಕೆ ದಾಖಲಿಸಿದವು. ಓಮೈಕ್ರಾನ್ ರೂಪಾಂತರಿ ತಳಿ ಕುರಿತ ಭಯ ತಗ್ಗಿದ ಕಾರಣ ಜಾಗತಿಕ ಮಾರುಕಟ್ಟೆಗಳಲ್ಲಿ ಉತ್ಸಾಹದ ವಹಿವಾಟು ನಡೆಯಿತು. 10

GAIN MORE KNOWLEDGE REACH GREATER HEIGHTS
PRESIDENCY UNIVERSITY
Established under Section 2(f) of UGC Act, 1956 | Presidency University Act, 2013 of the Karnataka Act No. 41 of 2013
Bengaluru
APPROVED BY AICTE NEW DELHI
ENTERPRISE 4.0 FUTURE-READY CURRICULA
CONCESSIONAL FEE WITH CHOICE OF BRANCH FOR CET ASPIRANTS

Ready 4.0 The Future?
With seven advanced schools and Over forty five programs powered by our Enterprise 4.0 curriculum... you will be ready and empowered to define your future at Presidency.

SCHOOL OF ENGINEERING
B.Tech. - Computer Science and Engineering
B.Tech. - Computer Science and Engineering (Artificial Intelligence & Machine Learning)
B.Tech. - Computer Science and Engineering (Data Science)
B.Tech. - Computer Science and Engineering (Cyber Security)
B.Tech. - Computer Science and Engineering (Blockchain)
B.Tech. - Computer Science and Engineering (Internet Of Things)
B.Tech. - Computer Science and Technology (Big Data)
B.Tech. - Computer Science & Technology (DevOps)
B.Tech. - Computer Science and Technology [Spl. in Artificial Intelligence & Machine Learning]
B.Tech. - Computer Engineering [Spl. in Artificial Intelligence & Machine Learning]
B.Tech. - Information Science and Engineering [Spl. in Artificial Intelligence & Robotics]
B.Tech. - Information Science and Technology [Spl. in Artificial Intelligence & Data Science]
B.Tech. - Civil Engineering
B.Tech. - Civil Engineering [Spl. in Infrastructure Development]
B.Tech. - Civil Engineering [Spl. in Smart Cities]
B.Tech. - Electrical & Electronics Engineering
B.Tech. - Electrical & Electronics Engineering [Spl. in Automotive Electronics]
B.Tech. - Electrical & Electronics Engineering [Spl. in Power & Energy Systems]
B.Tech. - Electronics and Communication Engineering
B.Tech. - Electronics and Communication Engineering [Spl. in Artificial Intelligence & Wearable Technology]
B.Tech. - Electronics and Communication Engineering [Spl. in Embedded System & VLSI]
B.Tech. - Mechanical Engineering
B.Tech. - Mechanical Engineering [Spl. in Additive Manufacturing]
B.Tech. - Mechanical Engineering [Spl. in Mechatronics]
B.Tech. - Petroleum Engineering
M.Tech. - Artifical Intelligence
M.Tech. - Data Science
M.Tech. - Embedded System & VLSI
M.Tech. - Building & Construction Technology
M.Tech. - Product Design & Development

SCHOOL OF MANAGEMENT
MBA [Dual Major]
[Spl. in Finance, Marketing, Human Resource Management, Operations and Supply Chain Management, Business Analytics, Digital Transformation]
MBA (Logistics & Supply Chain Management)
MBA (Business Analytics)
MBA (Digital Marketing)
MBA (E-Business Management)

CET/DCET CODE : E237

SCHOOL OF ENGINEERING B.TECH | M.TECH
SCHOOL OF MANAGEMENT BBA | MBA
SCHOOL OF LAW LL. B. | LL. M.
SCHOOL OF COMMERCE B.COM | B.Sc. ECONOMICS
SCHOOL OF DESIGN B.DESIGN | B.Sc. MULTIMEDIA
SCHOOL OF INFORMATION Sc. BCA | B.Sc. - DATA SCIENCE
SCHOOL OF MEDIA STUDIES BA - JOURNALISM

A SNAPSHOT OF OUR RECRUITERS
AND MANY MORE...

COMED-K CODE : 173 | PGCET CODE : MBA – B349 | M.TECH – T983 | Hostel Facility Available | admission@presidencyuniversity.in | presidencyuniversity.in
SCAN THE QR CODE TO VISIT THE CAMPUS
MERITORIOUS STUDENTS · SCHOLARSHIPS · 15 CRORE · DESERVING STUDENTS · FEE CONCESSIONS
ADMISSIONS 2021-22 +91-63667-82344
Presidency University, Itgalpur, Rajanakunte, Yelahanka, Bengaluru 560064
INTEREST FREE EDU. LOAN FACILITY

ಬುಧವಾರದ ಉಷ್ಣಾಂಶ 28° ಗರಿಷ್ಠ 19° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಮೋಡ ಕವಿದ ವಾತಾವರಣ. ಬೆಂಗಳೂರು–ಮಂಗಳೂರು ಹೆದ್ದಾರಿಯಲ್ಲಿ ಅಲ್ಲಲ್ಲಿ ಮಳೆ ಸಾಧ್ಯತೆ.

ಮುನ್ಸೂಚನೆ

ಗುರುವಾರ	ಶುಕ್ರವಾರ	ಶನಿವಾರ
27° 19°	27° 18°	27° 18°

‘ಗರುಡ ಗಮನ ವೃಷಭ ವಾಹನ’: ಇಂದು ತೀರ್ಪು

ಬೆಂಗಳೂರು: ‘ಗರುಡ ಗಮನ ವೃಷಭ ವಾಹನ’ ಚಲನಚಿತ್ರ ಪ್ರದರ್ಶನಕ್ಕೆ ತಡೆ ಕೋರಿದ್ದ ಮಧ್ಯಂತರ ಮನವಿಗೆ ಸಂಬಂಧಿಸಿ 18ನೇ ಹೆಚ್ಚುವರಿ ಸಿಟಿ ಸಿವಿಲ್ ಕೋರ್ಟ್ ಬುಧವಾರ (ಡಿ.8) ತೀರ್ಪು ಪ್ರಕಟಿಸಲಿದೆ.

ಈ ಬಗ್ಗೆ ಕರುನಾಡು ವಿಜಯ ಸೇನೆಯ ಬೆಂಗಳೂರು ನಗರ ಜಿಲ್ಲಾ ಘಟಕ ಅಧ್ಯಕ್ಷ ವಿಜಯ್ ಕುಮಾರ್ ಅರ್ಜಿ ಸಲ್ಲಿಸಿದ್ದರು.

'ಚಿತ್ರದಲ್ಲಿ ಕೊಲೆ ದೃಶ್ಯಕ್ಕೆ ಮಲೆ ಮಹದೇಶ್ವರನ ಕುರಿತ, ‘ಸೋಜುಗಾದ ಸೂಜುಮಲ್ಲಿಗೆ’ ಜನಪದ ಹಾಡು ಬಳಸಿದ್ದು, ಭಕ್ತರ ಭಾವನೆಗಳು, ಜನಪದ ಸಂಸ್ಕೃತಿಗೆ ಧಕ್ಕೆಯಾಗಿದೆ. ಹೀಗಾಗಿ, ಚಿತ್ರ ಪ್ರದರ್ಶನಕ್ಕೆ ತಡೆ ನೀಡಬೇಕು ಅಥವಾ ವಿವಾದಿತ ಹಾಡು ತೆಗೆಯಲು ಆದೇಶಿಸಬೇಕು’ ಎಂದು ಕೋರಿದ್ದರು.

‘ಈ ಸಲ ಚಳಿಯ ತೀವ್ರತೆ ಕಡಿಮೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಈ ವರ್ಷದ ಹವಾಮಾನ ಸ್ಥಿತಿಗಳ ಏರುಪೇರಿನಿಂದಾಗಿ ರಾಜ್ಯದಲ್ಲಿ ಈ ಬಾರಿ ಚಳಿಯ ತೀವ್ರತೆ ಹಾಗೂ ಚಳಿಯ ಅವಧಿ ಕಡಿಮೆ ಇರಲಿದೆ’ ಎಂದು ಕೃಷಿ ಹವಾಮಾನ ವಿಜ್ಞಾನಿ ಎಂ.ಬಿ.ರಾಜೇಗೌಡ ತಿಳಿಸಿದರು.

‘ರಾಜ್ಯದಲ್ಲಿ ಈ ವರ್ಷದ ಹವಾಮಾನ ಪರಿಸ್ಥಿತಿ ಸಾಮಾನ್ಯ ವರ್ಷಗಳಿಗಿಂತ ಭಿನ್ನವಾಗಿದೆ. ಅ.25ರಂದು ಮುಂಗಾರು ಕೊನೆಗೊಂಡಿದ್ದು, ಹಿಂಗಾರು ಆರಂಭಗೊಂಡಿತು. ಇದರಿಂದ ಚಳಿಗಾಲದ ಆರಂಭ ಸುಮಾರು 20 ದಿನಗಳವರೆಗೆ ಮುಂದಕ್ಕೆ ಹೋಯಿತು’ ಎಂದರು.

‘ಡಿಸೆಂಬರ್ ಮೊದಲ ವಾರ ವಾತಾವರಣದಲ್ಲಿ ತಾಪಮಾನ ಇಳಿಕೆ ಆರಂಭವಾಯಿತು. ಇದಕ್ಕೂ ಮುನ್ನ ಸಾಗರದಲ್ಲಿ ಉದ್ಭವಗೊಂಡ ದಟ್ಟವಾದ ಮೋಡಗಳು ರಾಜ್ಯದ ಹಲವು ಜಿಲ್ಲೆಗಳಲ್ಲಿ ಭಾರಿ ಮಳೆ ಸುರಿಸಿದವು. ಈ ಅವಧಿಯಲ್ಲಿ ಈಶಾನ್ಯ ದಿಕ್ಕಿನ ತಂಗಾಳಿಯ ಪ್ರಭಾವವೂ ತಗ್ಗಿ, ರಾಜ್ಯದಲ್ಲಿ ತಾಪಮಾನ ಏರಿಕೆ ಇರಲಿಲ್ಲ. ಡಿ.21ರವರೆಗೆ ಇದೇ ಸ್ಥಿತಿ ಮುಂದುವರಿಯಲಿದ್ದು, ನಂತರ ತಾಪಮಾನ ಏರಲಿದೆ’ ಎಂದು ವಿವರಿಸಿದರು.

ಎಂ.ಬಿ. ರಾಜೇಗೌಡ

‘ಈ ವರ್ಷ ತಾಪಮಾನ ಇಳಿಕೆಯ ಅವಧಿ ಕೇವಲ 18 ದಿನಗಳು. ಇದರಿಂದ ಬಹುತೇಕ ಪ್ರದೇಶಗಳಲ್ಲಿ ತಾಪಮಾನದ ತೀವ್ರತೆ ತನ್ನ ಕನಿಷ್ಠ ಹಾಗೂ ಗರಿಷ್ಠ ಮಟ್ಟ ತಲುಪುವುದಿಲ್ಲ. ಈ ಎಲ್ಲ ಕಾರಣಗಳಿಂದ ರಾಜ್ಯದಲ್ಲಿ ಚಳಿಯ ತೀವ್ರತೆ ಕಡಿಮೆ ಇರಲಿದೆ’ ಎಂದೂ ಹೇಳಿದರು.

ಪಶ್ಚಿಮ ಕಾರ್ಡ್ ರಸ್ತೆ ಮೇಲ್ಸೇತುವೆ ಕಾಮಗಾರಿಗೆ ಒಂದೇ ಟೆಂಡರ್: ಮೂರು ಬಾರಿ ಪರಿಷ್ಕರಣೆ

ಅನುಮೋದನೆಗೆ ಮುನ್ನವೇ ಕಾಮಗಾರಿ!

• ವಿಜಯಕುಮಾರ್ ಎಸ್.ಕೆ.

ಪ್ರಜಾವಾಣಿ ವಿಶೇಷ

ಬೆಂಗಳೂರು: ಹೆಚ್ಚುವರಿ ಕಾಮಗಾರಿಗಳ ನೆಪದಲ್ಲಿ ಮೂಲ ಗುತ್ತಿಗೆ ಮೊತ್ತಕ್ಕಿಂತ ಅನೇಕ ಪಟ್ಟು ಹೆಚ್ಚು ಮೊತ್ತದ ಕಾಮಗಾರಿಯನ್ನು ಒಬ್ಬರೇ ಗುತ್ತಿಗೆದಾರರಿಗೆ ವಹಿಸುವ ಪಶ್ಚಿಮ ಕಾರ್ಡ್ ರಸ್ತೆಯ ಕಾಮಗಾರಿಯ ಪ್ರಸ್ತಾವನೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೂ ಒಪ್ಪಿಗೆ ನೀಡಿದ್ದಾರೆ. ಈ ಯೋಜನೆಗೆ ರಾಜ್ಯ ಸರ್ಕಾರ ಅನುಮೋದನೆ ನೀಡುವ ಮೊದಲೇ ಗುತ್ತಿಗೆದಾರರು ಕಾಮಗಾರಿ ಆರಂಭಿಸಿದ್ದಾರೆ.

ಪಶ್ಚಿಮ ಕಾರ್ಡ್ ರಸ್ತೆಯಲ್ಲಿ ಮೊದಲಿಗೆ ಮೂರು ಗ್ರೇಡ್ ಸಪರೇಟರ್‌ಗಳ ನಿರ್ಮಾಣಕ್ಕೆ ₹89.86 ಕೋಟಿ ಮೊತ್ತದ ಪ್ಯಾಕೇಜ್ ರೂಪಿಸಿ ಅನುಮೋದನೆ ನೀಡಲಾಗಿತ್ತು. ಈಗ ಅದು ಐದು ಕಾಮಗಾರಿಗಳಾಗಿ ವಿಸ್ತರಣೆಗೊಂಡಿದೆ. ಯೋಜನೆ ಮೊತ್ತ ₹169.4 ಕೋಟಿಗೆ ಜಿಗಿದಿದೆ. ಹೊಸದಾಗಿ ಸೇರ್ಪಡೆಯಾದ ಕಾಮಗಾರಿಗಳನ್ನು ಟೆಂಡರ್ ನಡೆಸದೆ ಹೆಚ್ಚುವರಿ ಕಾಮಗಾರಿ ಎಂಬುದಾಗಿ ತೋರಿಸಲಾಗಿದೆ. ಈ ಮೂಲಕ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆಯ ಆಶಯವನ್ನೇ ಗಾಳಿಗೆ ತೂರಲಾಗಿದೆ.

ಪಶ್ಚಿಮಕಾರ್ಡ್‌ರಸ್ತೆಗೆರಾಜಾಜಿನಗರದಲ್ಲಿ ಮಂಜುನಾಥನಗರ ಮುಖ್ಯರಸ್ತೆ ಕೂಡುವಲ್ಲಿ ದ್ವಿಪಥ ಸಂಚಾರದ ಮೇಲ್ಸೇತುವೆ, ಶಿವನಗರದ 8ನೇ ಮತ್ತು 1ನೇ ಮುಖ್ಯ ರಸ್ತೆಗಳು ಕೂಡುವಲ್ಲಿ ದ್ವಿಮುಖ ಸಂಚಾರದ ಇಂಟಿಗ್ರೇಟೆಡ್ ಅಂಡರ್‌ಪಾಸ್ ಮತ್ತು ಬಸವೇಶ್ವರ ನಗರದ ಮುಖ್ಯರಸ್ತೆ ಕೂಡುವಲ್ಲಿ ಏಕಮುಖ ಸಂಚಾರದ ಮೇಲ್ಸೇತುವೆ ನಿರ್ಮಾಣ ಕಾಮಗಾರಿಗಳ ಪ್ಯಾಕೇಜ್‌ನ ಗುತ್ತಿಗೆಯನ್ನು ಎಂ.ವೆಂಕಟರಾವ್ ಇನ್‌ಫ್ರಾ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ನೀಡಲಾಗಿದೆ.

ಬಸವೇಶ್ವರನಗರ ಜಂಕ್ಷನ್‌ನಲ್ಲಿ ದ್ವಿಮುಖ ಸಂಚಾರದ ಮೇಲ್ಸೇತುವೆ ನಿರ್ಮಿಸುವ 5ನೇ ಕಾಮಗಾರಿಗೆ ಅನುಮೋದನೆ ದೊರೆಯುವ ಮೊದಲೇ ಪಿಲ್ಲರ್ ನಿರ್ಮಾಣ ಕಾಮಗಾರಿಯನ್ನು ಗುತ್ತಿಗೆದಾರರು ನಡೆಸುತ್ತಿದ್ದಾರೆ. ‘ಬಿಬಿಎಂಪಿಯ ಪ್ರಸ್ತಾವನೆಗೆ ಇದೀಗ ಮುಖ್ಯಮಂತ್ರಿ ಅವರಿಂದ ಅನುಮೋದನೆ ಸಿಕ್ಕಿದೆಯಷ್ಟೇ. ಯೋಜನೆ ಜಾರಿಗೆ ಸರ್ಕಾರದ ಅಧಿಕೃತ ಆದೇಶ ಆಗಿಲ್ಲ. ಅಲ್ಲದೇ, ಈ ಯೋಜನೆಗೆ ಹೆಚ್ಚುವರಿ ಹಣಕಾಸು ಮೀಸಲಿಟ್ಟಿಲ್ಲ. ಹೆಚ್ಚುವರಿ ಮೊತ್ತಕ್ಕೆ ಹಣಕಾಸು ಇಲಾಖೆಯಿಂದ ಅನುಮೋದನೆ ಪಡೆಯಬೇಕು. ಸಚಿವ ಸಂಪುಟದಲ್ಲೂ ಒಪ್ಪಿಗೆ ಪಡೆಯಬೇಕಿದೆ. ಅದಕ್ಕೂ ಮುನ್ನವೇ ಕಾಮಗಾರಿ ನಡೆಸಲು ಒಪ್ಪಿಗೆ ನೀಡಿದ್ದು ಯಾರು’ ಎಂದು ಬಿಬಿಎಂಪಿಯ ಹಿರಿಯ ಅಧಿಕಾರಿಯೊಬ್ಬರು ಪ್ರಶ್ನಿಸಿದರು.

ಹಿಗ್ಗುತ್ತಾ ಸಾಗಿದ ಯೋಜನಾ ವೆಚ್ಚ: ಒಟ್ಟು ₹ 89.86 ಕೋಟಿ ವೆಚ್ಚದ ಆರಂಭಿಕ ಯೋಜನೆಗೆ 2015ರ ಫೆ. 11ರಂದು ಅನುಮೋದನೆ ನೀಡಲಾಗಿತ್ತು. ಈ ಪೈಕಿ ಮಂಜುನಾಥನಗರದ ಮುಖ್ಯರಸ್ತೆ ಕೂಡುವಲ್ಲಿನ ಮೇಲ್ಸೇತುವೆ 2018ರ ಆ. 27ರಂದು ಲೋಕಾರ್ಪಣೆಗೊಂಡಿತು. ಈ ನಡುವೆ, ಶಿವನಗರ 8ನೇ ಮತ್ತು 1ನೇ ಮುಖ್ಯರಸ್ತೆ ಕೂಡುವಲ್ಲಿ ಇಂಟೆಗ್ರೇಟೆಡ್ ಅಂಡರ್ ಪಾಸ್‌ಗೆ ಸಾರ್ವಜನಿಕರಿಂದ ಆಕ್ಷೇಪ ವ್ಯಕ್ತವಾಯಿತು. ಆಗ ಅಂಡರ್‌ಪಾಸ್ ಬದಲಿಗೆ ಮೇಲ್ಸೇತುವೆ ನಿರ್ಮಿಸಲು ಯೋಜನೆ ಪರಿಷ್ಕರಿಸಲಾಯಿತು. ಪ್ಯಾಕೇಜ್‌ನ ಮೊತ್ತ ₹89.86 ಕೋಟಿಯಿಂದ ₹112.07 ಕೋಟಿಗೆ ಹೆಚ್ಚಿಸಲಾಯಿತು. ಈ ಕಾಮಗಾರಿ ಮುಕ್ತಾಯಗೊಂಡು 2021ರ ಅ. 4ರಂದು ವಾಹನ ಸಂಚಾರಕ್ಕೆ ಮುಕ್ತಗೊಂಡಿತು.

ಯಶವಂತಪುರ ಕಡೆಯಿಂದ ವಿಜಯನಗರ ತನಕ ಸಿಗ್ನಲ್ ರಹಿತ ರಸ್ತೆಯನ್ನಾಗಿ ಮಾಡಲು 72ನೇ ಅಡ್ಡರಸ್ತೆಗೆ ಮೇಲ್ಸೇತುವೆ ಅಗತ್ಯವಿದೆ ಎಂದು ಈಗಿನ ಸಚಿವ ವಿ.ಸೋಮಣ್ಣ ಅವರು 2018ರ ಆ.6ರಂದು ಮುಖ್ಯಮಂತ್ರಿ, ನಗರಾಭಿವೃದ್ಧಿ ಸಚಿವರಿಗೆ ಪತ್ರ ಬರೆದಿದ್ದರು.

ಅಲ್ಲದೇ ಎಂ.ವೆಂಕಟರಾವ್ ಇನ್‌ಫ್ರಾ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೇ ಕಾಮಗಾರಿ ವಹಿಸುವಂತೆ ಕೋರಿದ್ದರು. ₹33.71 ಕೋಟಿ ಮೊತ್ತದ ಯೋಜನೆ ರೂಪಿಸಿ ಅದನ್ನೂ ಮೂಲ ಪ್ಯಾಕೇಜ್‌ನಲ್ಲಿ ಸೇರ್ಪಡೆ ಮಾಡಲಾಯಿತು. ಆಗ ಯೋಜನೆ ಮೊತ್ತ ₹ 145.78 ಕೋಟಿಗೆ ಹೆಚ್ಚಿತು. ಟೆಂಡರ್ ನಡೆಸದೆ ಅದೇ ಗುತ್ತಿಗೆದಾರರಿಗೆ ಕಾಮಗಾರಿ ವಹಿಸಲಾಯಿತು.

ಮತ್ತೊಮ್ಮೆ ಪರಿಷ್ಕರಣೆ: ಶಿವನಗರ ಮೇಲ್ಸೇತುವೆ ಕಾಮಗಾರಿ ಉದ್ಘಾಟನೆಗೆ (2021ರ ಅ.4ರಂದು) ಬಂದಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ವಿ.ಸೋಮಣ್ಣ ಮತ್ತು ಶಾಸಕ ಎಸ್.ಸುರೇಶ್‌ಕುಮಾರ್ ಅವರು ಮನವಿ ಸಲ್ಲಿಸಿ, ಬಸವೇಶ್ವರನಗರದ ಮುಖ್ಯರಸ್ತೆ ಕೂಡುವಲ್ಲಿಯೂ ದ್ವಿಮುಖ ಸಂಚಾರದ ಮೇಲ್ಸೇತುವೆ ನಿರ್ಮಿಸುವಂತೆ ಕೋರಿದ್ದರು.

‘ಬಸವೇಶ್ವರನಗರ ಜಂಕ್ಷನ್‌ನಲ್ಲಿ ₹23.62 ಕೋಟಿ ವೆಚ್ಚದಲ್ಲಿ ಹೆಚ್ಚುವರಿ ಮೇಲ್ಸೇತುವೆ ನಿರ್ಮಿಸಲು ಅನುಮೋದನೆ ಕೋರಿ ಬಿಬಿಎಂಪಿ ಸಲ್ಲಿಸಿದ್ದ ಪ್ರಸ್ತಾವನೆಗೆ ಮುಖ್ಯಮಂತ್ರಿ ಈಗ ಅನುಮೋದನೆ ನೀಡಿದ್ದಾರೆ. ಈಗ ಪ್ಯಾಕೇಜ್ ಮೊತ್ತ ₹169.4 ಕೋಟಿಗೆ ಹೆಚ್ಚಳವಾಗುತ್ತಿದೆ’ ಎಂದು ಬಿಬಿಎಂಪಿ ಎಂಜಿನಿಯರ್ ಒಬ್ಬರು ತಿಳಿಸಿದರು.

ಪಶ್ಚಿಮ ಕಾರ್ಡ್ ರಸ್ತೆಯ ಬಸವೇಶ್ವರನಗರ ಜಂಕ್ಷನ್‌ನಲ್ಲಿ ಕಾಮಗಾರಿ ಆರಂಭವಾಗಿರುವುದು –ಪ್ರಜಾವಾಣಿ ಚಿತ್ರ

‘ಭ್ರಷ್ಟಾಚಾರದ ಕೂಪ’

‘ನಾಲ್ಕು ವರ್ಷಗಳಿಂದ ಕಾಮಗಾರಿ ನಡೆಯುತ್ತಲೇ ಇದೆ. ಈ ಕಾಮಗಾರಿಗೆ ಇಷ್ಟು ವರ್ಷ ಬೇಕೇ ಎಂಬುದು ಮೊದಲನೇ ಪ್ರಶ್ನೆ. ಕಾನೂನು-ಬಾಹಿರವಾಗಿ ಗುತ್ತಿಗೆ ಮೊತ್ತ ಹೆಚ್ಚಿಸಿಕೊಳ್ಳಲು ಈ ರೀತಿಯ ವಿಳಂಬ ಮಾಡಲಾಗುತ್ತಿದೆ. ಯೋಜನೆಯ ಮೊತ್ತ ಬಹುತೇಕ ದುಪ್ಪಟ್ಟಾಗಿದೆ. ಹೆಚ್ಚುವರಿ ಕಾಮಗಾರಿಗಳಿಗೆ ಟೆಂಡರ್ ಪ್ರಕ್ರಿಯೆಯನ್ನೇ ನಡೆಸದಿರುವುದು ಕೆಟಿಪಿಪಿ ಕಾಯ್ದೆಯ ಉಲ್ಲಂಘನೆ. ಮೊದಲು ಯೋಜನೆ ರೂಪಿಸಿದವರು ಮತ್ತು ಈಗ ಹೆಚ್ಚುವರಿಯಾಗಿ ಕಾಮಗಾರಿಗಳ ಸೇರ್ಪಡೆ ಮಾಡಿದವರ ವಿರುದ್ಧ ಕಾನೂನು ಕ್ರಮ ಆಗಬೇಕು’.

ಆದರ್ಶ ಅಯ್ಯರ್,
ಜನಾಧಿಕಾರ ಸಂಘರ್ಷ ಪರಿಷತ್

‘ಅನುಮೋದನೆ ನಂತರ ಹಣ ಬಿಡುಗಡೆ’

ಟೆಂಡರ್ ಕರೆಯದೆಯೇ ಹಿಂದಿನ ಗುತ್ತಿಗೆದಾರರಿಗೆ ಕಾಮಗಾರಿ ವಹಿಸುತ್ತಿರುವ ಕುರಿತು ಪ್ರತಿಕ್ರಿಯಿಸಿದ ಬಿಬಿಎಂಪಿ ಮುಖ್ಯ ಎಂಜಿನಿಯರ್ (ಯೋಜನೆಗಳು) ಲೋಕೇಶ್, ‘ಈಗ ಕಾಮಗಾರಿ ನಡೆಯುತ್ತಿರುವ ಮೇಲ್ಸೇತುವೆ ಹಾಗೂ ಹೊಸ ಮೇಲ್ಸೇತುವೆಗಳೆರಡನ್ನೂ ಜೋಡಿಸಬೇಕಿದೆ. ಹಾಗಾಗಿ ಅದೇ ಗುತ್ತಿಗೆದಾರರಿಗೆ ಕಾಮಗಾರಿ ವಹಿಸಲಾಗುತ್ತಿದೆ. ಇದಕ್ಕೆ ಕೆಟಿಪಿಪಿ ಕಾಯ್ದೆಯಲ್ಲೂ ಅವಕಾಶ ಇದೆ. ಗುತ್ತಿಗೆದಾರರು ಕಾಮಗಾರಿ ಆರಂಭಿಸಿದ್ದಾರೆ. ಸರ್ಕಾರವು ಅನುಮೋದನೆ ನೀಡದಿದ್ದರೆ ಗುತ್ತಿಗೆದಾರರಿಗೆ ಹಣ ಬಿಡುಗಡೆ ಮಾಡುವುದಿಲ್ಲ’ ಎಂದು ಸ್ಪಷ್ಟಪಡಿಸಿದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಜಂಟಿ ಕಮಿಷನರ್ ಮನೆ ಕೆಲಸದ ಮಹಿಳೆ ನಾಪತ್ತೆ: ಎಫ್‌ಐಆರ್

ಬೆಂಗಳೂರು: ನಗರದ ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ ಅವರ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಮಹಿಳೆಯೊಬ್ಬರು ನಾಪತ್ತೆಯಾಗಿದ್ದು, ಈ ಬಗ್ಗೆ ಸಂಜಯನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಬಳ್ಳಾರಿಯ ಮಹಿಳೆಯೊಬ್ಬರು ರವಿಕಾಂತೇಗೌಡ ಮನೆಯಲ್ಲಿ ಕೆಲ ವರ್ಷಗಳಿಂದ ಕೆಲಸಕ್ಕಿದ್ದರು. ಯಾರಿಗೂ ಹೇಳದೇ ಅವರು ಸೋಮವಾರ ಮನೆಯಿಂದ ಹೊರಗೆ ಹೋಗಿ ನಾಪತ್ತೆಯಾಗಿದ್ದಾರೆ. ಈ ಬಗ್ಗೆ ಸಲ್ಲಿಕೆಯಾದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಮಹಿಳೆಯ ಕಾಯಂ ವಿಳಾಸ ಹಾಗೂ ಅವರ ಸಂಬಂಧಿಕರ ಮಾಹಿತಿ ಕಲೆ ಹಾಕಲಾಗಿದೆ. ಮಹಿಳೆ ಇರುವ ಜಾಗವನ್ನು ಪತ್ತೆ ಮಾಡಲಾಗಿದ್ದು, ಅವರನ್ನು ನಗರಕ್ಕೆ ಕರೆತಂದು ಹೇಳಿಕೆ ಪಡೆದು ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದು ತಿಳಿಸಿದರು.

ರಂಗ ಚಾವಡಿ: ಮಂಡ್ಯ ರಮೇಶ್ ಅತಿಥಿ

ಬೆಂಗಳೂರು: ಕರ್ನಾಟಕ ನಾಟಕ ಅಕಾಡೆಮಿಯು ತಿಂಗಳ ಕಾರ್ಯಕ್ರಮ ‘ರಂಗ ಚಾವಡಿ’ಯನ್ನು ಇದೇ ಶುಕ್ರವಾರ (ಡಿ.10) ಸಂಜೆ 5 ಗಂಟೆಗೆ ನಯನ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದು, ನಟ ಮಂಡ್ಯ ರಮೇಶ್ ಮುಖ್ಯ ಅತಿಥಿಯಾಗಿರುವರು.

‘ರಂಗಭೂಮಿ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಗಣ್ಯರನ್ನು ಆಹ್ವಾನಿಸಿ, ಅವರು ನಡೆದು ಬಂದ ದಾರಿಯನ್ನು ಸಂವಾದದ ರೂಪದಲ್ಲಿ ಅನಾವರಣಗೊಳಿಸಲಾಗುತ್ತದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಗುಬ್ಬಿಗೂಡು ರಮೇಶ್ ಸಂವಾದ ನಡೆಸಿಕೊಡಲಿದ್ದಾರೆ. ಇದಕ್ಕೂ ಮೊದಲು ಮೈಸೂರಿನ ನಟನಾ ರಂಗಶಾಲೆಯ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ’ ಎಂದು ಅಕಾಡೆಮಿ ಅಧ್ಯಕ್ಷ ಪ್ರೊ.ಆರ್. ಭೀಮಸೇನ ತಿಳಿಸಿದ್ದಾರೆ.

ಮಂಡ್ಯ ರಮೇಶ್

ನಿಧನ ವಾರ್ತೆ

ವಾಗೀಶ್ ಕುಮಾರ್

ಬೆಂಗಳೂರು: ಪತ್ರಕರ್ತ ಜಿ.ಎ. ವಾಗೀಶ್ ಕುಮಾರ್ (46) ಅವರು ಮಂಗಳವಾರ ಬೆಳಿಗ್ಗೆ ಅನಾರೋಗ್ಯದಿಂದಾಗಿ ನಿಧನರಾದರು.

ಅವರಿಗೆ ಪತ್ನಿ, ಪುತ್ರಿ ಇದ್ದಾರೆ.

ರಾಜ್ಯಮಟ್ಟದ ಪತ್ರಿಕೆಗಳು ಹಾಗೂ ಸುದ್ದಿವಾಹಿನಿಗಳಲ್ಲಿ ಅವರು ಕೆಲಸ ಮಾಡಿದ್ದರು.

11ಕ್ಕೆ ಅಂಗವಿಕಲರಿಗೆ ಉದ್ಯೋಗ ಮೇಳ

ಬೆಂಗಳೂರು: ಸಮರ್ಥನಂ ಅಂಗವಿಕಲರ ಸಂಸ್ಥೆಯು ಮ್ಯಾನ್ ಫೋ ಹೋಟೆಲ್‌ನಲ್ಲಿ ಇದೇ 11ರಂದು ಬೆಳಿಗ್ಗೆ 9ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಅಂಗವಿಕಲರಿಗಾಗಿ ಉದ್ಯೋಗ ಮೇಳ ಆಯೋಜಿಸಿದೆ.

ಎಸ್ಸೆಸ್ಸೆಲ್ಸಿ ಹಾಗೂ ಅದಕ್ಕಿಂತ ಹೆಚ್ಚಿನ ವಿದ್ಯಾರ್ಹತೆಯ ಅಭ್ಯರ್ಥಿಗಳು ಉದ್ಯೋಗ ಮೇಳದಲ್ಲಿ ಭಾಗವಹಿಸಬಹುದು. ಅಂಗವಿಕಲರ ಪ್ರಮಾಣ ಪತ್ರ ತರಬೇಕು. ಹೆಚ್ಚಿನ ಮಾಹಿತಿಗೆ 6364867795, 9449864693.

ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ

ನೋಂದಣಿ 37/ಸೌಕಾ/ನೋಂದಣಿ 2297/2010–11
“ಪುಣ್ಯಕೋಟಿ”, ನಂ.1587, 3ನೇ ಮುಖ್ಯರಸ್ತೆ, ಚಂದ್ರ ಬಡಾವಣೆ, ಬೆಂಗಳೂರು–560 040. ದೂರವಾಣಿ : 080–23185584

ಮೇಲ್ಕಂಡ ಸಹಕಾರ ಸಂಘದ 2020–21 ನೇ ಸಾಲಿನ 11ನೇ ವಾರ್ಷಿಕ ಸಾಮಾನ್ಯ ಸರ್ವ ಸದಸ್ಯರ ಸಭೆಯನ್ನು **ದಿನಾಂಕ:12–12–2021 ರಂದು ಭಾನುವಾರ ಬೆಳಿಗ್ಗೆ 11:00 ಗಂಟೆಗೆ** ಸರಿಯಾಗಿ “ಪುಣ್ಯಕೋಟಿ”,ನಂ.1587, 3ನೇ ಮುಖ್ಯರಸ್ತೆ, ಚಂದ್ರ ಬಡಾವಣೆ, ಬೆಂಗಳೂರು–560040. ಇದರಲ್ಲಿ ವಿಡಿಯೋ ಕಾನ್ಫರೆನ್ಸ್ /ವರ್ಚುವಲ್ ಮೀಟಿಂಗ್ ಮೂಲಕ ನಡೆಸಲು ತೀರ್ಮಾನಿಸಲಾಗಿದೆ. ಸಹಕಾರಿಯ ಸದಸ್ಯರೆಲ್ಲರೂ ಸಹ ಈ ಕೆಳಗಿನ ಲಿಂಕ್ ಮುಖಾಂತರ

https://play.google.com/store/apps/details?id=com.octaloptimum.shbcsl

ಭಾಗವಹಿಸಬೇಕಾಗಿ ಈ ಮೂಲಕ ಕೋರಲಾಗಿದೆ.

ದಿನಾಂಕ:07/12/2021
ಸ್ಥಳ:ಬೆಂಗಳೂರು

ಸಹಿ/– ಕಾರ್ಯದರ್ಶಿ
ಶಾರದ ವೈ ಬಿರಾದರ್

ಸಿರಿಗಂಧ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ

(ನೋಂದಣಿ ಕ್ರಮಾಂಕ:HSG.1/28/HHS/38527/2009-10)
“ಪುಣ್ಯಕೋಟಿ” ನಂ.1587, 3ನೇ ಮುಖ್ಯರಸ್ತೆ, ಚಂದ್ರ ಬಡಾವಣೆ, ಬೆಂಗಳೂರು–560040, ದೂರವಾಣಿ: 23184471

ಮೇಲ್ಕಂಡ ಸಹಕಾರ ಸಂಘದ 2020–21 ನೇ ಸಾಲಿನ 12ನೇ ವಾರ್ಷಿಕ ಸಾಮಾನ್ಯ ಸರ್ವ ಸದಸ್ಯರ ಸಭೆಯನ್ನು **ದಿನಾಂಕ:19–12–2021 ರಂದು ಭಾನುವಾರ ಬೆಳಿಗ್ಗೆ 11:00 ಗಂಟೆಗೆ** ಸರಿಯಾಗಿ “ಪುಣ್ಯಕೋಟಿ”,ನಂ.1587, 3ನೇ ಮುಖ್ಯರಸ್ತೆ, ಚಂದ್ರ ಬಡಾವಣೆ, ಬೆಂಗಳೂರು–560040. ಇದರಲ್ಲಿ ವಿಡಿಯೋ ಕಾನ್ಫರೆನ್ಸ್ /ವರ್ಚುವಲ್ ಮೀಟಿಂಗ್ ಮೂಲಕ ನಡೆಸಲು ತೀರ್ಮಾನಿಸಲಾಗಿದೆ. ಸಹಕಾರಿಯ ಸದಸ್ಯರೆಲ್ಲರೂ ಸಹ ಈ ಕೆಳಗಿನ ಲಿಂಕ್ ಮುಖಾಂತರ

https://play.google.com/store/apps/details?id=com.octaloptimum.shbcsl

ಭಾಗವಹಿಸಬೇಕಾಗಿ ಈ ಮೂಲಕ ಕೋರಲಾಗಿದೆ.

ದಿನಾಂಕ:07/12/2021
ಸ್ಥಳ:ಬೆಂಗಳೂರು

ಸಹಿ/– ಕಾರ್ಯದರ್ಶಿ
ದೀಪಾ.ಬಿ.ಎ

IN THE COURT OF THE XXVI ADDL, CITY CIVIL AND SESSION JUDGE (CCH-20) MAYO HALL AT BANGALORE O.S.No. 27119/2007

Between,
Mr. Mohib Aziz Bhai Baluwala & another — **Plaintiffs**

And,
The Cooperative Development, Officer & Sale/Recovery Officer, Sri Subramanyeshwara Co-operative Bank Ltd., — **Defendant**

NOTICE

Plaintiff No. 1, Mr. Mobhib Aziz Bhai Baluwala, S/o Mohsin Bluwala, aged about 62 years, Plaintiff No. 2. Mr. Iftakhar Ahmed S/o Imtiaz Ahmed, aged about 24 years, Both are R/At No. 24, Esteran Court Apartments, Coles Road, Frazer Town, Bengaluru-560005.

SUMMONS U/O V RULE 20 OF CPC TO THE PLAINTIFF NO. 1 & 2

Whereas, the defendant has filed Interlocutory Application in the above suit against you for relief of refund the money deposited by the defendant in view of the suit dismissed on 16/03/2019, You here by summoned to appear on 23/12/2021 at 11 am before Hon'ble XXVI Addl. City Civil & Sessions Judge at Mayo Hall Bengaluru-CCH-20, in person or duly instructed through advocate, failing which, the matter will be decided in your absence.

Given under my hand and seal of this court dated 02-12-2021

Advocate for Defendant
Nataraj Donkennavar
Advocate
No. 169, 2nd Main,
9th Cross, Weavers Colony
Ganganagar, Bengaluru-560032
Mobile: 9731439963

By Order,
Sd/-
Deputy Registrar,
City Civil Court
Mayo Hall Unit
Bengaluru

SBI ಭಾರತೀಯ ಸ್ಟೇಟ್ ಬ್ಯಾಂಕ್

ಸ್ಟ್ರೆಸ್ಡ್ ಅಸೆಟ್ ಮ್ಯಾನೇಜ್‌ಮೆಂಟ್ ರಿಕವರಿ ಬ್ರಾಂಚ್ 2ನೇ ಮಹಡಿ, ಸಿಗ್ನೇಚರ್ ಸ್ಕ್ವೇರ್, ಎಂ.ಆರ್.ಡಿ. ರೋಡ್, ಬಮುನಿಮೈದಾಮ್, ಗುವಾಹಟಿ–21
ಫೋನ್: 0361–2650328, ಇ–ಮೇಲ್: sbi.18399@sbi.co.in

ಅನುಬಂಧ–4–ಎ — ಅನುಬಂಧ–ಎ

[ನಿಯಮ 8(6)ರ ನಿಯಮಗಳನ್ನು ನೋಡಿ]

ಸ್ಥಿರಾಸ್ತಿ ಮಾರಾಟ ಕುರಿತಾದ ಮಾರಾಟ ಪ್ರಕಟಣೆ

ಹಣಕಾಸು ಸ್ವತ್ತುಗಳ ಸಂರಕ್ಷಣೆ ಮತ್ತು ಪುನಃರಚನೆ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ, 2002 ಅನ್ನು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002ರ ನಿಯಮ 8(6)ರ ನಿಯಮಗಳೊಂದಿಗೆ ಓದಿಕೊಂಡಂತೆ ಪ್ರದತ್ತವಾದ ನಿಯಮಗಳ ಅಡಿಯಲ್ಲಿ ಹೊರಡಿಸಲಾದ ಸ್ಥಿರಾಸ್ತಿ ಮಾರಾಟಕ್ಕೆ ಸಂಬಂಧಿತ ಇ–ಹರಾಜು

ಈ ನೋಟಿಸ್ ಮುಖಾಂತರ ಸಾಮಾನ್ಯ ಸಾರ್ವಜನಿಕರಿಗೆ ಮತ್ತು ಮುಖ್ಯವಾಗಿ ಸಾಲಗಾರ/ಜಾಮೀನುದಾರ/ಅಡಮಾನದಾರರಿಗೆ ತಿಳಿಸುವುದು ಏನೆಂದರೆ, ಇಲ್ಲಿ ಕೆಳಗೆ ವಿವರಿಸಲಾಗಿರುವ ಸ್ವತ್ತುಗಳು ಸೆಕ್ಯೂರ್ಡ್ ಕ್ರೆಡಿಟರ್‌ರ ಈಡು/ಅಡಮಾನಕ್ಕೆ ಒಳಪಟ್ಟಿರುತ್ತವೆ ಮತ್ತು ಸದರಿ ಅಡಮಾನ ಸ್ವತ್ತನ್ನು ಭಾರತೀಯ ಸ್ಟೇಟ್ ಬ್ಯಾಂಕ್‌ನ ಅಧಿಕೃತ ಅಧಿಕಾರಿ, ಸೆಕ್ಯೂರ್ಡ್ ಕ್ರೆಡಿಟರ್ ತಮ್ಮ ಸಾಂಕೇತಿಕ ಸ್ವಾಧೀನತೆಗೆ ಪಡೆದುಕೊಂಡಿದ್ದು, ಸಾಲಗಾರರಾದ 1) ಮೆ. ಸ್ಪಿರಿಟೆಕ್ ಬಿಯರ್ ವರ್ಲ್ಡ್ ಪ್ರೈ. ಲಿ., (ಸಾಲಗಾರ) ಪ್ರತಿನಿಧಿಸುವ ನಿರ್ದೇಶಕರಾದ (1) ಮಿಸ್ ಅನುರಾಧಾ ಸುಧಾಕರ್ (2) ಶ್ರೀಮತಿ. ವಾಣಿಶ್ರೀ ಪ್ರಭು (3) ಶ್ರೀ ರೋಣಕ್ ಜೈನ್ ಮತ್ತು ಜಾಮೀನುದಾರರಾದ (ಎ) ಮಿಸ್ ಅನುರಾಧಾ ಸುಧಾಕರ್ (ಬಿ) ಶ್ರೀಮತಿ ವಾಣಿಶ್ರೀ ಪ್ರಭು (ಸಿ) ಶ್ರೀ ರೋಣಕ್ ಜೈನ್ ಹಾಗೂ ಕಾರ್ಪೊರೇಟ್ ಜಾಮೀನುದಾರರಾದ ಮೆ. ಜಿಎಂಜಿ ಹೋಲ್ಡಿಂಗ್ಸ್ ಲಿಮಿಟೆಡ್ ಇವರುಗಳಿಂದ ಭಾರತೀಯ ಸ್ಟೇಟ್ ಬ್ಯಾಂಕ್‌ನ ಸೆಕ್ಯೂರ್ಡ್ ಕ್ರೆಡಿಟರ್‌ಗೆ ಸಂದಾಯ ಆಗಬೇಕಿರುವ 20.11.2021 ರಂತೆಗಿನ **ರೂ. 8,91,38,973.00** (ರೂಪಾಯಿ ಎಂಟು ಕೋಟಿ ತೊಂಬತ್ತೊಂದು ಲಕ್ಷ ಮೂವತ್ತೆಂಟು ಸಾವಿರದ ಒಂಬತ್ತು ನೂರಾ ಎಪ್ಪತ್ತೂರು ಮಾತ್ರ) ಬಾಕಿಮೊತ್ತ + ಅನ್ವಯಿಕ ಬಡ್ಡಿ, ಶುಲ್ಕ, ಖರ್ಚು ಮತ್ತು ಇತರೆ ವೆಚ್ಚ ಮುಂತಾದವುಗಳನ್ನು ವಸೂಲಾತಿ ಮಾಡಿಕೊಳ್ಳಲೆಂದು, ಸದರಿ ಸ್ವಾಧೀನ ಸ್ವತ್ತನ್ನು **24.01.2022** ರಂದು **“ಹೇಗಿದೆಯೊ ಎಲ್ಲಿದೆಯೊ”, “ಹೇಗಿದೆಯೊ ಏನಿದೆಯೊ”** ಮತ್ತು **“ಅಲ್ಲಿ ಏನೇನಿದೆಯೊ”** ಆಧಾರದಲ್ಲಿ ಮಾರಾಟ ಮಾಡಲಾಗುತ್ತಿದೆ. ಮೀಸಲು ಬೆಲೆ, ಭದ್ರತಾ ಠೇವಣಿ ಮೊತ್ತ ಹಾಗೂ ಬಿಡ್ ಹೆಚ್ಚಳ ಮೊತ್ತ ಮತ್ತು ಇಎಂಡಿ ಸ್ವೀಕೃತಿಯ ಕೊನೆಯ ದಿನಾಂಕದ ವಿವರಗಳು ಕೆಳಗಿನಂತಿರುತ್ತದೆ:–

ಪ್ರಾಪರ್ಟಿ ನಂ.	ಮೀಸಲು ಬೆಲೆ (ಈ ಬೆಲೆಗಿಂತ ಕಡಿಮೆ ದರಕ್ಕೆ ಮಾರಾಟ ಮಾಡಲಾಗುವುದಿಲ್ಲ)	ಭದ್ರತಾ ಠೇವಣಿ ಮೊತ್ತ	ಬಿಡ್ ಹೆಚ್ಚಳ ಮೊತ್ತ
1	Rs. 1,28,54,400/-	Rs. 12,85,440/-	Rs. 1,00,000/-

ಸ್ವತ್ತಿನ ವಿವರ

ಟೆಂಡರ್ ನಂ. ಎಸ್‌ಬಿಐ/ಎಸ್‌ಎಆರ್‌ಬಿ/ಜಿಹೆಚ್‌ವೈ/01

ಪ್ರಾಪರ್ಟಿ ನಂ. 1 – ಹಕ್ಕುಪತ್ರ ಹಿಡುವಳಿದಾರ: ಶ್ರೀಮತಿ. ವಾಣಿಶ್ರೀ ಪ್ರಭು ಕೋಂ. ಶ್ರೀ. ವೆಂಕಟೇಶ್ ಪ್ರಭು

ಶ್ರೀಮತಿ. ವಾಣಿಶ್ರೀ ಪ್ರಭು ಕೋಂ. ಶ್ರೀ. ವೆಂಕಟೇಶ್ ಪ್ರಭು ರವರ ಹೆಸರಿನಲ್ಲಿರು ಮತ್ತು ನವರತ್ನ ಅಗ್ರಹಾರ ಗ್ರಾಮ, ಜಾಲ ಹೋಬಳಿ, ಮೊದಲಿನ ದೇವನಹಳ್ಳಿ ತಾಲ್ಲೂಕು ವಿಳಾಸದಲ್ಲಿ ಸ್ಥಿತಗೊಂಡಿರುವ, ಪ್ರಸ್ತುತ ಬೆಂಗಳೂರು ಉತ್ತರ ತಾಲ್ಲೂಕು ವ್ಯಾಪ್ತಿಗೊಳಪಡುವ ಸರ್ವೆ ನಂ. 55/1 ರಲ್ಲಿ ರೂಪಿತ, ಬಿಐಎಎಪಿಎ ಅನುಮೋದಿತ **“ದಿ ರಿಟ್ರೀಟ್”** ಎಂಬ ಲೇಔಟ್‌ನಲ್ಲಿರುವ. ಖಾನೆಶುಮಾರಿ ನಂ. 1156 ಪ್ಲಾಟ್ ನಂ. 205 ಹೊಂದಿರುವ (ವಿಶೇಷ ಸಹಾಯಕ ಆಯುಕ್ತರು, ಬೆಂಗಳೂರು ಜಿಲ್ಲೆ, ಬೆಂಗಳೂರು ಇವರು ಹೊರಡಿಸಿದ್ದ ದಿನಾಂಕ 23.10.2008ರ ಅಧಿಕೃತ ಮೆಮೊರಾಂಡಮ್ ನಂ. ಎಎಲ್‌ಎನ್ (ಎನ್‌ಎ) ಜಾಲ: ಎಸ್‌ಆರ್:2/2007–08 ಮತ್ತು ದಿನಾಂಕ 30.06.2006ರ ಅಧಿಕೃತ ಮೆಮೊರಾಂಡಮ್ ನಂ. ಎಎಲ್‌ಎನ್ (ಎನ್‌ಎ) ಜಾಲ: ಎಸ್‌ಆರ್:14/2005–06 ಇದನ್ನು ನವೀಕೃತ ದಿನಾಂಕ 14.06.2010ರ ಅಧಿಕೃತ ಮೆಮೊರಾಂಡಮ್ ನಂ. ಎಎಲ್‌ಎನ್ (ಎನ್‌ಎ): ಎಸ್‌ಆರ್:14/2005–06 ಜೊತೆಗೆ ಓದಿಕೊಂಡಂತೆಗಿನ ಆದೇಶಗಳ ಮುಖೇನ ಪರಿವರ್ತಿತ) ಪೂರ್ವದ ಕಡೆಗೆ 67.6 ಅಡಿ ಪಶ್ಚಿಮದ ಕಡೆಗೆ 67.6 ಅಡಿ ಉತ್ತರದ ಕಡೆಗೆ 61.10 ಅಡಿ ದಕ್ಷಿಣದ ಕಡೆಗೆ 61.10 ಅಡಿ ಒಟ್ಟಾರೆ 4151.15 ಚ.ಅ. ವಿಸ್ತೀರ್ಣವುಳ್ಳ ವಸತಿಯೋಗ್ಯ ಖಾಲಿ ನಿವೇಶನ ಸ್ವತ್ತಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ **ಚಕ್ಕುಬಂದಿ ಪೂರ್ವಕ್ಕೆ:** ರಸ್ತೆ, **ಪಶ್ಚಿಮಕ್ಕೆ:** ಪ್ಲಾಟ್ ನಂ. 204, **ಉತ್ತರಕ್ಕೆ:** ಕಾಲುದಾರಿ ಮತ್ತು ನಂತರದಲ್ಲಿ ಉದ್ಯಾನ, **ದಕ್ಷಿಣಕ್ಕೆ:** ರಸ್ತೆ.

ಅಧಿಕೃತ ಅಧಿಕಾರಿಗೆ ತಿಳಿದಿರುವಂತೆ ಮೇಲ್ಕಂಡ ಯಾವುದೇ ಸ್ವತ್ತುಗಳ ಮೇಲೆ ಋಣಭಾರ ಇರುವುದಿಲ್ಲ. ಮಾರಾಟಕ್ಕೆ ಸಂಬಂಧಿತ ವಿವರವಾದ ಷರತ್ತು ಮತ್ತು ನಿಬಂಧನೆಗಳಿಗಾಗಿ ಸದರಿ ಲಿಂಕ್‌ನ್ನು ಪರಿಶೀಲಿಸಿರಿ

https://www.mstcecommerce.com/auctionhome/ibapi/index.jsp.

ದಿನಾಂಕ: 03.12.2021
ಸ್ಥಳ: ಗುವಾಹಟಿ

ಅಧಿಕೃತ ಅಧಿಕಾರಿ
ಭಾರತೀಯ ಸ್ಟೇಟ್ ಬ್ಯಾಂಕ್, ಎಸ್‌ಆರ್‌ಬಿ, ಗುವಾಹಟಿ

ದಿ ಜನತಾ ಕೋಆಪರೇಟಿವ್ ಬ್ಯಾಂಕ್ ಲಿ.

8ನೇ ಮುಖ್ಯ ರಸ್ತೆ, 17ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 055.

ದಿನಾಂಕ 7–12–2021 ರ ಪ್ರಜಾವಾಣಿಯಲ್ಲಿ ಪ್ರಕಟವಾಗಿರುವ ಜಾಹಿರಾತಿನಲ್ಲಿ ಹರಾಜಿನ ದಿನಾಂಕ **9–12–2021ರ ಬುಧವಾರ** ಎಂದು ತಪ್ಪಾಗಿ ಪ್ರಕಟವಾಗಿದ್ದು, ಅದನ್ನು, ದಿನಾಂಕ **9–12–2021ರ ಗುರುವಾರ** ಎಂದು ಓದಿಕೊಳ್ಳತಕ್ಕದ್ದು.

ಗುಜರಾತ್ ಪೆಟ್ರೋಸಿಂಥಿಸ್ ಲಿಮಿಟೆಡ್

ನೋಂದಾಯಿತ ಕಚೇರಿ: ನಂ.24, 2ನೇ ಮುಖ್ಯರಸ್ತೆ, ದೊಡ್ಡನೆಕ್ಕುಂಡಿ ಕೈಗಾರಿಕಾ ಪ್ರದೇಶ, 1ನೇ ಹಂತ, ಮಹದೇವಪುರ ಅಂಚೆ, **ಬೆಂಗಳೂರು - 560 048. ದೂರವಾಣಿ:** 080-2852 4133 **ಫ್ಯಾಕ್ಸ್:** 080-28524171
E-mail : info@gpl.in, **Website :** www.gpl.in
CIN : L23209KA1977PLC043357

ಸೂಚನೆ

ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 201(2)ರ ಪ್ರಕಾರ ಓದಿ (ಷೆಡ್ಯೂಲ್ 5 ಮತ್ತು ಕಂಪನಿಗಳು ವ್ಯವಸ್ಥಾಪಕ ಸಿಬ್ಬಂದಿಯ ನೇಮಕಾತಿ ಮತ್ತು ಸಂಭಾವನೆ), ನಿಯಮಗಳು 2014

ಈ ಮೂಲಕ ತಿಳಿಸುವುದೇನೆಂದರೆ, ಕಂಪನಿಯು ಕೇಂದ್ರ ಸರ್ಕಾರಕ್ಕೆ ಪ್ರತ್ಯೇಕ ಅರ್ಜಿ ಸಲ್ಲಿಸಲು ಪ್ರಸ್ತಾಪಿಸಿದೆ ಎಂದು ಈ ಮೂಲಕ ಸೂಚನೆ ನೀಡಲಾಗಿದೆ. ಸೆಕ್ಷನ್ 196ರ ಅಡಿಯಲ್ಲಿ, ಷೆಡ್ಯೂಲ್ 5 ಮತ್ತು ಇನ್ನಿತರ ಅನ್ವಯವಾಗುವ ನಿಬಂಧನೆಗಳು, ಯಾವುದಾದರೂ ಇದ್ದರೆ ನೇಮಕಾತಿಯ ಅನುಮೋದನೆಗಾಗಿ ಕಂಪನಿಗಳ ಕಾಯ್ದೆ, 2013 ಅಡಿ ಶ್ರೀಮತಿ. ಚರಿತಾ ಠಕ್ಕರ್ (ಡಿಐಎನ್: 00321561) ಅವರನ್ನು ಕಂಪನಿಯ ಜಂಟಿ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ಎಪ್ರಿಲ್ 01, 2022ರಿಂದ ಮಾರ್ಚ್ 31, 2027ರ ಅವಧಿಗೆ ನಾಮ ನಿರ್ದೇಶನ ಮತ್ತು ಸಂಭಾವನೆ ಸಮಿತಿಯು ಆಗಸ್ಟ್ 12, 2021ರಂದು ನಡೆದ ಸಭೆಯಲ್ಲಿ ಶಿಫಾರಸು ಮಾಡಿದೆ ಮತ್ತು ಆಗಸ್ಟ್ 12, 2021ರಂದು ನಡೆದ ಸಭೆಯಲ್ಲಿ ಕಂಪನಿಯ ನಿರ್ದೇಶಕ ಮಂಡಳಿಯಿಂದ ಅನುಮೋದಿಸಿದೆ ಮತ್ತು ಸೆಪ್ಟೆಂಬರ್ 17, 2021ರಂದು ನಡೆದ 44ನೇ ಸಾಮಾನ್ಯ ವಾರ್ಷಿಕ ಸಭೆಯಲ್ಲಿ ಸದಸ್ಯರು ಅನುಮೋದಿಸಿದ್ದಾರೆ.

ಗುಜರಾತ್ ಪೆಟ್ರೋಸಿಂಥಿಸ್ ಲಿಮಿಟೆಡ್ನ ಪರವಾಗಿ
ಸಹಿ/- **ಊರ್ಮಿ ಎನ್ ಪ್ರಸಾದ್**
ಜಂಟಿ. ವ್ಯವಸ್ಥಾಪಕ ನಿರ್ದೇಶಕ

ದಿನಾಂಕ : 7ನೇ ಡಿಸೆಂಬರ್, 2021
ಸ್ಥಳ : ಹೈದರಾಬಾದ್

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು 560 020.

ತಿದ್ದುಪಡಿ

ಈ ದಿನಪತ್ರಿಕೆಯಲ್ಲಿ ದಿನಾಂಕ 05.12.2021ರಂದು ಪ್ರಕಟಗೊಂಡಿದ್ದ ಇ–ಹರಾಜು ಪ್ರಕಟಣೆ ಸಂಖ್ಯೆ: ಬಿಡಿಎ/ಅಸ/ಇ–ಹರಾಜು/ಟಿ–01/2021–22, ದಿನಾಂಕ 03.12.2021ಕ್ಕೆ ಸಂಬಂಧಿಸಿದಂತೆ ಕೆಲವು ಬಡಾವಣೆಯ ನಿವೇಶನಗಳ ಪ್ರಾರಂಭಿಕ ಠೇವಣಿಯಲ್ಲಿ ಬದಲಾವಣೆಯಾಗಿದ್ದು, ಅದರಂತೆ ಅಂಜನಾಪುರ ಟೌನ್‌ಶಿಪ್ 4ನೇ ಬ್ಲಾಕ್‌ನ **ಕ್ರಮ ಸಂಖ್ಯೆ 8 ರಿಂದ 30**ರ ನಿವೇಶನಗಳ ಪ್ರಾರಂಭಿಕ ಠೇವಣಿಯ ಮೊತ್ತವನ್ನು ರೂ.40690/– ರ ಬದಲು **ರೂ.46,800/–** ಎಂದು; ಮುಂದುವರೆದ ಬನಶಂಕರಿ 6ನೇ ಹಂತ, 4ನೇ ಹೆಚ್ ಬ್ಲಾಕ್‌ನ **ಕ್ರಮ ಸಂಖ್ಯೆ 69 ರಿಂದ 71**ರ ನಿವೇಶನಗಳಿಗೆ ರೂ.46,800/–ರ ಬದಲು **ರೂ.33,800/–** ಮತ್ತು ಬನಶಂಕರಿ 6ನೇ ಹಂತ 2ನೇ ಬ್ಲಾಕ್‌ನ **ಕ್ರಮ ಸಂಖ್ಯೆ 338**ರ ನಿವೇಶನಕ್ಕೆ ರೂ.48750/– ರ ಬದಲು **ರೂ.49920/–** ಎಂದು ಓದಿಕೊಳ್ಳತಕ್ಕದ್ದು. ಉಳಿದ ನಿಯಮ ಹಾಗೂ ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ. ಈ ಅನಾನುಕೂಲಕ್ಕಾಗಿ ಬಿಡಿಎ ವಿಷಾಧಿಸುತ್ತದೆ.

ಸಹಿ/–
ಅಭಿಯಂತರ ಸದಸ್ಯರು, ಬೆಂ.ಅ.ಪ್ರಾ., ಬೆಂಗಳೂರು

ನಿವೇಶನ ಹಂಚಿಕೆ ವಿಳಂಬ: ಅಸಮಾಧಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಶೇಷ ಆಶ್ರಯ ಯೋಜನೆಯಡಿ ಅಂಗವಿಕಲರು, ಮಾಜಿ ಯೋಧರು ಮತ್ತು ವಿಧವೆಯರೂ ಸೇರಿದಂತೆ 202 ಫಲಾನುಭವಿಗಳಿಗೆ ನಿವೇಶನ ಹಂಚಲು ಕಳೆದ ಒಂಬತ್ತು ವರ್ಷಗಳಿಂದ ಸತಾಯಿಸಲಾಗುತ್ತಿದೆ' ಎಂಬ ಅರ್ಜಿದಾರರ ದೂರಿಗೆ ಸಂಬಂಧಿಸಿದಂತೆ ಹೈಕೋರ್ಟ್ ಸರ್ಕಾರದ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ಈ ಸಂಬಂಧ ರಾಜೇಶ್ವರಿ ಸೇರಿದಂತೆ ನಾಲ್ವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ, ಮಂಗಳವಾರ ವಿಚಾರಣೆ ನಡೆಸಿ, 'ಸರ್ಕಾರದ ಇಂತಹ ಧೋರಣೆಯನ್ನು ನ್ಯಾಯಾಲಯ ಒಪ್ಪುವುದಿಲ್ಲ.

'ನಿವೇಶನ ಹಂಚಿಕೆ ಕುರಿತಂತೆ ಫಲಾನುಭವಿಗಳಿಗೆ ಈಗಾಗಲೇ ಹಕ್ಕು ಪತ್ರ ವಿತರಿಸಲಾಗಿದೆ ಎಂದು ಸರ್ಕಾರಿ ವಕೀಲರು ಹೇಳಿದ್ದಾರೆ. ಇದನ್ನು ಪರಿಗಣಿಸಿ ಸರ್ಕಾರಕ್ಕೆ ಕೊನೆಯದಾಗಿ ನಾಲ್ಕು ವಾರ ಕಾಲಾವಕಾಶ ನೀಡಲಾಗುವುದು. ಈಗಾಗಲೇ ಗುರುತಿಸಲಾಗಿರುವ ಫಲಾನುಭವಿಗಳಿಗೆ ಈ ಯೋಜನೆಯ ಸೌಲಭ್ಯ ಕಲ್ಪಿಸಿ ವರದಿ ಸಲ್ಲಿಸಬೇಕು. ತಪ್ಪಿದರೆ ವಸತಿ ಇಲಾಖೆ ಕಾರ್ಯದರ್ಶಿ ಮತ್ತು ಬೆಂಗಳೂರು ನಗರ ಜಿಲ್ಲಾಧಿಕಾರಿ ಅರ್ಜಿಯ ಮುಂದಿನ ವಿಚಾರಣೆಗೆ ಕಡ್ಡಾಯವಾಗಿ ಹಾಜರಾಗಬೇಕು' ಎಂದು ತಾಕೀತು ಮಾಡಿದೆ.

'ಆರ್‌ಸಿ ಸ್ಮಾರ್ಟ್ ಕಾರ್ಡ್ ವಿತರಣೆ ಮುಂದುವರಿಸಿ'

ಬೆಂಗಳೂರು: ವಾಹನಗಳ ನೋಂದಣಿ ಪ್ರಮಾಣಪತ್ರಕ್ಕೆ (ಆರ್‌ಸಿ) ಈ ಹಿಂದಿನ ವ್ಯವಸ್ಥೆಯ ಅನುಸಾರ ಸ್ಮಾರ್ಟ್ ಕಾರ್ಡ್ ವಿತರಣೆ ಮುಂದುವರಿಸುವಂತೆ ಸಾರಿಗೆ ಇಲಾಖೆಗೆ ಹೈಕೋರ್ಟ್ ಸೂಚಿಸಿದೆ.

ಸ್ಮಾರ್ಟ್ ಕಾರ್ಡ್ ಆಧಾರಿತ ವಾಹನ ನೋಂದಣಿ ಪ್ರಮಾಣಪತ್ರಕ್ಕೆ (ಆರ್.ಸಿ) ಬದಲಾಗಿ ಎಲೆಕ್ಟ್ರಾನಿಕ್ ಅಥವಾ ಆನ್‌ಲೈನ್ ವಿಧಾನದ ಮೂಲಕ ಆರ್.ಸಿ ವಿತರಿಸಲು ಕೈಗೊಂಡಿರುವ ಸರ್ಕಾರದ ನಿರ್ಧಾರವನ್ನು ಪ್ರಶ್ನಿಸಿದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಪ್ರತಿವಾದಿಗಳಾದ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ಕಾರ್ಯದರ್ಶಿ, ರಾಜ್ಯ ಸಾರಿಗೆ ಇಲಾಖೆ ಪ್ರಧಾನ ಕಾರ್ಯದರ್ಶಿ, ಉಪ ಕಾರ್ಯದರ್ಶಿ, ಅಧೀನ ಕಾರ್ಯದರ್ಶಿ ಹಾಗೂ ಸಾರಿಗೆ ಮತ್ತು ರಸ್ತೆ ಸುರಕ್ಷತಾ ಆಯುಕ್ತರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ.

ಇದೇ ವೇಳೆ, ವಾಹನಗಳ ನೋಂದಣಿಯನ್ನು, ಅ. 31ರ ಅಧಿಸೂಚನೆ ಹೊರಡಿಸುವುದಕ್ಕೂ ಮೊದಲೇ ಇದ್ದ ವ್ಯವಸ್ಥೆಯಂತೆಯೇ ನಡೆಸಬಹುದು ಎಂದೂ ಸೂಚಿಸಿರುವ ನ್ಯಾಯಪೀಠ ಅ.31ರ ಅಧಿಸೂಚನೆ ಪ್ರಕಾರ ಮಾಡಲಾಗುವ ವಾಹನ ನೋಂದಣಿಗಳು, ಈ ಅರ್ಜಿ ಕುರಿತಂತೆ ನ್ಯಾಯಪೀಠ ನೀಡುವ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ' ಎಂದು ಸ್ಪಷ್ಟಪಡಿಸಿರುವ ನ್ಯಾಯಪೀಠ, ಅರ್ಜಿಗೆ ಸಂಬಂಧಿಸಿದಂತೆ 3 ವಾರಗಳಲ್ಲಿ ಆಕ್ಷೇಪಣೆ ಸಲ್ಲಿಸುವಂತೆ ಸರ್ಕಾರಕ್ಕೆ ಸೂಚಿಸಿದ್ದು, ವಿಚಾರಣೆಯನ್ನು 2022ರ ಜ. 31ಕ್ಕೆ ಮುಂದೂಡಿದೆ.

ಕರ್ನಾಟಕ ಮೋಟಾರು ವಾಹನ ಅಧಿ ನಿಯಮ-1989ರ ನಿಯಮ 33ಕ್ಕೆ ತಿದ್ದುಪಡಿ ತಂದು, ಹೊಸ ವಾಹನಗಳಿಗೆ ಡೀಲರ್ ಮಟ್ಟದಲ್ಲೇ ಎಲೆಕ್ಟ್ರಾನಿಕ್ ಅಥವಾ ಆನ್‌ಲೈನ್ ಮೂಲಕ ಆರ್.ಸಿ ವಿತರಿಸುವ ಸಂಬಂಧ 2021ರ ಅ. 31ರಂದು ಸಾರಿಗೆ ಇಲಾಖೆ ಹೊರಡಿಸಿರುವ ಅಧಿಸೂಚನೆಯನ್ನು ಸ್ಮಾರ್ಟ್ ಕಾರ್ಡ್ ಆಧಾರಿತ ಆರ್.ಸಿ ವಿತರಣಾ ಸಂಸ್ಥೆಯಾದ, ರೂಸ್ಮೆರ್ಟಾ ಟೆಕ್ನಾಲಜೀಸ್ ಲಿಮಿಟೆಡ್ ಪ್ರಶ್ನಿಸಿದೆ. ಅರ್ಜಿದಾರರ ಪರ ಹಿರಿಯ ವಕೀಲ ಅಶೋಕ ಹಾರನಹಳ್ಳಿ ವಾದ ಮಂಡಿಸಿದರು.

ಜೊಲ್ಲೆಗೆ ಜೀರೊ ಟ್ರಾಫಿಕ್ ವ್ಯವಸ್ಥೆ: ಪಿಐಎಲ್ ವಜಾ

ಬೆಂಗಳೂರು: ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಶಾಸಕಿ ಶಶಿಕಲಾ ಜೊಲ್ಲೆ ಅವರಿಗೆ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ರಾಜಭವನದವರೆಗೆ 'ಜೀರೊ ಟ್ರಾಫಿಕ್' ವ್ಯವಸ್ಥೆ ಕಲ್ಪಿಸಿದ ಕ್ರಮ ಪ್ರಶ್ನಿಸಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಹೈಕೋರ್ಟ್ ವಜಾಗೊಳಿಸಿದೆ.

ಈ ಕುರಿತಂತೆ ವಕೀಲ ಜಿ. ಬಾಲಾಜಿ ನಾಯ್ಡು ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು, 'ಯಾವುದೇ ನಿಯಮ ಉಲ್ಲಂಘನೆಯಾಗಿರುವ ಬಗ್ಗೆ ಅಥವಾ ಆಡಳಿತಾತ್ಮಕ ಅಧಿಕಾರ ದುರ್ಬಳಕೆ ಆರೋಪಕ್ಕೆ ಸಂಬಂಧಿಸಿದಂತೆ ಅರ್ಜಿದಾರರು ಸಾಕ್ಷ್ಯಾಧಾರ ಒದಗಿಸಿಲ್ಲ. ಹೀಗಾಗಿ ಅರ್ಜಿದಾರರ ಮನವಿಯನ್ನು ಸಕ್ಷಮ ಪ್ರಾಧಿಕಾರ ತಿರಸ್ಕರಿಸಿದೆ' ಎಂದು ನ್ಯಾಯಪೀಠಕ್ಕೆ ತಿಳಿಸಿದರು. ಈ ಹೇಳಿಕೆ ದಾಖಲಿಸಿಕೊಂಡ ನ್ಯಾಯಪೀಠ, ಅರ್ಜಿ ವಜಾಗೊಳಿಸಿ ಆದೇಶಿಸಿತು.

18ಕ್ಕೆ ಮೆಗಾ ಲೋಕ ಅದಾಲತ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ವರ್ಷದ ಕೊನೆಯ ಲೋಕ ಅದಾಲತ್‌ನಲ್ಲಿ ಮೂರು ಲಕ್ಷ ವ್ಯಾಜ್ಯಗಳು ಇತ್ಯರ್ಥಗೊಳ್ಳುವ ನಿರೀಕ್ಷೆ ಇದೆ ಎಂದು ಹೈಕೋರ್ಟ್ ನ್ಯಾಯಮೂರ್ತಿಗಳೂ ಆದ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಕಾರ್ಯ ನಿರ್ವಾಹಕ ಅಧ್ಯಕ್ಷ ಬಿ.ವೀರಪ್ಪ ತಿಳಿಸಿದರು.

ಮಾಧ್ಯಮ ಗೋಷ್ಠಿಯಲ್ಲಿ ಮಂಗಳವಾರ ಈ ವಿಷಯ ತಿಳಿಸಿದ ಅವರು, 'ಕಂದಾಯ, ಹಣಕಾಸು ಸೇರಿದಂತೆ ವಿವಿಧ ಇಲಾಖೆಗಳು, ಸಂಸ್ಥೆಗಳು, ವಿಮಾ ಕಂಪೆನಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಸ್ಕಾಂ ಅಧಿಕಾರಿಗಳ ಸಭೆ ನಡೆಸಿ ವ್ಯಾಜ್ಯಗಳ ತ್ವರಿತ ಇತ್ಯರ್ಥಕ್ಕೆ ಕ್ರಮ ಕೈಗೊಳ್ಳಲಾಗಿದೆ. ನ್ಯಾಯಾಲಯದಲ್ಲಿರುವ ಹಾಗೂ ವ್ಯಾಜ್ಯ ಪೂರ್ವ ಪ್ರಕರಣಗಳ ಇತ್ಯರ್ಥಕ್ಕೂ ಅವಕಾಶ ಕಲ್ಪಿಸಲಾಗಿದೆ. ಆನ್‌ಲೈನ್ ಮತ್ತು ಭೌತಿಕವಾಗಿ ಎರಡೂ ವಿಧಾನದಲ್ಲಿ ಅದಾಲತ್ ನಡೆಯಲಿದೆ' ಎಂದು ತಿಳಿಸಿದರು.

'ಇದು ಎಲ್ಲ ಬಗೆಯ ಕಕ್ಷಿದಾರರಿಗೆ ಖರ್ಚಿಲ್ಲದೆ ತ್ವರಿತವಾಗಿ ವ್ಯಾಜ್ಯಗಳನ್ನು ಬಗೆಹರಿಸಿಕೊಳ್ಳಲು ಸುವರ್ಣಾವಕಾಶ. ಈ ಅದಾಲತ್‌ನಲ್ಲಿ ಮೋಟಾರು ವಾಹನ ಪ್ರಕರಣಗಳು, ಆಸ್ತಿ, ಸಿವಿಲ್ ವ್ಯಾಜ್ಯಗಳು, ದೌರ್ಜನ್ಯ, ಹಿರಿಯ ನಾಗರಿಕರ ಬಗೆಗಿನ ಪ್ರಕರಣಗಳು, ಚೆಕ್ ಬೌನ್ಸ್ ಸೇರಿದಂತೆ ಹಲವು ಬಗೆಯ ವ್ಯಾಜ್ಯಗಳನ್ನು ಬಗೆಹರಿಸಿಕೊಳ್ಳಲು ಅವಕಾಶವಿದೆ' ಎಂದು ವಿವರಿಸಿದರು. ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಚ್.ಶಶಿಧರ ಶೆಟ್ಟಿ ಇದ್ದರು.

ಸಾರ್ವಜನಿಕರು ನೇರವಾಗಿ ಸ್ಥಳೀಯ ಕಾನೂನು ಸೇವಾ ಪ್ರಾಧಿಕಾರಗಳಿಗೆ ಮನವಿ ಸಲ್ಲಿಸಿ ವ್ಯಾಜ್ಯಗಳನ್ನು ಲೋಕ್ ಅದಾಲತ್ ಮುಂದೆ ತಂದು ಪರಿಹರಿಸಿಕೊಳ್ಳಬಹುದು.

ಅಥವಾ ಇಮೇಲ್ ವಿಳಾಸ kslsapgbng@gmail.com ಗೆ ದೂರು ಸಲ್ಲಿಸಬಹುದಾಗಿದೆ.

ಕಾನೂನು ಸೇವಾ ಘಟಕ 080-25521111 / 22215143 / 222 22919 ಗೆ ಕರೆ ಮಾಡಿಯೂ ಮನವಿ ಸಲ್ಲಿಸಬಹುದಾಗಿದೆ.

₹ 500 ಕೋಟಿ ಮೌಲ್ಯದ ಡ್ರಗ್ಸ್ ವಶ

ನವದೆಹಲಿ (ಪಿಟಿಐ): ಭಾರತ-ಮ್ಯಾನ್ಮಾರ್ ಗಡಿಯಲ್ಲಿ ನಡೆದ ಜಂಟಿ ಕಾರ್ಯಾಚರಣೆಯಲ್ಲಿ ಅಂದಾಜು ₹ 500 ಕೋಟಿ ಮೌಲ್ಯದ ಮಾದಕವಸ್ತುಗಳನ್ನು ಅಸ್ಸಾಂ ರೈಫಲ್ಸ್ ವಶಪಡಿಸಿಕೊಂಡಿದೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ಮಣಿಪುರದ ಮೊರೆ ಪಟ್ಟಣದಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದ ವೇಳೆ ಮ್ಯಾನ್ಮಾರ್ ಮೂಲದ ಮಾದಕವಸ್ತು ಕಳ್ಳಸಾಗಣಿಕೆದಾರನನ್ನು ಭದ್ರತಾ ಸಿಬ್ಬಂದಿ ಸೋಮವಾರ ಬಂಧಿಸಿದ್ದಾರೆ.

'ಗಡಿಯಲ್ಲಿ ಮಾದಕವಸ್ತು ಕಳ್ಳಸಾಗಣೆ ಕುರಿತು ಗುಪ್ತಚರ ಅಧಿಕಾರಿಗಳು ನೀಡಿದ ಮಾಹಿತಿ ಮೇರೆಗೆ ಭಾರತ-ಮ್ಯಾನ್ಮಾರ್ ಗಡಿಯಲ್ಲಿನ ಅಸ್ಸಾಂ ರೈಫಲ್ಸ್ ಕಾರ್ಯಾಚರಣೆ ಕೈಗೊಂಡಿತ್ತು. ಕಾರ್ಯಾಚರಣೆಯಲ್ಲಿ 54 ಕೆ.ಜಿ. ಬ್ರೌನ್ ಶುಗರ್ ಮತ್ತು ಐಸ್ ಅಥವಾ ಕ್ರಿಸ್ಟಾಲ್ ಮೆಥ್ ಎಂದು ಕರೆಯಲಾಗುವ 154 ಕೆ.ಜಿ. ಮೆಥಾಂಫೆಟಮೈನ್ ಅನ್ನು ವಶಪಡಿಸಿಕೊಳ್ಳಲಾಗಿದೆ. ಇದರ ಅಂದಾಜು ಮೌಲ್ಯ ₹ 500 ಕೋಟಿ' ಎಂದು ಪ್ಯಾರಾ ಮಿಲಿಟರಿ ಪಡೆ ತಿಳಿಸಿದೆ.

ಚೀನಾ ಮಹಿಳೆ ವೀಸಾ ಅವಧಿ ವಿಸ್ತರಣೆಗೆ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವೀಸಾ ಅವಧಿ ಮುಗಿದ ಮೇಲೂ ಭಾರತದ ನೆಲದಲ್ಲಿ ವಾಸಿಸುತ್ತಿರುವ ಚೀನಾದ ಪ್ರಜೆ, ಯಾವ ಕಾರಣಕ್ಕಾಗಿ ನನ್ನನ್ನು ದೇಶ ಬಿಟ್ಟು ತೆರಳುವಂತೆ ನೋಟಿಸ್ ನೀಡಿದ್ದೀರಿ ಎಂಬ ವಿವರಣೆ ಕೇಳುವುದು ಉದ್ಧಟತನ ಮಾತ್ರವಲ್ಲ; ಅದು ಈ ನೆಲದ ಸಾರ್ವಭೌಮತ್ವವನ್ನೇ ಪ್ರಶ್ನಿಸಿದಂತೆ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಕೋವಿಡ್ ನೆಪವೊಡ್ಡಿ ವೀಸಾ ಅವಧಿ ಮುಗಿದಿದ್ದರೂ ರಾಜ್ಯದಲ್ಲೇ ನೆಲೆಯೂರಿದ್ದ 42 ವರ್ಷದ ಚೀನಾದ ಮಹಿಳೆಯೊಬ್ಬರ ವೀಸಾ ಅವಧಿ ವಿಸ್ತರಣೆ ಮನವಿಯನ್ನು ಸಾರಾಸಗಟಾಗಿ ತಳ್ಳಿ ಹಾಕಿರುವ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ವೀಸಾ ಅವಧಿ ಮುಗಿದ ಮೇಲೂ ಇಲ್ಲಿಯೇ ನೆಲೆಸಿರುವವರ ಬಗ್ಗೆ ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಕೇಂದ್ರಕ್ಕೆ ಹಲವು ನಿರ್ದೇಶನಗಳನ್ನು ನೀಡಿದೆ.

ಈ ಸಂಬಂಧದ ರಿಟ್ ಅರ್ಜಿ ವಿಚಾರಣೆ ನಡೆಸಿ ತೀರ್ಪು ಪ್ರಕಟಿಸಿರುವ ನ್ಯಾಯಪೀಠ, 'ವೀಸಾ ಅವಧಿ ಮುಗಿದ ಕೂಡಲೇ ತೆರಳದಿದ್ದರೆ ಅಂತಹವರನ್ನು ಜೈಲಿಗೆ ಕಳುಹಿಸುವ ಇಲ್ಲವೇ ಭಾರಿ ಜುಲ್ಮಾನೆ ವಿಧಿಸುವ ಕ್ರಮಗಳು ಜಗತ್ತಿನ ಬೇರೆ ಬೇರೆ ರಾಷ್ಟ್ರಗಳಲ್ಲಿ ಜಾರಿಯಲ್ಲಿವೆ. ಅಂತರರಾಷ್ಟ್ರೀಯ ಕಾನೂನಿನ ಅನುಸಾರ ವಿದೇಶಿಯರಿಗೆ ಹೆಚ್ಚಿನ ಹಕ್ಕುಗಳನ್ನು ನೀಡಲು ಸಾಧ್ಯವಿಲ್ಲ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಕೇಂದ್ರ ಸರ್ಕಾರದ ಪರ ವಾದ ಮಂಡಿಸಿದ ಸಹಾಯಕ ಸಾಲಿಸಿಟರ್ ಜನರಲ್ ಎಚ್.ಶಾಂತಿಭೂಷಣ್, 'ಅರ್ಜಿದಾರ ಚೀನಾ ಪ್ರಜೆ, 2019ರ ಅಕ್ಟೋಬರ್ 30ರಂದು ನೀಡಲಾದ ಲೀವ್ ಇಂಡಿಯಾ ನೋಟಿಸ್ ಅನ್ನು ಪ್ರಶ್ನಿಸುತ್ತಿರುವ ಕ್ರಮ ಕಾನೂನು ಬಾಹಿರವಾಗಿದೆ. ಈಕೆ ಒಂದಲ್ಲಾ ಒಂದು ಕಾರಣಕ್ಕಾಗಿ ತಮ್ಮ ವೀಸಾ ಅವಧಿಯನ್ನು ವಿಸ್ತರಿಸಿಕೊಳ್ಳುತ್ತಲೇ ಬಂದಿದ್ದಾರೆ. ಈ ಹಿಂದೆಯೇ ರಿಟ್ ಅರ್ಜಿಯೊಂದನ್ನು ಹಾಕಿಕೊಂಡು ತಮ್ಮ ವೀಸಾ ಅವಧಿ ವಿಸ್ತರಿಸಿಕೊಂಡಿದ್ದಾರೆ. ಈಗಾಗಲೇ ಮಾನವೀಯ ಆಧಾರದಲ್ಲಿ ಒದಗಿಸಿರುವ ವಿಸ್ತರಿತ ಅವಧಿಯನ್ನು ಪುನಃ ವಿಸ್ತರಿಸುವಂತೆ ಕೋರುತ್ತಿರುವುದು ಮಾನವೀಯ ಔದಾರ್ಯದ ದುರುಪ ಯೋಗ' ಎಂದು ಬಲವಾಗಿ ಆಕ್ಷೇಪಿಸಿದ್ದರು.

ಸದ್ಯ ಮಂಡ್ಯದ ಸ್ಕಾಟ್ಸ್ ಬಂಗಲೆಯಲ್ಲಿ ವಾಸವಾಗಿರುವ ಲಿ ಡೊಂಗ್ ಎಂಬ 42 ವರ್ಷದ ಚೀನಾದ ಮಹಿಳೆ, 'ನನ್ನ ಕಾನೂನುಬದ್ಧ ವೀಸಾ ಅವಧಿ ಮುಗಿದಿದ್ದು ನನಗೀಗ ಭಾರತದಿಂದ ತೆರಳುವಂತೆ 'ಲೀವ್ ಇಂಡಿಯಾ ನೋಟಿಸ್' ನೀಡಲಾಗಿದೆ. ಆದರೆ ಸದ್ಯ ಇದು ಸಾಧ್ಯವಿಲ್ಲದ ಕಾರಣ ಅನಿಶ್ಚಿತ ಅವಧಿಯವರೆಗೆ ವೀಸಾ ವಿಸ್ತರಿಸಲು ಕೋರಿರುವ ನನ್ನ ಮನವಿಯನ್ನು ಪರಿಗಣಿಸಲು ವಿದೇಶಾಂಗ ವ್ಯವಹಾರಗಳ ಇಲಾಖೆ ಹಾಗೂ ಬೆಂಗಳೂರಿನ ವಿದೇಶಿ ನೋಂದಣಿ ಪ್ರಾದೇಶಿಕ ಕಚೇರಿಗೆ (ಎಫ್‌ಆರ್‌ಆರ್‌ಒ) ನಿರ್ದೇಶಿಸಬೇಕು' ಎಂದು ಕೋರಿ ಹೈಕೋರ್ಟ್ ಮೆಟ್ಟಿಲೇರಿದ್ದರು.

'ಸಾರ್ವಭೌಮತ್ವ ತತ್ವ ಅನುಸರಿಸಿ'

'ಅಂತರರಾಷ್ಟ್ರೀಯ ಒಪ್ಪಂದಗಳ ಅನುಚ್ಛೇದ 13ರ ಪ್ರಕಾರ ವಿದೇಶಿಯರ ವೀಸಾ ಅವಧಿ ಮುಗಿದಿರುತ್ತದೆಯೋ ಅಂತಹ ವ್ಯಕ್ತಿಯನ್ನು ಆ ರಾಷ್ಟ್ರದಿಂದ ಹೊರಗೆ ಕಳುಹಿಸುವ ಅಧಿಕಾರ ಅಲ್ಲಿನ ಸರ್ಕಾರಕ್ಕೆ ಅಂತರ್ಗವಾಗಿರುತ್ತದೆ. ಜಾಗತಿಕವಾಗಿ ಇದು ಬಹುಪಕ್ಷೀಯ ಒಪ್ಪಂದ. ವೀಸಾ ಅವಧಿ ಮುಗಿದ ಮೇಲೂ ವಿದೇಶಿ ನೆಲದಲ್ಲಿ ವಾಸ ಮಾಡುವ ಪ್ರಜೆ ಅಂತರರಾಷ್ಟ್ರೀಯ ಕಾನೂನಿನಲ್ಲಿ ರಾಷ್ಟ್ರಗಳ ಸಾರ್ವಭೌಮತ್ವದ ತತ್ವದ ಪ್ರಕಾರ ನಡೆದುಕೊಳ್ಳಬೇಕು' ಎಂದು ತೀರ್ಪಿನಲ್ಲಿ ವಿವರಿಸಲಾಗಿದೆ.

ಭಾರತೀಯ ಪ್ರಜೆಯನ್ನು ಚೀನಾದಲ್ಲಿ ಹೇಗೆ ನಡೆಸಿಕೊಳ್ಳುತ್ತಾರೆಯೋ ಅದೇ ನೀತಿ ಭಾರತೀಯ ನೆಲದಲ್ಲಿ ವೀಸಾ ಅವಧಿ ಮುಗಿದ ಮೇಲೂ ಚೀನಾದವರಿಗೆ ಅನ್ವಯವಾಗುತ್ತವೆ.

ಕೃಷ್ಣ ಎಸ್.ದೀಕ್ಷಿತ್, ನ್ಯಾಯಮೂರ್ತಿ

ಮಹಿಳಾ ಕೋ-ಆಪರೇಟಿವ್ ಬ್ಯಾಂಕ್ ಲಿ.,
ನಂ.14, ಸೌತ್ ಎಂಡ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು–560 020.
ಫೋನ್ ನಂ. 080–23562229, 23460051

ಸರ್ವಸದಸ್ಯರ ಸಭಾ ನೋಟೀಸು

ದಿನಾಂಕ 12.12.2021ರ ಭಾನುವಾರದಂದು ಬೆಳಿಗ್ಗೆ 10.00ಘಂಟೆಗೆ 2020–21ನೇ ಸಾಲಿನ 43ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ಕರ್ನಾಟಕ ಸರ್ಕಾರದ ಆದೇಶದ ಮೇರೆಗೆ ವರ್ಚುವಲ್ /ವೀಡಿಯೊ ಸಮಾವೇಶ ಮುಖಾಂತರ ನಡೆಸಲು ತೀರ್ಮಾನಿಸಲಾಗಿದೆ. ಈಗಾಗಲೇ ಮಾನ್ಯ ಸದಸ್ಯರುಗಳ ವಿಳಾಸಕ್ಕೆ ಸಭೆಯ ಸೂಚನಾ ಪತ್ರವನ್ನು ಅಂಚೆ ಮೂಲಕ ಸಕಾಲದಲ್ಲಿ ಕಳುಹಿಸಲಾಗಿದೆ. ಒಂದು ವೇಳೆ ಸೂಚನಾ ಪತ್ರ ತಲುಪದೇ ಇದ್ದಲ್ಲಿ ಇದನ್ನೇ ಸೂಚನಾ ಪತ್ರ ಎಂದು ಪರಿಗಣಿಸಿ ಮಾನ್ಯ ನಿಯತ ಸದಸ್ಯರು (Regular Members) ಮಾತ್ರ ಸಭೆಯಲ್ಲಿ ಭಾಗವಹಿಸಿ ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿಸಲಾಗಿದೆ.

ಸದಸ್ಯರು ಬ್ಯಾಂಕಿಗೆ ನೀಡಿರುವ ಮೊಬೈಲ್ ಸಂಖ್ಯೆಗೆ ಲಿಂಕನ್ನು ಕಳುಹಿಸಲಾಗುವುದು. ಈ ಲಿಂಕಿಗೆ ಲಾಗಿನ್ ಆಗಿ ಸದಸ್ಯರ ಹೆಸರು ಹಾಗೂ ಸದಸ್ಯತ್ವ ಸಂಖ್ಯೆಯನ್ನು ನಮೂದಿಸಿ ವಾರ್ಷಿಕ ಸರ್ವ ಸದಸ್ಯರ ಸಭೆಯ ಕಲಾಪಗಳಲ್ಲಿ ಭಾಗವಹಿಸಲು ತಿಳಿಸಲಾಗಿದೆ.

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಸಹಿ
ಪ್ರಧಾನ ವ್ಯವಸ್ಥಾಪಕರು

ಸ್ಥಳ: ಬೆಂಗಳೂರು
ದಿನಾಂಕ: 07.12.2021



ಬೆನ್ಜ್ ಕಾರು ಅತೀ ವೇಗದ ಚಾಲನೆ • ಆಲ್ಟೊ ಕಾರು ಚಾಲಕ ಸಾವು

ಸರಣಿ ಅಪಘಾತ: 7 ವಾಹನ ಜಖಂ

ಪ್ರಜಾವಾಣಿ ವಾರ್ತೆ

ಅಪಘಾತದಿಂದ ನಜ್ಜುಗುಜ್ಜಾಗಿರುವ ಆಲ್ಟೊ ಕಾರಿನ ಅವಶೇಷ –ಪ್ರಜಾವಾಣಿ ಚಿತ್ರ

ಬೆಂಗಳೂರು: ಇಂದಿರಾನಗರದ ಸಿಎಂಎಚ್– ತಿಪ್ಪಸಂದ್ರ ಮುಖ್ಯರಸ್ತೆಯಲ್ಲಿ ಮರ್ಸಿಡಿಸ್ ಬೆನ್ಜ್ ಕಾರನ್ನು ಚಾಲಕ ಅತೀ ವೇಗವಾಗಿ ಚಲಾಯಿಸಿದ್ದರಿಂದ ಸರಣಿ ಅಪಘಾತ ಸಂಭವಿಸಿದ್ದು, ಹರಿ ಮಹಾಂತ (36) ಎಂಬುವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

'ಮಂಗಳವಾರ ಮಧ್ಯಾಹ್ನ ಈ ಅಪಘಾತ ಸಂಭವಿಸಿದೆ. ಬೆನ್ಜ್ ಕಾರು, ಮಾರುತಿ ಆಲ್ಟೊ ಕಾರು, ಸ್ವಿಫ್ಟ್ ಕಾರು, ಟಾಟಾ ಏಸ್, ಬಜಾಜ್ ಪಲ್ಸರ್ ಬೈಕ್ ಹಾಗೂ 2 ಆಟೊಗಳು ಜಖಂಗೊಂಡಿವೆ. ಬೆನ್ಜ್ ಕಾರು ಚಲಾಯಿಸುತ್ತಿದ್ದ ಸುವೀತ್ ಕಾರ್ಡಿಯೊ (43) ಎಂಬಾತ ತೀವ್ರವಾಗಿ ಗಾಯಗೊಂಡಿದ್ದು, ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ' ಎಂದು ಹಲಸೂರು ಸಂಚಾರ ಠಾಣೆ ಪೊಲೀಸರು ಹೇಳಿದರು.

'ಮೃತ ಹರಿ ಮಹಾಂತ, ಅಸ್ಸಾಂನವರು. ನಗರದ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಅವರು ಆಲ್ಟೊ ಕಾರಿನಲ್ಲಿ ಹೊರಟಿದ್ದರು. ಅಪಘಾತದಿಂದ ಕಾರು ನಜ್ಜುಗುಜ್ಜಾಗಿ, ಕುಳಿತ ಸ್ಥಳದಲ್ಲೇ ಅವರು ಮೃತಪಟ್ಟರು. ಮೃತದೇಹವನ್ನು ಹೊರಗೆ ತೆಗೆದು, ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ' ಎಂದು ತಿಳಿಸಿದರು.

'ಅಪಘಾತದಲ್ಲಿ ಸ್ವಿಫ್ಟ್ ಕಾರಿನ ಚಾಲಕ ಮಹೇಶ್ (27), ಅದರಲ್ಲಿ ಪ್ರಯಾಣಿಸುತ್ತಿದ್ದ ವಿದ್ಯಾಶ್ರೀ (22), ಎನ್. ಶ್ರೀನಿವಾಸ್ (26), ಆಟೊ ಚಾಲಕರಾದ ನಜೀಜ್ (38), ಶ್ರೀಕೃಷ್ಣ (30) ಹಾಗೂ ಪಲ್ಸರ್ ಬೈಕ್ ಚಾಲಕ ಆನಂದಕುಮಾರ್ (36) ಗಾಯಗೊಂಡಿದ್ದಾರೆ' ಎಂದೂ ಹೇಳಿದರು.

ಬೆನ್ಜ್ ಕಾರು ಚಾಲಕನ ನಿರ್ಲಕ್ಷ್ಯ: 'ಬಿಇಎಚ್ ಡಿಫೆನ್ಸ್ ಕಾಲೊನಿ ನಿವಾಸಿ ಸುವಿದ್, ಉದ್ಯಮ ನಡೆಸುತ್ತಿದ್ದಾನೆ. ಪತ್ನಿ ನಂದಿತಾ ಚೋರ್ಡಿಯಾ ಹೆಸರಿನಲ್ಲಿ ಮರ್ಸಿಡಿಸ್ ಬೆನ್ಜ್ ಕಾರು (ಕೆಎ 01 ಎಂಆರ್ 0423) ನೋಂದಣಿ ಮಾಡಿಸಿದ್ದ. ಅದೇ ಕಾರು ಚಲಾಯಿಸಿಕೊಂಡು ಸಿಎಂಎಚ್ ರಸ್ತೆಗೆ ಮಂಗಳವಾರ ಮಧ್ಯಾಹ್ನ 2.30ರ ಸುಮಾರಿಗೆ ಬಂದಿದ್ದ' ಎಂದು ಪೊಲೀಸರು ಹೇಳಿದರು.

'ಅತೀ ವೇಗವಾಗಿ ಕಾರು ಚಲಾಯಿಸಿದ್ದ ಸುವಿದ್, ನಿಯಂತ್ರಣ ಕಳೆದುಕೊಂಡಿದ್ದ. ಎದುರಿಗೆ ಹೋಗುತ್ತಿದ್ದ ಪಲ್ಸರ್ ಬೈಕ್‌ಗೆ ಕಾರು ಗುದ್ದಿದ್ದ. ನಂತರ, ಆಲ್ಟೊ ಕಾರು ಹಾಗೂ ಇತರೆ ವಾಹನಗಳಿಗೂ ಡಿಕ್ಕಿ ಹೊಡೆದಿತ್ತು. ಕೊನೆಯಲ್ಲಿ ಬೆನ್ಜ್ ಕಾರು ರಸ್ತೆಯಲ್ಲೇ ಉರುಳಿ ಬಿದ್ದಿತ್ತು. ಕಾರಿನೊಳಗೆ ಸಿಲುಕಿದ್ದ ಸುವಿದ್‌ನನ್ನು ಸ್ಥಳೀಯರೇ ರಕ್ಷಿಸಿ ಆಸ್ಪತ್ರೆಗೆ ದಾಖಲಿಸಿದ್ದಾರೆ ಎಂದೂ ಪೊಲೀಸರು ತಿಳಿಸಿದರು.

'ಉದ್ಯಮಿ ಸುವಿದ್ ನಿರ್ಲಕ್ಷ್ಯದ ಚಾಲನೆಯೇ ಸರಣಿ ಅಪಘಾತಕ್ಕೆ ಕಾರಣವೆಂಬುದು ಮೇಲ್ನೋಟಕ್ಕೆ ಗೊತ್ತಾಗಿದೆ. ಆತನ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದೂ ಹೇಳಿದರು.

ಪರವಾನಗಿಗೆ ಲಂಚ ಇಬ್ಬರ ಬಂಧನ

ಬೆಂಗಳೂರು: ಹೋಟೆಲ್ ಉದ್ಯಮದ ಪರವಾನಗಿ ನೀಡಲು ₹3,500 ಲಂಚ ಪಡೆದ ಆರೋಪದ ಮೇಲೆ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ಅಂಕಿತಾಧಿಕಾರಿ ಡಾ. ಹರ್ಷವರ್ಧನ್ ಮತ್ತು ಹರೀಶ್ ಪೊನ್ನಪ್ಪ ಎಂಬ ಖಾಸಗಿ ವ್ಯಕ್ತಿಯನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಸೋಮವಾರ ಬಂಧಿಸಿದೆ.

ದೇವನಹಳ್ಳಿಯ ನಿವಾಸಿಯೊಬ್ಬರು ಜಾಲ ಹೋಬಳಿಯ ಬೇಗೂರು ಗ್ರಾಮದಲ್ಲಿ ಹೋಟೆಲ್ ಆರಂಭಿಸಲು ಪರವಾನಗಿ ಕೋರಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿದ್ದರು. ₹2,000 ಶುಲ್ಕದ ಜತೆ ₹ 3,500 ಲಂಚ ಸೇರಿಸಿ ಕೊಡುವಂತೆ ಅಂಕಿತಾಧಿಕಾರಿ ಬೇಡಿಕೆ ಇಟ್ಟಿದ್ದರು. ಈ ಕುರಿತು ಎಸಿಬಿಗೆ ದೂರು ನೀಡಿದ್ದರು.

ಅರ್ಜಿದಾರರು ಸೋಮವಾರ ಡಾ.ಹರ್ಷವರ್ಧನ್ ಅವರನ್ನು ಭೇಟಿಮಾಡಿದಾಗ ಹರೀಶ್ ಪೊನ್ನಪ್ಪ ಬಳಿ ಹಣ ನೀಡುವಂತೆ ಸೂಚಿಸಿದ್ದರು. ಅದರಂತೆ ಅರ್ಜಿದಾರರು ಹಣ ತಲುಪಿಸಿದ್ದರು. ತಕ್ಷಣ ದಾಳಿಮಾಡಿ ಇಬ್ಬರನ್ನೂ ಬಂಧಿಸಲಾಯಿತು.

ಮಹಿಳೆ ಸೇರಿ ಐವರ ವಿರುದ್ಧ ಎಫ್‌ಐಆರ್

ನಿವೃತ್ತ ಶಿಕ್ಷಕ ಸಾವು: ಕೊಲೆ ಆರೋಪ

ಪ್ರಜಾವಾಣಿ ವಾರ್ತೆ



ಜಯಪಾಲ್

ಬೆಂಗಳೂರು: ನಿವೃತ್ತ ಶಿಕ್ಷಕ ಸಿ.ಟಿ. ಜಯಪಾಲ್ (78) ಎಂಬುವರು ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದು, ಕೊಲೆ ಶಂಕೆ ವ್ಯಕ್ತಪಡಿಸಿ ಕುಟುಂಬಸ್ಥರು ಬನಶಂಕರಿ ಠಾಣೆಗೆ ದೂರು ನೀಡಿದ್ದಾರೆ.

'ಬನಶಂಕರಿ 2ನೇ ಹಂತದ 17ನೇ ಮುಖ್ಯರಸ್ತೆಯಲ್ಲಿ ವಾಸವಿದ್ದ ಜಯಪಾಲ್ ಅವರು ನ.28ರಂದು ಆಸ್ಪತ್ರೆಯೊಂದರಲ್ಲಿ ಮೃತಪಟ್ಟಿರುವುದು ಗೊತ್ತಾಗಿದೆ. ಸಾವಿನಲ್ಲಿ ಅನುಮಾನ ಇರುವುದಾಗಿ ಹೇಳಿ, ಅವರ ಸಹೋದರ ಧನಂಜಯ್ ದೂರು ನೀಡಿದ್ದಾರೆ' ಎಂದು ಪೊಲೀಸ್ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

'ಜಯಪಾಲ್ ಅವರಿಗೆ ಸೇರಿದ್ದ ಮನೆಯಲ್ಲಿ ಬಾಡಿಗೆಗಿದ್ದ ನಿವೇದಿತಾ, ಅವರ ಪತಿ ಮಹೇಶ್‌ಕುಮಾರ್, ಅಣ್ಣ ನೂತನ್, ತಂದೆ ಪುಟ್ಟರಾಜು ಹಾಗೂ ತಾಯಿ ಕಾಮಾಕ್ಷಿ ಮೇಲೆ ದೂರುದಾರ ಧನಂಜಯ್ ಅನುಮಾನ ವ್ಯಕ್ತಪಡಿಸಿದ್ದು, ನಿವೇದಿತಾ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಅವರೆಲ್ಲರ ವಿಚಾರಣೆ ನಡೆಸಿದ ಬಳಿಕ ಮತ್ತಷ್ಟು ಮಾಹಿತಿ ತಿಳಿಯಲಿದೆ' ಎಂದೂ ಹೇಳಿವೆ.

ದೂರಿನ ವಿವರ: 'ಕೋಟ್ಯಂತರ ರೂಪಾಯಿ ಆಸ್ತಿ ಹೊಂದಿದ್ದ ಜಯಪಾಲ್, ಸರ್ಕಾರಿ ಉದ್ಯೋಗಿ ಆಗಿದ್ದ ಪತ್ನಿ ಸಾವಿತ್ರಮ್ಮ ಜೊತೆ ಬನಶಂಕರಿಯಲ್ಲಿ ವಾಸವಿದ್ದರು. ಮೂರು ಅಂತಸ್ತಿನ ಮನೆ ಅವರದ್ದಾಗಿತ್ತು. 10 ವರ್ಷಗಳ ಹಿಂದೆ ಸಾವಿತ್ರಮ್ಮ ತೀರಿಕೊಂಡಿದ್ದರು. ನಂತರ, ಜಯಪಾಲ್ ಒಂಟಿಯಾಗಿ ವಾಸವಿದ್ದರು. ಕಟ್ಟಡದ ಒಂದು ಮನೆಯಲ್ಲಿ ನಿವೇದಿತಾ ಹಾಗೂ ಅವರ ಕುಟುಂಬ ಬಾಡಿಗೆಗಿತ್ತು' ಎಂದು ಸಕಲೇಶಪುರ ತಾಲ್ಲೂಕಿನ ಬೆಳಗೋಡು ಹಸಗನವಳ್ಳಿಯ ಧನಂಜಯ್ ದೂರಿನಲ್ಲಿ ಹೇಳಿದ್ದಾರೆ.

'ಒಂಟಿಯಾಗಿರುತ್ತಿದ್ದ ಅಣ್ಣನ ಮನೆಗೆ ನಿವೇದಿತಾ ಹಾಗೂ ಇತರರು ಹೆಚ್ಚಾಗಿ ಬಂದು ಹೋಗುತ್ತಿದ್ದರು. ಅಣ್ಣನ ಆಸ್ತಿ ಮೇಲೆ ಅವರೆಲ್ಲರೂ ಕಣ್ಣಿಟ್ಟಿದ್ದರು. ಆಸ್ತಿ ಕಬಳಿಸುವುದಕ್ಕಾಗಿ ಸಂಚು ರೂಪಿಸಿ ನ.28ರಂದು ಅಣ್ಣನನ್ನು ಕೊಲೆ ಮಾಡಿರುವ ಶಂಕೆ ಇದೆ. ಸುಳಿವು ಸಿಗಬಾರದೆಂದು ಮೃತದೇಹವನ್ನು ಸುಟ್ಟು ಹಾಕಿರುವ ಅನುಮಾನವಿದೆ' ಎಂದೂ ಧನಂಜಯ್ ಆರೋಪಿಸಿದ್ದಾರೆ.

'ಅಣ್ಣ ಕರೆ ಸ್ವೀಕರಿಸದಿದ್ದರಿಂದ ಅನುಮಾನಗೊಂಡ ನಾನು ಹಾಗೂ ಕುಟುಂಬದವರು, ನ.29ರಂದು ಬೆಂಗಳೂರಿನ ಮನೆಗೆ ಬಂದು ವಿಚಾರಿಸಿದ್ದೆವು. ಅಣ್ಣ ಜಯಪಾಲ್ ಅನಾರೋಗ್ಯದಿಂದಾಗಿ ಆಸ್ಪತ್ರೆಯಲ್ಲಿ ಮೃತಪಟ್ಟಿರುವುದಾಗಿ ನಿವೇದಿತಾ ಹಾಗೂ ಇತರರು ಹೇಳಿದ್ದರು. ಮೃತದೇಹ ಎಲ್ಲಿ ಎಂದು ಕೇಳಿದ್ದಕ್ಕೆ ನಮ್ಮ ವಿರುದ್ಧ ಹರಿಹಾಯ್ದಿದ್ದರು. ಮನೆ ಬಳಿ ಬಾರದಂತೆ ಚಾಕು ತೋರಿಸಿ ಜೀವ ಬೆದರಿಕೆ ಹಾಕಿದ್ದಾರೆ. ಅಣ್ಣನ ಸಾವಿಗೆ ಕಾರಣ ಪತ್ತೆ ಮಾಡಿ, ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸಬೇಕು' ಎಂದೂ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

TEACHER'S WANTED to Teach, Science, Mathematics, Hindi for High School. Candidates contact immediately NBN Vidyamandira, Weavers Colony, Bannerugatta Road, Ph: 9341247744.

ENGLISH, SOCIAL Science, PT Teachers Primary/ High School, Bhoruka English School Madanayakanahalli, Tumkur Road. Whatsapp resume. 8088201545

**SIDDAGANGA SREE SHIVAKUMARA SWAMIJI VIDYA PEETHA TRUST, #1, 1st Stage, 2nd Phase, Chandra Layout, Bengaluru-560072. Ph: 080-23397600, invites application for I.SSK Degree College: Principal 1st Class in M.Com, M.Phil with 10-15years teaching experience (Ph.D preferred) II.SSK PU College: 1) Part time Lecturer in Chemistry M.Sc, B.Ed/ M.Ed 2) Lecturer in Business Studies & Accountancy M.Com, B.Ed/ M.Ed 3) Physical Instructor- B.P.Ed/ M.P.Ed 4) Librarian-B.Lib/ M.Lib Science 5) Part-time Lecturer in Computer for PU & Degree College BE Computer Science/ Information Science/ MCA/ M.Sc. Com. Sci. III. Siddaganga Public School, Vijayanagara 1) Hindi Teacher-MA B.Ed 2) Science Teacher-M.Sc. B.Ed. 3) School Van Driver- Heavy Motor Vehicle License, PSV bus & Driving experience in school bus 4) Receptionist Any Degree with Computer knowledge 5) Office Assistant Any degree with Tally ERP-9 & Computer knowledge (Preferred Male Candidates) Interview through offline/online date will be intimated. Interested Candidates may send their resume, Service & Salary certificates & Testimonials to the Mail: sskvptrust.2001@gmail.com personally submit the above details to Trust office on or before 11th December, 2021 between 9.00am to 4.00pm.

SILICON CITY COLLEGE
(Institution of MJ Education Trust)
Accredited By NAAC with 'A' Grade
Recognised under Section 2(f) & 12(B) by UGC, Affiliated to Bengaluru North University
Empowerment Through Knowledge
Walk in Interview
Applications are invited for the following positions
Principal: Ph.D & 5-10 Years of Experience in teaching
Director Research: Ph.D & 3-5 Years of Experience in teaching / Research /industry
Professors / Asst. Professors / Assoc. Professors: in Commerce, Management, Comp. Science and English
Front Office Executive: with good communication skills
Candidates fulfilling the above requirements may attend the interview followed by demo along with their original testimonials on Saturday 11th December, 2021 at 10 am.
Silicon City College, #26/2 Ravindra Layout, Near Police Quarters, K R Puram, Bengaluru - 560 036.
PH: 8147093466, 8147093467, 7411072259,
email id: chairman@siliconcitycollege.ac.in,
Web: www.siliconcitycollege.ac.in

HARWARD INTERNATIONAL SCHOOL (CBSE)
Affiliated No.830335
www.harwardinstitutions.com
Dasanapura, Tumkur Road, Bangalore North - 562162
Walk in interview
Regularly @ 10:30 am to 3:00 pm
T.G.T Teachers for SCIENCE & MATHS (B.Sc., B.Ed.,)
Music, Yoga & Karate
HARWARD Pre-University College
Maths & Chemistry NEET Lectures (10 yrs Exp)
ECONOMICS, COMPUTER & COMMERCE (10 Yrs Exp)
*PRO (Marketing Executive)
*Experienced Accountant with Typing skill (Female) Exp in Education institutions
Please send CV to infoharwardints@gmail.com
Ph:9880112833/9986009766

UNIVERSAL GROUP OF INSTITUTIONS
A DEGREE COLLEGE NEAR KENGERI, BANGALORE - 74
WANTED
NURSERY TEACHERS
Qualification
▸Graduate with IMTC
Teaching Experience
▸Minimum 5 years
REMUNERATION
▸at par institutional standard
UNIVERSAL GREEN SCHOOL
(Unit of Universal group of Institutions)
KINDLY DROP YOUR RESUME ON RECRUITMENT@UNIVERSALINSTITUTIONS.COM
8951932948

ST. JOSEPH'S Boys' High School Museum Rd, Bengaluru requires Teachers for the ISC Section: English, Economics (PG with a BEd Degree). Pre Primary, Primary & High School Section: Kannada & All Subjects (UG with a BEd Degree). Counsellors, Music and PE teachers with relevant qualifications may also apply. Please send an email with your CV & recent photograph mentioning the post applied for in the subject line and also submit a hard copy to the school office at the earliest. #27, Museum Road, Bengaluru 560025 Ph: 8884200549. Email: recruitment@sjbhs.edu.in/ Website: www.sjbhs.edu.in

SURYODAYA ENGLISH Medium School & PU College, Thirupalya near Electronicity. Required Qualified trained and experience Teachers/ Lecturers with fluency in English are required for Primary Section, English for High School, Economics, Physics & Chemistry for PU & Female Typist. Reach us:- 9632081875, 7975796544, 8296261228. Email: suryodaya.edu.trust@gmail.com

S.S.R GROUP of Institutions Recruitment For Lecturers in Commerce and Management. Contact : 9480885702 / 9606900576 send your resume to ssrtrust@gmail.com #25/4, Kyalasanahalli, Kothanur Post, Bengaluru- 560077.

WISDOM ENGLISH SCHOOL Rudrappa Garden Chamrajpet, Bengaluru-26, G.Science and English for Higher Grade B.Sc, B.Ed, B.A, B.Ed. Nursery & Primary Teachers. Contact: 9741763114.

Hospital & Medical Jobs

MANAGER- FINANCE and Accounts for Nightingales Medical Trust at Kasturinagar , Bangalore. Suitable candidate with relevant experience of 10 years and above preferably with NGO's mail resume to hr@nightingaleseldercare.com

URGENT REQUIREMENT for the post of 1: Dental Assistant 2: Junior dentist (BDS) In a newly opened dental clinic (DENTAL SAGE) in Yelahanka New town (opposite Railway wheel factory). Candidates nearby with a minimum of 1 year Experience will be given preference. Walk-in for interview 11 am to 2 pm or please contact: 7619648784 /9137694984

Accounts & Finance

WANTED EXPERIENCED Male Accountant with Knowledge of Tally. Contact Personally with CV (11 To 6) Falcon Real Estate, Nehru Road, HRBR 3rd Block, Opp Axis Bank Mob- 9902553074.

NEED EXPERIENCED Female ACCOUNTANT/ SALES CO-ORDINATOR. Residing around Basavanagudi. Qualification B.Com/ B.Sc. Email: sridhar@vinayaka-Plumbing.com. Contact: 99807-99996

A GROWING MSME UNIT INVITES APPLICATION FOR THE ACCOUNTANT POST. JOB DESCRIPTION AS BELOW:
1) MALE / FEMALE :- AGE BETWEEN 25 -35 YEARS
2) QUALIFICATION :- B.COM
3) EXPERIENCE :- MINIMUM 2 TO 3 YEARS
4) SALARY :- RS. 20000.00 + PF (APPROX START OFF). IT WILL BE INCREASED BASED ON PERFORMANCE AND MERITS.
5) OTHER REQUIREMENTS :- KNOWLEDGE OF M.S.OFFICE / TALLY ERP WITH GOOD HAND WRITING.
6) LANGUAGES KNOWN :- ENGLISH & KANNADA.
7) SCOPE OF WORK :- ACCOUNTING , GST / TDS / PF ESI FILING, INVOICE GENERATION, ETC.
8) LOCATION:- BOMMASANDRA, BANGALORE.
SEND YOUR RESUME WITH PHOTOGRAPH AND SALARY EXPECTED WITHIN 7 DAYS TO info@insvi.com

LADY ACCOUNTS CLERKS WANTED
Job involves Paper filing and Basic Voucher entry in Tally.
Work Experience Not Necessary. Basic Knowledge of Tally is a Must.
WALK-IN
with Resume and other relevant documents:-
pan Office Systems Pvt. Ltd.
PAN OFFICE SYSTEMS PVT LTD,
No 5, 1st A Cross, Bismilla Nagar, Bannerghatta Road Cross, Bangalore – 560029
Ph: 26684821.

Engg/ Production Technical

URGENTLY WANTED experienced QA, QC personnel for Electromagnetic products supplied for Defence and Aerospace. Minimum experience of 10 years. Very competitive remuneration. Vita Technology Pvt. Ltd., Contact: 7899752257 / 9686203434 vitatech@vitatechindia.com

WANTED SKILLED and experienced Machinists / Grinders with 2-3 years' experience for an AS 9100 export-oriented precision engineering company, situated on Mysore Road. I.T.I trained Freshers can also apply. Call 9620227324 or send Resume to hr@micro-precision.in.

General

WANTED GRADUATE:- Female to work in CBT2 (Child & cognitive behavior therapy center, J.P.Nagar), Qualification:- Any Degree/ Masters/ Related field. 9148840850. cbt2blr.cbt2@gmail.com

FLORA ENTERPRISES- Looking for experienced Female/ Male TYPIST for Kannada and English language for all kinds of agreements at Nagawara Bus Stand. Contact:- 9742860696/ 7829750214.

REQUIRED OFFICE BOYS/ DELIVERY BOYS/ PLUMBERS/ DRIVERS. Candidates Residing in and around Hanumanthhnagar Contact: 99807-99996

URGENTLY REQUIRED an Estate MANAGER with min of 3 yrs exp. for an reputed Apartment in Hebbal. Candidate should have a strong apartment admin exposure and good communication skills. Please send your resume to : secretaryssoaw@gmail.com

REQUIRED URGENTLY Social Media Manager/ Student Counsellor. CEECO International, Peenya: 7892664764, bangalore@ceecointl.com

WANTED ADVISORS/ AGENTS for a leading Co-operative Society in Bangalore.. attractive commission. Contact :9901983850/ 9845597993

REQUIRED: MECHANICAL,CHEMICAL, Civil, Electrical &Instrumentation,Design Engineers: 0-4 years, will provide software training and placement.(Fees will be deducted from Salary).Email: hr@petroconengineers.com. No:+918879008032. Location:Bangalore and Mangalore

WANTED IMMEDIATELY CHEMIST, MICROBIOLOGIST, MARKETING EXECUTIVES. Interested Contact:- 9845004326.

WANTED FOR Reputed Company, Graduates Age- 30-70, Bangalore only, Earn: 30,000- 50,000. Contact: 9008305194/ 9880441530.

I T

WANTED
30 Job openings for Freshers / Juniors.
American recruiting process.
Night shift: Monday to Friday.
Excellent Spoken English communication skills required.
Safe transportation facilities provided. Base salary plus aggressive commission plans.
Email resume immediately to: hrdesk@scarletwireless.com
Location: Derebail, Mangalore

Part-Time Jobs

PART TIME Job Looking for Retired, VRS, Business, Housewives or Self Employed. Contact: 9945034759

HRD & Admin

ADMISSIONS Counsellors with over 5 yrs. Exp. In Counselling for admissions, having excellent communication skills. ISME, Sarjapura Road, 28019800. jobs@isme.in

Multiple Vacancy

REQUIRED IMMEDIATELY HR, Administration, Manager, Accounts, Supervisor, technical Mechanical, Electronics, Electrical, Computer Engineers -7676760299/7676760399

REQUIRED
for a leading Real Estate Developer on Residency Road
ACCOUNTS EXECUTIVE
Graduate with min 2yrs exp.
HR /OFFICE ADMIN EXECUTIVE
Graduate with min 2yrs exp.
CRM EXECUTIVE
Minimum 1yr exp.
LEGAL CO-ORDINATOR
Land Revenue - 2yrs exp.
Litigations -2yrs exp.
SENIOR QS ENGINEER
BE/DCE with min 5yrs exp.
PROJECT ENGINEER
BE/DCE with min 7yrs exp.
SENIOR FACILITIES MANAGER
for Project off Bannerghatta road
Email your Resume to:
hr@valmark.in

BANGALORE BASED company needs 2 ADMINISTRATORS, 5 MARKETING EXECUTIVES & 10 COMPUTER OPERATORS. Call: 9880455356

REQUIRED
Jawa Whitefield
Recruting for multiple Positions
• Sales Executive - 3
• Accountant
• CRE
• Service Advisor
Contact:
7204234576
send cvs to
affineautomotive@hotmail.com

"WANTED 1) MARKETING/ OFFICE EXECUTIVE with min 3- 5 yrs exp, good communication skills 2) FINANCE EXECUTIVE with min 3- 5 yrs exp at CA (Chartered Accountant) office, for a manufacturing company located at Bommanahalli, near H.S.R.Layout, Bangalore-68. Age limit: within 35 yrs. Salary Rs. 30,000+ ESI, PF and Gratuity. Send CV- to: uppbangalore@gmail.com/ Contact: 9449817703"

MRK INDUSTRIES Peenya, Bangalore (Manufacturer of DC / AC Motors) Immediate requirement Production Manager- 1 (3- 5 yrs experience) Quality Engineer- 1 Accounts Executive- 1 (3- 5 yrs experience) Office Assistant Female- 1 Car Driver- 1. Send your CV's tomrkrindustries@gmail.com 7411025866

Wanted

WANTED ITI/ Diploma Holders for Moulding Machine Operator for a Private Limited Company in Prakash Nagar: 9448481947/ 9448376584 : magraa@magraa.in

WANTED ITI/ Diploma Holders for Moulding Machine Operator for a Company in Electronic City 9448481947/ 9448376584 : magraa@magraa.in

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

WANTED OFFICE Staffs (Male) with Computer Knowledge To work in Srirampuram, Peenya and Cubbonpet Qualification: SSLC, 2nd PUC. Contact: 9738421001/ 9886683188

WANTED FEMALE Office Assistant Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

Walk-in

SWIGGY FOOD DELIVERY APP
EXCITING JOB OPPORTUNITY IN BANGALORE !
₹ 20,000 to 25,000 Per Month
We want Delivery Executives
Full Time & Part Time
Weekly Payouts
Flexible Working Hours
Walk-in Interview
#6, AVS Compound, 80 ft Road, Koramangala, Blr-34
Near Sony Signal, GKB Opticals
Interested? Call:
080-45687736

Marketing & Sales

Esquire Surgicals
Since 1987
No. 5/2 3rd Floor, Robertson Road, Fraser Town, Bangalore - 560 005
Phone: 080-25488414 / 25483835
Required Smart, Energetic, Young Candidates for Marketing Orthopedic Instruments.
Fresh Graduates can also apply with Resume to bangesq@gmail.com

WANTED SALES EXECUTIVES For Cement, Contact: 9916449766/ 9986696546 Email: acecemex@gmail.com

AGSAR PAINTS PVT LTD., WANTED 'Sales Executives' Posting For Bangalore, Mangalore, Goa. E-Mail: bangalore@agsar.net Contact: 9535910010

REAL ESTATE BUYING

Sites

Banashankari

WANTED BDA SITES, BANASHANKARI 6TH STAGE, ANJANAPURA, VISHWESHWARAIAH LAYOUT,JPNAGAR 8TH/ 9TH PHASE,ANY BLOCK,IMMEDIATE SETTLEMENT: 9845444588

REAL ESTATE SELLING

House

Vishweshwariah Layout

VISHWESHWARAIAH 8TH Block, Furnished 4- Bedroom Duplex House, 3- Floor, Ground Parking, Servant Room, Truss, Teak, Hill Top Location. Owner Going Abroad. 9901552147/ 9900076211

SOCIAL SERVICES

Old Age Home

CHEAPEST LUXURY Ladies Oldage Home, Just 6000/-, Good Food. Nemmadi Mane Foundation, Rajajinagar, Bangalore. 9341494200

ADMISSION CORNER

Did you know???
NEET qualified students from 2019, 2020 or 2021 can take admissions for
MBBS Abroad
• Fees starting from Rs.92,000 per semester.
• Bank loan Assistance.
• FREE Counselling.
• Visa Assistance
Ceeco International
Opp Duggalamma Temple,
Peenya 3rd Phase, Bangalore -560 058
Contact : 7892664764, 7483188450
Email: bangalore@ceecointl.com

FUTURE FOCUS

Astrology

GURU KABIR Bharati. Solution of all Problems on Phone. Love affairs, Relief from Enemy, Dispute Between Husband- Wife, Marriage, Court- Cases, Career, Politics. 9311241624

BUSINESS

Business Offers

Finance

NRI'S INVESTMENT And Finance AvailableOn LowInterest Against Properties, Land & Building, Sites,Flats,Converted &Agriculture Lands Call: 7411265189

FINANCE AGAINST Land & Building Properties Industries Schools Hospitals Projects & NRI Funds.7358729820

WANTED BUSINESS Partner For Hotel Investment 2 to 3 Cr Good Returns Contact: 9606701007/ 8892501007

WANTED BUSINESS PARTNER with 5 Lakhs to 10 Lakhs Investment, Good Returns. Contact: 9606701007/ 8892501007

PERSONAL

Change of Name

DAYA DEVI, Mother of, 14826068W, HAV/MT, SUNIT KUMAR, VILL- Mathila, Dumraon, Buxar, Bihar, have changed name from DAYA DEVI to DEWANTI DEVI, 06/12/2021, Notary K.V. Mani, Bangalore

I, A.S.BOPAIAH residing at No.253, 3rd cross, Near Makkalamariyamma Temple, Vivekananda block, Palace Guttahalli, Bangalore North, Blr-03, have changed my minor son's name from A.B. VIGNESH to A.B. ISHANTH KUMAR vide affidavit dated 07/12/2021 notary C. Srinivas, Bengaluru

I, K.B. SHREE DEEPTHI, D/o No. 14327134X, Rank- HAV/CLK, Balakrishna .S., residing atNo. 777/1, 3rd cross, Maruthi Layout, Chokkasandra, T.Dasarahalli,Bangalore-58, have changed my name to DEEPTHI K.B. vide affidavit dated07.12.2021 before Notary Gangaraju B.N., Bangalore.

I, RAGHAVENDRA .K, R/a #.40, 2nd main Road, Sakamma Garden, Basavanagudi, Bangalore-04, Have Changed my name to JEEVITH KRISHNA vide Affidavit Dated 11/10/2021 Before Notary L. Gopalakrishna, Bangalore.

PUBLIC NOTICE

NABFINS Limited
3072, 14th Cross, K R Road, BSK 2nd Stage, Bengaluru-70
REQUEST FOR PROPOSALS
NABFINS invite responses to the following RFPs from life insurance companies.
1. Selection of Life Insurance Company for extending Joint-life cover under Credit Life Insurance Policy to the **borrowers and co-obligants**
2. Selection of Life Insurance Company for extending Credit Life Insurance Policy for the **borrowers.**
For details please visit our website **www.nabfins.org/** tender-5 / **Last date for submission of proposals is January 10, 2022, 05:00 PM.**
S/d
General Manager

PUBLIC NOTICE
My client SRI. AMIT KRISHNA KULKARNI S/o Krishna Kulkarni, Aged 43 years, No.35, 6th Main Road, AGS colony, Anandanagar, Bangalore 24 is intending to purchase the under mentioned schedule properties from its owners 1. SRI.B.GOPALAPPA S/o late Byanna Aged 73 years and 2. SMT. RATHNAMMA W/o B.Gopalappa, Aged 54 years, Both residing at No.16, Yelumandamma Temple Road, Kempapura Village, Yelahanka Hobali, Bangalore for valuable sale consideration. The schedule properties was acquired by the said vendors No. 1 and 2 under a registered Gift Deed dated 14.02.2005 vide document No.YAN-1-23597-2004-05 and registered Gift Deed dated 05.11.2012 under document No.BYP-1-4723-2012-13 stored, before the Jurisdictional Sub Registrar Office at Bangalore respectively. My client was presented by the above said vendors/owners that they possess a marketable title to the schedule properties. The vendor further represents that they have not encumbered, mortgaged or created any charge or lien/ agreements on the schedule properties in any manner and apart from them there are no other person/s, firm or company having any sort of right, title and interest or claim over the schedule properties. Any person/s having any such objections/s or claims shall be with documentary evidence, lodge their objections/claims within 05 days from today to the under signed, failing which my client will proceed further with the above said transaction.

SCHEDULE PROPERTIES
1) All that piece and parcel of 1 square RCC sheet roofed house property with mud walls and vacant space bearing old Gramatana No. 15/16 having BBMP Khatha No. 1157/15/16 measuring East to West 62 feet and North to South 15 feet totally measuring 930 Sq feet, situated at Hebbal Kempapura Village, Yelahanka Hobali, Bangalore North Taluk Now Yelahanka Taluk and bounded as follows: **East: Govt School West: Property of Nanjappa North: Landed property of Hanumanthaiah South: Portion of Site No.14 & site no: 15 belonging to Gopalappa**
2) All that piece and parcel of 2 square RCC sheet roofed house property with mud walls and along with vacant space bearing old Gramatana No. 15/16, new No.14/16 measuring East to West 40 feet and North to South 50 feet totally measuring 2000 Sq feet, having BBMP Khatha No. 1156/14/16 situated at Kempapura Village, Yelahanka Hobali, Bangalore North Taluk Now Yelahanka Taluk and bounded as follows:
East: vacant site No.14 (Kinya Ram) West: Nanjappa property North: House list property 15/16 belongs to Gopalappa South: Road
Bangalore-20
Dated: 07.12.2021
Sri.Manjunatha Bsc,LLb
Advocate, Address: No.107/1 1st Floor, Opp:Kino, S.C. Road Bangalore, Sheshadripuram.
Ph.No.9845425570

Classifieds
DH ಪ್ರಜಾವಾಣಿ Classifieds
Book Your Classifieds Ads
Online Log in to
dhclassifieds.com
For More Details Call
9880856233 • 9886213331
Email: Santhoshkumar@deccanherald.co.in

ಅತಿ ದಟ್ಟಣೆಯ 12 ಕಾರಿಡಾರ್‌ಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ₹ 1,240.48 ಕೋಟಿ

ದುಬಾರಿ ಕಾರಿಡಾರ್ ನಿರ್ಮಾಣ ಬೇಕೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಬಹುತೇಕ ರಸ್ತೆಗಳು ಗುಂಡಿ ಮುಕ್ತವಾಗಿಲ್ಲ. ರಸ್ತೆ ಗುಂಡಿ ಮುಚ್ಚುವುದಕ್ಕೆ ಅನುದಾನ ಬಿಡುಗಡೆಗೂ ಯೋಚಿಸುವಂತಹ ಸ್ಥಿತಿಯಲ್ಲಿ ಸರ್ಕಾರ ಇದೆ. ಇಷ್ಟೊಂದು ಆರ್ಥಿಕ ಸಂಕಷ್ಟದ ಸಂದರ್ಭದಲ್ಲೇ ಅತಿ ದಟ್ಟಣೆಯ 12 ಕಾರಿಡಾರ್‌ಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ₹ 1,240.48 ಕೋಟಿ ವೆಚ್ಚದ ಕಾಮಗಾರಿಗಳಿಗೆ ಟೆಂಡರ್ ಪ್ರಕ್ರಿಯೆಗೆ ಅನುಮೋದನೆ ನೀಡಲು ಸಿದ್ಧತೆ ನಡೆದಿದೆ.

ಈಗಾಗಲೇ ನೂರಾರು ಕೋಟಿ ರೂಪಾಯಿ ವೆಚ್ಚ ಮಾಡಿ ನಿರ್ಮಿಸಿರುವ ರಸ್ತೆಗಳನ್ನು ಮತ್ತೆ ಕಾರಿಡಾರ್‌ಗಳನ್ನಾಗಿ ಪರಿವರ್ತಿಸಲು ಭಾರಿ ಮೊತ್ತ ವ್ಯಯಿಸುವುದು ಸರಿಯೇ ಎಂಬ ಪ್ರಶ್ನೆ ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿದೆ. ಈ ಯೋಜನೆ ನಗರಕ್ಕೆ ಅನಿವಾರ್ಯವೇ? ಇಷ್ಟೊಂದು ದುಬಾರಿಯಾದ ಯೋಜನೆಗಳನ್ನು ಮುಂದುವರಿಸಬೇಕೇ? ಎಂಬುದರ ಕುರಿತು ಈ ವಾರದ 'ರಾಜಧಾನಿಯ ಒಡಲ ದನಿ'ಯಲ್ಲಿ ತಜ್ಞರು, ನಗರವಾಸಿಗಳು ಹಂಚಿಕೊಂಡಿರುವ ಅಭಿಪ್ರಾಯ ಇಲ್ಲಿದೆ.

ರಾಜಧಾನಿ ಒಡಲದನಿ

'ಇಂತಹ ಕಾರಿಡಾರ್ ಅಗತ್ಯವೇ ಇಲ್ಲ'

ಯಾವುದೇ ನಗರದ ಒಳಗೆ ತಡೆರಹಿತ ಕಾರಿಡಾರ್‌ಗಳನ್ನು ನಿರ್ಮಿಸುವುದು ಸೂಕ್ತವಲ್ಲ. ಇಂತಹ ಕಾರಿಡಾರ್‌ಗಳು ವೇಗದ ವಾಹನ ಸಂಚಾರವನ್ನು ಉತ್ತೇಜಿಸುತ್ತವೆ ಮತ್ತು ಪಾದಚಾರಿಗಳ ಹಕ್ಕುಗಳನ್ನು ಕಸಿದುಕೊಳ್ಳುತ್ತವೆ. ಈ ಕಾರಿಡಾರ್‌ಗಳು ಸಾರ್ವಜನಿಕ ಸಾರಿಗೆಯ ಬಳಕೆಯನ್ನು ಉತ್ತೇಜಿಸುವುದಿಲ್ಲ. ವಿಮಾನ ನಿಲ್ದಾಣ ಸಂಪರ್ಕದಂತಹ ಉದ್ದೇಶಗಳಿಗೆ ಮಾತ್ರ ಈ ರೀತಿಯ ಯೋಜನೆಗಳನ್ನು ರೂಪಿಸುವುದು ಸೂಕ್ತ.

ಬೆಂಗಳೂರಿನಲ್ಲಿ ಇಂತಹ ದೊಡ್ಡ ಯೋಜನೆಗಳಲ್ಲಿ ಕಾಲಮಿತಿಯಲ್ಲಿ ಪೂರ್ಣಗೊಳಿಸಿದ ಉದಾಹರಣೆಯೇ ಇಲ್ಲ. ಒಮ್ಮೆ ಯೋಜನೆ ಆರಂಭಿಸಿ ವರ್ಷಗಟ್ಟಲೆ ಪೂರ್ಣಗೊಳಿಸದೇ ಇದ್ದರೆ ಇನ್ನಷ್ಟು ದುಬಾರಿ ವೆಚ್ಚಕ್ಕೆ ಕಾರಣವಾಗುತ್ತದೆ. ಯಾವ ದೃಷ್ಟಿಕೋನದಿಂದಲೂ ಜನಸ್ನೇಹಿ ಅಲ್ಲದ ಈ ಯೋಜನೆಯನ್ನು ಸರ್ಕಾರ ಕೈಬಿಡಬೇಕು.

ಜನರಿಗೆ ಬೇಕಿರುವುದು ತಡೆರಹಿತ ಕಾರಿಡಾರ್‌ಗಳಲ್ಲ. ಐದು ಕಿ.ಮೀ. ವ್ಯಾಪ್ತಿಯಲ್ಲೇ ಎಲ್ಲ ಸೌಲಭ್ಯಗಳೂ ದೊರಕುವಂತಹ ವ್ಯವಸ್ಥೆ ಮಾಡಬೇಕು. ಸಾರ್ವಜನಿಕ ಸಾರಿಗೆ ಬಳಕೆಯನ್ನು ಉತ್ತೇಜಿಸಬೇಕು. ಇರುವ ರಸ್ತೆಗಳನ್ನು ಸಂಚಾರ ಯೋಗ್ಯವಾಗಿ ನಿರ್ವಹಿಸಬೇಕು.



ವಿ.ರವಿಚಂದರ್, ನಗರ ಯೋಜನಾ ತಜ್ಞ

'ಹುಚ್ಚು ಯೋಜನೆಯನ್ನು ತಿರಸ್ಕರಿಸಬೇಕು'

'ಒಂದು ಸರಪಳಿಯು ತನ್ನ ದುರ್ಬಲ ಕೊಂಡಿಯವರೆಗೂ ತುಂಬಾ ಗಟ್ಟಿಯಾಗಿಯೇ ಇರುತ್ತದೆ' ಎನ್ನುವ ಮಾತಿದೆ. ಸಂಚಾರ ದಟ್ಟಣೆ ನಿರ್ವಹಣೆಗೂ ಇದು ಅನ್ವಯವಾಗುತ್ತದೆ. ಅತಿಯಾದ ವಾಹನ ದಟ್ಟಣೆ ಇರುವ ಮಾರ್ಗಗಳಲ್ಲಿ ಈ ರೀತಿ ತಡೆರಹಿತ ಕಾರಿಡಾರ್ ನಿರ್ಮಿಸುವುದರಿಂದ ಯಾವ ಅನುಕೂಲವೂ ಆಗುವುದಿಲ್ಲ. ದಟ್ಟಣೆಯನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ತಲುಪಿಸು-ವುದಕ್ಕೆ ಮಾತ್ರ ಸೀಮಿತವಾಗಬಹುದು. ಈ ಮಾತನ್ನು ಜಗತ್ತಿನ ಸಾರಿಗೆ ತಜ್ಞರು ಹಲವು ಬಾರಿ ಹೇಳಿದ್ದಾರೆ.

ಬೆಂಗಳೂರಿಗೆ ಸದ್ಯ ಬೇಕಿರುವುದು ದುಬಾರಿ ವೆಚ್ಚದಲ್ಲಿ ನಿರ್ಮಿಸುವ ತಡೆರಹಿತ ರಸ್ತೆ ಮಾರ್ಗಗಳಲ್ಲ. ಸಮಗ್ರ ಸಾರಿಗೆ ನೀತಿಯ ಅನುಷ್ಠಾನ ಈ ಹೊತ್ತಿನ ತುರ್ತು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮೆಕ್ಯಾನಿಕಲ್ ಎಂಜಿನಿಯರಿಂಗ್ ಪದವೀಧರ. ತಾಂತ್ರಿಕವಾಗಿ ಯಾವ ಅಭಿವೃದ್ಧಿ ಯೋಜನೆ ಸೂಕ್ತ ಎಂಬುದನ್ನು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯ ಅವರಿಗೆ ಇದೆ ಎಂದು ನಂಬಿಯೂ ನಾವು ಈ ಯೋಜನೆಯನ್ನು ವಿರೋಧಿಸಬೇಕಾಗಿದೆ.

ಇಂತಹ ಭಾರಿ ವೆಚ್ಚದ ಯೋಜನೆಯ ಅನುಷ್ಠಾನಕ್ಕೆ ಯಾವುದೇ ಸರ್ಕಾರ ಉತ್ಸಾಹ ತೋರಿದರೂ ಅದರ ನಾಯಕತ್ವದ ಉದ್ದೇಶದ ಬಗ್ಗೆ ಜನರಲ್ಲಿ ಅನುಮಾನ ಮೂಡುವುದು ಸಹಜ. ಪ್ರತಿಭಟನೆಗೆ ಅವಕಾಶ ಮಾಡಿಕೊಡದೆ ಈ ಹುಚ್ಚು ಯೋಜನೆಯನ್ನು ಈಗಲೇ ತಿರಸ್ಕರಿಸಿ ಎಂದು ಮುಖ್ಯಮಂತ್ರಿಯವರನ್ನು ಆಗ್ರಹಿಸುತ್ತೇನೆ.



ಪ್ರಕಾಶ್ ಬೆಳವಾಡಿ, ರಂಗಕರ್ಮಿ, ಚಿತ್ರನಟ

ಕೆರೆಕೋಡಿ ಉತ್ಸವ

ಯಲಹಂಕದ ಗಂಗಾಪರಮೇಶ್ವರಿ ದೇವಸ್ಥಾನ ದತ್ತಿಯ ವತಿಯಿಂದ ಕೆರೆಕೋಡಿ ಉತ್ಸವದ ಅಂಗವಾಗಿ ಗಂಗಾಮಾತೆ ಹಾಗೂ ಗ್ರಾಮದೇವತೆಗಳ ಮೆರವಣಿಗೆಯು ಮಂಗಳವಾರ ನಡೆಯಿತು – ಪ್ರಜಾವಾಣಿ ಚಿತ್ರ

'ಮಹೇಶ್ ಜೋಷಿಗೆ ಸಂಪುಟ ದರ್ಜೆ ಕೊಡಿ'

ಬೆಂಗಳೂರು: 'ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರನ್ನು ಸರ್ಕಾರವು ಅತಿಗಣ್ಯ ಅತಿಥಿ ಎಂದು ಪರಿಗಣಿಸಿ ಶಿಷ್ಟಾಚಾರದಲ್ಲಿ ಸೇರಿಸಿರುವುದರಿಂದ, ಇವರಿಗೆ ಸಚಿವ ಸಂಪುಟ ದರ್ಜೆಯ ಸ್ಥಾನಮಾನ ನೀಡಬೇಕು' ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನೀಲ್ ಕುಮಾರ್ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿದ್ದಾರೆ.

ಈ ಹಿಂದೆ ಸಾಹಿತ್ಯ ಪರಿಷತ್‌ನ ಯಾವುದೇ ಅಧ್ಯಕ್ಷರಿಗೆ ಸಂಪುಟ ದರ್ಜೆಯ ಸ್ಥಾನಮಾನ ನೀಡಿರುವ ನಿದ-ರ್ಶನಗಳಿಲ್ಲ. ಕೋವಿಡ್ ಬಿಕ್ಕಟ್ಟಿನಿಂದ ಆರ್ಥಿಕ ಸಂಕಷ್ಟದಲ್ಲಿರುವಾಗ ಸರ್ಕಾರ ಅನಗತ್ಯ ವೆಚ್ಚಗಳನ್ನು ಮಾಡುವುದೇಕೆ. ಈ ಮಧ್ಯೆ ಸಾಹಿತ್ಯ ಪರಿಷತ್ ಅಧ್ಯಕ್ಷರಿಗೆ ಸಂಪುಟ ದರ್ಜೆ ನೀಡಿದರೆ, ಮುಂದಿನ ದಿನಗಳಲ್ಲಿ ಬೇರೆ ಸಂಘಟನೆಗಳೂ ಇಂತಹದ್ದೇ ಬೇಡಿಕೆ ಇಟ್ಟರೂ ಅಚ್ಚರಿ ಇಲ್ಲ ಎಂಬ ಚರ್ಚೆಯೂ ಶುರುವಾಗಿದೆ.

ಕೋವಿಡ್: 19 ಜಿಲ್ಲೆಗಳಲ್ಲಿ ಪ್ರಕರಣ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮಂಗಳವಾರ 299 ಮಂದಿ ಕೋವಿಡ್ ಪೀಡಿತ-ರಾಗಿರುವುದು ದೃಢಪಟ್ಟಿದ್ದು, 19 ಜಿಲ್ಲೆಗಳಲ್ಲಿ ಹೊಸದಾಗಿ ಪ್ರಕರಣಗಳು ವರದಿಯಾಗಿವೆ.

ಒಂದು ದಿನದ ಅವಧಿಯಲ್ಲಿ 81 ಸಾವಿರ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 0.36 ರಷ್ಟು ದೃಢಪಟ್ಟಿದೆ. ಮೂರು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 15 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಬೀದರ್ ಸೇರಿದಂತೆ 11 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ.

ಬೆಂಗಳೂರು ನಗರದಲ್ಲಿ 215 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ದಕ್ಷಿಣ ಕನ್ನಡದಲ್ಲಿ 14, ಕೊಡಗಿನಲ್ಲಿ 12 ಹಾಗೂ ಮೈಸೂರಿನಲ್ಲಿ 11 ಪ್ರಕರಣಗಳು ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 10ಕ್ಕಿಂತ ಕಡಿಮೆಯಿದೆ. ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 29.98 ಲಕ್ಷ ದಾಟಿದೆ.

ಯಾದಗಿರಿ ಕೋವಿಡ್ ಮುಕ್ತ: ಸೋಂಕಿತರಲ್ಲಿ 260 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.53 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 7,100ಕ್ಕೆ ಏರಿಕೆಯಾಗಿದೆ. ಬೆಂಗಳೂರಿನಲ್ಲಿ 5,294 ಸೋಂಕಿತರಿದ್ದಾರೆ. ಯಾದಗಿರಿ ಜಿಲ್ಲೆ ಕೋವಿಡ್ ಮುಕ್ತವಾಗಿದೆ. ವಿಜಯಪುರ, ರಾಮನಗರ ಸೇರಿದಂತೆ 8 ಜಿಲ್ಲೆಗಳಲ್ಲಿ ಸೋಂಕಿತರ ಸಂಖ್ಯೆ 10ಕ್ಕಿಂತ ಕಡಿಮೆಯಿದೆ.

ಈ ವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 38,243ಕ್ಕೆ ಏರಿಕೆಯಾಗಿದೆ.





ಬಿಎಂಸಿಆರ್‌ಐ: ಪರೀಕ್ಷೆಗೆ ಅಲೆದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಡಿ (ಬಿಎಂಸಿಆರ್‌ಐ) ಕಾರ್ಯ-ನಿರ್ವಹಿಸುತ್ತಿರುವ ಆಸ್ಪತ್ರೆಗಳಲ್ಲಿ ಕೋವಿಡ್ ಪರೀಕ್ಷೆ ಸಮಸ್ಯೆಯಾಗಿದ್ದು, ರೋಗಿಗಳು ಅಲೆದಾಟ ನಡೆಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಸಂಸ್ಥೆಯ ಅಡಿಯಲ್ಲಿ ವಿಕ್ಟೋರಿಯಾ, ವಾಣಿವಿಲಾಸ, ಮಿಂಟೊ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ (ಪಿಎಂಎಸ್‌ಎಸ್‌ವೈ) ಹಾಗೂ ನೆಫ್ರೊ ಯುರಾಲಜಿ ಸಂಸ್ಥೆ ಕಾರ್ಯನಿರ್ವಹಿಸುತ್ತಿವೆ. 10 ದಿನಗಳಿಂದ ಈ ಆಸ್ಪತ್ರೆಗಳಿಗೆ ಬರುವ ರೋಗಿಗಳಿಗೆ ಕೋವಿಡ್ ಪರೀಕ್ಷೆ ಸಮಸ್ಯೆಯಾಗಿದೆ. ಪರೀಕ್ಷೆ ನಡೆಸಲು ಬೇಕಾದ ನಳಿಕೆಗಳನ್ನು (ವೈರಲ್ ಟ್ರಾನ್ಸ್‌ಪೋರ್ಟ್ ಮೀಡಿಯಾ ಟ್ಯೂಬ್) ಪೂರೈಸುವ ಕಂಪನಿಗೆ ಸಂಸ್ಥೆ ಹಣ ಪಾವತಿಸಿಲ್ಲ. ಇದರಿಂದಾಗಿ ಈ ನಳಿಕೆಗಳು ಅಗತ್ಯ ಪ್ರಮಾಣದಲ್ಲಿ ಪೂರೈಕೆಯಾಗದೆ ಕೊರತೆ ಉಂಟಾಗಿದ್ದು, ಹೊರಗಡೆಯಿಂದ ಪರೀಕ್ಷೆ ಮಾಡಿಸಿಕೊಂಡು ಬರುವಂತೆ ಆಸ್ಪತ್ರೆಗಳು ಸೂಚಿಸುತ್ತಿವೆ.

ಆಸ್ಪತ್ರೆಗೆ ದಾಖಲಾಗುವ ರೋಗಿಗಳು ಸೋಂಕಿತರಾಗಿಲ್ಲ ಎನ್ನುವುದರ ಬಗ್ಗೆ ಕೋವಿಡ್ ಪರೀಕ್ಷೆಯ ನೆಗೆಟಿವ್ ವರದಿಯನ್ನು ಕಡ್ಡಾಯವಾಗಿ ಹೊಂದಿರಬೇಕು. ಇಷ್ಟು ದಿನ ಆಸ್ಪ-ತ್ರೆಗಳಲ್ಲಿಯೇ ರೋಗಿಗಳ ಗಂಟಲ ದ್ರವದ ಮಾದರಿ ಸಂಗ್ರಹಿಸಿ, ಕೋವಿಡ್ ಪರೀಕ್ಷೆ ನಡೆಸಲಾಗುತ್ತಿತ್ತು. ಆದರೆ, ಈಗ ನಳಿಕೆಗಳು ಇಲ್ಲದಿರುವುದರಿಂದ ರೋಗಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಪರೀಕ್ಷೆ ಮಾಡಿಸಿಕೊಳ್ಳಬೇಕಾಗಿದೆ. ದಾಖಲಾತಿಯೂ ವಿಳಂಬವಾಗಿ, ಚಿಕಿತ್ಸೆ ಸಮಸ್ಯೆಯಾಗುತ್ತಿದೆ.

ಖಾಸಗಿ ಪ್ರಯೋಗಾಲಯದಲ್ಲಿ ಪರೀಕ್ಷೆ: 'ರೋಗಿಯನ್ನು ದಾಖಲಿಸಿಕೊಳ್ಳಲು ಕೋವಿಡ್ ಪರೀಕ್ಷೆಯ ವರದಿ ಹಾಜರುಪಡಿಸುವಂತೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಸೂಚಿಸಿದರು. ಇದರಿಂದಾಗಿ ರೋಗಿಯೊಂದಿಗೆ ಅಲೆದಾಟ ನಡೆಸಬೇಕಾಯಿತು. ಎಲ್ಲಿ ಪರೀಕ್ಷೆ ಮಾಡುತ್ತಾರೆ ಎನ್ನುವ ಮಾಹಿತಿಯನ್ನೂ ಸರಿಯಾಗಿ ನೀಡುತ್ತಿಲ್ಲ. ಅಂತಿಮವಾಗಿ ಪಿಎಂಎಸ್‌ಎಸ್‌ವೈ ಆಸ್ಪತ್ರೆಯಲ್ಲಿನ ಖಾಸಗಿ ಪ್ರಯೋಗಾಲಯದಲ್ಲಿ ಪರೀಕ್ಷೆ ಮಾಡಿಸಿಕೊಳ್ಳಲಾಯಿತು' ಎಂದು ರೋಗಿಯ ಸಂಬಂಧಿಯೊಬ್ಬರು ತಿಳಿಸಿದರು.

'ಬೆರಳಣಿಕೆಯಷ್ಟು ನಳಿಕೆಗಳು ಮಾತ್ರ ಆಸ್ಪತ್ರೆಯಲ್ಲಿದ್ದು, ಈಗಾಗಲೇ ದಾಖಲಾದ ಒಳರೋಗಿಗಳ ಪರೀಕ್ಷೆಗೆ ಬಳಕೆ ಮಾಡಿಕೊಳ್ಳಲಾಗುತ್ತಿದೆ. ಹೊಸದಾಗಿ ಬರುವ ರೋಗಿಗಳನ್ನು ಹೊರಗಡೆ ಕಳುಹಿಸಲಾಗುತ್ತಿದೆ' ಎಂದು ವಿಕ್ಟೋರಿಯಾ ಆಸ್ಪತ್ರೆಯ ವೈದ್ಯರೊಬ್ಬರು ಹೇಳಿದರು.

> **ಕೋವಿಡ್ ಪರೀಕ್ಷೆಗೆ ಅಗತ್ಯವಿರುವ ರ್‍ಯಾಟ್ ಕಿಟ್‌ಗಳನ್ನು ಕೆಡಿಎಲ್‌ನಿಂದ ಪಡೆಯುತ್ತಿದ್ದೇವೆ. ರೋಗಿಗಳಿಗೆ ಸಮಸ್ಯೆ ಬಗ್ಗೆ ಮಾಹಿತಿ ಪಡೆಯುತ್ತೇನೆ**
>
> **ಡಾ.ಸಿ.ಆರ್. ಜಯಂತಿ,** ಬಿಎಂಸಿಆರ್‌ಐ ಡೀನ್

ವಿಮಾನ ನಿಲ್ದಾಣದಲ್ಲಿ ಪರೀಕ್ಷೆ ಹೆಚ್ಚಳ

ಬೆಂಗಳೂರು: ಓಮೈಕ್ರಾನ್ ಪತ್ತೆಯಾದ ಬೆನ್ನಲ್ಲೇ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕೋವಿಡ್ ಪರೀ-ಕ್ಷೆಗಳನ್ನು ಹೆಚ್ಚಿಸಲಾಗಿದೆ. ಆರ್‌ಟಿ–ಪಿಸಿಆರ್ ವರದಿಯನ್ನು ತ್ವರಿತವಾಗಿ ನೀಡುವ ವ್ಯವಸ್ಥೆಯನ್ನೂ ಮಾಡಲಾಗಿದೆ.

'ವಿಮಾನ ಹಾರಾಟ ಕಾರ್ಯಾಚರಣೆ ವೇಳೆ ಕೋವಿಡ್ ಹರಡದಂತೆ ನಿಯಂತ್ರಿಸಲು ಅನೇಕ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಈ ಸಲುವಾಗಿ ಆರಂಭಿಸಲಾದ ಕೋವಿಡ್ ಪರೀಕ್ಷಾ ಕೇಂದ್ರವನ್ನು ಆರಿಗಾ ರಿಸರ್ಚ್ ಸಂಸ್ಥೆ ನಿರ್ವಹಿಸುತ್ತಿದೆ. ಈ ಸಂಸ್ಥೆಯು ಪ್ರಯಾಣಿಕರಿಗೆ ಡಿಜಿಟಲ್ ಮಾದರಿಯಲ್ಲಿ ಪರೀಕ್ಷೆಯ ವರದಿ ನೀಡುವ ಸಲುವಾಗಿ ಈವರೆಗೆ 8 ಯಂತ್ರಗಳೊಂದಿಗೆ ಕಾರ್ಯನಿ-ರ್ವಹಿಸುತ್ತಿತ್ತು. ಈಗ ಯಂತ್ರಗಳ ಸಂಖ್ಯೆಯನ್ನು 58ಕ್ಕೆ ಹೆಚ್ಚಿಸಲಾಗಿದೆ. ಹೀಗಾಗಿ ಪ್ರಯಾಣಿಕರು ಪರೀಕ್ಷಾ ವರದಿ ಪಡೆಯಲು ಗಂಟೆಗಟ್ಟಲೇ ಕಾಯುವುದು ತಪ್ಪಲಿದೆ' ಎಂದು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸಂಸ್ಥೆಯ (ಬಿಐಎಎಲ್) ಪ್ರಕಟಣೆ ತಿಳಿಸಿದೆ.

'ವಿವಿಧೆಡೆಯಿಂದ ಇಲ್ಲಿಗೆ ಬರುವ ಹಾಗೂ ಇಲ್ಲಿಂದ ಬೇರೆಡೆಗೆ ತೆರಳುವ ಪ್ರಯಾಣಿಕರ ಕೋವಿಡ್ ಪರೀಕ್ಷೆಗಾಗಿ ಟರ್ಮಿನಲ್‌ಗಳಲ್ಲಿ ಎಲ್ಲ ವ್ಯವಸ್ಥೆ ಮಾಡಲಾಗಿದೆ. ಅಂತರ ನಿಯಮವನ್ನೂ ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿದೆ. ವೃದ್ಧರು, ಮಕ್ಕಳು ಹಾಗೂ ಹಾಲುಣಿಸುವ ತಾಯಂದಿರಿಗೆ ಮೊದಲ ಪ್ರಾಶಸ್ತ್ಯ ನೀಡಲಾಗುತ್ತಿದೆ. ಅವರಿಗಾಗಿ ವಿಶೇಷ ಪರೀಕ್ಷಾ ಕೌಂಟರ್‌ಗಳನ್ನು ತೆರೆಯಲಾಗಿದೆ' ಎಂದು ಹೇಳಿದೆ.

'ನಿಲ್ದಾಣಕ್ಕೆ ಬಂದಿಳಿದ ಕೂಡಲೇ ಪ್ರಯಾಣಿಕರ ಗಂಟಲ ದ್ರವ ಸಂಗ್ರ-ಹಿಸಲಾಗುತ್ತಿದ್ದು, ಅವರು ಬ್ಯಾಗೇಜ್ ಪಡೆದುಕೊಳ್ಳುವಷ್ಟರಲ್ಲಿ ಕೋವಿಡ್ ಪರೀಕ್ಷಾ ವರದಿ ನೀಡಲು ಕ್ರಮ ಕೈಗೊಳ್ಳಲಾಗಿದೆ' ಎಂದೂ ತಿಳಿಸಿದೆ.

17 ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ

ಲಖನೌ (ಉತ್ತರ ಪ್ರದೇಶ): ಪ್ರಾಯೋಗಿಕ ಪರೀಕ್ಷೆಗೆ ತಯಾರಿ ನಡೆಸುವ ನೆಪದಲ್ಲಿ 17 ಬಾಲಕಿಯರು ಶಾಲೆಯಲ್ಲಿ ರಾತ್ರಿ ತಂಗುವಂತೆ ಮಾಡಿದ ಶಾಲೆಯ ಮಾಲೀಕ ಮತ್ತು ಆತನ ಸಹಚರರು ಈ ವಿದ್ಯಾರ್ಥಿನಿ-ಯರಿಗೆ ಅರಿವಳಿಕೆ ಮದ್ದು ನೀಡಿ ಲೈಂಗಿಕ ದೌರ್ಜನ್ಯ ಎಸಗಿರುವ ಆಘಾತಕಾರಿ ಘಟನೆ ಇಲ್ಲಿಗೆ 500 ಕಿ.ಮೀ. ದೂರವಿರುವ ಮುಜಾಫರ್‌ನಗರ ಜಿಲ್ಲೆಯಲ್ಲಿ ನಡೆದಿದೆ.

ಜಿಲ್ಲೆಯ ಭೋಪಾ ಪ್ರದೇಶದ ಖಾಸಗಿ ಶಾಲೆಯ ಮಾಲೀಕನನ್ನು ಯೋಗೇಶ್ ಎಂದು ಗುರು-ತಿಸಲಾಗಿದ್ದು ಸೋಮವಾರ ಬಂಧಿಸಲಾಗಿದೆ. ಇತರರ ಪತ್ತೆಗೆ ಹುಡುಕಾಟ ನಡೆದಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

ಈ ಘಟನೆ ನಡೆದು ಹದಿನೈದು ದಿನಗಳಾಗಿವೆ. ಘಟನೆ ಸಂಬಂಧ ಬಾಲಕಿಯರ ಪೋಷಕರು ದೂರು ನೀಡಿದ ನಂತರವೂ ಸ್ಥಳೀಯ ಪೊಲೀಸರು ಯಾವುದೇ ಕ್ರಮ ಕೈಗೊಂಡಿಲ್ಲ ಎನ್ನಲಾಗಿದೆ.

ಪುರಕಾಜಿ ಪೊಲೀಸ್ ಠಾಣೆಯ ಉಸ್ತುವಾರಿ ಅಧಿಕಾರಿಯನ್ನು ಕರ್ತವ್ಯಲೋಪ ಆರೋಪದ ಮೇಲೆ ಅಮಾನತು-ಗೊಳಿಸಲಾಗಿದೆ. ಆರೋಪಿಗಳ ವಿರುದ್ಧ ಪೋಸ್ಕೊ ಕಾಯ್ದೆ ಮತ್ತು ಇತರ ಐಪಿಸಿ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಲಾಗಿದೆ.

ಬೆಳಗಾವಿಯಲ್ಲೇ ಅಧಿವೇಶನ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ವಿಧಾನಮಂಡಲ ಚಳಿಗಾಲದ ಅಧಿವೇಶನವನ್ನು ನಿಗದಿಯಾದಂತೆ ಡಿ.13ರಿಂದ ಬೆಳಗಾವಿಯ ಸುವರ್ಣಸೌಧದ-ಲ್ಲೇ ನಡೆಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ಪಷ್ಟಪಡಿಸಿದರು.

ಇಲ್ಲಿ ಪತ್ರಕರ್ತರೊಂದಿಗೆ ಮಂಗಳವಾರ ಮಾತನಾಡಿದ ಅವರು, 'ಅಧಿವೇಶನವನ್ನು ಬೆಳಗಾವಿಯಲ್ಲಿ ನಡೆಸುವುದಿಲ್ಲ, ಮುಂದೂಡುತ್ತಾರೆ ಎಂದೆಲ್ಲಾ ಕೆಲವರು ಸುದ್ದಿ ಹಬ್ಬಿಸುತ್ತಿರು-ವುದು ಸುಳ್ಳು. ಕೋವಿಡ್ ಮಾರ್ಗಸೂ-ಚಿಗಳನ್ನು ಪಾಲಿಸಿ ಸುವರ್ಣಸೌಧದಲ್ಲೇ ನಡೆಸುತ್ತೇವೆ. ಇದಕ್ಕಾಗಿ ಎಲ್ಲ ರೀತಿಯ ಸಿದ್ಧತೆಗಳನ್ನೂ ಮಾಡಿಕೊಳ್ಳಲಾಗುತ್ತಿದೆ' ಎಂದು ತಿಳಿಸಿದರು.

'ರಾಜ್ಯದಲ್ಲಿ ಅಕಾಲಿಕ ಮಳೆಯಿಂದ ಮನೆಗಳು ಹಾಗೂ ಬೆಳೆಗಳಿಗೆ ಆಗಿರುವ ಹಾನಿ ಮೊದಲಾದ ಜನರ ವಿಚಾರಗಳ ಕುರಿತು ಅಧಿವೇಶನದ-ಲ್ಲಿ ಚರ್ಚೆಯಾಗಬೇಕು. ಸಂತ್ರಸ್ತರಿಗೆ ಹಾಗೂ ರೈತರಿಗೆ ಪರಿಹಾರ ಸಿಗಬೇಕು. ಪರಿಹಾರ ವಿತರಣೆಯಲ್ಲಿ ಈಗಾಗಲೇ ಕೈಗೊಂಡಿರುವ ಕ್ರಮದ ಬಗ್ಗೆಯೂ ಚರ್ಚೆ ಆಗಬೇಕು ಎನ್ನುವುದು ನಮ್ಮ ಆಶಯ' ಎಂದರು.

'ರಾಜ್ಯದಲ್ಲಿ ಮಳೆಯಿಂದ ಹಾನಿ ಅನುಭವಿಸಿದವರಿಗೆ, ಭಾನುವಾರ-ದವರೆಗೆ ₹ 422 ಕೋಟಿ ಪರಿಹಾರ ನೀಡಲಾಗಿದೆ. ಸಮೀಕ್ಷೆ ಪೂರ್ಣವಾ-ಗುತ್ತಿದ್ದಂತೆಯೇ ಕೂಡಲೇ ಪರಿಹಾರ ಬಿಡುಗಡೆ ಮಾಡಲಾಗುತ್ತದೆ. ಮಳೆಯಿಂದ ಹಾನಿಗೊಳಗಾದ ವಾಣಿಜ್ಯ ಬೆಳೆಗಳು ಸೇರಿದಂತೆ ಎಲ್ಲ ಬೆಳೆಗಳಿಗೂ ಪರಿಹಾರ ಕೊಡಲಾಗುವುದು' ಎಂದು ಭರವಸೆ ನೀಡಿದರು.

'ಧರ್ಮವಿಭಜಕರ ಹೊಡೆತಕ್ಕೆ ಸಿಕ್ಕಿದ ಎಸ್‌.ಆರ್‌. ಪಾಟೀಲ'

ಬೆಂಗಳೂರು: 'ಕಾಂಗ್ರೆಸ್ ನಾಯಕ ಎಸ್.ಆರ್.ಪಾಟೀಲ ಅವರಿಗೆ ವಿಧಾನ ಪರಿಷತ್ ಚುನಾವಣೆಯ ಟಿಕೆಟ್ ಕೈತಪ್ಪಿಸುವ ಮೂಲಕ ಕಾಂಗ್ರೆಸ್‌ನ ವರಿಷ್ಠರು ಲಿಂಗಾಯತ ಸಮುದಾಯಕ್ಕೆ ಅವಮಾನ ಮಾಡಿದ್ದಾರೆ' ಎಂದು ಕೊಳದ ಮಠದ ಶಾಂತವೀರ ಸ್ವಾಮೀಜಿ ದೂರಿದರು.

ಮಂಗಳವಾರ ಇಲ್ಲಿ ಸುದ್ದಿಗೋ-ಷ್ಠಿಯಲ್ಲಿ ಮಾತನಾಡಿದ ಅವರು, 'ಎಸ್.ಆರ್.ಪಾಟೀಲ ಅವರು ಧರ್ಮ-ವಿಭಜಕರ ಹೊಡೆತಕ್ಕೆ ಬಲಿಪಶು ಆಗಿದ್ದಾರೆ. ಪ್ರಾಮಾಣಿಕತನಕ್ಕೆ ಮಂತ್ರಿ ಪದವಿ ಕಳೆದುಕೊಂಡ ಅಪರೂಪದ ರಾಜಕಾರಣಿ. ಇಂತಹ ವ್ಯಕ್ತಿಯನ್ನು ಕಾಂಗ್ರೆಸ್ ನಿರ್ಲಕ್ಷಿಸಿರುವುದು ಖಂಡನೀಯ. ಈ ತಪ್ಪನ್ನು ಕೂಡಲೇ ಸರಿಪಡಿಸಿಕೊಳ್ಳಬೇಕು ಹಾಗೂ ಈ ಬಗ್ಗೆ ಕಾಂಗ್ರೆಸ್‌ನವರು ಸ್ಪಷ್ಟನೆ ನೀಡಬೇಕು' ಎಂದು ಆಗ್ರಹಿಸಿದರು.

'ಕೆಲವು ದಿನಗಳವರೆಗೆ ಕಾದು ನೋಡುತ್ತೇವೆ. ಕಾಂಗ್ರೆಸ್ ವರಿಷ್ಠರು ಇದೇ ತಪ್ಪನ್ನು ಮುಂದುವರಿಸಿದರೆ, 40ಕ್ಕೂ ಹೆಚ್ಚು ಸ್ಥಾನಗಳನ್ನು ಕಳೆದುಕೊಳ್ಳಬೇ-ಕಾಗಬಹುದು ಹಾಗೂ ರಾಜ್ಯದಾದ್ಯಂತ ಪ್ರತಿಭಟನೆಯೂ ನಡೆಸಲಾಗುವುದು' ಎಂದು ಎಚ್ಚರಿಸಿದರು.

'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಉತ್ತಮ ಆಡಳಿತಗಾರ ಎಂಬ ಕೀರ್ತಿ ಪಡೆಯಲಿ. ಮುಖ್ಯಮಂತ್ರಿ ಬದಲಾವಣೆ ಎಂಬ ಅನಗತ್ಯ ಗೊಂದಲ ಮೂಡಿಸುವುದು ಸರಿಯಲ್ಲ' ಎಂದೂ ಹೇಳಿದರು.

'ಹೂಡಿಕೆದಾರರಿಗೆ ಗುಜರಾತ್ ಪ್ರಶಸ್ತ ತಾಣ'

ಬೆಂಗಳೂರು: 'ಹೂಡಿಕೆದಾರರಿಗೆ ನಮ್ಮ ರಾಜ್ಯವು ಪ್ರಶಸ್ತ ತಾಣವಾಗಿದ್ದು, ಸುಲಲಿತ ವ್ಯವಹಾರಕ್ಕಾಗಿ ಸರ್ಕಾರವು ವಿಶೇಷ ಪೋರ್ಟಲ್‌ಗಳನ್ನೂ ಸೃಷ್ಟಿಸಿದೆ' ಎಂದು ಗುಜರಾತ್‌ನ ಶಿಕ್ಷಣ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಜೀತುಭಾಯ್ ವಘಾನಿ ತಿಳಿಸಿದರು.

ವೈಬ್ರೆಂಟ್ ಗುಜರಾತ್ ಜಾಗತಿಕ ಸಮ್ಮೇಳನದ (ವಿಜಿಜಿಎಸ್) ಕುರಿತ ಸುದ್ದಿಗೋಷ್ಠಿಯಲ್ಲಿ ಅವರು ಮಂಗಳವಾರ ಮಾತನಾಡಿ, 'ವಿನೂತನ ತಂತ್ರಜ್ಞಾನ, ಆವಿಷ್ಕಾರ, ನವೋದ್ಯಮ, ವಿದ್ಯುತ್ ವಾಹನ, ಸಂಶೋಧನೆ, ಅಭಿವೃದ್ಧಿ, ಜ್ಞಾನ ವಿನಿಮಯ, ಪ್ರವಾಸೋದ್ಯಮ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಹೂಡಿಕೆ ಹೆಚ್ಚಿಸಲು ನಮ್ಮ ಸರ್ಕಾರ ಆಸಕ್ತಿ ಹೊಂದಿದೆ.' ಎಂದರು.

ಕನ್ನಡ ಕಡೆಗಣನೆ: ಶಾಲೆಗಳ ಎನ್‌ಒಸಿ ಹಿಂಪಡೆಯಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಭಾಷಾ ಕಲಿಕಾ ಕಾಯ್ದೆ–2015 ಅನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿ-ಸದ ಕೇಂದ್ರ ಪಠ್ಯಕ್ರಮದ ಶಾಲೆಗಳ ನಿರಾಕ್ಷೇಪಣಾ ಪತ್ರವನ್ನು (ಎನ್‌ಒಸಿ) ಹಿಂಪಡೆಯುವಂತೆ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಸರ್ಕಾರಕ್ಕೆ ಆಗ್ರಹಿಸಿದೆ.

ಈ ಬಗ್ಗೆ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರಿಗೆ ಪತ್ರ ಬರೆದಿದ್ದಾರೆ.

'ಕನ್ನಡ ಭಾಷಾ ಕಲಿಕಾ ಕಾಯ್ದೆ ಜಾರಿಯಾಗಿ ಹಲವು ವರ್ಷಗಳಾಗಿವೆ. ಈಗಲೂ ಕೇಂದ್ರ ಪಠ್ಯಕ್ರಮದ ಕೆಲ ಶಾಲೆಗಳು ಅದನ್ನು ಅನುಷ್ಠಾನಗೊಳಿಸಲು ಹಿಂದೇಟು ಹಾಕುತ್ತಿರುವುದು ವಿಷಾದನೀಯ. ಸದ್ಯ 499 ಸಿಬಿಎಸ್‌ಇ ಶಾಲೆಗಳು ಮತ್ತು 255 ಐಸಿಎಸ್‌ಇ ಶಾಲೆಗಳು ಬೆಂಗಳೂರಿನಲ್ಲಿ ಇವೆ. ಈ ಶಾಲೆಗಳಲ್ಲಿ ಓದುತ್ತಿರುವ ಶೇ 80 ರಷ್ಟು ಮಕ್ಕಳು ಸ್ಥಳೀಯ ಕನ್ನಡಿಗರೇ ಆಗಿದ್ದಾರೆ. ಆದರೆ, ಅವರುಗಳಿಗೆ ಕನ್ನಡ ಭಾಷಾ ಕಲಿಕಾ ಕಾಯ್ದೆಯ ಅನ್ವಯ ಕನ್ನಡವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯಾಗಿ ಕಲಿಸಲಾಗುತ್ತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ ಇಂದು

ಆರ್‌ವಿ ವಿಶ್ವವಿದ್ಯಾಲಯ ಉದ್ಘಾಟನೆ– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅತಿಥಿಗಳು–ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥ ನಾರಾಯಣ, ವಿಶ್ವವಿದ್ಯಾಲಯದ ಕುಲಪತಿ ಎಂ.ಕೆ.ಪಾಂಡುರಂಗ ಶೆಟ್ಟಿ, ಸಹ ಕುಲಪತಿ ಎ.ವಿ.ಎಸ್. ಮೂರ್ತಿ, ಉಪಕುಲಪತಿ ವೈ.ಎಸ್.ಆರ್.ಮೂರ್ತಿ, ಆಯೋಜನೆ ಮತ್ತು ಸ್ಥಳ–ಆರ್‌ವಿ ವಿಶ್ವವಿದ್ಯಾಲಯ, 8ನೇ ಮೈಲಿ, ಮೈಸೂರು ರಸ್ತೆ, ಬೆಳಿಗ್ಗೆ 11

ಕರೀಗೌಡ ಬೀಚನಹಳ್ಳಿ ಅವರ 'ಹೊತ್ತಿನ ಕಣ್ಣಿನ ಮಿಂಚು' ಪುಸ್ತಕ ಬಿಡುಗಡೆ: ಸಾಹಿತಿ ಬರಗೂರು ರಾಮಚಂದ್ರಪ್ಪ, ಅತಿಥಿಗಳು– 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ವಿಮರ್ಶಕ ನಟರಾಜ್ ಹುಳಿಯಾರ್, ಕೃತಿಯ ಕುರಿತು–ವಿಮರ್ಶಕ ಎಚ್. ದಂಡಪ್ಪ, ಅಧ್ಯಕ್ಷತೆ–ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ, ಆಯೋಜನೆ–ವಾಸುದೇವ ಚಾರಿಟಬಲ್ ಟ್ರಸ್ಟ್ ಮತ್ತು ಸಂಚಲನ ಸಂಸ್ಕೃತಿ ವೇದಿಕೆ, ಸ್ಥಳ–ವಾಸುದೇವ ಸಭಾಂಗಣ, ಕನ್ಯಾಕುಮಾರಿ ಪ್ರೌಢಶಾಲೆ, ಕೆಂಗುಂಟೆ ವೃತ್ತ, ರಿಂಗ್ ರಸ್ತೆ, ಬೆಳಿಗ್ಗೆ 11

ಬರಗೂರು ರಾಮಚಂದ್ರಪ್ಪ

ಬೆಂಗಳೂರು ಗಾಯನ ಸಮಾಜದ 51ನೇ ರಾಷ್ಟ್ರೀಯ ಸಂಗೀತ ಸಮ್ಮೇಳನ: ಬೆಳಿಗ್ಗೆ 10ಕ್ಕೆ ಸ್ವಾತಂತ್ರ್ಯ ಸಂಗ್ರಾಮ, ಸಂಗೀತ, ಮುತ್ತುಸ್ವಾಮಿ ದೀಕ್ಷಿತರ ರಚನೆಗಳಲ್ಲಿ ಮಂತ್ರ–ತಂತ್ರ–ಯಂತ್ರ ಹಾಗೂ ಆಗಮ ಕುರಿತು ಗೋಷ್ಠಿ, ಸಂಗೀತ ಕಾರ್ಯಕ್ರಮ–ಸುಹಾಸ್ ಮುರಳಿ, ಸ್ಥಳ–ಬೆಂಗಳೂರು ಗಾಯನ ಸಮಾಜ, ಕೆ.ಆರ್.ರಸ್ತೆ

ಮೂತ್ರಪಿಂಡ ಕಸಿ ಕುರಿತು ಚರ್ಚೆ: ಅತಿಥಿಗಳು: ಡಾ. ಮನೋಹರ್ ಭದ್ರಪ್ಪ ಹಾಗೂ ಪಲ್ಲವಿ ಪತ್ರಿ, ಆಯೋಜನೆ– ಮಣಿಪಾಲ ಆಸ್ಪತ್ರೆ ಮತ್ತು ಡಿಎಚ್ ಬ್ರ್ಯಾಂಡ್‌ಸ್ಪಾಟ್, ಸ್ಥಳ–ಮಣಿಪಾಲ ಆಸ್ಪತ್ರೆ, ಸರ್ಜಾಪುರ ರಸ್ತೆ, ಮಧ್ಯಾಹ್ನ 2

ಜೈನ ಮತ್ತು ಬೌದ್ಧ ಸಾಹಿತ್ಯಕ್ಕೆ ಜಿ.ಪಿ.ರಾಜರತ್ನಂ ಕೊಡುಗೆ' ಉಪನ್ಯಾಸ: ಇತಿಹಾಸ ತಜ್ಞ ಎಚ್.ಎಸ್. ಗೋಪಾಲರಾವ್, ಅಧ್ಯಕ್ಷತೆ–ಬೈರಮಂಗಲ ರಾಮೇಗೌಡ, ಸ್ಥಳ–ಎಂವಿಸೀ ಸಭಾಂಗಣ, ಬಿಎಂಶ್ರೀ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 4.30

ದಲಿತ ಸಂಘಟನೆಗಳ ಒಕ್ಕೂಟದಿಂದ ಧರಣಿ

ಪಿಟಿಸಿಎಲ್ ಕಾಯ್ದೆ ತಿದ್ದುಪಡಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಭೂ ಪರಭಾರೆ ನಿಷೇಧ ಕಾಯ್ದೆಯ(ಪಿಟಿಸಿಎಲ್) ಸಮಗ್ರ ತಿದ್ದುಪಡಿಗೆ ಆಗ್ರಹಿಸಿ ದಲಿತ ಸಂಘಟನೆಗಳ ಒಕ್ಕೂಟದಿಂದ ನಗರದ ಮೌರ್ಯ ವೃತ್ತದಲ್ಲಿ ಮಂಗಳವಾರ ಧರಣಿ ನಡೆಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ದಲಿತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಂ. ವೆಂಕಟಸ್ವಾಮಿ, 'ಪಿಟಿಸಿಎಲ್ ಕಾಯ್ದೆಗೆ ತಿದ್ದುಪಡಿ ತಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಭೂಮಿ ಉಳಿಸಬೇಕಿದೆ. ಸರ್ಕಾರ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು' ಎಂದು ಒತ್ತಾಯಿಸಿದರು.

ದಲಿತ ಸಂಘಟನೆಗಳ ಒಕ್ಕೂಟದ ನೇತೃತ್ವದಲ್ಲಿ ಮೌರ್ಯ ವೃತ್ತದಲ್ಲಿ ಧರಣಿ ನಡೆಸಲಾಯಿತು –ಪ್ರಜಾವಾಣಿ ಚಿತ್ರ

'ದಲಿತರ ಭೂಮಿ ಬಲಾಢ್ಯರ ಪಾಲಾಗುವುದನ್ನು ತಪ್ಪಿಸಲು ಡಿ. ದೇವರಾಜ ಅರಸು ಮತ್ತು ಬಿ. ಬಸವಲಿಂಗಪ್ಪ ಅವರ ದಲಿತ ಪರ ಕಾಳಜಿಯಿಂದಾಗಿ ಈ ಕಾಯ್ದೆ 1978ರಲ್ಲಿ ಜಾರಿಗೆ ಬಂದಿತ್ತು. ಕಾಯ್ದೆಯ ಲೋಪಗಳನ್ನೇ ಮುಂದಿಟ್ಟುಕೊಂಡು ಸರ್ಕಾರ ಆದೇಶಗಳನ್ನು ಹೊರಡಿಸುತ್ತಿದೆ. ನ್ಯಾಯಾಲಯಗಳು ತೀರ್ಪುಗಳನ್ನು ನೀಡುತ್ತಿವೆ' ಎಂದು ಹೇಳಿದರು.

'ತಿದ್ದುಪಡಿ ಪ್ರಸ್ತಾವನೆಯ ಕಡತ ಸಿದ್ಧವಾಗಿದ್ದು, ಕಂದಾಯ ಸಚಿವರು ಅನುಮೋದನೆ ನೀಡಬೇಕು. ರಾಜ್ಯದ ಎಲ್ಲಾ ಎಸ್‌ಸಿಎಸ್‌ಟಿ ಶಾಸಕರು ಸರ್ಕಾರದ ಮೇಲೆ ಒತ್ತಡ ಹೇರಬೇಕು. ಬೆಳಗಾವಿ ಅಧಿವೇಶನದಲ್ಲಿ ಮಸೂದೆಗೆ ಅಂಗೀಕಾರ ನೀಡಬೇಕು' ಎಂದು ಒತ್ತಾಯಿಸಿದರು.

ದಲಿತ ಸಂಘಟನೆಗಳ ಮುಖಂಡರಾದ ಜಂಬುದ್ವೀಪ ಸಿದ್ದರಾಜು, ವೆಂಕಟರಮಣಪ್ಪ, ಚಂದ್ರಶೇಖರ್, ಶಾಂತಕುಮಾರ್, ಉಪೇಂದ್ರ, ಮಂಜುನಾಥ್ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಮರಳು ಸಾಗಣೆ: ದೂರು ನೀಡಿದವರ ಮೇಲೆ ಹಲ್ಲೆ

ಬೇಲೂರು: ತಾಲ್ಲೂಕಿನ ದೊಡ್ಡಿಹಳ್ಳಿ ಗ್ರಾಮದಲ್ಲಿ ಅಕ್ರಮವಾಗಿ ಮರಳು ದಂಧೆ ನಡೆಯುತ್ತಿರುವ ಬಗ್ಗೆ ಪೊಲೀಸ್ ಠಾಣೆಗೆ ದೂರು ನೀಡಿದವರ ಮೇಲೆ ಹಲ್ಲೆ ನಡೆಸಿ ಕಾರು, ಮನೆ ಕಿಟಕಿ ಗಾಜುಗಳನ್ನು ಜಖಂಗೊಳಿಸಲಾಗಿದೆ.

ದೊಡ್ಡಿಹಳ್ಳಿ ಗ್ರಾಮದ ಅನಿಲ್ ಹಾಗೂ ಇತರರು ಅದೇ ಗ್ರಾಮದ ದಿವಾಕರ ಹಾಗೂ ಇತರರ ವಿರುದ್ಧ ದೂರು ನೀಡಿದ್ದರು.

ದಿವಾಕರ ಮತ್ತು ಇತರರು ಸೋಮವಾರ ರಾತ್ರಿ ಅನಿಲ್ ಅವರ ಮನೆಗೆ ನುಗ್ಗಿ ಹಲ್ಲೆ ನಡೆಸಿದ್ದಾರೆ. ಗಲಾಟೆ ಸಂದರ್ಭ ಅನಿಲ್ ಸಹಾಯಕ್ಕೆಂದು ಬಂದ ಅದೇ ಗ್ರಾಮದ ಜಗದೀಶ, ತೀರ್ಥಮಲ್ಲಯ್ಯ, ಶಿವಪ್ಪ, ರಾಜಶೇಖರ ಹಾಗೂ ಭಾಗ್ಯ ಎಂಬುವರ ಮೇಲೆಯೂ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದಾರೆ. ಗಾಯಗೊಂಡವರು. ಈ ಬಗ್ಗೆ ಅರೇಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹವಾಲಾ ದಂಧೆ: ದುಬೈನಿಂದ ಬರುತ್ತಿದ್ದ ಹಣ; ದಿನಕ್ಕೆ ₹ 20 ಲಕ್ಷ ಜಮೆ ಗುರಿ

ಕೇರಳದಿಂದ ಹಣದ ಕಂತೆ ತರುತ್ತಿದ್ದ ಜಾಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯವನ್ನು ಕೇಂದ್ರವಾಗಿಸಿಕೊಂಡು ಹವಾಲಾ ದಂಧೆ ನಡೆಸುತ್ತಿದ್ದ ಜಾಲವನ್ನು ಇತ್ತೀಚೆಗಷ್ಟೇ ಭೇದಿಸಿರುವ ಪುಟ್ಟೇನಹಳ್ಳಿ ಪೊಲೀಸರು, ಜಾಲದ ಪ್ರಮುಖ ಆರೋಪಿ ರಿಯಾಜ್ ಪತ್ತೆಗಾಗಿ ಶೋಧ ಮುಂದುವರಿಸಿದ್ದಾರೆ.

ಜೆ.ಪಿ.ನಗರದ 6ನೇ ಹಂತದ ಜರಗನಹಳ್ಳಿಯಲ್ಲಿ ಅನುಮಾನಾಸ್ಪದವಾಗಿ ಸುತ್ತಾಡುತ್ತಿದ್ದ ಆರೋಪಿ ಮೊಹಮ್ಮದ್ ಸಾಹಿಲ್, ಸ್ಥಳೀಯರಿಗೆ ಚಾಕು ತೋರಿಸಿ ಕೊಲೆ ಬೆದರಿಕೆ ಹಾಕಿದ್ದ. ಪೊಲೀಸರು, ಆತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಹವಾಲಾ ದಂಧೆ ಮಾಹಿತಿ ಹೊರಬಿದ್ದಿತ್ತು. ಆತನ ಬಳಿ ದಾಖಲೆ ಇಲ್ಲದ ₹ 1 ಲಕ್ಷ ಸಿಕ್ಕಿತ್ತು.

ಸಾಹಿಲ್ ನೀಡಿದ್ದ ಮಾಹಿತಿ ಆಧರಿಸಿ ಆರೋಪಿಗಳಾದ ಕೇರಳದ ಫೈಜಲ್, ಅಬ್ದುಲ್ ಮುನಾಫ್ ಹಾಗೂ ಫಾಸಿಲ್ ಎಂಬುವವರನ್ನೂ ಪೊಲೀಸರು ಇತ್ತೀಚೆಗೆ ಬಂಧಿಸಿದ್ದಾರೆ. ಇವರೆಲ್ಲರೂ ಸೇರಿಕೊಂಡು ಹಣ ಅಕ್ರಮ ವರ್ಗಾವಣೆಯಲ್ಲಿ ಭಾಗಿಯಾಗಿದ್ದರು. ಇವರಿಂದ ₹ 31.51 ಕೋಟಿ ಹಣವನ್ನೂ ಪೊಲೀಸರು ಜಪ್ತಿ ಮಾಡಿದ್ದಾರೆ. ಜಾಲದ ಪ್ರಮುಖ ಆರೋಪಿ ರಿಯಾಜ್ ತಲೆಮರೆಸಿಕೊಂಡಿದ್ದು, ಆತನ ಪತ್ತೆಗಾಗಿ ಪೊಲೀಸರ ವಿಶೇಷ ತಂಡ ಹುಡುಕಾಟ ನಡೆಸುತ್ತಿದೆ.

ಗೂಡ್ಸ್ ವಾಹನದಲ್ಲಿ ಹಣ ಸಾಗಣೆ: 'ಬಂಧಿತ ಆರೋಪಿಗಳು, ದುಬೈನಲ್ಲಿರುವ ಕೆಲ ವ್ಯಕ್ತಿಗಳ ಜೊತೆ ನಂಟು ಹೊಂದಿರುವುದು ತನಿಖೆಯಿಂದ ಗೊತ್ತಾಗಿದೆ. ದುಬೈನಿಂದ ಬರುತ್ತಿದ್ದ ಹಣವನ್ನು ಆರೋಪಿಗಳು, ಹವಾಲಾ ದಂಧೆ ಮೂಲಕ ವರ್ಗಾವಣೆ ಮಾಡುತ್ತಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದುಬೈನ ವ್ಯಕ್ತಿಗಳೇ, ಕೇರಳಕ್ಕೆ ಹಣ ಕಳುಹಿಸುತ್ತಿದ್ದರು. ಅದೇ ಹಣದ ಕಂತೆಗಳನ್ನು ಗೂಡ್ಸ್ ವಾಹನಗಳಲ್ಲಿ ಬಚ್ಚಿಟ್ಟು ಬೆಂಗಳೂರಿಗೆ ತರುತ್ತಿದ್ದ ಆರೋಪಿಗಳು, ಇಲ್ಲಿಂದಲೇ ರಾಜ್ಯದ ಹಲವು ನಿವಾಸಿಗಳ ಖಾತೆಗಳಿಗೆ ಜಮೆ ಮಾಡುತ್ತಿದ್ದ ಸಂಗತಿ ಗೊತ್ತಾಗಿದೆ' ಎಂದೂ ತಿಳಿಸಿವೆ.

ದಿನಕ್ಕೆ ₹ 20 ಲಕ್ಷ ಜಮೆ ಗುರಿ: 'ವಾಟ್ಸ್‌ಆ್ಯಪ್ ಗ್ರೂಪ್ ರಚಿಸಿಕೊಂಡಿದ್ದ ಆರೋಪಿಗಳು, ಯಾರಿಗೆ ಹಣ ಜಮೆ ಮಾಡಬೇಕು ಎಂಬ ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳುತ್ತಿದ್ದರು. ಹಣ ಜಮೆ ನಂತರ, ರಶೀದಿಯನ್ನು ಗ್ರೂಪ್‌ಗೆ ಕಳುಹಿಸುತ್ತಿದ್ದರು. ಗ್ರೂಪ್‌ಗೆ ರಿಯಾಜ್ ಅಡ್ಮಿನ್ ಆಗಿದ್ದ' ಎಂದು ಪೊಲೀಸ್ ಮೂಲಗಳು ವಿವರಿಸಿವೆ.

'ರಿಯಾಜ್ ಸೂಚನೆಯಂತೆ ಮೊಹಮ್ಮದ್ ಸಾಹಿಲ್, ಫೈಜಲ್, ಅಬ್ದುಲ್ ಮುನಾಫ್ ಹಾಗೂ ಫಾಸಿಲ್ ಕೆಲಸ ಮಾಡುತ್ತಿದ್ದರು. ದಿನಕ್ಕೆ ₹ 20 ಲಕ್ಷ ಜಮೆ ಮಾಡುವ ಗುರಿ ನೀಡಲಾಗಿತ್ತು. ಅದಕ್ಕಾಗಿ ತಿಂಗಳಿಗೆ ₹ 60 ಸಾವಿರ ಸಂಬಳ ಪಡೆಯುತ್ತಿದ್ದರು. ಈ ಸಂಗತಿಯನ್ನು ಆರೋಪಿಗಳೇ ಬಾಯ್ಬಿಟ್ಟಿದ್ದಾರೆ' ಎಂದೂ ಮೂಲಗಳು ಹೇಳಿವೆ.

ಇ.ಡಿ ತನಿಖೆ ಆರಂಭ

ಪುಟ್ಟೇನಹಳ್ಳಿ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದ ಮಾಹಿತಿ ಪಡೆದಿರುವ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು, ಪ್ರತ್ಯೇಕ ತನಿಖೆ ಆರಂಭಿಸಿದ್ದಾರೆ. ಈಗಾಗಲೇ ಆರೋಪಿಗಳನ್ನು ವಿಚಾರಣೆ ನಡೆಸಿರುವ ಅಧಿಕಾರಿಗಳು, ಅದರನ್ವಯ ತನಿಖೆ ಮುಂದುವರಿಸಿರುವುದಾಗಿ ಗೊತ್ತಾಗಿದೆ.

'ಅಕ್ರಮ ಚಟುವಟಿಕೆಗಳಿಗೆ ಬಳಕೆ'

'ರಾಜ್ಯದ ಸಾವಿರಾರು ನಿವಾಸಿಗಳ ಬ್ಯಾಂಕ್ ಖಾತೆಗಳ ವಿವರ ಆರೋಪಿಗಳ ಬಳಿ ಸಿಕ್ಕಿದೆ. ಆ ಪೈಕಿ ಕೆಲವರ ಖಾತೆಗೆ ತಿಂಗಳಲ್ಲಿ ಅತೀ ಹೆಚ್ಚು ಬಾರಿ ಹಣ ಜಮೆ ಮಾಡಲಾಗಿದೆ. ಹಣವನ್ನು ಕೆಲವರು ಅಕ್ರಮ ಚಟುವಟಿಕೆಗಳಿಗೆ ಬಳಸಿರುವ ಅನುಮಾನವಿದ್ದು, ಅಂಥವರ ಮೇಲೆ ನಿಗಾ ಇರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಸುದ್ದಿ 2 ನಿಮಿಷ

175 ಪ್ರಭೇದದ ಚಿಟ್ಟೆಗಳು ಪತ್ತೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಪಶ್ಚಿಮ ಘಟ್ಟದ ತಪ್ಪಲಿನ 8 ತಾಣಗಳಲ್ಲಿ ಒಟ್ಟು 175 ಪ್ರಭೇದದ ಚಿಟ್ಟೆಗಳನ್ನು ಮಂಗಳೂರು ವಿಶ್ವವಿದ್ಯಾಲಯದ ತಂಡ ಗುರುತಿಸಿದ್ದು, ಅವುಗಳ ಬಗ್ಗೆ ದಾಖಲೀಕರಣ ಸಿದ್ಧಪಡಿಸಿದೆ.

ಯೇನೆಪೋಯ ವಿಶ್ವವಿದ್ಯಾಲಯದ ಸಂಶೋಧಕ ಡಾ.ಆರ್. ಶ್ಯಾಮಪ್ರಸಾದ ರಾವ್ ಹಾಗೂ ಬೆಂಗಳೂರಿನ ರಾಷ್ಟ್ರೀಯ ಜೀವವಿಜ್ಞಾನ ಕೇಂದ್ರದ ಸಹಯೋಗದಲ್ಲಿ ಮಂಗಳೂರು ವಿಶ್ವವಿದ್ಯಾಲಯದ ದೀಪಕ್ ನಾಯ್ಕ ಮತ್ತು ಡಾ.ಎ.ಎಸ್. ಮುಸ್ತಾಕ್ ಈ ಅಧ್ಯಯನ ನಡೆಸಿದ್ದಾರೆ.

ಎರಡು ವರ್ಷಗಳ ಸಮೀಕ್ಷೆಯ ಆಧಾರದ ಮೇಲೆ ಸಂಶೋಧಕರು ಪಶ್ಚಿಮ ಘಟ್ಟಗಳಲ್ಲಿ ಚಿಟ್ಟೆಗಳ ಯಥೇಚ್ಛ ವಿನ್ಯಾಸಗಳ ಮತ್ತು ಅವುಗಳ ಇಷ್ಟಪಡುವ ಆವಾಸಸ್ಥಾನಗಳ ಕುರಿತು ದಾಖಲಾತಿ ಮಾಡಿಕೊಂಡಿದ್ದಾರೆ. ಅತ್ಯಂತ ಸೂಕ್ಷ್ಮ ಪ್ರದೇಶವಾದ ಪಶ್ಚಿಮ ಘಟ್ಟಗಳಲ್ಲಿ ಚಿಟ್ಟೆಗಳ ಭವಿಷ್ಯದ ಪರಿವೀಕ್ಷಣೆ ಮತ್ತು ಸಂರಕ್ಷಣಾ ಕಾರ್ಯಗಳಿಗೆ ಅಗತ್ಯವಿರುವ ಬೃಹತ್ ಪ್ರಮಾಣದ ಮೂಲ ದತ್ತಾಂಶಗಳನ್ನು ಸಂಗ್ರಹಿಸಿದ್ದಾರೆ.

ಚಿಟ್ಟೆಗಳ ಆವಾಸಸ್ಥಾನ, ಅವುಗಳ ಆಹಾರ ಸಸ್ಯಗಳು, ಅವುಗಳು ಹಾಜರಿರುವ ವಾತಾವರಣದ ಬಗ್ಗೆ ಮಾಹಿತಿಯನ್ನು ದಾಖಲಿಸಲಾಗಿದೆ. ಆಹಾರ ಸಸ್ಯಗಳನ್ನು ಬೆಳೆಸುವ ಮೂಲಕ ಚಿಟ್ಟೆಗಳ ಆವಾಸಸ್ಥಾನ ಸೃಷ್ಟಿಸಲು ಹಾಗೂ ಚಿಟ್ಟೆಗಳ ಸಂರಕ್ಷಣೆಗೆ ಈ ಅಧ್ಯಯನ ಸಹಕಾರಿ ಆಗಲಿದೆ ಎಂದು ಡಾ. ಮುಸ್ತಾಕ್ ತಿಳಿಸಿದ್ದಾರೆ.

ಮಾತೃ ಇಲಾಖೆಗೆ ಶಿಕ್ಷಕರು: ಸೂಚನೆ

ಬೆಂಗಳೂರು: ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಶಿಕ್ಷಕರನ್ನು ಅನ್ಯ ಇಲಾಖೆಗಳಿಗೆ ನಿಯೋಜಿಸಿರುವುದನ್ನು ರದ್ದುಪಡಿಸಿ, ಮಾತೃ ಇಲಾಖೆಗೆ ಕಳುಹಿಸುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯು ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳಿಗೆ ಸೂಚನೆ ನೀಡಿದೆ.

ಶಿಕ್ಷಕರನ್ನು ವಿವಿಧ ಇಲಾಖೆಗಳಕಾರ್ಯಕ್ರಮ ಅನುಷ್ಠಾನಕ್ಕಾಗಿ ನಿಯೋಜನೆ ಮೇರೆಗೆ ನೇಮಕ ಮಾಡಿಕೊಳ್ಳಲು ಈ ಹಿಂದೆ ಜಿಲ್ಲಾ ಪಂಚಾಯಿತಿ ಸಿಇಒಗಳಿಗೆ ಅನುಮತಿ ನೀಡಿ ಆದೇಶ ಹೊರಡಿಸಲಾಗಿತ್ತು. ಇದರನ್ವಯ ನಿಯೋಜನೆಗೊಂಡ ಶಿಕ್ಷಕರ ನಿಯೋಜನಾ ಅವಧಿ 2021 ರ ಮಾರ್ಚ್‌ಗೆ ಅಂತ್ಯವಾಗಿತ್ತು. ಅವರನ್ನು ಮಾತೃ ಇಲಾಖೆಗೆ ಕಳುಹಿಸುವಂತೆ ಈ ಹಿಂದೆಯೂ ಪತ್ರ ಬರೆಯಲಾಗಿತ್ತು ಎಂದು ಇಲಾಖೆಯ ಮೂಲಗಳು ಹೇಳಿವೆ.

ಶಿಕ್ಷಕರು ನಿಯೋಜನೆಯಲ್ಲೇ ಮುಂದುವರಿಯುವುದರಿಂದ ವಿದ್ಯಾರ್ಥಿಗಳ ವಿದ್ಯಾಭ್ಯಾಕ್ಕೆಮತ್ತು ಶೈಕ್ಷಣಿಕ ಬೆಳವಣಿಗೆಗೆ ಹಿನ್ನಡೆಯಾಗಿದೆ. ಆದ್ದರಿಂದ, ವಿವಿಧ ಇಲಾಖೆಗಳ ಯೋಜನೆಗಳು ಮತ್ತು ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ

ನಿಯೋಜನೆಯಲ್ಲಿರುವವರನ್ನುರದ್ದುಪಡಿಸಿ, ಮಾತೃ ಇಲಾಖೆಗೆ ಕಳುಹಿಸಲು ರಾಜ್ಯದ ಎಲ್ಲಾ ಡಿಡಿಪಿಐಗಳು ಮತ್ತು ಜಿಲ್ಲಾ ಪಂಚಾಯಿತಿ ಸಿಇಒಗಳು ಕ್ರಮ ಕೈಗೊಳ್ಳಬೇಕು ಎಂದು ಪತ್ರದಲ್ಲಿ ತಿಳಿಸಲಾಗಿದೆ.

ಮಾಲಗತ್ತಿ, ಕಲ್ಗುಡಿ, ನಾವಡಗೆ ಪ್ರಶಸ್ತಿ

ವಿಜಯಪುರ: ಹಲಸಂಗಿ ಗೆಳೆಯರ ಪ್ರತಿಷ್ಠಾನದ 2021ನೇ ಸಾಲಿನ ಸಾಹಿತ್ಯ ಸಾಧಕರ ಪ್ರಶಸ್ತಿ ಪ್ರಕಟವಾಗಿದೆ.

ಕಾವ್ಯ ಪ್ರಶಸ್ತಿಗೆ ಸಾಹಿತಿ ಡಾ.ಅರವಿಂದ ಮಾಲಗತ್ತಿ, ವಿಮರ್ಶೆ/ಸಂಶೋಧನಾ ಕ್ಷೇತ್ರದಲ್ಲಿ ಸಾಹಿತಿ ಡಾ.ಬಸವರಾಜ ಕಲ್ಗುಡಿ, ಜಾನಪದ ಕ್ಷೇತ್ರದಲ್ಲಿ ಮಂಗಳೂರಿನ ಡಾ.ಗಾಯತ್ರಿ ನಾವಡ ಆಯ್ಕೆಯಾಗಿದ್ದಾರೆ. ಮೂರು ಪ್ರಶಸ್ತಿಗಳು ತಲಾ ₹ 51 ಸಾವಿರ ನಗದು, ಪ್ರಶಸ್ತಿ ಫಲಕ ಒಳಗೊಂಡಿದೆ.

ಯುವ ಪ್ರಶಸ್ತಿಗೆ ಮಹಾರಾಷ್ಟ್ರದ ಜತ್‌ನ ಮಧು ಬಿರಾದಾರ ಆಯ್ಕೆಯಾಗಿದ್ದು, ಪ್ರಶಸ್ತಿ ₹ 25 ಸಾವಿರ ನಗದು ಮತ್ತು ಪ್ರಶಸ್ತಿ ಫಲಕ ಒಳಗೊಂಡಿದೆ.

ಅರವಿಂದ ಮಾಲಗತ್ತಿ

ಬಸವರಾಜ ಕಲ್ಗುಡಿ

ಗಾಯತ್ರಿ ನಾವಡ

ಮಧು ಬಿರಾದಾರ

ಡಿ.17ರಂದು ವಿಜಯಪುರದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭವಿದೆ.

ಲಂಚಕ್ಕೆ ಬೇಡಿಕೆ ಇಟ್ಟರೆ ಕಠಿಣ ಕ್ರಮ

'ನೇಮಕಾತಿ ಪ್ರಕ್ರಿಯೆ ಬೇಗ ಮುಗಿಸುವಂತೆ ಕ್ರಮ ವಹಿಸಿದ್ದೆ: ಸಚಿವ ಮುನಿರತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಹಾಯಕ ತೋಟಗಾರಿಕಾ ಅಧಿಕಾರಿಗಳ ನೇರ ನೇಮಕಾತಿಗೆ ಸಂಬಂಧಿಸಿದಂತೆ ಯಾರಾದರೂ ಕಾನೂನು ಬಾಹಿರವಾಗಿ ಲಂಚಕ್ಕೆ ಬೇಡಿಕೆ ಇಟ್ಟಿರುವ ಪ್ರಕರಣಗಳು ಇಲಾಖೆ ಗಮನಕ್ಕೆ ಬಂದರೆ ಅಂತಹವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು' ಎಂದು ತೋಟಗಾರಿಕಾ ಸಚಿವ ಮುನಿರತ್ನ ತಿಳಿಸಿದ್ದಾರೆ.

'ಪ್ರಜಾವಾಣಿ'ಯಲ್ಲಿ ಮಂಗಳವಾರ ಪ್ರಕಟವಾದ ವರದಿಗೆ ಸ್ಪಷ್ಟನೆ ನೀಡಿರುವ ಅವರು, '309 ಸಹಾಯಕ ತೋಟಗಾರಿಕಾ ಅಧಿಕಾರಿಗಳ ನೇಮಕಾತಿ ಪ್ರಕ್ರಿಯೆ ವಿಳಂಬವಾಗಿದೆ. ಆದಷ್ಟು ಬೇಗ ಕ್ರಮ ಕೈಗೊಳ್ಳಿ ಎಂದು ಆಕಾಂಕ್ಷಿ ಅಭ್ಯರ್ಥಿಗಳು ನಾನು ಸಚಿವನಾಗಿ ಅಧಿಕಾರಿ ವಹಿಸಿಕೊಂಡ

ಮುನಿರತ್ನ

ಕೆಲವೇ ದಿನಗಳಲ್ಲಿ ನನಗೆ ಮನವಿ ಸಲ್ಲಿಸಿದ್ದರು. ಪ್ರಕ್ರಿಯೆಯನ್ನು ತ್ವರಿತವಾಗಿ ಮುಗಿಸುವ ಉದ್ದೇಶದಿಂದ ಸೆಪ್ಟೆಂಬರ್ 9 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಪತ್ರ ಬರೆದಿದ್ದೆ. ಇಲಾಖೆಯಲ್ಲಿರುವ ಅಧಿಕಾರಿಗಳ ಕೊರತೆಯನ್ನು ನೀಗಿಸುವ ಉದ್ದೇಶದಿಂದ ಎಲ್ಲ ಕ್ರಮವನ್ನೂ ಕೈಗೊಂಡಿದ್ದೇನೆ. ಆರ್ಥಿಕ ಇಲಾಖೆಯಿಂದ ಸಹಮತಿ ಪಡೆಯುವಲ್ಲಿ ಪ್ರತಿ ಹಂತದಲ್ಲೂ ಆದೇಶಗಳನ್ನೂ ಮಾಡಲಾಗಿದೆ' ಎಂದು ಅವರು ಹೇಳಿದ್ದಾರೆ.

'ಆಯ್ಕೆಯಾಗಿರುವ 306 ಅಭ್ಯರ್ಥಿಗಳ ಪೈಕಿ 293 ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಸಿಂಧುತ್ವ ಪ್ರಮಾಣ ಪತ್ರ, ಪೊಲೀಸ್ ವರದಿ ಪರಿಶೀಲನೆ ಆಗಿದ್ದು, ವೈದ್ಯಕೀಯ ತಪಾಸಣೆಯೂ ಪೂರ್ಣಗೊಂಡಿದೆ. ಇನ್ನೂ 14 ಅಭ್ಯರ್ಥಿಗಳ ದಾಖಲೆಗಳು ಪರಿಶೀಲನಾ ಹಂತದಲ್ಲಿವೆ. ಆದರೂ ಸಹ ಇನ್ನುಳಿದ ಅಭ್ಯರ್ಥಿಗಳಿಗೆ ಕೂಡಲೇ ನೇಮಕಾತಿ ಆದೇಶ ನೀಡಿ, 6 ತಿಂಗಳು ತರಬೇತಿ ನೀಡಲು ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಗೆ ಸೂಚಿಸಲಾಗಿದೆ' ಎಂದಿದ್ದಾರೆ.

'ಇದಕ್ಕೆ ಸಂಬಂಧಿಸಿದ ಕಡತ ನ.2 ರಂದು ನನ್ನ ಕಚೇರಿಗೆ ಬಂದಿದೆ. ವಿಧಾನ ಪರಿಷತ್ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದೆ. ಈ ಹಂತದಲ್ಲಿ ನೇಮಕಾತಿ ಆದೇಶ ನೀಡಿದರೆ ನೀತಿ ಸಂಹಿತೆ ಉಲ್ಲಂಘನೆ ಆಗುತ್ತದೆ. ವಿಧಾನ ಪರಿಷತ್ ಚುನಾವಣಾ ನೀತಿ ಸಂಹಿತೆ ಮುಗಿದ ಕೂಡಲೇ ನೇಮಕಾತಿ ಆದೇಶ ನೀಡುವಂತೆ ಈ ಹಿಂದೆಯೇ ಸೂಚಿಸಲಾಗಿದೆ' ಎಂದು ಮುನಿರತ್ನ ಹೇಳಿದ್ದಾರೆ.

'ಆಯ್ಕೆಯಾದ ಯಾರೊಬ್ಬರೂ ಅಂಕಪಟ್ಟಿಗೆ ಕೋರಿಕೆ ಸಲ್ಲಿಸಿಲ್ಲ. ಹಾಗೊಂದು ವೇಳೆ ಅಲ್ಲಿಸಿದರೆ ಅಂಕಪಟ್ಟಿ ನೀಡಲಾಗುವುದು. ಸಿಂಧುತ್ವ ಪ್ರಮಾಣ ಪತ್ರ, ಕನ್ನಡ ಮಾಧ್ಯಮ ವ್ಯಾಸಂಗ ದೃಢೀಕರಣ ಪತ್ರ ಮತ್ತು ಗ್ರಾಮೀಣ ಅಭ್ಯರ್ಥಿಯ ದೃಢೀಕರಣ ಪತ್ರಗಳನ್ನು ಹಾಜರುಪಡಿಸದೇ ಇರುವ ಅಭ್ಯರ್ಥಿಗಳನ್ನು ಹೊರತುಪಡಿಸಿ ಉಳಿದವರಿಗೆ ನೇಮಕಾತಿ ಆದೇಶ ಹೊರಡಿಸಲಾಗುವುದು' ಎಂದು ತೋಟಗಾರಿಕೆ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

'ನೇಮಕಾತಿ ಆದೇಶ ನೀಡಲು ಹಣಕ್ಕೆ ಬೇಡಿಕೆ ಇಡಲಾಗಿದೆ ಎಂಬ ಅಂಶ ಸತ್ಯಕ್ಕೆ ದೂರ' ಎಂದೂ ಪ್ರಕಟಣೆ ಹೇಳಿದೆ.

ಕುಕ್ಕೆ: ಪ್ರಾರ್ಥನೆ ಇಲ್ಲ

ಸುಬ್ರಹ್ಮಣ್ಯ: ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದ ಚಂಪಾಷಷ್ಠಿ ಜಾತ್ರಾ ಮಹೋತ್ಸವದ ಚೌತಿ, ಪಂಚಮಿ ಹಾಗೂ ಷಷ್ಠಿಯಂದು ರಾತ್ರಿ ಪ್ರಾರ್ಥನೆ ಸೇವೆ ನಡೆಯುವುದಿಲ್ಲ.

ರೈತ ಸಂಘ: ರಾಜ್ಯ ಸಂಚಾಲನಾ ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ಹಾವೇರಿ: ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ 'ರಾಜ್ಯ ಸಂಚಾಲನಾ ಸಮಿತಿ'ಯ ಅಧ್ಯಕ್ಷರಾಗಿ ಹಾವೇರಿಯ ರಾಮಣ್ಣ ಕೆಂಚಳ್ಳೇರ ಆಯ್ಕೆಯಾಗಿದ್ದಾರೆ.

ನಗರದಲ್ಲಿ ಮಂಗಳವಾರ ನಡೆದ ರೈತ ಸಂಘದ 'ರಾಜ್ಯ ಸಮಿತಿ ಸಭೆ'ಯಲ್ಲಿ ವಿವಿಧ ಜಿಲ್ಲೆಗಳ ರೈತ ಮುಖಂಡರನ್ನು 'ರಾಜ್ಯ ಸಂಚಾಲನಾ ಸಮಿತಿ' ಸದಸ್ಯರನ್ನಾಗಿ ಆಯ್ಕೆ ಮಾಡಲಾಯಿತು.

ಸದಸ್ಯರಾಗಿ ಕೆ.ಟಿ. ಗಂಗಾಧರ್ (ಶಿವಮೊಗ್ಗ), ಚುಕ್ಕಿ ನಂಜುಂಡ ಸ್ವಾಮಿ (ಚಾಮರಾಜನಗರ), ಪಚ್ಚೆ ನಂಜುಂಡಸ್ವಾಮಿ (ಚಾಮರಾಜ ನಗರ), ಶಂಕರ ಅಂಬಲಿ (ಧಾರವಾಡ), ಮಧೂಸೂದನ ತಿವಾರಿ (ಬಾಗಲಕೋಟೆ), ರಾಜೇಗೌಡ್ರು (ಚಿಕ್ಕಮಗಳೂರು), ಸುರೇಶಬಾಬು ಪಾಟೀಲ (ಬೆಳಗಾವಿ), ಮಲ್ಲಿಕಾರ್ಜುನ ಬಳ್ಳಾರಿ (ಹಾವೇರಿ), ಎಸ್.ಆರ್. ಪಾಟೀಲ (ಬೆಳಗಾವಿ), ಮಂಜು ಗಡಾದಿ (ಬೆಳಗಾವಿ), ರವಿರಾಜ್ ಕಂಬಳಿ (ಧಾರವಾಡ), ಕೆಂಪಣ್ಣ (ಚಿಕ್ಕಬಳ್ಳಾಪುರ), ನಳಿನಿಗೌಡ (ಕೋಲಾರ), ನಾಗಣ್ಣ (ಮಂಡ್ಯ), ವಿದ್ಯಾಸಾಗರ್ (ಮೈಸೂರು), ಅಯ್ಯಣ್ಣ (ಯಾದಗಿರಿ), ಪ್ರೊ.ವೈ.ಎಸ್. ಹರಲಾಪುರ (ಗದಗ), ಜಗದೀಶ ಹೊನ್ನಾಳಿ (ದಾವಣಗೆರೆ) ಆಯ್ಕೆಯಾಗಿದ್ದಾರೆ.

'ಸಮಿತಿ ಸದಸ್ಯರು ರಾಜ್ಯದಾದ್ಯಂತ ಪ್ರವಾಸ ಮಾಡಿ, ಜಿಲ್ಲಾ ಸಮಿತಿಗಳ ಪುನರ್ ರಚಿಸಿ, ಸಂಘಟನೆಗೆ ಹೊಸ ಶಕ್ತಿ ತುಂಬುವರು' ಎಂದು ರೈತ ನಾಯಕಿ ಚುಕ್ಕಿ ನಂಜುಂಡಸ್ವಾಮಿ ತಿಳಿಸಿದರು.

'ಮಥುರಾ: ಮಸೀದಿಯನ್ನು ಹಸ್ತಾಂತರಿಸಲಿ'

ಬಲಿಯಾ, ಉತ್ತರ ಪ್ರದೇಶ (ಪಿಟಿಐ): ಮಥುರಾದಲ್ಲಿ ಶ್ರೀಕೃಷ್ಣ ಜನ್ಮಭೂಮಿ ದೇವಸ್ಥಾನ ಸಮೀಪದಲ್ಲಿರುವ ಮಸೀದಿಯನ್ನು ಮುಸ್ಲಿಮರು ಹಿಂದೂಗಳಿಗೆ ಹಸ್ತಾಂತರ ಮಾಡಬೇಕು ಎಂದು ಉತ್ತರ ಪ್ರದೇಶದ ಸಂಸದೀಯ ವ್ಯವಹಾರ ಖಾತೆ ರಾಜ್ಯ ಸಚಿವ ಆನಂದಸ್ವರೂಪ್ ಶುಕ್ಲಾ ಹೇಳಿದ್ದಾರೆ.

'ಮಥುರಾದಲ್ಲಿರುವ 'ಶ್ವೇತವರ್ಣದ ಕಟ್ಟಡಗಳು' ಹಿಂದೂಗಳಿಗೆ ನೋವುವನ್ನುಂಟು ಮಾಡುತ್ತವೆ. ಕೋರ್ಟ್‌ನಿಂದ ಆದೇಶ ಪಡೆದು, ಇಂಥ ಕಟ್ಟಡಗಳನ್ನು ತೆರವುಗೊಳಿಸುವ ಕಾಲ ಬರುತ್ತದೆ' ಎಂದು ಹೇಳಿದ್ದಾರೆ.

'ಅಯೋಧ್ಯಾ ವಿವಾದವನ್ನು ಕೋರ್ಟ್ ಬಗೆಹರಿಸಿದೆ. ಆದರೆ, ವಾರಾಣಸಿ ಹಾಗೂ ಮಥುರಾಗಳಲ್ಲಿರುವ 'ಶ್ವೇತವರ್ಣದ ಕಟ್ಟಡಗಳು' ಹಿಂದೂಗಳಿಗೆ ನೋವನ್ನುಂಟು ಮಾಡುತ್ತಿವೆ' ಎಂದೂ ಹೇಳಿದ್ದಾರೆ.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ
ಈ ಕಛೇರಿ ಗುತ್ತಿಗೆ ಪ್ರಕಟಣೆ ಸಂ.033/ಪಿಬಿ/ಗುತ್ತಿಗೆ/3054–ಮಳೆಹಾನಿ/2021–22/4204/
ದಿನಾಂಕ : 06–12–2021
ಇ–ಟೆಂಡರ್ ಪ್ರಕಟಣೆ
ದಿನಾಂಕ : 06–12–2021ರಂದು ಇ–ಪ್ರಕ್ಯೂರ್‌ಮೆಂಟ್ ಮೂಲಕ, ಕಾಮಗಾರಿಗಳ ಇಂಡೆಂಟ್ ಸಂಖ್ಯೆ 143649, 143153, 143398, 143220, 143658, 143650, 143651, 143652, 143653, 143173, 143399, 143400, 143655, 143659, 143873, 143657, 143159, 143161, 143157 & 143246 ರ ಕಾಮಗಾರಿಗಳಿಗೆ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಇ–ಪ್ರಕ್ಯೂರ್‌ಮೆಂಟ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕ : **22–12–2021** (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ) ವನ್ನು ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ **http://www.eproc.karnataka.gov.in** ನ್ನು ಸಂಪರ್ಕಿಸಲು ಕೋರಲಾಗಿದೆ.
ಸಹಿ/– (ಸತೀಶ.ಹೆಚ್.ಜಹಾಗೀರದಾರ)
ಕಾರ್ಯನಿರ್ವಾಹಕ ಇಂಜನೀಯರರು,
ವಾಸಾಸಂಇ/ಹಾವೇರಿ/ಎಂಸಿಎ/294/2021–22 ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ.

ಕರ್ನಾಟಕ ಸರ್ಕಾರ
(ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ
No: EE/RWSS/Dvn/SMG/JE/JJM/E-Proc/2021-22/1991 Date : 06.12.2021
ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕ ಅಧಿನಿಯಮ 2000ರ ಪ್ರಕಾರ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ, ಶಿವಮೊಗ್ಗ ವ್ಯಾಪ್ತಿಯ ಕಛೇರಿಗೆ (**Non-AC**) ವಾಹನದ ಸೇವೆಯನ್ನು ಒದಗಿಸಲು ಅರ್ಹ ಬಿಡ್‌ದಾರರಿಂದ ಟೆಂಡರ್ ಆಹ್ವಾನಿಸಿದೆ.
1) **RWSSD/AEE/Shimoga/Vehicle/2021-22/CALL-3,**
2) **RWSSD/AEETHIRTHHALLI/NONAC VEHICLE/2021, 3) 36216, 4) 36167.**
ಟೆಂಡರ್ ವಿವರಗಳು, ಷರತ್ತುಗಳು ಮತ್ತು ತಿದ್ದುಪಡಿಗಳು ಅಥವಾ ಬದಲಾವಣೆಗಳು **https://www.eproc.karnataka.gov.in** ಜಾಲತಾಣದಲ್ಲಿ ಲಭ್ಯವಿದ್ದು, ಅರ್ಹ ಗುತ್ತಿಗೆದಾರರು/ಬಿಡ್ಡುದಾರರು ಅಗತ್ಯ ದಾಖಲೆಗಳನ್ನು ಮತ್ತು ತಮ್ಮ ಬಿಡ್ ಅನ್ನು ಸದರಿ ಜಾಲತಾಣದಲ್ಲಿಯೇ ಸಲ್ಲಿಸುವುದು.
ಟೆಂಡರ್‌ನ ಕೆಲವು ಷರತ್ತುಗಳು
1) ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : **13.12.2021 & 17.12.2021 ರ ಸಂಜೆ 5.30.** 2) ತಾಂತ್ರಿಕ/ಆರ್ಥಿಕ ಬಿಡ್ ತೆರೆಯುವ ದಿನಾಂಕ : **15.12.2021 & 19.12.2021 ಬೆಳಿಗ್ಗೆ 11.30.** 3) ವಾಹನದ ಸೇವೆಯನ್ನು ಒದಗಿಸಲು ನಿಗಧಿಪಡಿಸಿದ ಕಾಲಾವಧಿ : **ಕರಾರು ಒಪ್ಪಂದ ಮಾಡಿಕೊಂಡ ದಿನಾಂಕದಿಂದ 1 ವರ್ಷದ ಅವಧಿ.** 4) ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿಪಡಿಸಿದ ಕಾಲವಧಿ **36216 : 6 ತಿಂಗಳು (180 ದಿನಗಳು).** 5) ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿಪಡಿಸಿದ ಕಾಲವಧಿ **36167 : 2 ತಿಂಗಳು (60 ದಿನಗಳು)**
ಸಹಿ/– ಕಾರ್ಯಪಾಲಕ ಇಂಜಿನಿಯರರು,
ವಾ.ಸಾ.ಸಂ.ಇ./ಶಿ/ನಂ.12–12
ಝೋಂಕಾರ್/2021–22
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ಅಧೀಕ್ಷಕ ಇಂಜನೀಯರರವರ ಕಛೇರಿ, ಕೃಭಾಜನಿನಿ, ನಿಮಪೋ ವೃತ್ತ ಸಂಖ್ಯೆ–2 ರಾಂಪೂರ (ಪ.ಅ).
ತಾ:ಸಿಂದಗಿ, ಜಿ:ವಿಜಯಪುರ. ಇ–ಮೇಲ್:**kbjnlseom2@gmail.com.**
ಸಂ:ಕೃಭಾಜನಿನಿ/ನಿಮಪೋವೃ–2/ಯೋಶಾ–1/2021–22/1431 ದಿನಾಂಕ:01.12.2021
ಪತ್ರಿಕಾ ಪ್ರಕಟಣೆ
ವಿಷಯ :– 2021–22ನೇ ಸಾಲಿನ ಹಿಂಗಾರು ಹಂಗಾಮಿಗೆ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ರಾಂಪೂರ (ಪಅ) ನಿರ್ವಹಣೆ ಮತ್ತು ಪೋಷಣೆ ವೃತ್ತದಡಿ ಬರುವ ಕಾಲುವೆ ಜಾಲಕ್ಕೆ ಚಾಲು–ಬಂದ್ ಪದ್ಧತಿಯಂತೆ ನೀರು ಹರಿಸುವ ಕುರಿತು.
ಉಲ್ಲೇಖ :– ದಿನಾಂಕ:23–11–2021ರಂದು ಜರುಗಿದ 2021–22ನೇ ಸಾಲಿನ ಹಿಂಗಾರು ಹಂಗಾಮಿನ ನೀರಾವರಿ ಸಲಹಾ ಸಮಿತಿ ಸಭೆಯ ನಡುವಳಿಗಳು, ಸದಸ್ಯ ಕಾರ್ಯದರ್ಶಿಗಳು, ಕೃ.ಮೇ.ಯೋ, ನೀ.ಸ.ಸ ಹಾಗೂ ಮುಖ್ಯ ಇಂಜಿನೀಯರರು ಕೃಭಾಜನಿನಿ, ಕಾಲುವೆ ವಲಯ ಸಂ:1, ಭೀಮರಾಯನಗುಡಿ ರವರ ಪತ್ರ ಸಂ:305, ದಿನಂಕ:25–11–2021.
ಕೃಷ್ಣಾ ಮೇಲ್ದಂಡೆ ಯೋಜನೆಯ 2021–22ನೇ ಸಾಲಿನ ಹಿಂಗಾರು ಹಂಗಾಮಿನ ನೀರಾವರಿ ಸಲಹಾ ಸಮಿತಿಯ ಸಭೆಯನ್ನು ದಿನಾಂಕ:23–11–2021ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ ವಿಕಾಸ ಸೌಧ, ಬೆಂಗಳೂರು ಹಾಗೂ ಅಧ್ಯಕ್ಷರು ನೀರಾವರಿ ಸಲಹಾ ಸಮೀತಿ ಕೃಷ್ಣಾ ಮೇಲ್ದಂಡೆ ಯೋಜನೆರವರ ಅಧ್ಯಕ್ಷತೆಯಲ್ಲಿ ಜರುಗಿಸಲಾಯಿತು. ಸದರಿ ಸಭೆಯಲ್ಲಿ ದಿನಾಂಕ: 08–12–2021ರಿಂದ ಕಾಲುವೆಯ ಜಾಲಕ್ಕೆ ಚಾಲು ಬಂದ ಅನುಸರಿಸಿ ನೀರನ್ನು ಪೂರೈಸಲು ಸಭೆಯಲ್ಲಿ ತಿರ್ಮಾನಿಸಲಾಗಿರುತ್ತದೆ. ಹಾಗೂ 50% (35% ಹಿಂಗಾರು ಬೆಳೆ – 15% ದ್ವಿಋತು ಬೆಳೆ) ಕ್ಷೇತ್ರಕ್ಕೆ ಮಾತ್ರ ಹಿಂಗಾರು ಹಂಗಾಮಿನಲ್ಲಿ ಲಘು ನೀರಾವರಿ ಬೆಳೆಗಳನ್ನು ಬೆಳೆಯುವುದು. ಸದರಿ ಅವಧಿಯಲ್ಲಿ 14 ದಿನ ಚಾಲು 10 ದಿನ ಬಂದ ಪದ್ಧತಿಯನ್ನು ಅನುಸರಿಸಲು ನಿರ್ದೇಶಿಸಲಾಗಿರುತ್ತದೆ.
ಸಭೆಯ ನಿರ್ಣಯದಂತೆ ರಾಂಪೂರ(ಪಅ) ನಿಮಪೋ ವೃತ್ತದಡಿ ಬರುವ ಇಂಡಿ ಶಾಖಾ ಕಾಲುವೆ ಹಾಗೂ ಇಂಡಿ ಏತ ನೀರಾವರಿ ಕಾಲುವೆಗಳ ಅಡಿ ಈ ಕೆಳಗಿನಂತೆ ವಾರಾಬಂದಿ ಪದ್ಧತಿಯನ್ನು ಅನುಸರಿಸಲು ಪ್ರಕಟಿಸಲಾಗಿದೆ.

ಕ್ರ.ಸಂ	ನೀರು ಬಿಡುವ ದಿನಾಂಕಗಳು	ದಿನಗಳು	ನೀರು ನಿಲ್ಲಿಸುವ ದಿನಾಂಕಗಳು	ದಿನಗಳು
1	08.12.2021 ರಿಂದ 21.12.2021	14	22.12.2021 ರಿಂದ 31.12.2021	10
2	01.01.2022 ರಿಂದ 14.01.2022	14	15.01.2022 ರಿಂದ 24.01.2022	10
3	25.01.2022 ರಿಂದ 07.02.2022	14	08.02.2022 ರಿಂದ 17.02.2022	10
4	18.02.2022 ರಿಂದ 03.03.2022	14	04.03.2022 ರಿಂದ 13.03.2022	10
5	14.03.2022 ರಿಂದ 17.03.2022	04		
	ಒಟ್ಟು	60		40

ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯಲ್ಲಿ ಕಾಲುವೆ ಜಾಲದ ಗೇಟ್‌ಗಳನ್ನು ಹಾನಿ ಮಾಡುವುದು, ಎಸ್ಕೇಪ್‌ಗಳ ಮೂಲಕ ಹಳ್ಳಕ್ಕೆ ನೀರು ಹರಿಸುವುದು, ಸೈಪನಗಳ ಮೂಲಕ ಮಣ್ಣಿನ ಏರಿಯಲ್ಲಿ ನೀರನ್ನು ಎತ್ತಿಕೊಳ್ಳುವುದು, ಕಾಲುವೆ ಜಾಲದಲ್ಲಿ ಪಂಪುಗಳ ಮೂಲಕ ನೀರನ್ನು ಎತ್ತುವುದನ್ನು ನಿರ್ಬಂದಿಸಲಾಗಿದೆ. ಈ ಪರಿಸ್ಥಿತಿ ಕಂಡು ಬಂದರೆ ಸಂಬಂಧಿಸಿದವರ ಮೇಲೆನೀರಾವರಿ ಕಾಯ್ದೇಯನ್ವಯ ಕಾನೂನು ಕ್ರಮ ಕೈಗೊಳ್ಳಬೇಕಾಗುವುದು. ರೈತ ಬಾಂಧವರು ಕೃಷ್ಣಾ ಮೇಲ್ದಂಡೆ ಯೋಜನೆ ಅಚ್ಚುಕಟ್ಟು ಪ್ರದೇಶದಲ್ಲಿ ಲಘು ನೀರಾವರಿ ಬೆಳೆಗಳನ್ನು ಮಾತ್ರ ಬೆಳೆಯಲು ವಿನಂತಿಸಲಾಗಿದೆ. (ಹೆಚ್ಚು ನೀರು ಬೇಡುವ ಬೆಳೆಗಳಾದ ಭತ್ತ, ಕಬ್ಬು, ಬಾಳೆ ಇತ್ಯಾದಿಗಳನ್ನು ನಿಷೇಧಿಸಲಾಗಿದೆ) ಲಘು ನೀರಾವರಿ ಬೆಳೆಗಳಾದ ಜೋಳ, ಮೆಕ್ಕೆ ಜೋಳ, ಗೋದಿ, ಸೂರ್ಯಕಾಂತಿ, ಕಡಲೆ, ಶೇಂಗಾ, ಕುಸುಬಿ ಮತ್ತು ಸೊಪ್ಪು ತರಕಾರಿ ಇತ್ಯಾದಿಗಳನ್ನು ಮಾತ್ರ ಬೆಳೆಯಲು ರೈತರಲ್ಲಿ ಮನವಿ ಮಾಡಲಾಗಿದೆ.
ರೈತ ಬಾಂಧವರು ಚಾಲೂ ಬಂದ ಪದ್ಧತಿ ಅನುಸರಿಸುವ ಮೂಲಕ ನೀರಿನ ಬಳಕೆಯಲ್ಲಿ ಮಿತವ್ಯಯ ಸಾಧಿಸಲು ಹಾಗೂ ಈ ದಿಶೆಯಲ್ಲಿ ಕೃಷ್ಣಾ ಭಾಗ್ಯ ಜಲ ನಿಗಮದ ಅಧಿಕಾರಿಗಳಿಗೆ ಸಹಕಾರ ನೀಡಲು ಕೋರಲಾಗಿದೆ.
" ಜೀವ ಜಲ ಅತೀ ಅಮೂಲ್ಯ ಅದನ್ನು ಪೋಲು ಮಾಡಬೇಡಿ ಹಿತವಾಗಿ ಮಿತವಾಗಿ ಬಳಸಿ ಉತ್ಕೃಷ್ಟ ನೀರಿನ ಬಳಕೆಗೆ ಸಹಬಾಗಿತ್ವ ನೀಡಿ"
" ಇದನ್ನು ಅಚ್ಚುಕಟ್ಟು ಪ್ರದೇಶದ ರೈತರ ಹಿತದೃಷ್ಟಿಯಿಂದ ಪ್ರಕಟಿಸಲಾಗಿದೆ."
ಸಹಿ/– (ರಾಜೇಶ ಚವ್ಹಾಣ) ಅಧೀಕ್ಷಕ ಇಂಜನೀಯರರು,
ವಾಸಾಸಂಇ/ವಿಜಯಪುರ/377/ಎಂಸಿಎ/2021–22 ಕೃಭಾಜನಿನಿ,ನಿಮಪೋ ವೃತ್ತ ಸಂಖ್ಯೆ: 2, ರಾಂಪೂರ (ಪ.ಅ)

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಚಿಕ್ಕೋಡಿ.
ನಂ.ಲೋ.ಇ./ಚಿ.ವಿ./ಸ.ಇಂ.–2/ಟೆಂಡರ/2021–22/4420 ದಿನಾಂಕ:06/12/2021
ಅಲ್ಪಾವಧಿ ಇ–ಟೆಂಡರ ಪ್ರಕಟಣೆ
ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2021–22 ನೇ ಸಾಲಿನ ಲೆಕ್ಕ ಶಿರ್ಷಿಕೆ 3054–ರಾಜ್ಯ ಹೆದ್ದಾರಿ ನಿರ್ವಹಣೆ (ಅತೀವೃಷ್ಟಿ) ಅಡಿ 1 ಕಾಮಗಾರಿ ಹಾಗೂ ಲೆಕ್ಕ ಶಿರ್ಷಿಕೆ 3054–ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ (ಅತೀವೃಷ್ಟಿ) ಅಡಿ 2 ಕಾಮಗಾರಿ, ಹೀಗೆ ಒಟ್ಟು 3 ಕಾಮಗಾರಿಗಳ ಗುತ್ತಿಗೆ ಇಟ್ಟ ಕನಿಷ್ಟ ಮೊತ್ತ ರೂ. 131.58 ಲಕ್ಷ ಹಾಗೂ ಗರಿಷ್ಟ ಮೊತ್ತ ರೂ. 175.44 ಲಕ್ಷ ಇರುತ್ತದೆ.
ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ : 10–12–2021 ರಂದು (11.00 ಗಂಟೆಗೆ), 2)ಆಕ್ಷೇಪಣೆ – ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:13–12–2021(ಸಾಯಂಕಾಲ 5.30 ಗಂಟೆಯವರೆಗೆ) 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 15–12–2021 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 17–12–2021 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ"
ಕಾಮಗಾರಿಯ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ www.eproc.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.
ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
DIPR/BGM/RO-NO-1042/MCA/2021-22 ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಚಿಕ್ಕೋಡಿ.
ನಂ.ಲೋ.ಇ./ಚಿ.ವಿ./ಸ.ಇಂ.–2/ಟೆಂಡರ/2021–22/4416 ದಿನಾಂಕ: 06/12/2021
ಅಲ್ಪಾವಧಿ ಇ–ಟೆಂಡರ ಪ್ರಕಟಣೆ
ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2021–22 ನೇ ಸಾಲಿನ ಲೆಕ್ಕ ಶಿರ್ಷಿಕೆ 3054–ರಾಜ್ಯ ಹೆದ್ದಾರಿ ನಿರ್ವಹಣೆ (ಅತೀವೃಷ್ಟಿ) ಅಡಿ 1 ಕಾಮಗಾರಿ ಹಾಗೂ ಲೆಕ್ಕ ಶಿರ್ಷಿಕೆ 3054–ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ (ಅತೀವೃಷ್ಟಿ) ಅಡಿ 2 ಕಾಮಗಾರಿ, ಹಾಗೂ 3054–ಜಿಲ್ಲಾ ಮುಖ್ಯ ರಸ್ತೆ ಸೇತುವೆ ನಿರ್ವಹಣೆ (ಅತೀವೃಷ್ಟಿ) ಅಡಿ 1 ಕಾಮಗಾರಿ, ಹೀಗೆ ಒಟ್ಟು 4 ಕಾಮಗಾರಿಗಳ ಗುತ್ತಿಗೆ ಇಟ್ಟ ಕನಿಷ್ಟ ಮೊತ್ತ ರೂ. 17.54 ಲಕ್ಷ ಹಾಗೂ ಗರಿಷ್ಟ ಮೊತ್ತ ರೂ. 87.72 ಲಕ್ಷ ಇರುತ್ತದೆ.
ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1)ಆಕ್ಷೇಪಣೆ – ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ : 13–12–2021 (ಸಾಯಂಕಾಲ 5.30 ಗಂಟೆಯವರೆಗೆ), 2)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:15–12–2021 (ಸಾಯಂಕಾಲ 5.00 ಗಂಟೆಯವರೆಗೆ), 3)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Single Cover System):17–12–2021 (ಸಾಯಂಕಾಲ 4.30 ಗಂಟೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 17–12–2021 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ"
ಕಾಮಗಾರಿಯ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ www.eproc.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.
ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
DIPR/BGM/RO-NO-1046/MCA/2021-22 ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

ಕರ್ನಾಟಕ ಸರಕಾರ
ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಅಕಾಡೆಮಿ,
ಸುವರ್ಣ ಮಹೋತ್ಸವ ಕಟ್ಟಡ, ಕರ್ನಾಟಕ ವಿಶ್ವವಿದ್ಯಾಲಯ ಕ್ಯಾಂಪಸ್,
ಪಾವಟೆನಗರ, ಧಾರವಾಡ–580 003 ದೂರವಾಣಿ : 0836–2978580
ಮಿಂಚಂಚೆ : **heacademy2015@gmail.com**
ಸಂಖ್ಯೆ: 133/HEA-TENDER/ FOOD /VOL-5/CALL-2/1067
ದಿನಾಂಕ : 06–12–2021
ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಮಾತ್ರ)
ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಅಕಾಡೆಮಿ ಧಾರವಾಡ ಇಲ್ಲಿ ಜರುಗುವ ತರಬೇತಿಗಳಿಗೆ ಆಗಮಿಸುವ ಶಿಬಿರಾರ್ಥಿಗಳಿಗೆ ಉಪಹಾರ, ಟಿ, ಕಾಫಿ, ಮಧ್ಯಾಹ್ನ ಮತ್ತು ರಾತ್ರಿ ಊಟವನ್ನು ಪೂರೈಸುವ ಕುರಿತು, ಅಲ್ಪಾವಧಿ ಮರು–ಟೆಂಡರನ್ನು ಕರೆಯಲಾಗಿದ್ದು ಟೆಂಡರ ಮೂಲಕ ದರ ಪಟ್ಟಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999, ನಿಯಮ 2000ರ ಪ್ರಕಾರ ದ್ವಿಲಕೋಟೆ ಪದ್ಧತಿಯಲ್ಲಿ ಅರ್ಹ ಸಂಸ್ಥೆಗಳಿಂದ ಟೆಂಡರ ಕರೆಯಲಾಗಿದೆ. ಇ.ಎಮ್.ಡಿ. ಮೊತ್ತ ರೂ. **50,000/–** ಟೆಂಡರ ಸಲ್ಲಿಸುವ ಕೊನೆಯ ದಿನಾಂಕ : **21.12.2021** ಹೆಚ್ಚಿನ ಮಾಹಿತಿಗಳನ್ನು ವೆಬ್ ಸೈಟ್ **https//:eproc.karnataka.gov.in** ನಲ್ಲಿ ಪಡೆಯಬಹುದು. ಟೆಂಡರ ಸಂಖ್ಯೆ: 133/HEA-TENDER/ FOOD /VOL-5/CALL-2
ವಾಸಾಸಂಇ/ಧಾರವಾಡ/ಎಂಸಿಎ/715/2021–22 ಸಹಿ/– ನಿರ್ದೇಶಕರು

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಇಂಜಿನಿಯರಿಂಗ್ ಘಟಕ
(ಮುಖ್ಯ ಇಂಜಿನಿಯರ್‌ರವರ ಕಛೇರಿ, ಆರೋಗ್ಯ ಸೌಧ, 3ನೇ ಮಹಡಿ, ಕುಷ್ಟರೋಗ ಆಸ್ಪತ್ರೆ ಆವರಣ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು–560023)
(ದೂರವಾಣಿ ಸಂಖ್ಯೆ: 080–29557023 E-mail: cekhsdrp@gmail.com & cekhsdrp-hfws@karnataka.gov.in)
ಸಂಖ್ಯೆ: ಆಕುಕಇ/ಇಂ.ಘ/ಮು.ಇಂ/ತಾ.ಸ–1,2&3/ಕ್ಯೂ.ಎ.ಸಿ/ಟಿಎನ್‌ಡಿ/2021–22/1848 ದಿನಾಂಕ: 06.12.2021
ಟೆಂಡರ್ ಪ್ರಕಟಣೆ
ಮುಖ್ಯಇಂಜಿನಿಯರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಘಟಕ, ಬೆಂಗಳೂರು ರವರು ಜಿಲ್ಲಾ ಆಸ್ಪತ್ರೆ (18) ಮತ್ತು ತಾಲ್ಲೂಕು ಆಸ್ಪತ್ರೆ (146) ಗಳಲ್ಲಿ ಹೆಚ್ಚುವರಿ ICU ಬೆಡ್‌ಗಳನ್ನು ನಿರ್ಮಿಸುವುದು, ಮೆಡಿಕಲ್‌ಗ್ಯಾಸ್ ಪೈಪ್‌ಲೈನ್ ಸಿಸ್ಟಮ್ ವಿಸ್ತರಣೆ, ಆಂತರಿಕ ಮತ್ತು ಬಾಹ್ಯವಿದ್ಯುದ್ದೀಕರಣದ ಇತರೆ ಹೆಚ್ಚುವರಿ ಸೌಕರ್ಯಗಳನ್ನು ಒದಗಿಸುವ ಕಾಮಗಾರಿಗಳಿಗೆ ಮೂರನೇ ವ್ಯಕ್ತಿಯಿಂದ ಗುಣಮಟ್ಟ ಲೆಕ್ಕ ಪರಿಶೋಧನಾ ಸಮಾಲೋಚಕರನ್ನು ನೇಮಿಸಲು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ (e-procurement) ಮೂಲಕ ದ್ವಿಟೆಂಡರ್ ದಾಸ್ತಾವೇಜು ಪದ್ಧತಿಯಲ್ಲಿ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಇ–ಪೋರ್ಟಲ್‌ನಲ್ಲಿ ನೋಡುವುದು.
ಟೆಂಡರ್ ಪ್ರಕ್ರಿಯೆಗಳ ದಿನಾಂಕಗಳು– 1) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ : 23.12.2021 ರಂದು 16.00 ಗಂಟೆಯವರೆಗೆ. 2) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್): 24.12.2021 ರಂದು 16.00 ಗಂಟೆಗೆ.
ಟೆಂಡರ್‌ಗಳ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through e-Procurement Platform) www.eproc.karnataka.gov.in ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇ.ಎಂ.ಡಿ. ಮೊತ್ತವನ್ನು ಮತ್ತು ಟೆಂಡರ್‌ಗಳ ಪ್ರಕ್ರಿಯೆ ಶುಲ್ಕವನ್ನು www.eproc.karnataka.gov.in ನಲ್ಲಿ ವಿದ್ಯುನ್ಮಾನ (electronic) ವಿಧಾನದಲ್ಲಿ ಪಾವತಿಸ ಬಹುದಾಗಿರುತ್ತದೆ. ಆಸಕ್ತಿಯುಳ್ಳ ಸಮಾಲೋಚಕರನ್ನು ಸದರಿ ಟೆಂಡರ್‌ಗಳಲ್ಲಿ ಭಾಗವಹಿಸಲು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ(e-Procurement Platform) ನೊಂದಾಯಿಸುವ ಅಗತ್ಯ ಇದೆ.
ಟಿಪ್ಪಣಿ: 1. ಸರ್ಕಾರದ ಆದೇಶದಂತೆ ಇಎಂಡಿ ಗೆ ಬದಲಾಗಿ ಇಎಂಡಿ Declaration ನಮೂನೆಯನ್ನು ಭರ್ತಿ ಮಾಡಿ ಟೆಂಡರ್‌ಗಳೊಂದಿಗೆ ಲಗತ್ತಿಸುವುದು. 2. ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯ ಮುಂದೂಡುವಿಕೆ /ಸಂಪೂರ್ಣವಾಗಿಟೆಂಡರ್ ರದ್ದುಗೊಳಿಸುವ / ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 3. ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.
ಸಹಿ/–
ಮುಖ್ಯ ಇಂಜಿನಿಯರ್,
ಆ&ಕುಕಇ, ಇಂಜಿನಿಯರಿಂಗ್ ಘಟಕ,
ಬೆಂಗಳೂರು.
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

PUBLIC NOTICE
This is to inform public in general that Kotak Mahindra Bank Ltd has organized an auction in below mention respect of vehicles.
1) CB_MAHINDRA_EXCELO_25_PLUS_1_SEATER_SCHOOL_BUS - Reg No – KA11B4964
2) CB_TATA_INTRA_V_20 Reg No – KA09D8929
3) CB_AL_BOSS 1113 Reg No – KA41C5746
4) CB_TATA Ace Reg No – KA16C9542
5) CB_BOLERO PIK UP all Variants Reg No – KA07A9950
6) CB_EICHER PRO 6037 CHASSIS Reg No – KA632695
7) CB_EICHER PRO 6037 CHASSIS Reg No – KA632652
8) CB_EICHER PRO 6037 CHASSIS Reg No – KA632714
9) CB_EICHER PRO 6037 CHASSIS Reg No – KA632703
10) CB_FORCE TEMPO TRAVELLER Fully Built Passenger Reg No – KA02AH4224
11) ASHOK LEYLAND LIMITED - AL_2523 Reg No – KA41C3302
12) CB_EICHER PRO 6037 CHASSIS Reg No – KA632654
13) CB_EICHER PRO 6037 CHASSIS Reg No – KA632653
14) CB Tata LP 1109 Fully Built Reg No – KA634268
15) CB_MAHINDRA TOURISTERBUS Reg No – KA06AA0073
16) ESCORT_CON Reg No – 4H32051820352
17) CB_BOLERO PIK UP all Variants Reg No – KA07B1694
UNDER HYPOTHECATION WITH M/S KOTAK MAHINDRA BANK IS UNDER SALE IN ITS "AS IS WHERE IS CONDITION"
INTERESTED PARTIES CAN GIVE THEIR QUOTATIONS (ONLINE/ OFF LINE) WITHIN 15 DAYS FROM THIS PAPER PUBLICATION i.e. From 08.12.2021
(Please note that closing Auction date would not be a Weekly off / Holiday)
BRANCH ADDRESS:
KOTAK MAHINDRA BANK LTD., 22, MG ROAD, BANGALORE, KARNATAKA – 560001
OR
Contact
Kotak Mahindra Bank Ltd.
Contact No / 080 - 61563913

ಡ್ರೈ ಫ್ರೂಟ್ಸ್ ಜತೆ ಪಂಚೆ, ರೇಷ್ಮೆ ಸೀರೆ ಉಡುಗೊರೆ ● ಧರ್ಮಸ್ಥಳ ಪ್ರಸಾದ, ತಿರುಪತಿ ಲಡ್ಡು ಕಾಣಿಕೆ

ಮತ ಖಚಿತ ಪಡಿಸಿಕೊಳ್ಳಲು ಆಣೆ, ಪ್ರಮಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಗ್ರಾಮಾಂತರ–ರಾಮನಗರ, ಕೋಲಾರ–ಚಿಕ್ಕಬಳ್ಳಾಪುರ ಮತ್ತು ತುಮಕೂರು ವಿಧಾನ ಪರಿಷತ್ ಕ್ಷೇತ್ರಗಳಲ್ಲಿ ಮತದಾರರ ಓಲೈಕೆ ಭರ್ಜರಿಯಾಗಿ ನಡೆಯುತ್ತಿದೆ.

ಎಲ್ಲಾ ಪಕ್ಷಗಳು ಜಿದ್ದಿಗೆ ಬಿದ್ದಂತೆ ಮತದಾರರ ಮನೆಗೆ ಮುಂಗಡವಾಗಿ ಹಣ, ಉಡುಗೊರೆ ತಲುಪಿಸುತ್ತಿವೆ. ಹಣ ಪಡೆದು ಕೈಕೊಡಬಾರದು ಎನ್ನುವ ಕಾರಣದಿಂದ ದೇವಸ್ಥಾನಗಳಲ್ಲಿ ಆಣೆ ಪ್ರಮಾಣ ಮಾಡಿಸುತ್ತಿದ್ದಾರೆ. ಮತ ಖಚಿತಪಡಿಸಿಕೊಳ್ಳಲು ದೇವರ ಫೋಟೊ ಸಮೇತ ಮತದಾರರ ಮನೆಗೆ ಹೋಗುತ್ತಿದ್ದಾರೆ. ಮತದಾರರಿಗೆ ಆಮಿಷ ಒಡ್ಡುವಲ್ಲಿ ಯಾವ ರಾಜಕೀಯ ಪಕ್ಷಗಳೂ ಹಿಂದೆ ಬಿದ್ದಿಲ್ಲ.

ತಟಸ್ಥ ಅಥವಾ ಯಾವುದೇ ಪಕ್ಷದ ಜತೆ ಗುರುತಿಸಿಕೊಳ್ಳದ ಪಂಚಾಯಿತಿ ಸದಸ್ಯರಿಗೆ ಭಾರಿ ಬೇಡಿಕೆ ಕುದುರಿದೆ. ಈ ಸದಸ್ಯರು ಕಾಂಗ್ರೆಸ್, ಜೆಡಿಎಸ್, ಬಿಜೆಪಿ ಎನ್ನದೆ ಮೂರು ಪಕ್ಷಗಳ ನಾಯಕ ಜತೆ ಸಂಪರ್ಕದಲ್ಲಿದ್ದಾರೆ. ಮೂರು ಕಡೆಯಿಂದ ಉಡುಗೊರೆ ಪಡೆಯುತ್ತಿದ್ದಾರೆ.

ಕೋಲಾರ ಜಿಲ್ಲೆಯಲ್ಲಿ ಪ್ರಮುಖ ಮೂರೂ ಪಕ್ಷಗಳು ಹಣದ ಹೊಳೆ ಹರಿಸುತ್ತಿವೆ. ಪರಸ್ಪರ ಪೈಪೋಟಿಗೆ ಇಳಿದವರಂತೆ ಅಭ್ಯರ್ಥಿಗಳು ಹಾಗೂ ಅವರ ಬೆಂಬಲಿಗರು ಹಣ ಹಂಚುತ್ತಿದ್ದಾರೆ. ಪ್ರತಿ ಮತದಾರನಿಗೆ ಮುಂಗಡವಾಗಿ ₹ 50 ಸಾವಿರ ಕೊಡಲಾಗುತ್ತಿದೆ. ಇನ್ನುಳಿದ ₹ 50 ಸಾವಿರವನ್ನು ಮತದಾನದ ದಿನ ಕೊಡುವುದಾಗಿ ಭರವಸೆ ನೀಡಲಾಗುತ್ತಿದೆ.

ಆಣೆ, ಪ್ರಮಾಣಕ್ಕೆ ನಂದಿನಿ ಹಾಲಿನ ಪ್ಯಾಕೆಟ್!: ಹಣದ ಜತೆ ಮತದಾರರಿಗೆ ತಿರುಪತಿ ಲಡ್ಡು, ಧರ್ಮಸ್ಥಳ ಮಂಜುನಾಥ ಸ್ವಾಮಿ ಪ್ರಸಾದ ಕೊಟ್ಟು ತಮಗೆ ಮತ ಹಾಕುವಂತೆ ಆಣೆ ಮಾಡಿಸಿಕೊಳ್ಳಲಾಗುತ್ತಿದೆ. ನಂದಿನಿ ಹಾಲಿನ ಪ್ಯಾಕೆಟ್ ಮತ್ತು ಶನಿಮಹಾತ್ಮ ದೇವರ ಫೋಟೊ ಮೇಲೆ ಪ್ರಮಾಣ ಮಾಡಿಸಿಕೊಳ್ಳಲಾಗುತ್ತಿದೆ. ಮಹಿಳಾ ಮತದಾರರಿಗೆ ಹಣದ ಜತೆಗೆ ರೇಷ್ಮೆ ಸೀರೆ ಮತ್ತು ಪುರುಷ ಮತದಾರರಿಗೆ ರೇಷ್ಮೆ ಪಂಚೆ ಉಡುಗೊರೆಯಾಗಿ ಕೊಡಲಾಗುತ್ತಿದೆ.

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಆರಂಭದಲ್ಲಿಯೇ ಒಂದು ಮತಕ್ಕೆ ₹50 ಸಾವಿರ ನೀಡಲಾಗುತ್ತದೆ ಎನ್ನುವ ಸುದ್ದಿ ಹರಡಿತ್ತು. ಆದರೆ ಈಗ ಚಿಕ್ಕಬಳ್ಳಾಪುರ, ಚಿಂತಾಮಣಿ ಹಾಗೂ ಗೌರಿಬಿದನೂರು ತಾಲ್ಲೂಕು ವ್ಯಾಪ್ತಿಯ ಕೆಲವು ಮತದಾರರಿಗೆ ₹75 ಸಾವಿರ ತಲುಪಿದೆ ಎನ್ನುವ ಸುದ್ದಿ ಜೋರಾಗಿದೆ.

ಪ್ರಮುಖವಾಗಿ ರೆಸಾರ್ಟ್‌ಗಳಲ್ಲಿ ಗ್ರಾಮ ಪಂಚಾಯಿತಿ ಸದಸ್ಯರ ಸಭೆಗಳು ನಡೆಯುತ್ತಿವೆ. ಇಲ್ಲಿಯೇ ವ್ಯವಹಾರಗಳು ಕುದುರುತ್ತಿವೆ. ನಂತರ ಮತದಾರರನ್ನು ದೇಗುಲಗಳಿಗೆ ಕರೆದುಕೊಂಡು ಹೋಗಿ ಆಣೆ, ಪ್ರಮಾಣ ಮಾಡಿಸಲಾಗುತ್ತಿದೆ. ತಿರುಪತಿ ಲಡ್ಡು ಸಹ ಪ್ರಸಾದ ರೂಪದಲ್ಲಿ ನೀಡಲಾಗುತ್ತಿದೆ.

ಡ್ರೈ ಫ್ರೂಟ್ಸ್ ಪ್ಯಾಕ್: ರಾಮನಗರ ಜಿಲ್ಲೆಯಲ್ಲಿ ಪ್ರತಿ ಸದಸ್ಯರಿಗೆ ಕನಿಷ್ಠ ₹25 ಸಾವಿರ ಹಣದೊಂದಿಗೆ ಉಡುಗೊರೆ ನೀಡಲು ಸಿದ್ಧತೆ ನಡೆದಿದೆ. ಕೆಲವು ಕಡೆಗಳಲ್ಲಿ ಮತವೊಂದಕ್ಕೆ ₹50 ಸಾವಿರ ನೀಡಲಾಗುತ್ತಿದೆ. ಹಣವನ್ನು ಡ್ರೈ ಫ್ರೂಟ್ಸ್ ಸಮೇತ ಪ್ಯಾಕಿಂಗ್ ಮಾಡಿ ಉಡುಗೊರೆ ನೀಡಲಾಗುತ್ತದೆ ಎಂದು ಪಕ್ಷವೊಂದರ ಮುಖಂಡರು ಹೇಳುತ್ತಾರೆ.

ತುಮಕೂರು ಜಿಲ್ಲೆಯಲ್ಲಿ ಮೂರು ಪಕ್ಷದವರು ಕಾದು ನೋಡುವ ತಂತ್ರ ಅನುಸರಿಸುತ್ತಿದ್ದಾರೆ. ಯಾರು ಎಷ್ಟು ಹಣ ಹಂಚುತ್ತಾರೆ ಎಂಬುದನ್ನು ನೋಡಿಕೊಂಡು ಎಷ್ಟು ಕೊಡಬೇಕು ಎಂಬ ತೀರ್ಮಾನಕ್ಕೆ ಬರಲಿದ್ದಾರೆ. ಬುಧವಾರದಿಂದ ಹಣ ಹಂಚಿಕೆ ಆರಂಭವಾಗಬಹುದು.

ಸದ್ಯ ₹10 ಸಾವಿರದಿಂದ ₹25 ಸಾವಿರದವರೆಗೂ ಹಂಚಿಕೆಯಾಗಬಹುದು ಎಂದು ಹೇಳಲಾಗುತ್ತಿದೆ. ಕೊನೆಯ ಕ್ಷಣದಲ್ಲಿ ₹50 ಸಾವಿರದವರೆಗೂ ಏರಿಕೆಯಾಗಬಹುದು ಎಂದು ಹೇಳಲಾಗುತ್ತಿದೆ.

ಕಾಂಚಾಣದ ಸದ್ದು ಜೋರು

ಹುಬ್ಬಳ್ಳಿ: ವಿಧಾನಪರಿಷತ್ ಚುನಾವಣೆಯಲ್ಲಿ ಕಾಂಚಾಣದ ಸದ್ದು ಜೋರಿದೆ. ಅಲ್ಲಲ್ಲಿ ಮತದಾರರನ್ನು ಸೆಳೆಯಲು ಉಡುಗೊರೆ, ಹಣ ಆಮಿಷವೊಡ್ಡುತ್ತಿರುವ ಪ್ರಕರಣಗಳು ಕೇಳಿಬರುತ್ತಿವೆ. ಬೆಳಗಾವಿ ಜಿಲ್ಲೆಯಲ್ಲಿ ಪ್ರತಿ ಮತಕ್ಕೆ ಸರಾಸರಿ ₹ 10 ಸಾವಿರದಿಂದ ₹ 50 ಸಾವಿರದವರೆಗೆ ಕೊಡುವ ಭರವಸೆ ನೀಡಲಾಗುತ್ತಿದೆ. ಸದ್ಯಕ್ಕೆ, ಮುಂಗಡವಾಗಿ ತಲಾ ₹ 10 ಸಾವಿರ ಕೊಡಲಾಗಿದೆ ಎನ್ನಲಾಗಿದೆ. ಮತದಾನ ದಿನ ಸಮೀಪಿಸುತ್ತಿದ್ದಂತೆಯೇ 'ಮೌಲ್ಯ' ಹೆಚ್ಚಾದರೂ ಅಚ್ಚರಿ ಇಲ್ಲ ಎನ್ನುವ ಮಾತುಗಳಿವೆ. 'ಅವರು ₹ 25ಸಾವಿರ ಕೊಡುತ್ತಾರಂತೆ, ನೀವೆಷ್ಟು ಕೊಡುತ್ತೀರಾ. ಪ್ರಥಮ ಪ್ರಾಶಸ್ತ್ಯಕ್ಕಾದರೆ ಇಷ್ಟು, ದ್ವಿತೀಯ ಪ್ರಾಶಸ್ತ್ಯದ ಮತಕ್ಕಾದರೆ ಇಷ್ಟು ಎಂದು ಕೆಲವರು ಬೇಡಿಕೆ ಇಡುತ್ತಿದ್ದಾರೆ' ಎಂಬ ಮಾತುಗಳೂ ಕೇಳಿಬರುತ್ತಿವೆ.

ಅಲ್ಲಲ್ಲಿ ಡಾಬಾಗಳಲ್ಲಿ, ರೆಸಾರ್ಟ್ ಅಥವಾ ಹೋಟೆಲ್‌ಗಳಲ್ಲಿ ಮತದಾರರಿಗೆ ಪಾರ್ಟಿಗಳನ್ನು ಕೊಡಿಸಲಾಗುತ್ತಿದೆ ಎಂದು ತಿಳಿದುಬಂದಿದೆ. ಕೆಲವರು, 'ಮತದಾರರನ್ನು ಹಿಡಿದಿಟ್ಟುಕೊಳ್ಳುವುದಕ್ಕಾಗಿ' ವಾಹನ ವ್ಯವಸ್ಥೆ ಮಾಡಿ, ಪ್ರವಾಸದ ಖರ್ಚನ್ನೂ ನೋಡಿಕೊಳ್ಳುವುದಾಗಿ ಆಮಿಷ ಒಡ್ಡುತ್ತಿದ್ದಾರೆ ಎನ್ನಲಾಗುತ್ತಿದೆ. ಇಸ್ತ್ರಿಪೆಟ್ಟಿಗೆ, ಅಡುಗೆ ಒಲೆ ಹಂಚಲಾಗಿದೆ ಎಂಬ ಮಾಹಿತಿ ಇದೆ. ಪ್ರಮುಖ ಸದಸ್ಯರಿಗೆ ಚಿನ್ನದುಂಗರದ ಆಮಿಷವನ್ನೂ ನೀಡಲಾಗಿದೆ ಎಂದು ತಿಳಿದುಬಂದಿದೆ.

ವಿಜಯಪುರ ಜಿಲ್ಲೆಯ ಕೆಲ ಅಭ್ಯರ್ಥಿಗಳು ದಸರಾ, ದೀಪಾವಳಿ ಸಂದರ್ಭದಲ್ಲಿಯೇ ಬೆಳ್ಳಿ ನಾಣ್ಯ, ಗಡಿಯಾರ ಹಂಚಿಕೆ ಮಾಡಿದ್ದರು. ಇದೀಗ ಒಂದೊಂದು ಮತಕ್ಕೆ ₹10 ಸಾವಿರದಿಂದ ₹25 ಸಾವಿರದ ವರೆಗೂ ಹಣ ಹಂಚುತ್ತಿರುವುದಾಗಿ ಹೇಳಲಾಗುತ್ತಿದೆ.

ಉತ್ತರ ಕನ್ನಡದಲ್ಲಿ ಈವರೆಗೆ ಹಣ ಹಂಚಿಲ್ಲ. ಆದರೆ, ಎಷ್ಟು ಹಂಚಬೇಕು ಎಂಬುದು ಇಂದೋ–ನಾಳೆ ಸಂಜೆಯೊಳಗೆ ನಿರ್ಧಾರವಾಗಬಹುದು. ಬಿಜೆಪಿ ಎಷ್ಟು ಕೊಡುತ್ತದೆ ಎಂಬುದನ್ನು ನೋಡಿಕೊಂಡು ಕಾಂಗ್ರೆಸ್, ಕಾಂಗ್ರೆಸ್ ಎಷ್ಟು ಕೊಡುತ್ತದೆ ಎಂಬುದನ್ನು ನೋಡಿಕೊಂಡು ಬಿಜೆಪಿ ಹಂಚಲು ಕಾಯುತ್ತಿವೆ. ಈಗಿನ ಮಾಹಿತಿಯಂತೆ ಮತಕ್ಕೆ ₹ 10 ಸಾವಿರದಿಂದ ₹ 15 ಸಾವಿರ ನಿಗದಿಯಾಗಿದೆ ಎಂದು ಗೊತ್ತಾಗಿದೆ.

ವಿಜಯನಗರ ಜಿಲ್ಲೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ, ಪಂಚಾಯಿತಿ ಸದಸ್ಯರಿಗೆ 10 ಗ್ರಾಂ ಬೆಳ್ಳಿ ನಾಣ್ಯ ಈಗಾಗಲೇ ಕೊಟ್ಟಿದ್ದಾರೆ ಎಂಬ ಮಾಹಿತಿ ಇದೆ. ಜೊತೆಗೆ ಅದರೊಂದಿಗೆ ಒಬ್ಬರಿಗೆ ತಲಾ ₹20,000 ನಗದು. ಬಿಜೆಪಿಯವರು ಒಬ್ಬರಿಗೆ ₹25,000 ನಗದು ಕೊಡಲು ನಿರ್ಧರಿಸಿದ್ದಾರೆ ಎಂದು ಗೊತ್ತಾಗಿದೆ.

ಗದಗ ಜಿಲ್ಲೆಯಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ಅಭ್ಯರ್ಥಿಗಳು ಪಂಚಾಯ್ತಿ ಸದಸ್ಯರಿಗೆ ತಲಾ ₹ 15 ಸಾವಿರ ಕೊಡಲು ನಿರ್ಧರಿಸಿದ್ದಾರೆ ಎಂದು ತಿಳಿದುಬಂದಿದೆ. ಹಾವೇರಿ ಜಿಲ್ಲೆಯಲ್ಲಿ ಬಿಜೆಪಿ, ಕಾಂಗ್ರೆಸ್ ಮತ್ತು ಪಕ್ಷೇತರ ಅಭ್ಯರ್ಥಿ ಈ ಮೂವರು ಪಂಚಾಯಿತಿ ಸದಸ್ಯರಿಗೆ ತಲಾ ₹10 ಸಾವಿರ ಕೊಡುತ್ತಿದ್ದಾರೆ ಎಂದು ತಿಳಿದು ಬಂದಿದೆ.

ಧಾರವಾಡ ಹಾಗೂ ಬಳ್ಳಾರಿಯಲ್ಲಿ ಇಂತಹ ಪ್ರಕರಣಗಳು ವರದಿಯಾಗಿಲ್ಲ.

ಬೆಂಗಳೂರು ನಗರ ಕ್ಷೇತ್ರ : ಜೋರಾಗಿದೆ ದುಪ್ಪಟ್ಟಿನ ಮಾತು

ಬೆಂಗಳೂರು: ರಾಜ್ಯ ರಾಜಧಾನಿಯನ್ನು ಪ್ರತಿನಿಧಿಸುವ ಬೆಂಗಳೂರು ನಗರ ಕ್ಷೇತ್ರದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಅಭ್ಯರ್ಥಿಗಳ ನಡುವೆ ನೇರ ಹಣಾಹಣಿ ಇದೆ. ಇಲ್ಲಿ ಪ್ರತಿ ಬಾರಿಯೂ ಚುನಾವಣೆಯ ಮೇಲೆ ರಾಜ್ಯದ ಇತರೆಡೆಗಿಂತ ಹೆಚ್ಚು ಹಣದ ಪ್ರಭಾವ ಇರುತ್ತದೆ. ಈ ಬಾರಿ ಕಾದು ನೋಡುವ ತಂತ್ರದ ಮೊರೆ ಹೋಗಿರುವ ಅಭ್ಯರ್ಥಿಗಳು 'ದುಪ್ಪಟ್ಟು' ನೀಡುವ ಆಮಿಷ ಒಡ್ಡುತ್ತಿದ್ದಾರೆ ಎಂಬ ಚರ್ಚೆ ರಾಜಕೀಯ ವಲಯದಲ್ಲಿ ಹರಿದಾಡುತ್ತಿದೆ.

ಜಮೀನಿನ ಮೌಲ್ಯ ಹೆಚ್ಚಿರುವ ಸ್ಥಳಗಳಲ್ಲಿ ಗ್ರಾಮ ಪಂಚಾಯಿತಿ ಸದಸ್ಯರ ಮತದ ಮೌಲ್ಯವೂ ಹೆಚ್ಚು. ಕಳೆದ ಚುನಾವಣೆಯಲ್ಲೇ ಲಕ್ಷ ರೂಪಾಯಿಗಳ ಲೆಕ್ಕದಲ್ಲಿ ಮತಗಳು ಬಿಕರಿಯಾಗಿದ್ದವು. ಈ ಬಾರಿ ಒಬ್ಬರು ನೀಡುವ ಮೊತ್ತದ ಎರಡರಷ್ಟು ನೀಡುವುದಾಗಿ ಇನ್ನೊಬ್ಬರು ಹೇಳುತ್ತಿದ್ದಾರೆ. ಮತದಾನದ ಹಿಂದಿನ ದಿನವೇ ಎಲ್ಲವೂ ಅಂತಿಮಗೊಳ್ಳಬಹುದು ಎನ್ನಲಾಗುತ್ತಿದೆ.

ಹೆಚ್ಚು ಹಣ ನೀಡಲು ಪೈಪೋಟಿ

ಕಲಬುರಗಿ: ವಿಧಾನ ಪರಿಷತ್ ಚುನಾವಣೆಯಲ್ಲಿ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಪ್ರತಿ ಮತವು ಕನಿಷ್ಠ ₹ 20 ಸಾವಿರದಿಂದ ಗರಿಷ್ಠ ₹ 50 ಸಾವಿರದವರೆಗೆ ಬಿಕರಿಯಾಗುತ್ತಿದೆ!

ಕಲಬುರಗಿ ಜಿಲ್ಲೆಯಲ್ಲಿ 'ಗ್ಯಾರಂಟಿ' ಮತ್ತು 'ನೋ ಗ್ಯಾರಂಟಿ' ಎಂದು ಎರಡು ಭಾಗ ಮಾಡಲಾಗಿದ್ದು, ಗ್ಯಾರಂಟಿಗೆ ₹ 30 ಸಾವಿರ, ಅನುಮಾನವಿದ್ದವರಿಗೆ (ನೋ ಗ್ಯಾರಂಟಿ) ₹ 20 ಸಾವಿರ ಕೊಡಲಾಗುತ್ತಿದೆ. ಯಾದಗಿರಿ ಜಿಲ್ಲೆಯಲ್ಲಿ ಅಭ್ಯರ್ಥಿಗಳಿಗಿಂತ ಹೆಚ್ಚಾಗಿ ಸ್ಥಳೀಯ ಮುಖಂಡರೇ ಜಿದ್ದಿಗೆ ಬಿದ್ದಿದ್ದು, 'ಅವರು' ಎಷ್ಟು ಕೊಡುತ್ತಾರೋ ಅದಕ್ಕಿಂತ 'ನಾವು' ಹತ್ತು ಸಾವಿರ ಹೆಚ್ಚು ಕೊಡುತ್ತೇವೆ ಎಂದು ಮನೆಮನೆಗೆ ಹೋಗಿ ಹೇಳಿದ್ದಾರೆ. ಹೀಗಾಗಿ, ಇನ್ನೂ ಬಹಳ ಮತದಾರರ ಕೈಗೆ ಹಣ ಸಿಕ್ಕಿಲ್ಲ ಎನ್ನುವುದು ಮೂಲಗಳ ಮಾಹಿತಿ.

ಕೊಪ್ಪಳ ಜಿಲ್ಲೆಯಲ್ಲಿ ₹ 15ರಿಂದ ₹ 20 ಸಾವಿರ ನಗದು ಅಥವಾ ಅರ್ಧ ತೊಲ ಚಿನ್ನದುಂಗುರ ಕೊಡುವುದು ಈಗಾಗಲೇ ಆರಂಭವಾಗಿದೆ. ರಾಯಚೂರಿನಲ್ಲೂ ಇದೇ ದಾರಿ ಅನುಸರಿಸುತ್ತಿದ್ದು, ಸದ್ಯಕ್ಕೆ ಯಾರಿಗೂ ಹಣ ಅಥವಾ ಚಿನ್ನಾಭರಣ ಸಂದಾಯವಾಗಿಲ್ಲ ಎನ್ನಲಾಗುತ್ತಿದೆ. ಕಳೆದ ಬಾರಿಯ ಚುನಾವಣೆಯಲ್ಲಿ ಪ್ರತಿ ಮತಕ್ಕೆ ₹ 10ರಿಂದ ₹ 15 ಸಾವಿರದಂತೆ ಹಂಚಿಕೆ ನಡೆದಿತ್ತು. ಆದರೆ, ಈ ಬಾರಿ ಹಲವು ಸದಸ್ಯರು ₹ 50 ಸಾವಿರಕ್ಕೆ ಬೇಡಿಕೆ ಇಟ್ಟಿದ್ದಾರೆ ಎಂದು ಹೆಸರು ಬಹಿರಂಗ ಪಡಿಸಲು ಒಲ್ಲದ ಗ್ರಾಮ ಪಂಚಾಯಿತಿ ಸದಸ್ಯರೊಬ್ಬರು ಹೇಳಿದರು.

ಬೀದರ್ ಜಿಲ್ಲೆಯಲ್ಲಿ ಗ್ರಾಮ ಪಂಚಾಯಿತಿ ಸದಸ್ಯರೊಬ್ಬರಿಗೆ ಅಭ್ಯರ್ಥಿಯು 'ಟೋಕನ್' ರೀತಿಯಲ್ಲಿ ನೀಡಿದ ಬೆಳ್ಳಿನಾಣ್ಯ

ಬೀದರ್ ಜಿಲ್ಲೆಯಲ್ಲಿ ಗ್ರಾಮ ಪಂಚಾಯಿತಿ ಸದಸ್ಯರೊಬ್ಬರಿಗೆ ಅಭ್ಯರ್ಥಿಯು ನೀಡಿದ ಸೀರೆ

ಮತವೊಂದಕ್ಕೆ ₹ 50 ಸಾವಿರ!

ಪ್ರಜಾವಾಣಿ ವಾರ್ತೆ

ಮೈಸೂರು/ಮಂಡ್ಯ/ಹಾಸನ/ಮಡಿಕೇರಿ: ಮೈಸೂರು–ಚಾಮರಾಜನಗರ, ಮಂಡ್ಯ, ಹಾಸನ, ಕೊಡಗು ಕ್ಷೇತ್ರಗಳಲ್ಲಿ ಹಣ ಹಂಚಿಕೆಯದ್ದೇ ಸದ್ದು. ಅಭ್ಯರ್ಥಿಗಳು ಮತವೊಂದಕ್ಕೆ ₹50 ಸಾವಿರದವರೆಗೆ ಹಣ ಹಂಚುತ್ತಿರುವುದು ಗೊತ್ತಾಗಿದೆ.

ಮೈಸೂರು–ಚಾಮರಾಜನಗರ ದ್ವಿಸದಸ್ಯ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಡಾ.ಡಿ.ತಿಮ್ಮಯ್ಯ, ಬಿಜೆಪಿಯ ಆರ್. ರಘು ಹಾಗೂ ಜೆಡಿಎಸ್‌ನ ಸಿ.ಎನ್. ಮಂಜೇಗೌಡ ನಡುವೆ ಬಿರುಸಿನ ಸ್ಪರ್ಧೆ ಏರ್ಪಟ್ಟಿದೆ.

ಈ ಕ್ಷೇತ್ರದಲ್ಲಿ ಕಳೆದ ಬಾರಿ ಒಂದು ವೋಟಿಗೆ ₹25 ಸಾವಿರದವರೆಗೆ ನೀಡಲಾಗಿತ್ತು. ಈ ಬಾರಿ 'ಪೈಪೋಟಿ' ಹೆಚ್ಚಿರುವುದರಿಂದ ಅದು ₹50 ಸಾವಿರ ತಲುಪಿರುವ ಬಗ್ಗೆ ಪಕ್ಷದ ಸಭೆಗಳಲ್ಲಿ ಕಾರ್ಯಕರ್ತರು ಮಾತನಾಡಿಕೊಳ್ಳುತ್ತಿದ್ದಾರೆ.

ಹಣದೊಂದಿಗೆ ಧರ್ಮಸ್ಥಳ ಮಂಜುನಾಥಸ್ವಾಮಿ ಚಿತ್ರವಿರುವ ಬೆಳ್ಳಿ ನಾಣ್ಯ ನೀಡುತ್ತಿರುವುದು ಗೊತ್ತಾಗಿದೆ. ಹಣ ಪಡೆದವರು ದೇವರ ಭಯದಿಂದ ತಮಗೇ ಮೊದಲ ಪ್ರಾಶಸ್ತ್ಯ ಮತ ನೀಡುತ್ತಾರೆ ಎಂಬುದು ಅಭ್ಯರ್ಥಿಗಳ ನಂಬಿಕೆ! ಹಣ ಹಂಚಲು ಪಕ್ಷದ ಕಾರ್ಯಕರ್ತರ ಮೇಲೆ ನಂಬಿಕೆ ಇಡದೆ ಪ್ರತಿ ಪಂಚಾಯಿತಿಗೊಬ್ಬ ಏಜೆಂಟ್ ನೇಮಿಸಿಕೊಂಡಿದ್ದಾರೆ.

1ರೂಪಾಯಿ ಎಂದರೆ ₹1 ಕೋಟಿ!

ಮಂಡ್ಯದಲ್ಲಿ ಅಭ್ಯರ್ಥಿಗಳು ಮತದಾರರಿಗೆ ತಲಾ ₹1 ಲಕ್ಷದವರೆಗೂ ಹಣ ಹಂಚಿಕೆ ಮಾಡುತ್ತಿದ್ದಾರೆ ಎಂಬ ಮಾತು ವ್ಯಾಪಕವಾಗಿದೆ.

ಜೆಡಿಎಸ್‌ನಿಂದ ಎನ್. ಅಪ್ಪಾಜಿಗೌಡ, ಬಿಜೆಪಿಯಿಂದ ಬೂಕಹಳ್ಳಿ ಮಂಜು, ಕಾಂಗ್ರೆಸ್‌ನಿಂದ ದಿನೇಶ್ ಗೂಳಿಗೌಡ ಕಣದಲ್ಲಿದ್ದು, ಮೂರೂ ಪಕ್ಷಗಳ ಮುಖಂಡರು 'ರೂಪಾಯಿ' ಬಗ್ಗೆ ಮಾತನಾಡುತ್ತಿರುವುದು ಕುತೂಹಲ ಕೆರಳಿಸಿದೆ.

ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ 'ಪ್ರತಿ ತಾಲ್ಲೂಕಿಗೂ ಕಾಂಗ್ರೆಸ್, ಜೆಡಿಎಸ್ ಅಭ್ಯರ್ಥಿ ಮುಂಗಡವಾಗಿ 1ರಿಂದ 2 ರೂಪಾಯಿವರೆಗೆ ಕೊಟ್ಟಿದ್ದಾರೆ' ಎಂದು ಆರೋಪ ಮಾಡಿದ್ದಾರೆ. ಇಲ್ಲಿ ಒಂದು ರೂಪಾಯಿ ಎಂದರೆ ₹1 ಕೋಟಿ ಎಂಬುದು ಮತದಾರರಿಗೆ ಚೆನ್ನಾಗಿ ಗೊತ್ತಿದೆ.

ಮತದಾರರ ಮಕ್ಕಳ ಮೇಲೆ ಪ್ರಮಾಣ

ಕೊಡಗು ಜಿಲ್ಲೆಯಲ್ಲಿ ಒಂದು ಪಕ್ಷದ ಅಭ್ಯರ್ಥಿ ಮತದಾರರಿಗೆ ತಲಾ ₹ 50 ಸಾವಿರ ಹಂಚಿಕೆ ಮಾಡಿದ್ದಾರೆ. ಎದುರಾಳಿ ಅಭ್ಯರ್ಥಿಯೂ ಅದಕ್ಕಿಂತ ಹೆಚ್ಚಿನ ಹಣ ಹಂಚಿಕೆಗೆ ಮುಂದಾಗಿದ್ದಾರೆ. ಮತದಾರರ ಮಕ್ಕಳ ಮೇಲೆ ಆಣೆ – ಪ್ರಮಾಣ ಸಹ ಮಾಡಿಸುತ್ತಿರುವ ಪ್ರಕರಣವೂ ನಡೆಯುತ್ತಿದೆ. ಗ್ರಾಮದ ದೇವಸ್ಥಾನದ ಬಳಿಗೆ ಮತದಾರರನ್ನು ಕರೆಸಿ, ದೇವರ ಎದುರು ಹಣ ನೀಡಿ ಭಯ ಹುಟ್ಟಿಸಿ ವಿರೋಧಿ ಅಭ್ಯರ್ಥಿಗೆ ಮತ ಹೋಗದಂತೆ 'ತಂತ್ರ' ರೂಪಿಸಿದ್ದಾರೆ.

ವಾಷಿಂಗ್ ಮಷೀನ್ ಟೋಕನ್!

ಹಾಸನ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿ ಒಂದು ಮತಕ್ಕೆ ₹50 ಸಾವಿರ ಹಣ ನೀಡಿದ್ದಾರೆ. ಕೆಲವೊಂದು ಕಡೆ ₹40 ಸಾವಿರ ನಗದು ಹಾಗೂ ಮಂಜುನಾಥಸ್ವಾಮಿ ಚಿತ್ರವುಳ್ಳ ಬೆಳ್ಳಿ ನಾಣ್ಯ ಕೊಟ್ಟಿದ್ದಾರೆ ಎಂಬ ಮಾತು ಕೇಳಿಬರುತ್ತಿದೆ. ಕಾಂಗ್ರೆಸ್ ಅಭ್ಯರ್ಥಿ ಒಂದು ಮತಕ್ಕೆ ₹10 ಸಾವಿರ ನಗದು ಹಾಗೂ ವಾಷಿಂಗ್ ಮಷೀನ್ ಟೋಕನ್ ನೀಡಿದ್ದಾರೆ. ಬಿಜೆಪಿ ಅಭ್ಯರ್ಥಿ ₹30 ಸಾವಿರ ನಗದು ನೀಡಿದ್ದಾರೆ ಎಂಬ ಚರ್ಚೆಗಳು ನಡೆಯುತ್ತಿವೆ.

ಮತದಾರರನ್ನು ಸೆಳೆಯಲು 'ಸೇರು – ಸವ್ವಾ ಸೇರು'

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಚಿಕ್ಕಮಗಳೂರು ಕ್ಷೇತ್ರದಲ್ಲಿ ವಿಧಾನ ಪರಿಷತ್ ಚುನಾವಣೆ ಕಾವು ಏರಿದೆ. ಆ ಪಕ್ಷದವರು 'ಸೇರು' ಕೊಟ್ಟರೆ ನಮ್ಮ ಪಕ್ಷದಿಂದ 'ಸವ್ವಾ ಸೇರು' ಕೊಡುತ್ತೇವೆ ಎಂದು ಮತದಾರರನ್ನು ಸೆಳೆಯುವ ತಂತ್ರಗಾರಿಕೆಗಳು ಒಳಗೊಳಗೇ ಚುರುಕುಗೊಂಡಿವೆ.

ಕಾಫಿನಾಡಿನಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಮಧ್ಯೆ ನೇರ ಹಣಾಹಣಿ ಇದೆ. ಮತದಾರರನ್ನು ಕಾಪಿಟ್ಟುಕೊಳ್ಳಲು ತಂತ್ರ ಮತ್ತು ಪ್ರತಿತಂತ್ರ ರೂಪಿಸುವ ಕಾಯಕದಲ್ಲಿ ಪಕ್ಷಗಳು ನಿರತವಾಗಿವೆ.

'ಈಗ ಒಬ್ಬರಿಗೆ ಒಂದು ಕಡೆಯವರು ₹ 20 ಸಾವಿರ, ಮತ್ತೊಂದು ಕಡೆಯವರು ₹ 25 ಸಾವಿರ ತಲುಪಿಸಿದ್ದಾರೆ. ಒಬ್ಬರಿಗೆ ಒಟ್ಟು ₹ 50 ಸಾವಿರ ನೀಡುವ ಅಂದಾಜು ಇದೆ. ಅವರು ಸೇರು ಕೊಟ್ಟರೆ, ತಾವು ಸವಾ ಸೇರು ಕೊಡುವುದಾಗಿ ಎರಡೂ ಕಡೆಯುವರು ಮತದಾರರಿಗೆ ಮಾತು ನೀಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ದಕ್ಷಿಣ ಕನ್ನಡ– ಉಡುಪಿ ಸೇರಿದ ದ್ವಿಸದಸ್ಯ ಕ್ಷೇತ್ರದಲ್ಲಿ ಎರಡೂ ಪಕ್ಷಗಳು ತಲಾ ಒಬ್ಬ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿರುವುದರಿಂದ ಆ ಪರಿಯ ಆಮಿಷಗಳ ಪೈಪೋಟಿ ಕಾಣಿಸುತ್ತಿಲ್ಲ. ಮತದಾರರನ್ನು ಹಿಡಿದಿಟ್ಟುಕೊಳ್ಳುವ ಸಲುವಾಗಿ ಸಣ್ಣ ಪ್ರಮಾಣದಲ್ಲಿ ಕೆಲವೆಡೆ ನಡೆದಿರಬಹುದು' ಎಂದು ಪಕ್ಷವೊಂದರ ಮಂಗಳೂರಿನ ಕಾರ್ಯಕರ್ತರು ಹೇಳಿದ್ದಾರೆ.

ಬಿಜೆಪಿ ಅಭ್ಯರ್ಥಿ ಪರ ಕೆಲಸಕ್ಕೆ ಹುಬ್ಬಳ್ಳಿ ಜನ: ಪ್ರಿಯಾಂಕ್ ಖರ್ಗೆ

ಕಲಬುರಗಿ: 'ಬಿಜೆಪಿ ಅಭ್ಯರ್ಥಿ ಬಿ.ಜಿ. ಪಾಟೀಲ ಪರವಾಗಿ ಚುನಾವಣೆಯಲ್ಲಿ ಕೆಲಸ ಮಾಡಲು ಹುಬ್ಬಳ್ಳಿಯ ಪ್ರತಿಷ್ಠಿತ ಖಾಸಗಿ ಸಾರಿಗೆ ಸಂಸ್ಥೆಯ ನೌಕರರನ್ನು ನಗರಕ್ಕೆ ಕರೆಸಲಾಗಿದೆ. ಅವರನ್ನು ಒಂದು ಹೋಟೆಲ್‌ನಲ್ಲಿ ಉಳಿಸಲಾಗಿದೆ. ಇದನ್ನು ನೋಡಿದರೆ ಸ್ಥಳೀಯ ಬಿಜೆಪಿ ಶಾಸಕರ ಮೇಲೆ ಪಾಟೀಲ ಅವರಿಗೆ ನಂಬಿಕೆ ಇಲ್ಲದಂತಾಗಿದೆ' ಎಂದು ಕೆಪಿಸಿಸಿ ವಕ್ತಾರ, ಶಾಸಕ ಪ್ರಿಯಾಂಕ್ ಖರ್ಗೆ ಆರೋಪಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಹುಬ್ಬಳ್ಳಿಯಿಂದ ಬರುವ ಅಗತ್ಯವಾದರೂ ಏನು? ಅವರು ಪ್ರಚಾರಕ್ಕಂತೂ ಬಂದಿಲ್ಲ. ಏನು ಹಂಚಿಕೆ ಮಾಡಲಿದ್ದಾರೆ ಎಂಬುದು ನಿಗೂಢವಾಗಿದೆ. ಆದ್ದರಿಂದ ಈ ಬಗ್ಗೆ ಚುನಾವಣಾಧಿಕಾರಿಗೆ ಲಿಖಿತ ದೂರು ಸಲ್ಲಿಸಲಿದ್ದೇವೆ' ಎಂದರು. 'ವೈಯಕ್ತಿಕವಾಗಿ ಬಿ.ಜಿ. ಪಾಟೀಲ ಅವರ ಬಗ್ಗೆ ಗೌರವವಿದೆ. ಆದರೆ, ಅವರು ತಮ್ಮ ಅವಧಿಯಲ್ಲಿ ಪಂಚಾಯಿತಿ ಸದಸ್ಯರ ಪರವಾಗಿ ಏನು ಕೆಲಸ ಮಾಡಿದ್ದಾರೆ' ಎಂದೂ ಪ್ರಶ್ನಿಸಿದರು.

ತಲುಪಿದ ಮುಂಗಡ: 'ಪೇಮೆಂಟ್' ಬಾಕಿ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ/ದಾವಣಗೆರೆ/ಶಿವಮೊಗ್ಗ: ವಿಧಾನಪರಿಷತ್ತಿಗೆ ನಡೆಯುತ್ತಿರುವ ಚುನಾವಣೆಯ ಚಿತ್ರದುರ್ಗ–ದಾವಣಗೆರೆ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಲ್ಲಿ ಕೆಲ ಅಭ್ಯರ್ಥಿಗಳು ಮತದಾರರಿಗೆ ಮುಂಗಡವಾಗಿ ತಲುಪಿಸಿದ್ದಾರೆ. ಮತದಾನದ ದಿನ 'ಫುಲ್ ಪೇಮೆಂಟ್' ತಲುಪಿಸುವ ಆಶ್ವಾಸನೆ ನೀಡಿದ್ದಾರೆ.

'ಪೇಮೆಂಟ್' ಪಾವತಿಯಲ್ಲಿಯೂ ಅಭ್ಯರ್ಥಿಗಳ ನಡುವೆ ಸ್ಪರ್ಧೆ ಏರ್ಪಟ್ಟಿದೆ. ಒಂದು ಮತಕ್ಕೆ ಎಷ್ಟು ಹಣ ನೀಡಲಾಗುತ್ತದೆ ಎಂಬ ಸಂಗತಿಯನ್ನು ರಾಷ್ಟ್ರೀಯ ಪಕ್ಷದ ಇಬ್ಬರೂ ಅಭ್ಯರ್ಥಿಗಳು ಬಹಿರಂಗಪಡಿಸಿಲ್ಲ. ಬಿಜೆಪಿಗಿಂತ ಹೆಚ್ಚು 'ಪೇಮೆಂಟ್' ಮಾಡುವ ಸಂದೇಶವನ್ನು ಕಾಂಗ್ರೆಸ್ ಮತದಾರರಿಗೆ ತಲುಪಿಸಿದೆ.

ಬಿಜೆಪಿ ಮತ್ತು ಕಾಂಗ್ರೆಸ್ ಅಭ್ಯರ್ಥಿಗಳು ಕ್ಷೇತ್ರ ವ್ಯಾಪ್ತಿಯ ಪ್ರತಿ ತಾಲ್ಲೂಕು ಸುತ್ತಿ ಮತಯಾಚನೆ ಮಾಡಿದ್ದಾರೆ. ಗ್ರಾಮ ಪಂಚಾಯಿತಿ ಸದಸ್ಯರೇ ನಿರ್ಣಾಯಕವಾಗಿರುವ ಕಾರಣಕ್ಕೆ ಹೋಬಳಿಗೂ ತೆರಳಿ ಮತ ಸೆಳೆಯುವ ಪ್ರಯತ್ನ ನಡೆಸಿದ್ದಾರೆ. ಹೀಗೆ ಮತಯಾಚನೆಗೆ ತೆರಳಿದಾಗ ₹ 5 ಸಾವಿರದವರೆಗೆ ಅಡ್ವಾನ್ಸ್ ತಲುಪಿಸಲಾಗಿದೆ ಎಂದು ಮೂಲಗಳು ಮಾಹಿತಿ ನೀಡಿವೆ.

ಮತವೊಂದಕ್ಕೆ ಬಿಜೆಪಿ ₹ 30 ಸಾವಿರದಿಂದ ₹40 ಸಾವಿರ ಹಾಗೂ ಕಾಂಗ್ರೆಸ್ ₹ 50 ಸಾವಿರ ನೀಡುವ ಬಗ್ಗೆ ಅಖಾಡದಲ್ಲಿ ಚರ್ಚೆಗಳು ನಡೆಯುತ್ತಿವೆ. ಅಭ್ಯರ್ಥಿಯೊಬ್ಬರು ನೀಡಿದ ಹಣಕ್ಕೆ ಹೆಚ್ಚುವರಿಯಾಗಿ ಮತ್ತೊಬ್ಬರು ತಲುಪಿಸುವ ಪೈಪೋಟಿಯಲ್ಲಿದ್ದಾರೆ. ಎರಡೂ ಪಕ್ಷಗಳ ವತಿಯಿಂದ ಗ್ರಾಮ ಪಂಚಾಯಿತಿ ಸದಸ್ಯರಿಗೆ ಬಟ್ಟೆ ವಿತರಿಸಲಾಗುತ್ತಿದೆ.

ಶಿವಮೊಗ್ಗ ಕ್ಷೇತ್ರದಲ್ಲಿ ಬಿಜೆಪಿ ₹ 25 ಸಾವಿರ ಹಾಗೂ ಕಾಂಗ್ರೆಸ್ ₹ 20 ಸಾವಿರ ನೀಡುವ ಮಾತುಗಳು ಕೇಳಿ ಬರುತ್ತಿವೆ. ಮತದಾನದ ಹಿಂದಿನ ದಿನವಾದ ಡಿ.9ರಂದು ರಾತ್ರಿ ಇದು ಬಹಿರಂಗವಾಗಲಿದೆ.

ಬಿಜೆಪಿಯಿಂದ ಭರ್ಜರಿ ಬಾಡೂಟ

ಹೊಳಲ್ಕೆರೆ ತಾಲ್ಲೂಕಿನ ಲೋಕದೊಳಲು ಗ್ರಾಮದಲ್ಲಿ ಬಿಜೆಪಿ ಅಭ್ಯರ್ಥಿ ಕೆ.ಎಸ್. ನವೀನ್ ಪರ ಮಂಗಳವಾರ ನಡೆದ ಬಹಿರಂಗ ಪ್ರಚಾರ ಸಭೆಯಲ್ಲಿ ಮತದಾರರಿಗೆ ಭರ್ಜರಿ ಬಾಡೂಟ ಹಾಕಿಸಲಾಗಿದೆ.

ಕೇಂದ್ರ ಸಚಿವ ಎ.ನಾರಾಯಣಸ್ವಾಮಿ ಹಾಗೂ ಸಾರಿಗೆ ಸಚಿವ ಬಿ.ಶ್ರೀರಾಮುಲು ಅವರು ಪಾಲ್ಗೊಂಡಿದ್ದ ಸಭೆಯಲ್ಲಿಯೇ ಮತದಾರರ ಮನ ಗೆಲ್ಲುವ ಪ್ರಯತ್ನ ನಡೆದಿದೆ. ಕಾರ್ಯಕ್ರಮ ಮುಕ್ತಾಯವಾದ ಬಳಿಕ ಗ್ರಾಮ ಪಂಚಾಯಿತಿ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಸದಸ್ಯರು ಚಿಕನ್ ಮತ್ತು ಮಟನ್ ಊಟ ಸವಿದರು.

'ಚಿಮ್ಮನಕಟ್ಟಿ ಅತೃಪ್ತಿ: ಪಕ್ಷ ಸರಿಪಡಿಸಲಿದೆ'

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: 'ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಬಗ್ಗೆ ಮಾಜಿ ಶಾಸಕ ಬಿ.ಬಿ.ಚಿಮ್ಮನಕಟ್ಟಿ ಬಾದಾಮಿಯಲ್ಲಿ ವ್ಯಕ್ತಪಡಿಸಿರುವ ಬಹಿರಂಗ ಅತೃಪ್ತಿ ಕಾಂಗ್ರೆಸ್ ಪಕ್ಷದಲ್ಲಿನ ಆಂತರಿಕ ಪ್ರಜಾಪ್ರಭುತ್ವದ ದ್ಯೋತಕ ಹೊರತು ಯಾವುದೇ ಅಪಮಾನ ಅಲ್ಲ' ಎಂದು ವಿಧಾನಪರಿಷತ್ ಸದಸ್ಯ ಆರ್. ಬಿ.ತಿಮ್ಮಾಪುರ ಹೇಳಿದರು.

ಆರ್.ಬಿ. ತಿಮ್ಮಾಪುರ

ನಗರದಲ್ಲಿ ಮಂಗಳವಾರ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಮುಂದೆಯೇ ಮಾತನಾಡಬೇಕು. ಚಿಮ್ಮನಕಟ್ಟಿ ಬಹಿರಂಗವಾಗಿ ಹೇಳಿರುವುದು ತಪ್ಪಲ್ಲ. ಗೌರವದ ವಿಚಾರ. ತಮಗೆ ಅನ್ಯಾಯ ಆಗಿದೆ ಎಂದು ಹೇಳಿಕೊಂಡಿದ್ದಾರೆ. ತಪ್ಪು–ಸರಿ ಪಕ್ಷದವರು ತೀರ್ಮಾನಿಸಲಿದ್ದಾರೆ' ಎಂದರು.

'ಜಿಲ್ಲೆಯಲ್ಲಿ ಇಲ್ಲವೇ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ಯಾವುದೇ ಬಣ ರಾಜಕಾರಣ ಇಲ್ಲ. ಭಿನ್ನ ವಿಚಾರಗಳನ್ನು ಎತ್ತಿದರೆ ಅದಕ್ಕೆ ನೀವು (ಮಾಧ್ಯಮದವರು) ಬಣ ರಾಜಕಾರಣ ಎಂದು ಏಕೆ ಬಣ್ಣ ಕಟ್ಟುತ್ತೀರಿ. ಚಿಮ್ಮನಕಟ್ಟಿ ಅವರ ಅಸಮಾಧಾನದ ಹಿಂದೆಯೂ ಯಾವುದೇ ಬಣ ಕೆಲಸ ಮಾಡಿಲ್ಲ. ಬದಲಿಗೆ ಅವರು ತಮ್ಮ ಅಳಲು ತೋಡಿಕೊಂಡಿದ್ದಾರೆ. ಅದನ್ನು ಸರಿಪಡಿಸುವ ಕೆಲಸ ಪಕ್ಷ ಮಾಡಲಿದೆ. ಸಂಪೂರ್ಣ ಅವರ ಮಾತುಗಳನ್ನು ಪಕ್ಷ ಗಮನಿಸಲಿದೆ' ಎಂದು ಹೇಳಿದರು.

'ಕಳೆದ ಚುನಾವಣೆಯಲ್ಲಿ ನನಗೆ ಟಿಕೆಟ್ ತಪ್ಪಿತ್ತು. ಮೂರು ಬಾರಿ ಸೋತಿದ್ದ ನನ್ನನ್ನು ಪಕ್ಷ ಕರೆದು ವಿಧಾನಪರಿಷತ್ ಸದಸ್ಯನಾಗಿ ಮಾಡಿದೆ. ಮಂತ್ರಿ ಸ್ಥಾನ ನೀಡಿದೆ. ಪಕ್ಷ ಎಲ್ಲರನ್ನೂ ಗಮನಿಸಲಿದೆ. ತಾಳ್ಮೆ ಬೇಕು' ಎಂದು ಪ್ರತಿಕ್ರಿಯಿಸಿದರು.

'ಚಿಮ್ಮನಕಟ್ಟಿಗೆ ಬೇರೆ ರೀತಿಯಲ್ಲಿ ಸಹಾಯ'

ಮೈಸೂರು: 'ಮಾಜಿ ಶಾಸಕ ಬಿ.ಬಿ.ಚಿಮ್ಮನಕಟ್ಟಿ ಅವರಿಗೆ ಕಾಂಗ್ರೆಸ್ ಪಕ್ಷವು ಬೇರೆ ರೀತಿಯಲ್ಲಿ ಸಹಾಯ ಮಾಡುತ್ತದೆ. ಬಾದಾಮಿ ಕ್ಷೇತ್ರದ ಜನರು ಸಿದ್ದರಾಮಯ್ಯ ಅವರಿಗೆ ಬೆಂಬಲ ನೀಡಿದ್ದಾರೆ. ಮತದಾರರ ಮಾತಿಗೆ ಮನ್ನಣೆ ಕೊಡಬೇಕಿದೆ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ತಿಳಿಸಿದರು.

ಮಂಗಳವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಸಿದ್ದರಾಮಯ್ಯ ಒಬ್ಬ ಜನನಾಯಕ. ಅವರು ರಾಜ್ಯದಲ್ಲಿ ಎಲ್ಲಿ ಬೇಕಾದರೂ ಚುನಾವಣೆಗೆ ನಿಲ್ಲಬಹುದು ಮತ್ತು ಎಲ್ಲಿ ನಿಂತರೂ ಅವರು ಗೆಲ್ಲುತ್ತಾರೆ' ಎಂದರು.

ಬಿ.ಬಿ.ಚಿಮ್ಮನಕಟ್ಟಿ ಪ್ರಶ್ನೆಗಳಿಗೆ ಈಗ ಉತ್ತರ ನೀಡುವುದಿಲ್ಲ

'40ರಷ್ಟು ಕಮಿಷನ್: ತನಿಖೆಗೆ ಹೋರಾಟ'

ಪ್ರಜಾವಾಣಿ ವಾರ್ತೆ

ಮಂಡ್ಯ: ಗುತ್ತಿಗೆ ಕಾಮಗಾರಿಗಳಲ್ಲಿ ಶೇ 40ರಷ್ಟು ಕಮಿಷನ್ ಹಾವಳಿ ಪ್ರಕರಣವನ್ನು ಸಮಗ್ರ ತನಿಖೆಗೆ ಒಳಪಡಿಸಬೇಕೆಂದು ಒತ್ತಾಯಿಸಿ ಬೆಳಗಾವಿ ಅಧಿವೇಶನದಲ್ಲಿ ಹೋರಾಟ ನಡೆಸಲಾಗುವುದು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮಂಗಳವಾರ ಇಲ್ಲಿ ಹೇಳಿದರು.

'ನ.19ರಂದು ಪ್ರಜಾವಾಣಿ ಪತ್ರಿಕೆಯಲ್ಲಿ ಈ ಕುರಿತ ವರದಿ ಪ್ರಕಟವಾಗಿದೆ. ಕಾಮಗಾರಿಯ ಶೇ 40ರಷ್ಟು ಹಣವನ್ನು ಲಂಚದ ರೂಪದಲ್ಲಿ ನೀಡಬೇಕಾಗಿದೆ ಎಂದು ರಾಜ್ಯ ಗುತ್ತಿಗೆದಾರರ ಸಂಘವು ಜುಲೈ 6ರಂದು ಪ್ರಧಾನಿಗೆ ಪತ್ರ ಬರೆದಿದೆ. ನನ್ನ 40 ವರ್ಷಗಳ ರಾಜಕೀಯ ಜೀವನದಲ್ಲಿ ಇಂತಹ ಲೂಟಿ ಸರ್ಕಾರವನ್ನು ನೋಡಿಲ್ಲ. ಇದರ ವಿರುದ್ಧ ಅಧಿವೇಶನದಲ್ಲಿ ಧ್ವನಿ ಎತ್ತಲಾಗುವುದು' ಎಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಸಿದ್ದರಾಮಯ್ಯ

'ಒಟ್ಟು ಕಾಮಗಾರಿ ಮೊತ್ತದಲ್ಲಿ ಶೇ 40 ಲಂಚ, ಶೇ18 ಜಿಎಸ್‌ಟಿ ಹಾಗೂ ಗುತ್ತಿಗೆದಾರರ ಲಾಭ ಶೇ20 ಸೇರಿ ಶೇ 78 ಹಣ ಹೋದರೆ ಕಾಮಗಾರಿಗಾಗಿ ಉಳಿಯುವುದು ಕೇವಲ ಶೇ 22ರಷ್ಟು ಮಾತ್ರ. 'ಪ್ರಜಾವಾಣಿ'ಯಲ್ಲಿ ವರದಿ ಬಂದ ನಂತರ ನಾನು ಹಲವು ಬಾರಿ ತನಿಖೆಗೆ ಒತ್ತಾಯಿಸಿದ್ದೇನೆ. ನಾನು ಮುಖ್ಯಮಂತ್ರಿಯಾಗಿದ್ದ ಅವಧಿಯನ್ನೂ ಸೇರಿದಂತೆ ಸಮಗ್ರ ತನಿಖೆಗೆ ಒಳಪಡಿಸಬೇಕೆಂದು ಆಗ್ರಹಿಸಿದ್ದೇನೆ. ಆದರೆ, ಮುಖ್ಯಮಂತ್ರಿ ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ಆರೋಪಿಸಿದರು.

'ಅತಿವೃಷ್ಟಿಯಿಂದ 6 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ, ಮನೆಗಳು ಕುಸಿದು ಜನರು ಸಂಕಷ್ಟಕ್ಕೀಡಾಗಿದ್ದಾರೆ. ಇಲ್ಲಿಯವರೆಗೂ ಸರ್ಕಾರ ಪರಿಹಾರ ನೀಡಿಲ್ಲ. 2017ರ ಪ್ರವಾಹ ಸಂತ್ರಸ್ತರಿಗೂ ಪರಿಹಾರ ವಿತರಿಸಿಲ್ಲ. ಈ ಬಗ್ಗೆ 2 ಬಾರಿ ಸದನದಲ್ಲಿ ಧ್ವನಿ ಎತ್ತಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಈ ಬಗ್ಗೆಯೂ ಸದನದಲ್ಲಿ ಒತ್ತಾಯ ಮಾಡಲಾಗುವುದು' ಎಂದರು.

'ಬಿಜೆಪಿ, ಜೆಡಿಎಸ್‌ಗೆ ಅಧಿಕಾರ ವಿಕೇಂದ್ರೀಕರಣ ತತ್ವದ ಮೇಲೆ ನಂಬಿಕೆ ಇಲ್ಲ. ರಾಜ್ಯದಲ್ಲಿ ದೊಡ್ಡ ಮಟ್ಟದ ರಾಜಕೀಯ ಧ್ರುವೀಕರಣ ಉಂಟಾಗಲಿದ್ದು, ವಿವಿಧ ಪಕ್ಷಗಳ ಮುಖಂಡರು ಕಾಂಗ್ರೆಸ್‌ಗೆ ಸೇರ್ಪಡೆಯಾಗಲಿದ್ದಾರೆ' ಎಂದರು.

'ಬಾದಾಮಿಯಲ್ಲಿ ಬಿ.ಬಿ.ಚಿಮ್ಮನಕಟ್ಟಿ ಮಾಡಿರುವ ಆರೋಪಗಳ ಬಗ್ಗೆ ನಾನು ಈ ಸಂದರ್ಭದಲ್ಲಿ ಉತ್ತರಿಸುವುದಿಲ್ಲ. ಉದ್ದೇಶಪೂರ್ವಕವಾಗಿ ನಾನು ಉತ್ತರ ನೀಡುತ್ತಿಲ್ಲ, ಮುಂದೆ ಉತ್ತರಿಸುತ್ತೇನೆ' ಎಂದರು.

'ಸ್ವಂತ ಬಲದ ಮೇಲೆ ಬಿಜೆಪಿಗೆ ನಂಬಿಕೆ ಇಲ್ಲ'

ಬೆಂಗಳೂರು: ಕೇಂದ್ರ ಮತ್ತು ರಾಜ್ಯ ಎರಡೂ ಕಡೆ ಅಧಿಕಾರದಲ್ಲಿರುವ ಬಿಜೆಪಿಗೆ ಸ್ವಂತ ಬಲದ ಮೇಲೆ ನಂಬಿಕೆ ಇಲ್ಲ. ವಿಧಾನ ಪರಿಷತ್ ಚುನಾವಣೆಯಲ್ಲಿ ಸೋಲಿನ ಭೀತಿಯಿಂದ ಜೆಡಿಎಸ್ ಜತೆ ಹೊಂದಾಣಿಕೆ ಮಾಡಿಕೊಳ್ಳಲು ಹೊರಟಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, 'ಶಿವಮೊಗ್ಗ ಸೇರಿದಂತೆ ಕೆಲವು ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಸೋಲಿನ ಸುಳಿಯಲ್ಲಿದ್ದಾರೆ. ಈ ಕಾರಣದಿಂದ ಜೆಡಿಎಸ್ ಬೆಂಬಲ ಪಡೆಯಲು ಆ ಪಕ್ಷದ ನಾಯಕರು ಯತ್ನಿಸುತ್ತಿದ್ದಾರೆ' ಎಂದರು.

ಕಾಂಗ್ರೆಸ್ ಎಲ್ಲ ಸಂದರ್ಭದಲ್ಲೂ ಬಿಜೆಪಿಯಿಂದ ಅಂತರ ಕಾಯ್ದುಕೊಂಡಿದೆ. ಆದರೆ, ಜೆಡಿಎಸ್ ಜತೆ ವಿಷಯಾಧಾರಿತವಾಗಿ ಹೊಂದಾಣಿಕೆ ಮಾಡಿಕೊಂಡಿದೆ. ಕೆಲವೆಡೆ ವಿರೋಧವನ್ನೂ ಮಾಡಿದೆ. ಕೆಲವೇ ದಿನಗಳ ಹಿಂದೆ ಜೆಡಿಎಸ್ ಪಕ್ಷದ ವಿರುದ್ಧ ವಾಗ್ದಾಳಿ ನಡೆಸಿದ್ದ ಬಿಜೆಪಿ ನಾಯಕರೇ ಈಗ ಆ ಪಕ್ಷದ ಬೆಂಬಲ ಕೋರಲು ಮುಂದಾಗಿದ್ದಾರೆ. ಬಿಜೆಪಿಗೆ ಈ ಪರಿಸ್ಥಿತಿ ಬರಬಾರದಿತ್ತು ಎಂದು ಹೇಳಿದರು.

ಎಚ್‌ಡಿಕೆ ತೀರ್ಮಾನಕ್ಕೆ ಯಡಿಯೂರಪ್ಪ ಸ್ವಾಗತ

ದಾವಣಗೆರೆ: 'ವಿಧಾನಪರಿಷತ್ ಚುನಾವಣೆಯಲ್ಲಿ ಆಯಾ ಜಿಲ್ಲೆಗಳಲ್ಲಿ ಯಾರನ್ನು ಬೆಂಬಲಿಸಬೇಕು ಎಂಬ ನಿರ್ಧಾರವನ್ನು ತಮ್ಮ ಪಕ್ಷದ ಕಾರ್ಯಕರ್ತರಿಗೆ ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ಬಿಟ್ಟಿರುವುದು ಉತ್ತಮ. ಇದನ್ನು ಸ್ವಾಗತಿಸುತ್ತೇನೆ' ಎಂದು ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಹೇಳಿದರು.

'ಕಾಂಗ್ರೆಸ್ ಪ್ರಭಾವ ಹೆಚ್ಚಿರುವ ಕಡೆಗಳಲ್ಲಿ ಜೆಡಿಎಸ್ ಕಾರ್ಯಕರ್ತರು ಬಿಜೆಪಿಯನ್ನು ಬೆಂಬಲಿಸಲಿದ್ದಾರೆ ಎಂಬ ವಿಶ್ವಾಸ ಇದೆ' ಎಂದು ತಿಳಿಸಿದರು.

ಪ್ರಚಾರ ಸಭೆ

ರಾಯಚೂರು ಜಿಲ್ಲೆಯ ಜಾಲಹಳ್ಳಿ ಪಟ್ಟಣದ ಹೊರವಲಯದಲ್ಲಿ ಮಂಗಳವಾರ ನಡೆದ ಕಾಂಗ್ರೆಸ್ ಪ್ರಚಾರ ಸಭೆಯಲ್ಲಿ ಮಾಜಿ ಸಚಿವ ಆಲ್ಕೋಡ್ ಹನುಮಂತಪ್ಪ ಮಾತನಾಡಿದರು –ಪ್ರಜಾವಾಣಿ ಚಿತ್ರ

'ಬೆಂಬಲ: ಸ್ಥಳೀಯ ನಾಯಕರ ವಿವೇಚನೆಗೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್‌ನ 25 ಕ್ಷೇತ್ರಗಳಿಗೆ ನಡೆಯುತ್ತಿರುವ ಚುನಾವಣೆಯಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಅಭ್ಯರ್ಥಿಗಳಿಗೆ ಬೆಂಬಲ ನೀಡುವುದಿಲ್ಲ. ಆದರೆ, ಹೊಂದಾಣಿಕೆ ಅಥವಾ ಬೆಂಬಲ ನೀಡುವ ತೀರ್ಮಾನವನ್ನು ಸ್ಥಳೀಯ ಹಂತದ ನಾಯಕರಿಗೆ ನೀಡಲಾಗಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ತಿಳಿಸಿದರು.



ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಅವರು ಬಿಜೆಪಿ ಅಭ್ಯರ್ಥಿಗಳನ್ನು ಬೆಂಬಲಿಸುವಂತೆ ಮಾಧ್ಯಮಗಳ ಮೂಲಕ ಮನವಿ ಮಾಡಿದ್ದರು. ದೂರವಾಣಿ ಕರೆ ಮಾಡಿಯೂ ನನ್ನೊಂದಿಗೆ ಚರ್ಚಿಸಿದ್ದರು. ಆದರೆ, ಯಾವುದೇ ಪಕ್ಷದ ಜತೆಗೆ ಹೊಂದಾಣಿಕೆ ಮಾಡಿಕೊಳ್ಳದೇ ಇರಲು ನಿರ್ಧರಿಸಲಾಗಿದೆ' ಎಂದರು.

'ನಾನು ಯಾವತ್ತೂ ಯಾವುದೇ ಪಕ್ಷದ ಅಭ್ಯರ್ಥಿಗಳಿಗೆ ಬೆಂಬಲ ನೀಡುವ ಕುರಿತು ಚರ್ಚಿಸಿಲ್ಲ. ಕೆಲವರು ನಮ್ಮ ಹೇಳಿಕೆಗಳನ್ನು ತಮಗೆ ಅನುಕೂಲವಾಗುವ ರೀತಿಯಲ್ಲಿ ಅರ್ಥೈಸಿಕೊಂಡು, ವ್ಯಾಖ್ಯಾನಿಸಿದರು. ಚುನಾವಣೆಯ ಆರಂಭದಲ್ಲೇ ಇಂತಹ ವಿಚಾರಗಳಲ್ಲಿ ನಿರ್ಧಾರಕ್ಕೆ ಬರಲಾಗದು. ಕೊನೆಯ ಹಂತದಲ್ಲೇ ತೀರ್ಮಾನಿಸಬೇಕು. ಅದಕ್ಕಾಗಿ ಈಗ ನಿಲುವನ್ನು ಸ್ಪಷ್ಟಪಡಿಸುತ್ತಿದ್ದೇನೆ' ಎಂದು ತಿಳಿಸಿದರು.

2023ರ ವಿಧಾನಸಭಾ ಚುನಾವಣೆಯೇ ಜೆಡಿಎಸ್‌ನ ಗುರಿ. ಆ ಚುನಾವಣೆಯಲ್ಲಿ 123 ಸ್ಥಾನಗಳನ್ನು ಗಳಿಸುವುದಕ್ಕೆ ಅನುಕೂಲವಾಗುವ ರೀತಿಯಲ್ಲಿ ಪರಿಷತ್ ಚುನಾವಣೆಯಲ್ಲಿ ನಿರ್ಧಾರ ಕೈಗೊಳ್ಳುವಂತೆ ಸ್ಥಳೀಯ ಮುಖಂಡರಿಗೆ ಸೂಚಿಸಲಾಗಿದೆ. 2023ರ ಚುನಾವಣೆಯಲ್ಲಿ ಜೆಡಿಎಸ್‌ಗೆ ಹಿನ್ನಡೆಯಾಗುವ ರೀತಿಯಲ್ಲಿ ವಿಧಾನ ಪರಿಷತ್ ಚುನಾವಣೆಯಲ್ಲಿ ಹೊಂದಾಣಿಕೆ ಮಾಡಿಕೊಳ್ಳಬಾರದು ಎಂಬ ನಿರ್ದೇಶನವನ್ನೂ ನೀಡಲಾಗಿದೆ ಎಂದು ಹೇಳಿದರು.

ಜೆಡಿಎಸ್ ಅಭ್ಯರ್ಥಿಗಳು ಕಣದಲ್ಲಿರುವ ಆರು ಕ್ಷೇತ್ರಗಳಲ್ಲಿ ಮೂರೂ ಪಕ್ಷಗಳ ನಡುವೆ ತ್ರಿಕೋನ ಸ್ಪರ್ಧೆ ಇದೆ. ಇಲ್ಲಿ ಯಾರ ಬೆಂಬಲವನ್ನೂ ಜೆಡಿಎಸ್ ಪಡೆದಿಲ್ಲ. ಚಿಕ್ಕಮಗಳೂರು, ಶಿವಮೊಗ್ಗ, ಚಿತ್ರದುರ್ಗ, ರಾಯಚೂರು, ಕಲಬುರಗಿ, ಯಾದಗಿರಿ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಯಾವುದೇ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸುವ ಶಕ್ತಿ ಜೆಡಿಎಸ್‌ಗೆ ಇದೆ ಎಂದು ಕುಮಾರಸ್ವಾಮಿ ತಿಳಿಸಿದರು.

ಕೆಲವು ಕ್ಷೇತ್ರಗಳಲ್ಲಿ ಕಾಂಗ್ರೆಸ್‌ಗೆ ಮತ್ತು ಕೆಲವು ಕ್ಷೇತ್ರಗಳಲ್ಲಿ ಬಿಜೆಪಿಗೆ ಬೆಂಬಲ ನೀಡುವ ತೀರ್ಮಾನವನ್ನು ಪಕ್ಷದ ಸ್ಥಳೀಯ ಮುಖಂಡರು ಕೈಗೊಂಡಿದ್ದಾರೆ. ಸಿಂಧನೂರು ಶಾಸಕ ವೆಂಕಟರಾವ್ ನಾಡಗೌಡ ತಮ್ಮ ಜತೆ ಚರ್ಚಿಸಿದ ಬಳಿಕವೇ ಕಾಂಗ್ರೆಸ್ ಅಭ್ಯರ್ಥಿಗೆ ಬೆಂಬಲ ಘೋಷಿಸಿದ್ದಾರೆ. ಇದರಲ್ಲಿ ಯಾವುದೇ ರಹಸ್ಯ ಇಲ್ಲ ಎಂದರು.

ಬಿಜೆಪಿಗೆ ಬೆಂಬಲ ಇಲ್ಲ: ದೇವೇಗೌಡ ಸ್ಪಷ್ಟನೆ

ದೇವನಹಳ್ಳಿ: 'ಬಿಜೆಪಿಯೊಂದಿಗೆ ಹೊಂದಾಣಿಕೆ ಮಾಡಿಕೊಂಡಿಲ್ಲ, ಮಾಡಿಕೊಳ್ಳುವುದೂ ಇಲ್ಲ. ಯಾವುದೇ ಕಾರಣಕ್ಕೂ ನಮ್ಮ ಪಕ್ಷದ ಸದಸ್ಯರು ಬಿಜೆಪಿ ಅಭ್ಯರ್ಥಿಗಳಿಗೆ ಮತ ನೀಡದಂತೆ ಸೂಚನೆ ನೀಡಿದ್ದೇನೆ' ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಹೇಳಿದ್ದಾರೆ.

ತಾಲ್ಲೂಕಿನ ಮಾಳಿಗೇನಹಳ್ಳಿ ಕ್ರಾಸ್‌ನಲ್ಲಿ ಮಂಗಳವಾರ ಜೆಡಿಎಸ್ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಜೆಡಿಎಸ್ ಪಕ್ಷವನ್ನು ಸಂಪೂರ್ಣವಾಗಿ ಮುಗಿಸಬೇಕು ಎಂದು ಕಾಯುತ್ತಿರುವವರಿಗೆ 2023ರ ವಿಧಾನಸಭೆ ಹಾಗೂ ಮುಂದಿನ ಲೋಕಸಭೆ ಚುನಾವಣೆಯಲ್ಲಿ ತಕ್ಕ ಉತ್ತರ ನೀಡಲಿದ್ದೇವೆ ಎಂದರು.

ತುಮಕೂರಿನಿಂದಲೇ ಮತ್ತೆ ಲೋಕಸಭೆಗೆ ಸ್ಪರ್ಧೆ: ದೇವೇಗೌಡ

ಪಾವಗಡ (ತುಮಕೂರು): ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಮತ್ತೆ ತುಮಕೂರಿನಿಂದಲೇ ಸ್ಪರ್ಧಿಸುವುದಾಗಿ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಮಂಗಳವಾರ ಘೋಷಿಸಿದ್ದಾರೆ.



ಪಟ್ಟಣದಲ್ಲಿ ಮಂಗಳವಾರ ಜೆಡಿಎಸ್ ಅಭ್ಯರ್ಥಿ ಪರ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, 'ಪಕ್ಷ ಎಂದರೆ ಕೇವಲ ದೇವೇಗೌಡ, ಎಚ್.ಡಿ.ಕುಮಾರಸ್ವಾಮಿ ಅಲ್ಲ. ನಾನು, ನನ್ನ ಮಗ ಮಾತ್ರ ಪಕ್ಷವನ್ನು ಉಳಿಸಲು ಸಾಧ್ಯವಿಲ್ಲ' ಎಂದರು.

'ನನಗೀಗ 89 ವರ್ಷ. ಹೋರಾಟದ ಶಕ್ತಿ ಕುಂದಿಲ್ಲ ಇನ್ನೂ ಚೈತನ್ಯವಿದೆ. ಪಕ್ಷ ಉಳಿಸುವ ಛಲದಿಂದ ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಪ್ರವಾಸ ಮಾಡ್ತೇನೆ. 2023ರ ಚುನಾವಣೆ ನಂತರ ಕುಮಾರಸ್ವಾಮಿ ಮುಖ್ಯಮಂತ್ರಿ ಆಗುತ್ತಾರೋ, ಇಲ್ಲವೋ ಗೊತ್ತಿಲ್ಲ. ಅದು ಅವರ ಹಣೆಬರಹ. ನಾನು ಮಾತ್ರ 2024ರಲ್ಲಿ ಮತ್ತೆ ತುಮಕೂರು ಲೋಕಸಭಾ ಕ್ಷೇತ್ರದಿಂದಲೇ ಚುನಾವಣೆಗೆ ಸ್ಪರ್ಧಿಸುತ್ತೇನೆ' ಎಂದರು.

ಸ್ಪಷ್ಟನೆ

ಮಂಗಳವಾರದ ಸಂಚಿಕೆಯಲ್ಲಿ ಪ್ರಕಟವಾದ ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಚುನಾವಣಾ ಸಮೀಕ್ಷೆ ವರದಿಯಲ್ಲಿ ಬಿಜೆಪಿ ಅಭ್ಯರ್ಥಿ ಬಿ.ಸಿ. ನಾರಾಯಣಸ್ವಾಮಿ ಅವರ ಚಿತ್ರದ ಬದಲಾಗಿ ಮತ್ತೊಬ್ಬರ ಚಿತ್ರ ತಪ್ಪಾಗಿ ಪ್ರಕಟ ಆಗಿತ್ತು. ಇದಕ್ಕಾಗಿ ವಿಷಾದಿಸುತ್ತೇವೆ. ಈ ಚಿತ್ರದಲ್ಲಿ ಇರುವವರು ಬಿಜೆಪಿ ಅಭ್ಯರ್ಥಿ ಬಿ.ಸಿ. ನಾರಾಯಣ ಸ್ವಾಮಿ. – ಸಂ.



ಬಿ.ಸಿ. ನಾರಾಯಣ ಸ್ವಾಮಿ

ನಾಗಾಲ್ಯಾಂಡ್ ನಾಗರಿಕರ ಹತ್ಯೆ ಕುರಿತು ಪೊಲೀಸರ ತನಿಖಾ ವರದಿ ರಾಜ್ಯ ಸರ್ಕಾರಕ್ಕೆ ಸಲ್ಲಿಕೆ

‘ಗುರುತು ಖಚಿತಕ್ಕೆ ಯತ್ನವೇ ಮಾಡದ ಸೈನಿಕರು’

ಕೊಹಿಮಾ (ಪಿಟಿಐ): ‘ಟಿರು–ಒಟಿಂಗ್ ಕಾರ್ಯಾಚರಣೆ ವೇಳೆ ನಾಗರಿಕರ ಗುರುತನ್ನು ಖಚಿತಪಡಿಸಿಕೊಳ್ಳಲು ಸೈನಿಕರು ಯತ್ನವನ್ನೇ ಮಾಡಿಲ್ಲ. ಜತೆಗೆ ತಾವು ನಡೆಸಿದ ಹತ್ಯೆಗಳನ್ನು ಮರೆಮಾಚಲು ನಾಗರಿಕರ ಶವಗಳನ್ನು ಬಚ್ಚಿಡಲು ಯತ್ನಿಸಿದ್ದರು’ ಎಂದು ನಾಗಾಲ್ಯಾಂಡ್ ಪೊಲೀಸರು ತಮ್ಮ ತನಿಖಾ ವರದಿಯಲ್ಲಿ ಆರೋಪಿಸಿದ್ದಾರೆ.

ಟಿರು ಮತ್ತು ಒಟಿಂಗ್‌ನಲ್ಲಿ ಸೈನಿಕರು ಶನಿವಾರ ಮತ್ತು ಭಾನುವಾರ ಗುಂಡು ಹಾರಿಸಿ 14 ನಾಗರಿಕರ ಹತ್ಯೆ ಮಾಡಿದ ಪ್ರಕರಣದ ಬಗ್ಗೆ ಪೊಲೀಸ್ ಮಹಾನಿರ್ದೇಶಕ ಟಿ.ಜಾನ್ ಲೋಂಗ್‌ಕುಮೆರ್ ಮತ್ತು ಪೊಲೀಸ್ ಆಯುಕ್ತ ರೋವಿಲಾಟು ಮೊರ್ ಅವರು ರಾಜ್ಯ ಸರ್ಕಾರಕ್ಕೆ ಸಲ್ಲಿಸಿರುವ ಜಂಟಿ ತನಿಖಾ ವರದಿಯಲ್ಲಿ ಈ ಮಾಹಿತಿ ಇದೆ.

‘ಡಿಸೆಂಬರ್ 4ರ ಸಂಜೆ 4.10ರ ವೇಳೆಯಲ್ಲಿ ಈ ಘಟನೆ ನಡೆದಿದೆ. ಕಲ್ಲಿದ್ದಲು ಗಣಿಯಿಂದ ಮಹೀಂದ್ರಾ ಪಿಕ್‌ಅಪ್ ವಾಹನದಲ್ಲಿ ಬರುತ್ತಿದ್ದ ನಾಗರಿಕರನ್ನು ತಪಾಸಣೆಗೆ ಒಳಪಡಿಸದೇ ಮತ್ತು ಅವರ ಗುರುತನ್ನು ಖಚಿತಪಡಿಸಿಕೊಳ್ಳದೇ ಸೈನಿಕರು ಏಕಾಏಕಿ ಗುಂಡು ಹಾರಿಸಿದ್ದಾರೆ. ಮೃತಪಟ್ಟ ನಾಗರಿಕರೆಲ್ಲರೂ ನಿರಾಯುಧರಾಗಿದ್ದರು’ ಎಂದು ವರದಿಯಲ್ಲಿ ವಿವರಿಸಲಾಗಿದೆ.

‘ಒಟಿಂಗ್ ಗ್ರಾಮದ ಸಮೀಪವೇ ಘಟನೆ ನಡೆದಿದೆ. ಗುಂಡಿನ ಶಬ್ದ ಕೇಳಿಸಿಕೊಂಡ ಗ್ರಾಮಸ್ಥರು ಘಟನಾ ಸ್ಥಳದತ್ತ ತೆರಳಿದ್ದಾರೆ. ಮೊದಲು ಅವರು ತಮ್ಮ ಗ್ರಾಮದ ಮಹೀಂದ್ರಾ ಪಿಕ್‌ಅಪ್ ಟ್ರಕ್ ಅನ್ನು ನೋಡಿದ್ದಾರೆ. ಸಮೀಪವೇ ಬೇರೊಂದು ಟಾಟಾ ಮೊಬೈಲ್ ಪಿಕ್‌ಅಪ್ ವಾಹನದಲ್ಲಿ ಸೈನಿಕರು, ಶವಗಳನ್ನು ಮುಚ್ಚಿಡುತ್ತಿರುವುದನ್ನು ಗಮನಿಸಿದ್ದಾರೆ. ತಮ್ಮ ಗುಂಡಿಗೆ ಬಲಿಯಾದವರ ಶವಗಳನ್ನು ಸೇನಾ ಶಿಬಿರಕ್ಕೆ ತೆಗೆದುಕೊಂಡು ಹೋಗುವ ಸಲುವಾಗಿಯೇ, ಶವಗಳನ್ನು ಟಾರ್ಪಲ್‌ನಲ್ಲಿ ಮುಚ್ಚಿ ಬೇರೊಂದು ವಾಹನಕ್ಕೆ ತುಂಬಿಸಿದ್ದಾರೆ’ ಎಂದು ವರದಿಯಲ್ಲಿ ಆರೋಪಿಸಲಾಗಿದೆ.

‘ಇದನ್ನು ಕಂಡು ಆಕ್ರೋಶಗೊಂಡ ಗ್ರಾಮಸ್ಥರು ಸೇನಾ ವಾಹನಗಳ ಮೇಲೆ ದಾಳಿ ನಡೆಸಿದ್ದಾರೆ. ಸೇನೆಯ ಮೂರು ವಾಹನಗಳಿಗೆ ಬೆಂಕಿ ಹಚ್ಚಿದ್ದಾರೆ. ಆಗ ಸೈನಿಕರು, ನಾಗರಿಕರ ಮೇಲೆ ಮತ್ತೆ ಗುಂಡು ಹಾರಿಸಿದ್ದಾರೆ. ಸೈನಿಕರು ಎರಡನೇ ಬಾರಿ ಗುಂಡು ಹಾರಿಸಿದಾಗ ಏಳು ನಾಗರಿಕರು ಮೃತಪಟ್ಟಿದ್ದಾರೆ. 14 ನಾಗರಿಕರು ಗಂಭೀರವಾಗಿ ಗಾಯಗೊಂಡಿದ್ದಾರೆ. 8 ನಾಗರಿಕರಿಗೆ ಸಾಧಾರಣ ಗಾಯಗಳಾಗಿವೆ. ಸೈನಿಕರು ಗುಂಡು ಹಾರಿಸುತ್ತಲೇ ಅಲ್ಲಿಂದ ಪರಾರಿಯಾಗಿದ್ದಾರೆ. ಪರಾರಿಯಾಗುವ ದಾರಿಯಲ್ಲಿ ಇದ್ದ ಕಲ್ಲಿದ್ದಲು ಗಣಿ ಕಾರ್ಮಿಕರ ಗುಡಿಸಲುಗಳ ಮೇಲೂ ಗುಂಡು ಹಾರಿಸಿದ್ದಾರೆ. ನಂತರ ಸೈನಿಕರು ರಾಜ್ಯದ ಗಡಿದಾಟಿ ಅಸ್ಸಾಂ ಪ್ರವೇಶಿಸಿದ್ದಾರೆ. ಇದನ್ನು ಪ್ರತ್ಯಕ್ಷದರ್ಶಿಗಳು ಖಚಿತಪಡಿಸಿದ್ದಾರೆ’ ಎಂದು ವರದಿಯಲ್ಲಿ ವಿವರಿಸಲಾಗಿದೆ.

‘ಮೃತರ ಶವಗಳನ್ನು ಭಾನುವಾರ ಬೆಳಿಗ್ಗೆ ಕುಟುಂದವರಿಗೆ ಹಸ್ತಾಂತರಿಸಲು ಯೋಜಿಸಲಾಗಿತ್ತು. ಆದರೆ ಅದನ್ನು ಮುಂದೂಡಲಾಯಿತು. ಇದರಿಂದ ಆಕ್ರೋಶಗೊಂಡ ನಾಗರಿಕರು ಸಮೀಪದಲ್ಲೇ ಇದ್ದ ‘27 ಅಸ್ಸಾಂ ರೈಫಲ್ಸ್’ನ ಶಿಬಿರದತ್ತ ನುಗ್ಗಿದ್ದರು. ಶಿಬಿರದ ಕಟ್ಟಡಗಳಿಗೆ ಬೆಂಕಿ ಇಟ್ಟರು. ಆಗ ಸೈನಿಕರು ಮತ್ತೆ ಗುಂಡು ಹಾರಿಸಿದರು. ಆ ಘಟನೆಯಲ್ಲಿ ಮತ್ತೊಬ್ಬ ನಾಗರಿಕ ಸೈನಿಕರ ಗುಂಡಿಗೆ ಬಲಿಯಾದರು. ಆರು ನಾಗರಿಕರಿಗೆ ಗುಂಡೇಟಿನ ಗಾಯಗಳಾಗಿವೆ. ಘರ್ಷಣೆಯಲ್ಲಿ ಒಬ್ಬ ಸೈನಿಕ ಮೃತಪಟ್ಟಿದ್ದಾರೆ’ ಎಂದು ವರದಿಯಲ್ಲಿ ವಿವರಿಸಲಾಗಿದೆ.

ತನಿಖೆಗೆ ಮೇಜರ್ ಜನರಲ್ ರ‍್ಯಾಂಕ್‌ನ ಅಧಿಕಾರಿ: ಈ ಅವಘಡ ಕುರಿತು ಆಂತರಿಕ ತನಿಖೆ ನಡೆಸಲು ಸೇನೆ ಭಾನುವಾರವೇ ಆದೇಶಿಸಿದೆ. ತನಿಖೆಯು ಮೇಜರ್ ಜನರಲ್ ರ‍್ಯಾಂಕ್‌ನ ಅಧಿಕಾರಿಯ ನೇತೃತ್ವದಲ್ಲಿ ನಡೆಯಲಿದೆ ಎಂದು ಸೇನೆಯ ಮೂಲಗಳು ಮಂಗಳವಾರ ಹೇಳಿದೆ.

ಗುಂಡಿಗೆ ಬಲಿಯಾಗಿದ್ದ ನಾಗರಿಕರ ಅಂತ್ಯಸಂಸ್ಕಾರವು ಸೋಮವಾರ ತಡರಾತ್ರಿ ಸಾಮೂಹಿಕವಾಗಿ ನಡೆಯಿತು –ಪಿಟಿಐ ಚಿತ್ರ

- ಸಶಸ್ತ್ರ ಪಡೆಗಳ (ವಿಶೇಷ ಅಧಿಕಾರ) ಕಾಯ್ದೆ–1958 ಅನ್ನು ರದ್ದುಪಡಿಸಿ ಎಂದು ಆಗ್ರಹಿಸಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲು ನಾಗಾಲ್ಯಾಂಡ್ ಸರ್ಕಾರವು ಸಂಪುಟ ಸಭೆಯಲ್ಲಿ ನಿರ್ಧರಿಸಿದೆ
- ಡಿಸೆಂಬರ್ 10ರವರೆಗೆ ನಡೆಯಬೇಕಿದ್ದ ಹಾರ್ನ್‌ಬಿಲ್ ಉತ್ಸವವನ್ನು ಸ್ಥಗಿತಗೊಳಿಸಿ ರಾಜ್ಯ ಸರ್ಕಾರವು ಆದೇಶಿಸಿದೆ. ಉತ್ಸವದಲ್ಲಿ ಭಾಗಿಯಾಗಬೇಕಿದ್ದ ವಿವಿಧ ಬುಡಕಟ್ಟು ಸಮುದಾಯಗಳು ಈ ಮೊದಲೇ ಉತ್ಸವವನ್ನು ಬಹಿಷ್ಕರಿಸಿದ್ದವು
- ಸೈನಿಕರ ಗುಂಡಿಗೆ ಬಲಿಯಾಗಿದ್ದ ನಾಗರಿಕರ ಅಂತ್ಯಸಂಸ್ಕಾರವು ಸೋಮವಾರ ತಡರಾತ್ರಿ ನಡೆದಿದೆ. ಶವಸಂಸ್ಕಾರದ ವೇಳೆ ಮೃತರ ಕುಟುಂಬದ ಸದಸ್ಯರ ಆಕ್ರಂದನದ ದೃಶ್ಯಗಳಿರುವ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ
- ‘ಈ ಅವಘಡದ ಬಗ್ಗೆ ಆರು ವಾರಗಳ ಒಳಗೆ ವಿಸ್ತೃತ ವರದಿ ನೀಡಿ’ ಎಂದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ರಕ್ಷಣಾ ಸಚಿವಾಲಯ, ಗೃಹ ಸಚಿವಾಲಯ ಮತ್ತು ನಾಗಾಲ್ಯಾಂಡ್ ಮುಖ್ಯ ಕಾರ್ಯದರ್ಶಿಗೆ ನೋಟಿಸ್ ಜಾರಿ ಮಾಡಿದೆ

ಇದು ಅತ್ಯಂತ ಹೇಯಕೃತ್ಯ. ಇಂತಹ ಅಮಾನವೀಯ ಕೃತ್ಯವನ್ನು ಯಾವುದೋ ಕಾರಣ ನೀಡಿ ಸಮರ್ಥಿಸಿಕೊಳ್ಳುವುದು ನ್ಯಾಯವಲ್ಲ
ಕೊನ್ಯಾಕ್ ಸಂಘಟನೆ

‘ಏಳು ದಿನ ಗಸ್ತು ತಿರುಗಬೇಡಿ’

ಮೊನ್ ಜಿಲ್ಲೆಯಲ್ಲಿ ಏಳು ದಿನಗಳ ಶೋಕಾಚರಣೆಗೆ ಕೊನ್ಯಾಕ್ ಸಂಘಟನೆ ಕರೆ ನೀಡಿದೆ. ಸೈನಿಕರ ಗುಂಡಿಗೆ ಬಲಿಯಾದ ನಾಗರಿಕರು ಕೊನ್ಯಾಕ್ ಬುಡಕಟ್ಟಿಗೆ ಸೇರಿದವರಾಗಿದ್ದಾರೆ.

ಸಂಘಟನೆಯು ಮಂಗಳವಾರ ರಾಜ್ಯ ಬಂದ್‌ಗೆ ಕರೆ ನೀಡಿತ್ತು. ಬಂದ್ ಅನ್ನು ಶಾಂತಿಯುತವಾಗಿ ಆಚರಿಸಲಾಯಿತು. ಬುಧವಾರದಿಂದ ಏಳು ದಿನ ಶೋಕಾಚರಣೆಗೆ ಕರೆ ನೀಡಿದೆ. ‘ಶೋಕಾಚರಣೆಯ ಏಳೂ ದಿನಗಳಲ್ಲಿ ಕೊನ್ಯಾಕ್ ಪ್ರದೇಶದಲ್ಲಿ ಸೈನಿಕರು ಗಸ್ತು ನಡೆಸಬಾರದು. ಒಂದು ವೇಳೆ ಗಸ್ತು ನಡೆಸಲು ಮುಂದಾಗಿ, ಯಾವುದೇ ಅಹಿತಕರ ಘಟನೆಗಳು ನಡೆದರೆ ಸೈನಿಕರೇ ಅದಕ್ಕೆ ಹೊಣೆ’ ಎಂದು ಸಂಘಟನೆಯು ಎಚ್ಚರಿಕೆ ನೀಡಿದೆ.

ರಾಷ್ಟ್ರಪತಿಗೆ ಪತ್ರ: ‘ಸೈನಿಕರು ನಡೆಸಿದ ಹತ್ಯಾಕಾಂಡದ ತನಿಖೆಗೆ ವಿಶೇಷ ತನಿಖಾ ತಂಡವನ್ನು ರಚನೆಮಾಡಿ. ಈ ಕೃತ್ಯದಲ್ಲಿ ಭಾಗಿಯಾದ ಸೈನಿಕರನ್ನು ಗುರುತಿಸಿ ಮತ್ತು ಅವರ ವಿರುದ್ಧ ತೆಗೆದುಕೊಂಡ ಕ್ರಮವನ್ನು ಬಹಿರಂಗಪಡಿಸಿ’ ಎಂದು ಒತ್ತಾಯಿಸಿ ಕೊನ್ಯಾಕ್ ಸಂಘಟನೆಯು ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರಿಗೆ ಪತ್ರ ಬರೆದಿದೆ.

‘ಆಫ್‌ಸ್ಪ ಕಾಯ್ದೆಯನ್ನು ತಕ್ಷಣವೇ ರದ್ದುಮಾಡಿ. ನಾಗಾಲ್ಯಾಂಡ್‌ನಿಂದ ಸೇನೆಯ ಅಸ್ಸಾಂ ರೈಫಲ್ಸ್ ಬೆಟಾಲಿಯನ್ ಅನ್ನು ವಾಪಸ್ ಕರೆಸಿಕೊಳ್ಳಿ’ ಎಂದು ಪತ್ರದಲ್ಲಿ ಆಗ್ರಹಿಸಲಾಗಿದೆ.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಗ್ರೀನ್ ಟಾಕ್
ಕೆರೆ ಕಲ್ಮಶಕ್ಕೆ ನೈಸರ್ಗಿಕ ಚಿಕಿತ್ಸೆ
https://bit.ly/3ECJE8D

ಪ್ರಜಾವಾಣಿ ಕನ್ನಡ ಧ್ವನಿ
ಪಾಡ್‌ಕಾಸ್ಟ್: ದಿನದ ವಿಶೇಷ: ಸಂಜೆ 4 **ಝಣ ಝಣ ಕಾಂಚಾಣ**, ಬೆಳಿಗ್ಗೆ 7 **ವಚನವಾಣಿ**, ಬೆಳಿಗ್ಗೆ 7.30 **ದಿನದ ಸೂಕ್ತಿ** , ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 **ಪ್ರಜಾವಾಣಿ ವಾರ್ತೆ ಬುಲೆಟಿನ್**, ಬೆಳಿಗ್ಗೆ 9 **ಪ್ರಚಲಿತ**, ಬೆಳಿಗ್ಗೆ 9.30 **ಸಂಪಾದಕೀಯ**

ನಾಳೆ

ಕೋವಿಡ್ ಭಯದಲ್ಲಿ ಶಾಲೆ ಬಂದ್ ಸರಿಯೇ?
ಭಾಗವಹಿಸುವವರು:
ವಿ.ಪಿ.ನಿರಂಜನಾರಾಧ್ಯ, ಶಿಕ್ಷಣ ತಜ್ಞ, ಅಂಕಣಕಾರ
ಡಾ.ಯೋಗಾನಂದ ರೆಡ್ಡಿ ವೈ.ಸಿ, ಸದಸ್ಯ, ಕೋವಿಡ್ ತಜ್ಞರ ಸಮಿತಿ
ನಾಗಮಣಿ ಸಿ.ಎನ್, ಯೋಜನಾ ಸಂಯೋಜಕಿ, ಮಕ್ಕಳ ಹಕ್ಕು ಟ್ರಸ್ಟ್
ಸಂವಾದ
ಸಂಜೆ 3 ರಿಂದ 4

ಓಮೈಕ್ರಾನ್: ವೈದ್ಯರಿಗೆ ಸೋಂಕು

ಬೆಂಗಳೂರು: ಕೊರೊನಾ ವೈರಾಣುವಿನ ರೂಪಾಂತರಿ ಓಮೈಕ್ರಾನ್‌ನಿಂದ ಚೇತರಿಸಿಕೊಂಡಿದ್ದ 46 ವರ್ಷದ ವೈದ್ಯರಲ್ಲಿ ಮತ್ತೆ ಕೊರೊನಾ ಸೋಂಕು ಕಾಣಿಸಿಕೊಂಡಿದೆ.

ವೈರಾಣುವಿನ ವಂಶವಾಹಿ ಸಂರಚನಾ ವಿಶ್ಲೇಷಣೆಯಿಂದ (ಜೀನೋಮ್ ಸೀಕ್ವೆನ್ಸಿಂಗ್) ಅವರಿಗೆ ಹೊಸ ತಳಿಯ ಕೊರೊನಾ ವೈರಾಣು ತಗುಲಿರುವುದು ಕಳೆದ ಗುರುವಾರ ದೃಢಪಟ್ಟಿತ್ತು. ದೇಶದಲ್ಲಿ ವರದಿಯಾದ ಮೊದಲ ಓಮೈಕ್ರಾನ್ ಪ್ರಕರಣವೂ ಇದಾಗಿತ್ತು. ಅವರು ಇಲ್ಲಿನ ಬೌರಿಂಗ್ ಆಸ್ಪತ್ರೆಯಲ್ಲಿ ಪ್ರತ್ಯೇಕವಾಸಕ್ಕೆ ಒಳಗಾಗಿದ್ದರು. ಪೂರ್ಣ ಪ್ರಮಾಣದಲ್ಲಿ ಚೇತರಿಕೆ ಹೊಂದಿದ್ದರಿಂದ ಮನೆಗೆ ಕಳುಹಿಸಲು ಕೋವಿಡ್ ಆರ್‌ಟಿ–ಪಿಸಿಆರ್ ಪರೀಕ್ಷೆಯನ್ನು ಸೋಮವಾರ ನಡೆಸಲಾಗಿತ್ತು. ಮಂಗಳವಾರ ಪರೀಕ್ಷಾ ವರದಿ ಬಂದಿದ್ದು, ಅವರಲ್ಲಿ ಮತ್ತೆ ಕೊರೊನಾ ಸೋಂಕು ಕಾಣಿಸಿಕೊಂಡಿದೆ.

‘ವೈದ್ಯರ ಪ್ರತ್ಯೇಕವಾಸದ ಅವಧಿ ಮುಗಿದಿದ್ದರಿಂದ ಆರ್‌ಟಿ–ಪಿಸಿಆರ್ ಪರೀಕ್ಷೆ ನಡೆಸಲಾಗಿತ್ತು. ಅವರಲ್ಲಿ ಕೊರೊನಾ ಸೋಂಕು ಇನ್ನೂ ಸಕ್ರಿಯವಾಗಿ ಇರುವುದು ಪರೀಕ್ಷೆಯಿಂದ ದೃಢಪಟ್ಟಿದೆ. ಅವರು ಆರೋಗ್ಯವಾಗಿದ್ದು, ರೋಗ ಲಕ್ಷಣವಿಲ್ಲ. ಅವರ ಸಂಪರ್ಕಿತರ ವೈರಾಣುವಿನ ವಂಶವಾಹಿ ಸಂರಚನಾ ವಿಶ್ಲೇಷಣೆ ವರದಿ ಇನ್ನೂ ಬಂದಿಲ್ಲ. ಬುಧವಾರ ಬರುವ ಸಾಧ್ಯತೆ ಇದೆ’ ಎಂದು ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ ಡಾ. ಬಾಲಸುಂದರ್ ‘ಪ್ರಜಾವಾಣಿ’ಗೆ ತಿಳಿಸಿದರು.

ದುಬೈನಿಂದ ಬಂದ ವ್ಯಕ್ತಿಗೆ ಕೋವಿಡ್;ಮಾದರಿ ರವಾನೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ದುಬೈನಿಂದ ಕಲಬುರಗಿಗೆ ಬಂದ 34 ವರ್ಷದ ವ್ಯಕ್ತಿಯೊಬ್ಬರಲ್ಲಿ ಡಿ. 3ರಂದು ಕೋವಿಡ್ ದೃಢಪಟ್ಟಿದ್ದು, ಜಿನೋಮ್ ಸೀಕ್ವೆನ್ಸಿಂಗ್ (ಓಮೈಕ್ರಾನ್) ಪರೀಕ್ಷೆಗಾಗಿ ಅವರ ಗಂಟಲು ದ್ರವ ಮಾದರಿಯನ್ನು ಸೋಮವಾರ ಬೆಂಗಳೂರಿನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ.

ಕೆಲವು ವರ್ಷಗಳಿಂದ ದುಬೈನಲ್ಲಿದ್ದ ಈ ವ್ಯಕ್ತಿ ಅಲ್ಲಿಂದ ಹೈದರಾಬಾದ್ ವಿಮಾನ ನಿಲ್ದಾಣಕ್ಕೆ ಬಂದಿಳಿದಿದ್ದರು. ಬಾಡಿಗೆ ವಾಹನದಲ್ಲಿ ಕಲಬುರಗಿಗೆ ಬಂದಿದ್ದ ಅವರ ಗಂಟಲು ದ್ರವ ಮಾದರಿಯನ್ನು ಇಲ್ಲಿನ ಯುನೈಟೆಡ್ ಆಸ್ಪತ್ರೆಯಲ್ಲಿರುವ ಪ್ರಯೋಗಾಲಯದಲ್ಲಿ ತಪಾಸಣೆ ಮಾಡಿದಾಗ ಕೋವಿಡ್ ದೃಢಪಟ್ಟಿದೆ. ಅವರಲ್ಲಿ ಯಾವುದೇ ತರಹದ ರೋಗ ಲಕ್ಷಣಗಳು ಕಂಡುಬಂದಿಲ್ಲ. ಆದರೂ ಜಿಮ್ಸ್ ವೈದ್ಯರು ಚಿಕಿತ್ಸೆ ನೀಡಿ, ನಗರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ದಾಖಲಿಸಿದ್ದಾರೆ.

‘ವಿದೇಶದಿಂದ ಬಂದ ಯಾವುದೇ ವ್ಯಕ್ತಿಯಲ್ಲಿ ಸೋಂಕು ದೃಢಪಟ್ಟರೆ ಅವರ ಮಾದರಿಯನ್ನು ಮರುಪರೀಕ್ಷೆಗಾಗಿ ಬೆಂಗಳೂರಿನ ಪ್ರಯೋಗಾಲಯಕ್ಕೆ ಕಳುಹಿಸಬೇಕು ಎಂಬ ನಿರ್ದೇಶನವಿದೆ. ಹೀಗಾಗಿ, ಈ ವ್ಯಕ್ತಿಯ ಗಂಟಲು ದ್ರವವನ್ನೂ ಕಳುಹಿಸಲಾಗಿದೆ. 2 ದಿನದಲ್ಲಿ ವರದಿ ಬರಲಿದೆ’ ಎಂದು ಜಿಮ್ಸ್ ನಿರ್ದೇಶಕಿ ಡಾ.ಕವಿತಾ ಪಾಟೀಲ ಹೇಳಿದರು.

‘ವಿವಿಧ ದೇಶಗಳಿಂದ ಒಂದು ತಿಂಗಳಲ್ಲಿ 25 ಮಂದಿ ಕಲಬುರಗಿ ನಗರಕ್ಕೆ ಬಂದಿದ್ದಾರೆ. ಅವರಿಗೆಲ್ಲ ಕೋವಿಡ್ ತಪಾಸಣೆ ಮಾಡಲಾಗಿದೆ. ಸೋಂಕಿತರ ಸಂಪರ್ಕಕ್ಕೆ ಬಂದವರಿಗೆ ಹೋಂ ಕ್ವಾರಂಟೈನ್ ಮಾಡಲಾಗಿದೆ’ ಎಂದು ಜಿಲ್ಲಾಧಿಕಾರಿ ವಿ.ವಿ.ಜ್ಯೋತ್ಸ್ನಾ ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

18 ವಿದ್ಯಾರ್ಥಿಗಳಲ್ಲಿ ಸೋಂಕು

ಹಾಸನ: ಚನ್ನರಾಯಪಟ್ಟಣ ತಾಲ್ಲೂಕಿನ ಗೂರಮಾರನಹಳ್ಳಿ ಗ್ರಾಮದ ಬಳಿಯಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯ 14 ವಿದ್ಯಾರ್ಥಿಗಳು ಹಾಗೂ ಸಕಲೇಶಪುರ ಪಟ್ಟಣದ ಸರ್ಕಾರಿ ಪದವಿಪೂರ್ವ ಕಾಲೇಜಿನ ನಾಲ್ವರು ವಿದ್ಯಾರ್ಥಿಗಳಿಗೆ ಕೋವಿಡ್– 19 ದೃಢಪಟ್ಟಿರುವುದರಿಂದ ಸಮೀಪದ ಕೋವಿಡ್ ಆರೈಕೆ ಕೇಂದ್ರದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಪ್ರಾಥಮಿಕ ಸಂಪರ್ಕಿತರಿಗೆ ಪ್ರತ್ಯೇಕ ಕೊಠಡಿಯಲ್ಲಿ ಐಸೋಲೇಷನ್ ವ್ಯವಸ್ಥೆ ಮಾಡಲಾಗಿದೆ. ಎಲ್ಲರೂ ಗುಣಮುಖರಾಗುತ್ತಿದ್ದಾರೆ. ವಿದ್ಯಾರ್ಥಿಗಳ ಗಂಟಲು ದ್ರವ ಮಾದರಿ ಅನ್ನು ಜಿನೋಮ್ ಸೀಕ್ವೆನ್ಸಿಂಗ್‌ಗಾಗಿ ಪ್ರಯೋಗಾಲಯಕ್ಕೆ ಕಳುಸಿದ್ದು, ವರದಿ ಇನ್ನೂ ಬಂದಿಲ್ಲ. ನ. 27ರಂದು ಪರೀಕ್ಷೆಗೆ ಒಳಪಡಿಸಲಾಗಿತ್ತು.

ಓಮೈಕ್ರಾನ್: ಸಿ.ಎಂ ಸಭೆ ಇಂದು

ಒಂದನೇ ಪುಟದಿಂದ...

ಸಮಿತಿ ಸದಸ್ಯರು: ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್, ರಾಜೀವ್ ಗಾಂಧಿ ಎದೆ ರೋಗಗಳ ಸಂಸ್ಥೆಯ ನಿರ್ದೇಶಕ ಡಾ.ಸಿ. ನಾಗರಾಜ್, ಫೋರ್ಟಿಸ್ ಆಸ್ಪತ್ರೆಯ ಡಾ.ಕೆ.ಎನ್. ರಮೇಶ್, ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜಿನ ಡೀನ್ ಡಾ. ಜಾರ್ಜ್ ಡಿಸೋಜ, ವಿಕ್ರಮ್ ಆಸ್ಪತ್ರೆಯ ಶ್ವಾಸಕೋಶ ತಜ್ಞ ಡಾ.ಕೆ.ಎಸ್. ಸತೀಶ್, ತುಮಕೂರಿನ ಸಿದ್ಧಾರ್ಥ ವೈದ್ಯಕೀಯ ಕಾಲೇಜಿನ ಕುಲಪತಿ ಡಾ. ಬಾಲಕೃಷ್ಣಶೆಟ್ಟಿ, ನಿಮ್ಹಾನ್ಸ್‌ನ ವೈದ್ಯಕೀಯ ಅಧೀಕ್ಷಕ ಡಾ.ಬದ್ರಿನಾರಾಯಣ, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಪ್ರಾಧ್ಯಾಪಕ ಡಾ. ಶಶಿಭೂಷಣ್ ಬಿ.ಎಲ್., ಕೊಲಂಬಿಯಾ ಏಷ್ಯಾ ಆಸ್ಪತ್ರೆಯ ವೈದ್ಯ ಡಾ. ಪ್ರದೀಪ್ ರಂಗಪ್ಪ, ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜಿನ ಪ್ರಾಧ್ಯಾಪಕ ಡಾ.ಕೆ.ಎಸ್. ಚಂದ್ರಮೌಳಿ, ಅಪೋಲೊ ಆಸ್ಪತ್ರೆಯ ಶ್ವಾಸಕೋಶ ತಜ್ಞ ಡಾ. ರವೀಂದ್ರ ಮೆಹ್ತಾ, ಮಣಿಪಾಲ್ ಆಸ್ಪತ್ರೆಯ ಡಾ. ಸುನೀಲ್ ಕಾರಂತ್, ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆಯ ಡಾ. ಬಸವರಾಜ್, ಬಿಎಂಸಿಆರ್‌ಐ ವೈದ್ಯೆ ಡಾ. ಸವಿತಾ ಹಾಗೂ ಮಣಿಪಾಲ್ ಆಸ್ಪತ್ರೆಯ ಡಾ. ಸಂಪತ್ ಸದಸ್ಯರಾಗಿದ್ದಾರೆ.

2 ದಿನಗಳಲ್ಲಿ ಶಾಲೆ–ಕಾಲೇಜಿಗೆ ಪ್ರತ್ಯೇಕ ಮಾರ್ಗಸೂಚಿ

ರಾಜ್ಯದಲ್ಲಿರುವ ಶಾಲೆ ಹಾಗೂ ಕಾಲೇಜುಗಳಲ್ಲಿ ಕೋವಿಡ್ ಹರಡುವಿಕೆ ತಡೆಯುವ ಉದ್ದೇಶದಿಂದ ಮುಂದಿನ ಎರಡು ದಿನಗಳಲ್ಲಿ ಪ್ರತ್ಯೇಕ ಮಾರ್ಗಸೂಚಿ ಹೊರಡಿಸುವ ಸಾಧ್ಯತೆ ಇದೆ.

‘ಶಾಲೆಗಳಿಗೆ ಪ್ರತ್ಯೇಕ ಮಾರ್ಗಸೂಚಿ ಹೊರಡಿಸುವಂತೆ ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ಪತ್ರ ಬರೆದಿದ್ದೇನೆ. ಇದೇ 9ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಜ್ಞರ ಜೊತೆ ಸಭೆ ನಡೆಸಲಿದ್ದಾರೆ. ಅಲ್ಲಿ ಈ ಬಗ್ಗೆ ವಿಶೇಷವಾಗಿ ಚರ್ಚಿಸಲಾಗುತ್ತದೆ’ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಮಂಗಳವಾರ ಹೇಳಿದ್ದಾರೆ.

‘ಸಚಿವರು ಬರೆದಿರುವ ಪತ್ರ ಕೈಸೇರಿದೆ. ಅದನ್ನು ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಮುಂದೆ ಇಡಲಾಗುತ್ತದೆ. ಹೊಸ ಮಾರ್ಗಸೂಚಿ ಸಿದ್ಧಪಡಿಸಿ ಮುಂದಿನ ಎರಡು ದಿನಗಳಲ್ಲಿ ಅದನ್ನು ಬಿಡುಗಡೆ ಮಾಡಲಾಗುತ್ತದೆ’ ಎಂದು ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಟಿ.ಕೆ.ಅನಿಲ್‌ಕುಮಾರ್ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಖಾಸಗಿ ಶಾಲಾ ಆಡಳಿತ ಮಂಡಳಿಗಳ ಒಕ್ಕೂಟದ (ಕ್ಯಾಮ್ಸ್) ಪ್ರಧಾನ ಕಾರ್ಯದರ್ಶಿ ಡಿ.ಶಶಿಕುಮಾರ್, ‘ಎಲ್ಲಾ ಸುರಕ್ಷತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿದೆ. ಹೀಗಿದ್ದರೂ ವಿದ್ಯಾರ್ಥಿಗಳಿಗೆ ಸೋಂಕು ತಗುಲುತ್ತಿರುವುದು ಶಾಲೆ ಹಾಗೂ ಕಾಲೇಜು ಆಡಳಿತ ಮಂಡಳಿಗಳನ್ನು ಚಿಂತೆಗೀಡು ಮಾಡಿದೆ’ ಎಂದಿದ್ದಾರೆ.

ಪಿಯು ಕಾಲೇಜುಗಳಲ್ಲಿ 27 ಪ್ರಕರಣ: ರಾಜ್ಯದ ಪದವಿಪೂರ್ವ ಕಾಲೇಜುಗಳಲ್ಲಿ ಹಿಂದಿನ 10 ದಿನಗಳಲ್ಲಿ 27 ಕೋವಿಡ್ ಪ್ರಕರಣಗಳು ಪತ್ತೆಯಾಗಿವೆ. ಇದರಲ್ಲಿ 21 ಮಂದಿ ವಿದ್ಯಾರ್ಥಿಗಳು ಸೇರಿದ್ದಾರೆ.

‘ಕಾಂಗ್ರೆಸ್ ಇಲ್ಲದ ವಿಪಕ್ಷಗಳ ಒಕ್ಕೂಟ ಸಾಧ್ಯವಿಲ್ಲ’

ನವದೆಹಲಿ: ‘ದೇಶದಲ್ಲಿ ಬಿಜೆಪಿಗೆ ವಿರುದ್ಧವಾಗಿ, ವಿರೋಧ ಪಕ್ಷಗಳ ಒಂದು ಒಕ್ಕೂಟ ಮಾತ್ರ ಇರಬೇಕು. ಆದರೆ ಕಾಂಗ್ರೆಸ್ ಇಲ್ಲದ ವಿರೋಧ ಪಕ್ಷಗಳ ಒಕ್ಕೂಟ ಸಾಧ್ಯವಿಲ್ಲ’ ಎಂದು ಶಿವಸೇನಾ ವಕ್ತಾರ ಸಂಜಯ್ ರಾವುತ್ ಹೇಳಿದ್ದಾರೆ.

ಯುಪಿಎ ಎಲ್ಲಿದೆ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮತ್ತು ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ನೀಡಿದ್ದ ಹೇಳಿಕೆಯನ್ನು ಶಿವಸೇನಾ ಈ ಮೂಲಕ ನಿರಾಕರಿಸಿದೆ. ರಾಹುಲ್ ಗಾಂಧಿ ಅವರನ್ನು ಮಂಗಳವಾರ ಇಲ್ಲಿ ಭೇಟಿ ಮಾಡಿ ಮಾತುಕತೆ ನಡೆಸಿದ ನಂತರ ರಾವುತ್ ಈ ಮಾತು ಹೇಳಿದ್ದಾರೆ.

‘ಕಾಂಗ್ರೆಸ್ ಇಲ್ಲದ ವಿರೋಧ ಪಕ್ಷಗಳ ಒಕ್ಕೂಟ ರಚನೆ ಸಾಧ್ಯವಿಲ್ಲ. ಆದರೆ ಒಕ್ಕೂಟವನ್ನು ಯಾರು ಮುನ್ನಡೆಸಬೇಕು ಎಂಬುದನ್ನು ಎಲ್ಲಾ ವಿರೋಧ ಪಕ್ಷಗಳು ಚರ್ಚಿಸಿ ನಿರ್ಧರಿಸಬೇಕು’ ಎಂದು ಅವರು ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗೆ ಉತ್ತರಿಸಿದ್ದಾರೆ.

ಯುಪಿಎಗೆ ಶಿವಸೇನಾ ಸೇರುತ್ತದೆಯೇ ಎಂದು ಕೇಳಲಾದ ಪ್ರಶ್ನೆಗೆ, ‘ನಾವು ಈಗಾಗಲೇ ಕಾಂಗ್ರೆಸ್ ಜತೆಗೆ ಮೈತ್ರಿ ಮಾಡಿಕೊಂಡು ಸರ್ಕಾರ ನಡೆಸುತ್ತಿದ್ದೇವೆ. ಸಭೆಯಲ್ಲಿ ಏನು ಮಾತನಾಡಿದೆವು ಎಂಬುದರ ಬಗ್ಗೆ ಪಕ್ಷದ ಮುಖ್ಯಸ್ಥರಾದ ಉದ್ಧವ್ ಠಾಕ್ರೆ ಅವರ ಬಳಿ ಚರ್ಚಿಸಿ, ನಂತರ ನಿಮಗೆ ತಿಳಿಸುತ್ತೇನೆ. ರಾಹುಲ್ ಗಾಂಧಿ ಮುಂಬೈಗೆ ಶೀಘ್ರವೇ ಭೇಟಿ ನೀಡಲಿದ್ದಾರೆ’ ಎಂದು ಹೇಳಿದರು.

150 ದಿನಗಳ ನಂತರ ರೋಗಿ ಗುಣಮುಖ

ಕೊಪ್ಪಳ: ಕೋವಿಡ್ ಸೋಂಕಿತ 46 ವರ್ಷದ ಮಹಿಳೆಯೊಬ್ಬರು ಇಲ್ಲಿನ ಜಿಲ್ಲಾ ಸರ್ಕಾರಿ ಕೋವಿಡ್ ಆಸ್ಪತ್ರೆಯಲ್ಲಿ 150 ದಿನಗಳ ಚಿಕಿತ್ಸೆಯ ನಂತರ ಗುಣಮುಖರಾಗಿ ಮಂಗಳವಾರ ಮನೆಗೆ ಮರಳಿದರು.

ಯ ಲ ಬು ರ್ಗಾ ತಾ ಲ್ಲೂ ಕಿ ನ ಈ ಮಹಿಳೆಗೆ 104 ದಿನಗಳ ಕಾಲ ನಿರಂತರವಾಗಿ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಚಿಕಿತ್ಸೆ ನೀಡಲಾಗಿತ್ತು.

ಕೊಪ್ಪಳ ವೈದ್ಯಕೀಯ ಕಾಲೇಜಿನ ಸೂಪರಿಟೆಂಡೆಂಟ್ ಡಾ.ವೇಣುಗೋಪಾಲ ನೇತೃತ್ವದ ವೈದ್ಯರ ತಂಡದವರು ಇವರಿಗೆ ಚಿಕಿತ್ಸೆ ನೀಡಿದರು.

‘ಕೋವಿಡ್ ತಗುಲಿದ ನಂತರ ಅವರ ಶ್ವಾಸಕೋಶ ಶೇ 90ರಷ್ಟು ಹಾಳಾಗಿತ್ತು. ಇತರ ಕಾಯಿಲೆಗಳು ಕೂಡಾ ಕಾಣಿಸಿಕೊಂಡು ಅವರ ಆರೋಗ್ಯ ಸ್ಥಿತಿ ವಿಷಮಿಸಿತ್ತು’ ಎಂದು ಡಾ.ವೇಣುಗೋಪಾಲ ಹೇಳಿದರು.

4.5 ಲಕ್ಷ ರೈತರಿಗೆ ₹330 ಕೋಟಿ ಪರಿಹಾರ

ಒಂದನೇ ಪುಟದಿಂದ...

ಅಲ್ಲದೆ, ನಗರ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ವಿರೋಧಪಕ್ಷಗಳು ಬೆಳೆ ನಷ್ಟ ಪರಿಹಾರ ವಿತರಣೆ, ಕೋವಿಡ್‌ನಿಂದ ಮೃತಪಟ್ಟವರಿಗೆ ಪರಿಹಾರ ನೀಡಿಲ್ಲ ಎಂಬ ವಿಷಯವನ್ನೇ ಪ್ರಧಾನವಾಗಿ ಎತ್ತಿಕೊಳ್ಳುವ ಸಾಧ್ಯತೆ ಇರುವುದರಿಂದ, ಪರಿಹಾರ ವಿತರಣೆ ಚುರುಕುಗೊಳಿಸಲಾಗಿದೆ ಎಂದು ಮೂಲಗಳು ಹೇಳಿವೆ.

‘ಹಿಂದೆಲ್ಲ ಪರಿಹಾರ ಪಡೆಯಲು ರೈತರು ತಿಂಗಳುಗಟ್ಟಲೆ ಕಾಯಬೇಕಾಗಿತ್ತು. ಈ ವಿಳಂಬವನ್ನು ತಪ್ಪಿಸಲು ಬೆಳೆ ಹಾನಿಯ ಪರಿಹಾರ ಪಾವತಿಗಾಗಿ ಇದೇ ಮೊದಲ ಬಾರಿಗೆ ಹೊಸ ತಂತ್ರಾಂಶದ ಅಳವಡಿಸಿಕೊಳ್ಳಲಾಗಿದೆ. ಇದರಿಂದಾಗಿ ಹಾನಿಗೆ ಸಂಬಂಧಿಸಿದಂತೆ ಮಾಹಿತಿ ನಮೂದಿಸಿದ ಕೆಲವೇ ದಿನಗಳಲ್ಲಿ ರೈತರ ಖಾತೆಗಳಿಗೇ ನೇರವಾಗಿ ಹಣವನ್ನು ವರ್ಗಾವಣೆ ಮಾಡಲಾಗುತ್ತಿದೆ’ ಎಂದು ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ತುಷಾರ್ ಗಿರಿನಾಥ್ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಬೆಳೆ ನಷ್ಟದ ವಿವರವನ್ನು ತಂತ್ರಾಂಶಕ್ಕೆ ಭರ್ತಿಮಾಡಲು ಮಂಗಳವಾರ (ಡಿ.7) ಕೊನೆಯ ದಿನವಾಗಿದ್ದು, ಮಧ್ಯರಾತ್ರಿ 12ವರೆಗೆ ಭರ್ತಿ ಮಾಡಬಹುದು. ಮುಂದಿನ ಎರಡರಿಂದ ಮೂರು ದಿನಗಳಲ್ಲಿ ಸುಮಾರು ₹200 ರಿಂದ ₹300 ಕೋಟಿ ಪಾವತಿ ಮಾಡಬೇಕಾಗಬಹುದು. ಎಷ್ಟು ಎಂಬ ನಿಖರ ಮಾಹಿತಿ ಬುಧವಾರ ಗೊತ್ತಾಗುತ್ತದೆ. ಈ ರೀತಿ ತ್ವರಿತಗತಿಯಲ್ಲಿ ರೈತರ ಖಾತೆಗೆ ಹಣ ಜಮೆ ಮಾಡುತ್ತಿರುವುದು ದಾಖಲೆ ಮತ್ತು ದೇಶದಲ್ಲೇ ಮೊದಲು’ ಎಂದು ಅವರು ಹೇಳಿದರು.

‘ಕೋವಿಡ್‌ನಿಂದ ಮೃತಪಟ್ಟ ಬಿಪಿಎಲ್ ಕುಟುಂಬಗಳ ಸದಸ್ಯರಿಂದ 18,500 ಅರ್ಜಿಗಳು ಬಂದಿದ್ದು, ಈಗಾಗಲೇ 9,000 ಮಂದಿಗೆ ತಲಾ ₹1ಲಕ್ಷ ಪಾವತಿ ಮಾಡಲಾಗಿದೆ. ಪರಿಹಾರದ ಚೆಕ್‌ಗಳನ್ನು ಜಿಲ್ಲಾ ಉಸ್ತುವಾರಿ ಸಚಿವರಿಂದ ಹಸ್ತಾಂತರಿಸಬೇಕಾಗಿದೆ. ಆದರೆ, ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿ ಇರುವುದರಿಂದ ಉಳಿದವರಿಗೆ ವಿತರಿಸಿಲ್ಲ. ನೀತಿ ಸಂಹಿತೆ ಮುಗಿದ ತಕ್ಷಣ ವಿತರಿಸಲಾಗುವುದು’ ಎಂದು ಹೇಳಿದರು.

ರೈತರ ಬ್ಯಾಂಕ್ ಖಾತೆಗಳಿಗೇ ನೇರವಾಗಿ ಹಣ ಜಮೆ ಮಾಡುವುದರಿಂದ, ಮಧ್ಯವರ್ತಿಗಳ ಆಟ ನಡೆಯುವುದಿಲ್ಲ. ಹಿಂದೆ ಮೂರು ತಿಂಗಳಿಗೆ ಒಮ್ಮೆ ಮಾತ್ರ ಪರಿಹಾರ ಹಣ ಬಿಡುಗಡೆ ಮಾಡಲಾಗುತ್ತಿತ್ತು. ಈಗ ಎರಡು–ಮೂರು ದಿನಗಳಿಗೊಮ್ಮೆ ತಂತ್ರಾಂಶದಲ್ಲಿ ನಮೂದಿಸಿ ತಕ್ಷಣವೇ ಪರಿಹಾರ ಬಿಡುಗಡೆ ಮಾಡುವಂತೆ ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಲಾಗಿದೆ ಎಂದರು.

ಸೋಂಕಿತರ ಸಂಖ್ಯೆ 110ಕ್ಕೆ ಏರಿಕೆ

ಚಿಕ್ಕಮಗಳೂರು: ಕೊಪ್ಪ ತಾಲ್ಲೂಕು ಸೀಗೋಡಿನ ಜವಾಹರ್ ನವೋದಯ ವಿದ್ಯಾಲಯದಲ್ಲಿ ಕೋವಿಡ್ ದೃಢಪಟ್ಟವರ ಸಂಖ್ಯೆ 110ಕ್ಕೆ ಏರಿದೆ.

ಮಂಗಳವಾರ ಏಳು ಮಂದಿಗೆ ಸೋಂಕು ದೃಢಪಟ್ಟಿದೆ. ಕೋವಿಡ್ ದೃಢಪಟ್ಟಿದ್ದ ಸಿಬ್ಬಂದಿಯ ಪ್ರಾಥಮಿಕ ಸಂಪರ್ಕದ 22 ಮಂದಿಯ ಗಂಟಲು ದ್ರವ ಮಾದರಿಯನ್ನು ಡಿ.6ರಂದು ಪರೀಕ್ಷೆಗೆ ರವಾನಿಸಲಾಗಿತ್ತು. ಈ ಪೈಕಿ ಏಳು ಮಂದಿಗೆ ಸೋಂಕು ಪತ್ತೆಯಾಗಿದೆ.

99 ಸಾವಿರ ಅರ್ಜಿಗಳು ಬಾಕಿ

ಒಂದನೇ ಪುಟದಿಂದ...

ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್, ನಗರಾಭಿವೃದ್ಧಿ ಪ್ರಾಧಿಕಾರ, ಕಂದಾಯ ಇಲಾಖೆ, ಸಾರಿಗೆ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆಗಳಲ್ಲಿ ಸಾವಿರಾರು ಅರ್ಜಿಗಳು ವಿಲೇವಾರಿಯಾಗದೇ ವಿವಿಧ ಹಂತಗಳಲ್ಲಿ ಉಳಿದುಕೊಂಡಿವೆ. ಇದರಿಂದ ಫಲಾನುಭವಿಗಳಿಗೆ ನಿಗದಿತ ವೇಳೆಯಲ್ಲಿ ಸವಲತ್ತುಗಳು ದೊರಕುತ್ತಿಲ್ಲ. ಅರ್ಜಿ ವಿಲೇವಾರಿ ವಿಳಂಬಕ್ಕೆ ಸಿಬ್ಬಂದಿ ನಿರಾಸಕ್ತಿ, ತಾಂತ್ರಿಕ ಕಾರಣ ಹಾಗೂ ಅಧಿಕಾರಿಗಳ ಲಂಚದ ಬೇಡಿಕೆ ಪ್ರಮುಖ ಕಾರಣಗಳು ಎನ್ನಲಾಗುತ್ತಿದೆ.

ಇ–ಸ್ವತ್ತು ಅರ್ಜಿಗಳಿಗೆ ಗ್ರಹಣ: ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ‘ಇ–ಸ್ವತ್ತು’ ಅರ್ಜಿಗಳು ವಿಲೇವಾರಿಯಾಗದೇ ಸಾವಿರಾರು ಸಂಖ್ಯೆಯಲ್ಲಿ ಬಾಕಿ ಉಳಿದಿವೆ. ಸರ್ಕಾರಿ ಭೂಮಾಪಕ (ಸರ್ವೆಯರ್) ಸಿಬ್ಬಂದಿಗಳ ಕೊರತೆ ಹಾಗೂ ಪರವಾನಗಿ ಭೂಮಾಪಕರ ಸೇವೆ ಅಲಭ್ಯವಾಗಿರುವುದರಿಂದ ಇ–ಸ್ವತ್ತು ಅರ್ಜಿಗಳು ವಿಲೇವಾರಿಯಾಗುತ್ತಿಲ್ಲ.

‘ಸಕಾಲ’ ಯೋಜನೆಯಡಿ, ವಿದ್ಯಾರ್ಥಿಗಳ ಬಸ್‌ಪಾಸ್ ಅನ್ನು ಅರ್ಜಿ ಸಲ್ಲಿಸಿದ 7 ದಿನಗಳ ಒಳಗಾಗಿ ವಿತರಿಸಬೇಕು. ಆದರೆ, ‘ಸೇವಾ ಸಿಂಧು’ ಪೋರ್ಟಲ್‌ನಲ್ಲಿ 15 ದಿನಗಳ ಕಾಲಮಿತಿ ಇದೆ. ಈ ದ್ವಂದ್ವ ನಿಯಮಗಳಿಂದ ಬಸ್‌ಪಾಸ್ ಅರ್ಜಿಗಳು ಹೆಚ್ಚು ಬಾಕಿ ಉಳಿದಿವೆ ಎಂದು ಅಂಕಿಅಂಶ ತೋರಿಸುತ್ತಿದೆ. ಇದು ತಿದ್ದುಪಡಿಯಾದರೆ, ಸಾರಿಗೆ ಇಲಾಖೆಯಡಿ ಅರ್ಜಿಗಳು ಬಾಕಿ ಉಳಿಯುವುದು ಕಡಿಮೆಯಾಗುತ್ತದೆ ಎನ್ನುತ್ತಾರೆ ಸಾರಿಗೆ ಅಧಿಕಾರಿಗಳು.

ಅಂಗವಿಕಲರ ಮಾಸಾಶನ, ವೃದ್ಧಾಪ್ಯ ವೇತನ ಮುಂತಾದ ಸಲವತ್ತುಗಳಿಗೆ ಅರ್ಜಿ ಸಲ್ಲಿಸಿ 6 ತಿಂಗಳಾದರೂ ಫಲಾನುಭವಿಗಳಿಗೆ ಪರಿಹಾರ ಸಿಕ್ಕಿಲ್ಲ
ಹಸೀನಾ ಹೆಡಿಯಾಲ
ಹಾವೇರಿ ಜಿಲ್ಲಾ ಸಂಚಾಲಕಿ, ಸಾಮಾಜಿಕ ಪರಿವರ್ತನಾ ಜನಾಂದೋಲನ

ಇ–ಸ್ವತ್ತು ಅರ್ಜಿಗಳು ಸರ್ವೆ ಇಲಾಖೆಯಲ್ಲಿ ವಿವಿಧ ಕಾರಣಗಳಿಂದ ಬಾಕಿ ಉಳಿದಿವೆ. ಅರ್ಜಿಗಳ ವಿಲೇವಾರಿಗೆ ಕ್ರಮ ಕೈಗೊಳ್ಳಲಾಗುವುದು
ಮೊಹಮ್ಮದ್ ರೋಶನ್
ಸಿಇಒ, ಹಾವೇರಿ ಜಿಲ್ಲಾ ಪಂಚಾಯಿತಿ

ಅತಿ ಹೆಚ್ಚು ಅರ್ಜಿಗಳನ್ನು ಬಾಕಿ ಉಳಿಸಿಕೊಂಡಿರುವ ಇಲಾಖೆಗಳು

ಇಲಾಖೆಗಳು	ಅರ್ಜಿಗಳ ಸಂಖ್ಯೆ
ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್	23,314
ನಗರಾಭಿವೃದ್ಧಿ ಇಲಾಖೆ	17,419
ಕಂದಾಯ ಇಲಾಖೆ	16,905
ಸಾರಿಗೆ ಇಲಾಖೆ	10,770
ಸಮಾಜ ಕಲ್ಯಾಣ ಇಲಾಖೆ	6,713



ಕೊಳಚೆ ನೀರೇ ಕಾರಿಗೆ ಇಂಧನ!

ಕೃಷ್ಣ ಭಟ್

ಜಗತ್ತಿನ ಓಟಕ್ಕೆ ಇಂಧನ ಬೇಕೇ ಬೇಕು. ಜನರು ನಡೆದುಹೋಗುತ್ತಿದ್ದ ಕಾಲಕ್ಕೆ ಇಂಧನ ಬೇಕಿರಲಿಲ್ಲ. ಬದುಕುಳಿಯಲು ನೀರು ಸಾಕಿತ್ತು. ಆದರೆ, ಈಗ ಜನರು ಓಡುತ್ತಿದ್ದಾರೆ. ನಗರಗಳಿಂದ ನಗರಗಳಿಗೆ, ನಗರಗಳಿಂದ ಹಳ್ಳಿಗೆ ಜನ ಓಡುತ್ತಾರೆ. ಇನ್ನೊಂದೆಡೆ, ನಗರಗಳ ಜನರು ಅಪಾರ ಪ್ರಮಾಣದ ಕೊಳಚೆ ನೀರನ್ನೂ ಕಸವನ್ನೂ ಸೃಷ್ಟಿಸುತ್ತಿದ್ದಾರೆ. ಆ ಕಸವನ್ನೇ ಬಳಸಿಕೊಂಡು ಆ ಓಟಕ್ಕೆ ಇಂಧನ ತುಂಬಿದರೆ ಹೇಗೆ ಎಂಬ ಯೋಚನೆ ಹಲವು ದೇಶಗಳಲ್ಲಿ ಯೋಜನೆಯಾಗಿ ರೂಪುಗೊಂಡಿದೆ. ರಸ್ತೆಬದಿ ಗುರುತ್ವಾಕರ್ಷಣೆಗೆ ಅನುಗುಣವಾಗಿ ಹರಿಯುವ ನೀರನ್ನೇ ಬಳಸಿ ರಸ್ತೆಯ ಮೇಲೆ ಗುರುತ್ವಾಕರ್ಷಣೆಗೆ ವಿರುದ್ಧ ದಿಕ್ಕಿನಲ್ಲಿ ಕಾರು ಓಡಬಹುದು!

ತೀರಾ ಇತ್ತೀಚೆಗಷ್ಟೇ ಬಾರ್ಸಿಲೋನಾದಲ್ಲಿ ಕೊಳಚೆ ನೀರಿನಿಂದ ಇಂಧನ ತಯಾರಿಸಿ ಅದರಿಂದ ಬಸ್ ಓಡುವ ಯೋಜನೆ ರೂಪುಗೊಂಡಿದೆ. ಅದರ ಜೊತೆಗೇ, ಮೊನ್ನೆಯಷ್ಟೇ ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ಕೂಡ ಈ ಬಗ್ಗೆ ಮಾತನಾಡಿದ್ದಾರೆ. ಕೊಳಚೆ ನೀರಿನಿಂದ ಹೈಡ್ರೋಜನ್ ಉತ್ಪಾದನೆ ಮಾಡುವ ಹಲವು ಪ್ರಯೋಗಗಳು, ಪ್ರಯತ್ನಗಳು ನಡೆದಿವೆ, ನಡೆಯುತ್ತಿವೆ.

ಕೊಳಚೆ ನೀರಿನಿಂದ ಎಲೆಕ್ಟ್ರೋಲಿಸಿಸ್ ಮೂಲಕ ಹೈಡ್ರೋಜನ್ ಉತ್ಪಾದನೆ ಮಾಡಲಾಗುತ್ತದೆ. ಎಲೆಕ್ಟ್ರೋಲಿಸಿಸ್‌ನಲ್ಲಿ ನೀರಿಗೆ ವಿದ್ಯುತ್ ಹರಿಸಿ ಜಲಜನಕವನ್ನು ಬೇರ್ಪಡಿಸಲಾಗುತ್ತದೆ. ಆದರೆ, ಸದ್ಯಕ್ಕೆ ಎಲೆಕ್ಟ್ರೋಲೈಸರ್ ವೆಚ್ಚವೇ ಅಧಿಕ. ಸಾಮಾನ್ಯವಾಗಿ ಪಳೆಯುಳಿಕೆ ಇಂಧನಗಳನ್ನು ಬಳಸಿ ಉದ್ಯಮಕ್ಕೆ ಬೇಕಾಗುವ ಹೈಡ್ರೋಜನ್ ಉತ್ಪಾದನೆ ಮಾಡಲಾಗುತ್ತಿದ್ದು, ಅದರ ವೆಚ್ಚ ಒಂದು ಕಿಲೋ ಹೈಡ್ರೋಜನ್‌ಗೆ 2 ಡಾಲರ್ ಆಗಿದ್ದರೆ, ನೀರನ್ನು ಬಳಸಿ ಉತ್ಪಾದಿಸಿದ ಹೈಡ್ರೋಜನ್ ಕಿಲೋ ಒಂದರ ಬೆಲೆ ಕನಿಷ್ಠ 15-16 ಡಾಲರ್ ಆಗುತ್ತಿದೆ. ಮುಂದಿನ ದಿನಗಳಲ್ಲಿ ಇದರ ಬೆಲೆ ಕಡಿಮೆಯಾಗುವ ನಿರೀಕ್ಷೆ ಇದೆ.

ಕೊಳಚೆ ನೀರಿನಿಂದ ಹೈಡ್ರೋಜನ್ ಉತ್ಪಾದನೆ ಸುಲಭವೇ?

ಹಲವು ದೇಶಗಳಲ್ಲಿ ಈಗಾಗಲೇ ಕೊಳಚೆ ನೀರನ್ನು ಸಂಸ್ಕರಿಸುವ ಘಟಕಗಳಿವೆ. ಈ ಘಟಕಗಳು ನಗರದ ಕೊಳಚೆ ನೀರನ್ನು ಸಂಸ್ಕರಿಸಿ, ಘನತ್ಯಾಜ್ಯವನ್ನು ಗೊಬ್ಬರ ಹಾಗೂ ಇತರ ಉತ್ಪನ್ನಗಳನ್ನಾಗಿ ಪರಿವರ್ತಿಸುತ್ತವೆ ಮತ್ತು ಸಂಸ್ಕರಿಸಿದ ನೀರನ್ನು ತೊರೆಗಳಿಗೆ ಬಿಡುತ್ತವೆ. ಈ ಘಟಕಗಳಲ್ಲೇ ಎಲೆಕ್ಟ್ರೋಲೈಸರ್‌ಗಳನ್ನು ಸ್ಥಾಪನೆ ಮಾಡುವುದು ಕಷ್ಟಕರವಲ್ಲ, ಅಷ್ಟು ವೆಚ್ಚದಾಯಕವೂ ಅಲ್ಲ.

> ರಸ್ತೆಬದಿ ಗುರುತ್ವಾಕರ್ಷಣೆಗೆ ಅನುಗುಣವಾಗಿ ಹರಿಯುವ ನೀರನ್ನೇ ಬಳಸಿ ರಸ್ತೆಯ ಮೇಲೆ ಗುರುತ್ವಾಕರ್ಷಣೆಗೆ ವಿರುದ್ಧ ದಿಕ್ಕಿನಲ್ಲಿ ಕಾರು ಓಡಬಹುದು!

ಆದರೆ, ಭಾರತದ ನಗರದಲ್ಲಿ ಕೊಳಚೆ ನೀರನ್ನು ಸಂಸ್ಕರಣೆ ಮಾಡುವ ಘಟಕಗಳೇ ಕಡಿಮೆ. ಕೊಳಚೆ ನೀರನ್ನು ಹಾಗೆಯೇ ತೊರೆಗಳಿಗೆ ಬಿಡುತ್ತಿರುತ್ತೇವೆ. ಹೀಗಾಗಿ, ಕೊಳಚೆ ನೀರಿನಿಂದ ಹೈಡ್ರೋಜನ್ ಉತ್ಪಾದನೆ ಮಾಡುವುದು ಇನ್ನೂ ವೆಚ್ಚದಾಯಕವಾಗಬಹುದು. ಆದರೆ, ಅಸಾಧ್ಯವಾದುದೇನೂ ಅಲ್ಲ. ಅಷ್ಟೇ ಅಲ್ಲ, ಹೈಡ್ರೋಜನ್ ಉತ್ಪಾದನೆಯ ನೆಪದಲ್ಲಾದರೂ ಕೊಳಚೆ ನೀರು ಸಂಸ್ಕರಿಸುವ ಅವಕಾಶವೂ ನಮಗಿದೆ.

ಮೀಥೇನ್ ಉತ್ಪಾದನೆ ಅವಕಾಶ ಹೈಡ್ರೋಜನ್ ಉತ್ಪಾದನೆ ಪ್ರಕ್ರಿಯೆಯಲ್ಲಿ ಕೊಳಚೆ ನೀರಿನಿಂದ ಮೀಥೇನ್ ಉತ್ಪಾದನೆ ಮಾಡುವ ಅವಕಾಶವೂ ಸಿಗುತ್ತದೆ. ಮೀಥೇನ್ ಅನ್ನೂ ವಾಹನಗಳಿಗೆ ಇಂಧನವಾಗಿ ಬಳಸಬಹುದು. ಹೀಗಾಗಿ, ಹೈಡ್ರೋಜನ್ ಉತ್ಪಾದನೆ ಮಾಡುವ ಘಟಕಗಳ ನಿರ್ವಹಣೆ ವೆಚ್ಚ ಕಡಿಮೆಯಾಗುತ್ತದೆ. ಇದು ಕೂಡ ಹೈಡ್ರೋಜನ್ ವೆಚ್ಚದ ಮೇಲೆ ಪರಿಣಾಮ ಬೀರಬಹುದು.

ಮೈಲೇಜ್ ಲೆಕ್ಕಾಚಾರ

ಕಾರು ತೆಗೆದುಕೊಳ್ಳುವಾಗ ನಾವು ಮೈಲೇಜ್ ಲೆಕ್ಕಾಚಾರ ಹಾಕದೆಯೇ ಮುಂದಡಿ ಇಡುವುದೇ ಇಲ್ಲ. ಮೈಲೇಜ್ ಎಷ್ಟು ಎಂಬುದು ಕಾರು ನಮಗೆ ದೀರ್ಘಾವಧಿಯಲ್ಲಿ ಎಷ್ಟರ ಮಟ್ಟಿಗೆ ಜೇಬು ಬಿಸಿ ಮಾಡಬಹುದು ಎಂಬುದರ ಮುನ್ಸೂಚನೆಯನ್ನೂ ನೀಡುತ್ತದೆ. ಹೈಡ್ರೋಜನ್ ಕಾರುಗಳು ಸದ್ಯಕ್ಕೆ ಪೆಟ್ರೋಲ್, ಡೀಸೆಲ್ ಕಾರಿನಷ್ಟೇ ಮೈಲೇಜ್ ಕೊಡುತ್ತವೆ. ಒಂದು ಕಿಲೋ ಹೈಡ್ರೋಜನ್‌ನಿಂದ ಕಾರು ಸಾಮಾನ್ಯವಾಗಿ 95-100 ಕಿ.ಮೀ. ಓಡುತ್ತವೆ. 3-4 ಕಿಲೋ ಹೈಡ್ರೋಜನ್ ತುಂಬಬಹುದಾದ ಟ್ಯಾಂಕ್ ಕಾರಿನಲ್ಲಿ ಇದ್ದರೆ ಸಾಕು.

ಆದರೆ, ಸದ್ಯಕ್ಕೆ ಪರಿಸರಸ್ನೇಹಿ ಹೈಡ್ರೋಜನ್ ಕಾರಿಗೆ ಒಂದು ಕಿ.ಮೀ.ಗೆ ₹12ಕ್ಕಿಂತ ಹೆಚ್ಚು ವೆಚ್ಚ ಮಾಡಬೇಕಾದೀತು. ಎಲೆಕ್ಟ್ರಿಕ್ ಕಾರುಗಳಂತೆಯೇ ಹೈಡ್ರೋಜನ್ ಇಂಧನದ ಕುರಿತೂ ಹೆಚ್ಚು ಕಾರು ತಯಾರಕಾ ಕಂಪನಿಗಳಲ್ಲಿ ಆಸಕ್ತಿ ಮೂಡಿರುವುದರಿಂದ ಮುಂದಿನ ದಿನಗಳಲ್ಲಿ ಇದರ ಬೆಲೆ ಕಡಿಮೆಯಾಗುತ್ತದೆ ಎಂದು ನಿರೀಕ್ಷಿಸಬಹುದು.

ಕೊಳಚೆ ನೀರೇ ಕೊರತೆಯಾಗಬಹುದು! ಒಂದು ವೇಳೆ ಕೊಳಚೆ ನೀರಿನಿಂದ ಹೈಡ್ರೋಜನ್ ಉತ್ಪಾದನೆ ಹೆಚ್ಚಿ, ಇಡೀ ದೇಶದ ಕಾರುಗಳು ಕೊಳಚೆ ನೀರಿನಿಂದ ಉತ್ಪಾದಿಸಿದ ಹೈಡ್ರೋಜನ್ನನ್ನೇ ಬಳಸುತ್ತಿವೆ ಎಂದು ಕಲ್ಪಿಸಿಕೊಂಡರೆ, ಆಗ ಕೊಳಚೆ ನೀರೇ ಕೊರತೆಯಾಗಬಹುದು! ಈ ಬಗ್ಗೆ ಅಧ್ಯಯನ ನಡೆಸುತ್ತಿರುವ ತಜ್ಞರಿಗೆ ಕಾಡುತ್ತಿರುವ ಸಮಸ್ಯೆಯ ಪೈಕಿ ಇದೂ ಒಂದು! ಏಕೆಂದರೆ, ನಮ್ಮಲ್ಲಿ ಅಷ್ಟರ ಮಟ್ಟಿಗೆ ಕೊಳಚೆ ನೀರು ಉತ್ಪಾದನೆಯಾಗುತ್ತಿಲ್ಲ. ಇಂಧನದ ಬೇಡಿಕೆ ಹೆಚ್ಚಿದಂತೆ ಕೊಳಚೆ ನೀರಿನ ಉತ್ಪಾದನೆ ಹೆಚ್ಚುವುದೂ ಇಲ್ಲ. ಅದನ್ನು ಹೆಚ್ಚು ಮಾಡುವ ಅವಕಾಶವೂ ಇರುವುದಿಲ್ಲ. ಹೀಗಾಗಿ, ಇದು ದೀರ್ಘಾವಧಿಯಲ್ಲಿ ಅಷ್ಟು ಉಪಯುಕ್ತ ವಿಧಾನವಲ್ಲ ಎಂಬ ಮಾತೂ ಇದೆ.

ಹೈಬ್ರಿಡ್ ಬಗ್ಗೆ ಆಸಕ್ತಿ

ಅಷ್ಟಕ್ಕೂ ಕಾರುಗಳು ಮತ್ತು ಬಸ್‌ಗಳನ್ನು ಹೈಬ್ರಿಡ್ ಮಾಡಿದಾಗ, ಅದರಲ್ಲಿ ಹೈಡ್ರೋಜನ್, ಮೀಥೇನ್ ಹಾಗೂ ಪೆಟ್ರೋಲ್ ಮೂರನ್ನೂ ಬಳಸಬಹುದಾದ ಅವಕಾಶವಿರುತ್ತದೆ. ಇಂಥ ಎಂಜಿನ್‌ಗಳ ತಯಾರಿಕೆಗೂ ಹಲವು ವಾಹನ ತಯಾರಕಾ ಕಂಪನಿಗಳು ಆಸಕ್ತಿ ತೋರುತ್ತಿವೆ. ಅದರಿಂದಾಗುವ ಅನುಕೂಲವೆಂದರೆ ನಾವು ಪೆಟ್ರೋಲ್ ಬೆಲೆ ಏರಿದಾಗ, ಮೀಥೇನನ್ನೂ, ಮೀಥೇನ್ ಬೆಲೆ ಏರಿದಾಗ ಹೈಡ್ರೋಜನ್ ಅನ್ನೂ ತುಂಬಿಸಿಕೊಳ್ಳಬಹುದು. ಅಥವಾ ಯಾವ ಇಂಧನ ಸುಲಭವಾಗಿ ಲಭ್ಯವಿದೆಯೋ ಅದನ್ನು ಬಳಸಬಹುದು.

ಕಪಟ ಸಂಶೋಧನೆಗಳು!

> ಕೆಲವು ಪ್ರಕಾಶನ ಸಂಸ್ಥೆಗಳು 'ಸಂಶೋಧನಾ ಪ್ರಬಂಧಕ್ಕಿಷ್ಟು ಹಣ' ಎಂಬಂತೆ ವಸೂಲಿ ಮಾಡಿ, ಅವು ಸತ್ಯವೋ ಸುಳ್ಳೋ ಎಂದೂ ಪರಿಶೀಲಿಸದೆ ಪ್ರಕಟಿಸಿಬಿಡುತ್ತಿದ್ದವು. ಇ-ಪತ್ರಿಕೆಯ ರೂಪದಲ್ಲಿ ಪ್ರಕಟಿಸುವುದು ಸುಲಭವಾಗಿದ್ದರಿಂದ ಇಂತಹ ಸಂಸ್ಥೆಗಳು ಹುಟ್ಟಿಕೊಳ್ಳುವುದು ಸಲೀಸಾಗಿತ್ತು.

ಕೊಳ್ಳೇಗಾಲ ಶರ್ಮ

ನಮ್ಮ ದೇಶಕ್ಕೆ 1947ನೇ ಇಸವಿಯಲ್ಲಿ ಬಂದಿದ್ದು ಸ್ವಾತಂತ್ರ್ಯ ಅಲ್ಲ, ಭಿಕ್ಷೆ ಎಂದು ಇತ್ತೀಚೆಗೆ ಕಂಗನಾ ರಾವತ್ ಹೇಳಿದ್ದು ಟಿವಿಯೊಂದರಲ್ಲಿ ಸುದ್ದಿಯಾಯಿತಷ್ಟೆ. ಅದು ವಿವಾದವಾಗುತ್ತಿದ್ದಂತೆ ತಕ್ಷಣವೇ ಆ ಟಿವಿಯವರು ಇದಕ್ಕೂ ನಮಗೂ ಸಂಬಂಧವಿಲ್ಲ ಎಂದು ಹಿಂದೆ ಸರಿದುಬಿಟ್ಟದ್ದು ಇನ್ನೂ ದೊಡ್ಡ ಸುದ್ದಿಯಾಯಿತು. ಹೀಗೆ ಜಾರಿಬಿಟ್ಟ ಮಾತನ್ನು ಹೇಳಲೇ ಇಲ್ಲ ಅಂತಲೋ, ಹೇಳಿದ್ದು ತಪ್ಪು ಎಂತಲೋ ಹಿಂತೆಗೆದುಕೊಳ್ಳುವುದು ಇತ್ತೀಚಿನ ರಾಜಕೀಯದಲ್ಲಿ ನಿತ್ಯವಾರ್ತೆ ಎನ್ನಬಹುದು. ಆದರೆ ವಿಜ್ಞಾನದಲ್ಲಿಯೂ ಇದು ಈಗ ಹೆಚ್ಚಾಗುತ್ತಿದೆಯಂತೆ. ಉದಾಹರಣೆಗೆ, ಮೊನ್ನೆ ಸಂಶೋಧನಾ ಪತ್ರಿಕೆಗಳ ಪ್ರಕಾಶಕರಲ್ಲಿ ಮೇಲ್ಪಂಕ್ತಿಯಲ್ಲಿರುವ ಎಲ್ಸೆವಿಯರ್ ಸುಮಾರು ನಾಲ್ಕು ನೂರು ಸಂಶೋಧನಾ ಪ್ರಬಂಧಗಳನ್ನು ಪ್ರಕಟಣೆಯಿಂದ ಹಿಂಪಡೆಯುತ್ತಿದ್ದೇನೆ ಎಂದು ವರದಿ ಮಾಡಿತ್ತು. ಇತ್ತೀಚೆಗೆ ಇನ್ನೊಂದು ಪ್ರಕಾಶನ ಸಂಸ್ಥೆ ಸ್ಪ್ರಿಂಗರ್ ವರ್ಲಾಗ್ ಒಂದೇ ಸಂಚಿಕೆಯಲ್ಲಿ ಪ್ರಕಟವಾದ ನೂರ ಐವತ್ತಕ್ಕೂ ಹೆಚ್ಚು ಪ್ರಬಂಧಗಳನ್ನು ಅವು ಫೇಕ್ ಎಂದು ಹೇಳಿ ಹಿಂಪಡೆಯಿತು. ಇಂತಹ ಮೋಸದ ಸಂಶೋಧನೆಗಳನ್ನು ಪ್ರಕಟಣೆಗೆ ಕಳಿಸುವ ಕಾರ್ಯ ವ್ಯವಸ್ಥಿತ ಮೋಸ, ಒಂದು ಸ್ಕ್ಯಾಮ್ ಎಂದು 'ನೇಚರ್' ಪತ್ರಿಕೆ ಮೊನ್ನೆ ವರದಿ ಮಾಡಿದೆ.

ಪ್ರಕಟಣೆಯನ್ನು ಹಿಂಪಡೆಯುವುದೆಂದರೇನು ಎಂಬ ಗೊಂದಲವಾಯಿತೇ? ಹಾಗೆಂದರೆ ಇನ್ನೇನಲ್ಲ. ಯಾವುದೇ ಪತ್ರಿಕೆಯಲ್ಲಿ ಪ್ರಕಟವಾದ ಸಂಶೋಧನೆಯ ವಿವರಗಳಲ್ಲಿ ತಪ್ಪಿದ್ದರೆ ಅಥವಾ ವಿಜ್ಞಾನಪ್ರಪಂಚದ ರೀತಿ-ರಿವಾಜುಗಳಿಗೆ ಒಪ್ಪದಂತಹ ಸಂಶೋಧನೆಗಳನ್ನು ಅವು ಪ್ರಕಟವಾದ ಮೇಲೂ 'ರಿಟ್ರಾಕ್ಷನ್' ಎನ್ನುವ ವ್ಯವಹಾರದ ಮೂಲಕ ಹಿಂಪಡೆಯಲಾಗುತ್ತದೆ. ಅರ್ಥಾತ್, ಇವು ಮುದ್ರಿತವಾಗಿದ್ದರೂ ಪ್ರಕಟಣೆಯಾಗಲೇ ಇಲ್ಲವೇನೋ ಎಂಬಂತೆ ಅವಗಣಿಸಲಾಗುತ್ತದೆ. ಅಂದರೆ ಆ ಸಂಶೋಧನೆಯ ವಿವರಗಳನ್ನು ಆ ಮುಂದೆ ಬೇರೆ ಯಾರೂ ಒಪ್ಪುವುದೂ ಇಲ್ಲ. ಬೆಂಬಲಿಸುವುದೂ ಇಲ್ಲ. ಈ ಬಗೆಯಲ್ಲಿ ಪ್ರಬಂಧಗಳನ್ನು ಹಿಂಪಡೆಯುವುದೆಂದರೆ ವಿಜ್ಞಾನಿಗಳ ವೃತ್ತಿಜೀವನದಲ್ಲಿ ಒಂದು ಕಪ್ಪು ಚುಕ್ಕೆ ಬಿದ್ದಂತೆಯೇ. ಹೀಗೆ ಒಮ್ಮೆ ಒಂದು ಪ್ರಬಂಧವನ್ನು ಹಿಂಪಡೆದರೂ, ವಿಜ್ಞಾನಿಯ ಬಡ್ತಿ, ನೇಮಕಾತಿ ಮುಂತಾದುವುಗಳಿಗೆ ಘಾಸಿಯಾದಂತೆಯೇ ಸರಿ. ವಿಷಯ ಅಷ್ಟೊಂದು ಗಂಭೀರವಾಗಿದ್ದರಿಂದ ಹಲವು ಸಂಶೋಧನಾ ಪತ್ರಿಕೆಗಳಲ್ಲಿ ಹಿಂಪಡೆದ ಪ್ರಬಂಧಗಳ ಸಂಖ್ಯೆ ವರ್ಷಕ್ಕೆ ಒಂದು ಕೂಡ ಇರುತ್ತಿರಲಿಲ್ಲ. ಪ್ರಕಟಣೆಗೂ ಮುನ್ನವೇ ಪ್ರಬಂಧಗಳನ್ನು ತೀವ್ರವಾದ ಪರಿಶೀಲನೆಗೆ ಒಡ್ಡಿ ಅನಂತರ ಪ್ರಕಟಿಸಲಾಗುತ್ತಿತ್ತು. ಇದು ಕೇವಲ ಬಡ್ತಿಗಾಗಿ ಪ್ರಬಂಧಗಳನ್ನು ಬರೆಯಬೇಕೆನ್ನುವ ಸಂಶೋಧಕರಿಗೆ ಅಡ್ಡಿಯಾಗಿತ್ತು. ಇತ್ತೀಚೆಗೆ ವಿಜ್ಞಾನಪ್ರಪಂಚದ ಈ ವ್ಯವಸ್ಥೆಯನ್ನೇ ದುರುಪಯೋಗಪಡಿಸಿಕೊಂಡು ಪ್ರಿಡೇಟರ್ ಪ್ರಕಾಶಕರೆನ್ನುವ ಹೊಸ ಬಗೆಯ ಪ್ರಕಾಶನ ಸಂಸ್ಥೆಗಳು ಹುಟ್ಟಿಕೊಂಡಿದ್ದುವು. ಇವು 'ಪ್ರಬಂಧಕ್ಕಿಷ್ಟು ಹಣ' ಎಂಬಂತೆ ವಸೂಲಿ ಮಾಡಿ, ಅವು ಸತ್ಯವೋ ಸುಳ್ಳೋ ಎಂದೂ ಪರಿಶೀಲಿಸದೆ ಪ್ರಕಟಿಸಿಬಿಡುತ್ತಿದ್ದವು. ಮೊದಲಿನಂತೆ ಮುದ್ರಿಸಬೇಕಾದ ಅವಶ್ಯಕತೆಯೂ ಇಲ್ಲದೆ, ಇ-ಪತ್ರಿಕೆಯ ರೂಪದಲ್ಲಿ ಪ್ರಕಟಿಸುವುದು ಸುಲಭವಾಗಿದ್ದರಿಂದ ಇಂತಹ ಸಂಸ್ಥೆಗಳು ಹುಟ್ಟಿಕೊಳ್ಳುವುದು ಸಲೀಸಾಗಿತ್ತು. ಹಣ ಮಾಡುವುದೂ ಸಲೀಸಾಗಿತ್ತು. ವಿಜ್ಞಾನಪ್ರಪಂಚ ಇಂತಹ ಪತ್ರಿಕೆಗಳನ್ನೂ, ಅವುಗಳಲ್ಲಿ ಪ್ರಕಟವಾದ ಪ್ರಬಂಧಗಳನ್ನೂ ನಿಷೇಧಿಸುವುದು ಅನಿವಾರ್ಯವಾಯಿತು. ಹೈದರಾಬಾದಿನಲ್ಲಿದ್ದ ಓಮಿಕ್ ಜರ್ನಲ್ಸ್ ಎನ್ನುವ ಸಂಸ್ಥೆಯ ಪ್ರಕಟಣೆಗಳನ್ನು ಹೀಗೆ ನಿಷೇಧಿಸಲಾಗಿದೆ. ಇದೇ ರೀತಿಯಲ್ಲಿ ಚೀನಾದ ಹಲವು ಪ್ರಕಾಶಕರೂ ನಿಷೇಧಕ್ಕೆ ಒಳಗಾಗಿದ್ದಾರೆ.

ಕಪಟ ಪ್ರಕಟಣೆಯ ಈ ಮೋಸಗಾರಿಕೆ ಬಲು ವ್ಯವಸ್ಥಿತವಾಗಿಯೇ ನಡೆದಿದೆ. ಸಾಮಾನ್ಯವಾಗಿ ವಿಜ್ಞಾನ ಪತ್ರಿಕೆಗಳು ಒಮ್ಮೊಮ್ಮೆ ವಿಶೇಷ ಸಂಚಿಕೆಗಳನ್ನು ಪ್ರಕಟಿಸುವುದುಂಟು. ಯಾವುದಾದರೂ ವಿಶೇಷ ವಿಷಯಕ್ಕೆ ಸಂಬಂಧಿಸಿದ ಸಂಶೋಧನೆಗಳ ಪ್ರಬಂಧಗಳನ್ನೆಲ್ಲ ಒಂದೆಡೆ ಪ್ರಕಟಿಸುವುದು ಇದರ ಉದ್ದೇಶ. ಇಂತಹ ವಿಶೇಷಾಂಕಗಳಿಗೆ ಆಯಾ ವಿಷಯದಲ್ಲಿ ಹೆಸರು ಮಾಡಿದ ಸುಪ್ರಸಿದ್ಧ ವಿಜ್ಞಾನಿಗಳನ್ನೇ ಸಂಪಾದಕರನ್ನಾಗಿಯೂ ನೇಮಿಸುವುದುಂಟು. ಈ ವ್ಯವಸ್ಥೆಯನ್ನು ದುರುಪಯೋಗಪಡಿಸಿಕೊಂಡು ನೂರಾರು ಪ್ರಬಂಧಗಳನ್ನು ಪ್ರಕಟಿಸಿದ ಮೋಸದ ಕಥೆ ಇದು.

ಇತ್ತೀಚೆಗೆ 'ದಿ ಸೈಂಟಿಫಿಕ್ ವರ್ಲ್ಡ್ ಜರ್ನಲ್' ಎನ್ನುವ ಪತ್ರಿಕೆಗೆ ಮೂವರು ಪ್ರತಿಷ್ಠಿತ ವಿಜ್ಞಾನಿಗಳು ಹೀಗೆ 'ತಮ್ಮ ವಿಷಯವನ್ನು ಕುರಿತು ವಿಶೇಷಾಂಕವೊಂದನ್ನು ಪ್ರಕಟಿಸಬಾರದೇಕೆ' ಎಂದು ಪತ್ರ ಬರೆದಿದ್ದರಂತೆ. ಪತ್ರಿಕೆ ಉತ್ಸಾಹದಿಂದ ಅದಕ್ಕೆ ಒಪ್ಪಿಕೊಂಡಿತು. ಲೇಖನಗಳನ್ನು ಆಹ್ವಾನಿಸಿತು. ಲೇಖನಗಳು ಬರಲಾರಂಭಿಸಿದ ಮೇಲೆ ಪತ್ರಿಕೆಯ ಸಂಪಾದಕರಿಗೆ ಏಕೋ ಅನುಮಾನ ಬಂದಿತು. ಹಲವಾರು ಪ್ರಬಂಧಗಳು ವೈಜ್ಞಾನಿಕ ಸಂಶೋಧನೆಗಳ ಫಲವೆಂದು ತೋರುತ್ತಿರಲಿಲ್ಲ. ಇದನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಅಂತಹ ಪ್ರಬಂಧಗಳನ್ನು ಕಳಿಸಿದ ಲೇಖಕರ ವಿಳಾಸವೂ ಸುಳ್ಳೆಂದು ತಿಳಿಯಿತು. ಅವುಗಳಲ್ಲಿ ಬಳಸಿದ ಪದಪುಂಜಗಳೂ ಸಾಮಾನ್ಯವಾಗಿ ವಿಜ್ಞಾನಿಗಳು ಬಳಸುವವುಗಳಂತೆ ಇರಲಿಲ್ಲ. ಕೊನೆಗೆ ತಿಳಿದದ್ದು, ಮೊದಲು ಪತ್ರ ಬರೆದ ವಿಜ್ಞಾನಿಗಳ ಪತ್ರವೇ ಕಪಟವಾಗಿತ್ತು. ಅದನ್ನು ಅವರು ಬರೆದೇ ಇರಲಿಲ್ಲ. ಅವರ ಹೆಸರಿನಲ್ಲಿ, ಅವರಂತೆಯೇ ಕಪಟವೇಷಿಗಳು ಪತ್ರ ಬರೆದು ವಿಶೇಷಾಂಕಕ್ಕೆ ನಾಂದಿ ಹಾಡಿದ್ದರು. ಅನಂತರ ನೂರಾರು ಲೇಖನಗಳನ್ನು ಕಳಿಸಿದ್ದರು.

ವಿಶೇಷವೆಂದರೆ ಈ ಪ್ರಬಂಧಗಳೆಲ್ಲವನ್ನೂ ಇತ್ತೀಚೆಗೆ ಸುದ್ದಿಯಲ್ಲಿರುವ ಆರ್ಟಿಫಿಶಿಯಲ್ ತಂತ್ರಜ್ಞಾನದ ತಂತ್ರಗಳನ್ನು ಬಳಸಿ ಕೃತಕವಾಗಿ ಸೃಷ್ಟಿಸಲಾಗಿತ್ತು. ಅಂದರೆ ಯಾವುದೋ ಕಂಪ್ಯೂಟರ್ ತಂತ್ರಾಂಶ, ಯಾರ್ಯಾರದ್ದೋ ಹೆಸರಿನಲ್ಲಿ, ಯಾವುಯಾವುದೋ ವಿಷಯಗಳ ಪದಪುಂಜಗಳನ್ನಷ್ಟೆ ಹೆಣೆದು, ಕಪಟ ಮಾಹಿತಿಯನ್ನು ಸೇರಿಸಿ, ಸಂಶೋಧನಾ ಪ್ರಬಂಧವೆನ್ನುವ ಹೆಸರಿನಲ್ಲಿ ಕಳಿಸುತ್ತಿತ್ತು. ಹೀಗೆ ಲೇಖಕರೇ ಇಲ್ಲದ ಲೇಖನಗಳು ಬಂದಿದ್ದುವು. ಅವನ್ನು ಪ್ರಕಟಿಸಿದ ಮೇಲೆ ಈ ಲೋಪಗಳು ಗೊತ್ತಾದುವು. ಹೀಗಾಗಿ ಅವನ್ನೆಲ್ಲ ಹಿಂಪಡೆಯಲಾಯಿತು.

ಹೋಗಲಿ, ಇದರಿಂದ ಆ ಮೋಸಗಾರರಿಗೆ ಏನು ಲಾಭವಾಯಿತೋ? ಗೊತ್ತಿಲ್ಲ. ಆದರೆ ವೈಜ್ಞಾನಿಕ ಪ್ರಬಂಧಗಳನ್ನು ಪ್ರಕಟಿಸುವ ದುಬಾರಿ ವ್ಯವಸ್ಥೆಗೆ ಪೆಟ್ಟು ಬಿದ್ದಿದ್ದು ನಿಜ. ಜೊತೆಗೇ ತಮ್ಮದು ಅತಿ 'ವಿಶ್ವಾಸಾರ್ಹ ಪತ್ರಿಕೆ' ಎಂದು ಕೊಚ್ಚಿಕೊಳ್ಳುತ್ತಿದ್ದ ಪ್ರಕಾಶಕರ ಹಮ್ಮಿಗೆ ಹೊಡೆತ ಬಿದ್ದದ್ದೂ ನಿಜ. ಇವೆಲ್ಲಕ್ಕಿಂತಲೂ ಮುಖ್ಯವಾಗಿ ವಿಜ್ಞಾನ ಎನ್ನುವ ನಂಬಿಕೆಯ ವ್ಯವಸ್ಥೆಯ ಬುಡಕ್ಕೇ ಏಟು ಬಿದ್ದಿದ್ದೂ ಸತ್ಯ. ವಿಜ್ಞಾನಿಗಳಿಗೇ ಪತ್ತೆ ಹಚ್ಚಲು ಕಷ್ಟವಾಗುವಂತಹ ಭಾಷೆಯಲ್ಲಿ ಯಂತ್ರಗಳು ಬರೆದು ಮೋಸ ಮಾಡಬಲ್ಲವು ಎಂಬುದೂ ಗೊತ್ತಾಯಿತೆನ್ನಿ! ತಂತ್ರಜ್ಞಾನವು ವಿಜ್ಞಾನಕ್ಕೆ ಕೊಟ್ಟ ಪೆಟ್ಟು ಇದು. ಹಾಗೆಯೇ ವಿಜ್ಞಾನದ ಭಾಷೆ ಇನ್ನಷ್ಟು ಸರಳಗೊಳ್ಳದಿದ್ದರೆ ಇಂತಹ ಮೋಸ ಗೊತ್ತಾಗುವುದೂ ಇಲ್ಲ ಎನ್ನುವ ಎಚ್ಚರಿಕೆಯ ಗಂಟೆಯೂ ಹೌದು.

ಕುತಂತ್ರಿಗಳು

ವರ್ಷಕ್ಕೆ ಒಂದು ಪ್ರಬಂಧವನ್ನೂ ಹಿಂಪಡೆಯದಿದ್ದ ಪ್ರಕಟಣೆಗಳಲ್ಲಿಯೂ ಕಪಟ ಸಂಶೋಧನೆಗಳೂ ಕಂಡುಬಂದಿದ್ದು ಇತ್ತೀಚಿನ ಸುದ್ದಿ. ಅತ್ಯಂತ ವಿಶ್ವಾಸಾರ್ಹ ಪ್ರಕಾಶನವೆಂದು ಹೆಸರಾದ 'ಸ್ಪ್ರಿಂಗರ್ ನೇಚರ್' ಕೂಡ ತನ್ನ ಒಂದು ಪತ್ರಿಕೆಯಲ್ಲಿ ಪ್ರಕಟವಾದ ಅರವತ್ತೈದು ಪ್ರಬಂಧಗಳನ್ನು ಹಿಂಪಡೆದಿದೆ. 'ಎಲ್ಸೆವಿಯರ್' ಸಂಸ್ಥೆಯೂ ಹೀಗೆಯೇ ಒಂದು ವಿಶೇಷಾಂಕದಲ್ಲಿ ಪ್ರಕಟವಾದ 150 ಪ್ರಬಂಧಗಳನ್ನು ಹಿಂಪಡೆದಿದೆ. ವಿಶೇಷ ಎಂದರೆ ಈ ಯಾವ ಪ್ರಬಂಧಗಳನ್ನೂ ವಿಜ್ಞಾನಿಗಳು ಬರೆದೇ ಇಲ್ಲ. ಏಕೆಂದರೆ ಇವನ್ನು ಕಳಿಸಿದವರ ವಿಳಾಸಗಳೂ ಸುಳ್ಳು. ಇಮೇಲ್ ವಿಳಾಸಗಳೂ ಕಪಟ. ಇನ್ನು ಈ ಪ್ರಬಂಧಗಳ ವಿಷಯಗಳೂ ಅಷ್ಟೆ. ಒಂದಕ್ಕೊಂದು ಸಂಬಂಧವಿಲ್ಲದ ವಿಷಯಗಳನ್ನು ಹೆಣೆದು ಕಟ್ಟಿದ ಪ್ರಬಂಧಗಳು. ಬಹುತೇಕ ಪ್ರಬಂಧಗಳ ಲೇಖಕರು ಚೀನೀಯರು. ಅಂದರೆ ಇದು ಚೀನೀಯರ ಕೆಲಸ ಎಂದಲ್ಲ; ಅವರ ಹೆಸರನ್ನು ಬಳಸಿ ಲೇಖನಗಳನ್ನು ಕಳಿಸಿದ ಕುತಂತ್ರಿಗಳು ಯಾರದ್ದೋ ಕೆಲಸ.



ಓದುವ ಬದಲು ಕೇಳಿಸಿಕೊಳ್ಳಿ!

ಅವಿನಾಶ್ ಬಿ.

> ರಿಲಯನ್ಸ್‌ನ ಜಿಯೋಫೋನ್ ನೆಕ್ಸ್ಟ್ ಎಂಬ ಸ್ಮಾರ್ಟ್ ಫೋನ್‌ನಲ್ಲಿ ಸ್ಕ್ರೀನ್ ಮೇಲಿರುವುದನ್ನು ಓದಿಹೇಳುವ ತಂತ್ರಜ್ಞಾನವೊಂದು ಎಲ್ಲರನ್ನೂ ಆಕರ್ಷಿಸಿದೆ; ಅದೂ ಕೇವಲ 2ಜಿಬಿ **RAM** ಇರುವ ಫೋನ್‌ನಲ್ಲಿ, ಇಂಥದ್ದೊಂದು ತಂತ್ರಾಂಶವನ್ನು ಗೂಗಲ್ ಸಹಯೋಗದಲ್ಲಿ ಅಳವಡಿಸಲಾಗಿದೆ.

ಇತ್ತೀಚೆಗೆ ಬಿಡುಗಡೆಯಾದ ರಿಲಯನ್ಸ್‌ನ ಜಿಯೋಫೋನ್ ನೆಕ್ಸ್ಟ್ ಎಂಬ ಅಗ್ಗದ ಸ್ಮಾರ್ಟ್ ಫೋನ್‌ನಲ್ಲಿ, ಸ್ಕ್ರೀನ್ ಮೇಲಿರುವುದನ್ನು ಓದಿಹೇಳುವ ತಂತ್ರಜ್ಞಾನವೊಂದು ಎಲ್ಲರನ್ನೂ ಆಕರ್ಷಿಸಿದ್ದು ನಿಜ. ಕೇವಲ 2ಜಿಬಿ RAM ಇರುವ ಫೋನ್‌ನಲ್ಲಿ, ಇಂಥದ್ದೊಂದು ತಂತ್ರಾಂಶವನ್ನು ಗೂಗಲ್ ಸಹಯೋಗದಲ್ಲಿ ಜಿಯೋಫೋನ್ ನೆಕ್ಸ್ಟ್‌ನಲ್ಲಿ ಅಳವಡಿಸಲಾಗಿತ್ತು. ಆಂಡ್ರಾಯ್ಡ್‌ನ ಅನ್ಯ ಸ್ಮಾರ್ಟ್ ಫೋನ್‌ಗಳಲ್ಲಾದರೆ, ಗೂಗಲ್ ಅಸಿಸ್ಟೆಂಟ್ ಎಂಬ ಪ್ರತ್ಯೇಕವಾದ ಧ್ವನಿ ಸಹಾಯಕ ತಂತ್ರಾಂಶವಿದೆ. ಆದರೆ ಅದನ್ನು ಸ್ಕ್ರೀನ್ ಓದುವಂತೆ ಮಾಡಬೇಕಿದ್ದರೆ, ಒಂದಿಷ್ಟು ಕಸರತ್ತು ಮಾಡಬೇಕಾಗುತ್ತದೆ.

ಪಠ್ಯವನ್ನು ಓದಿಹೇಳುವ (Text To Speech) ತಂತ್ರಜ್ಞಾನ ಈಗ ಸಾಕಷ್ಟು ಸುಧಾರಣೆಯಾಗಿದೆ. ಜಿಯೋಫೋನ್ ನೆಕ್ಸ್ಟ್‌ನಲ್ಲಿ ಗೂಗಲ್ ಕಂಪನಿಯ ಸಹಯೋಗದಲ್ಲಿಯೇ ಇದನ್ನು ಅಂತರ್‌ನಿರ್ಮಿತವಾಗಿ ಅಳವಡಿಸಲಾಗಿದ್ದರೆ, ಬೇರೆ ಫೋನ್‌ಗಳಿಗೆ ಗೂಗಲ್‌ನ ಈ ಧ್ವನಿ ಸಹಾಯಕ ಉಚಿತ ಆ್ಯಪ್ ಅನ್ನು ನಾವೇ ಅಳವಡಿಸಿಕೊಳ್ಳಬೇಕಾಗುತ್ತದೆ.

ಜಿಯೋಫೋನ್ ನೆಕ್ಸ್ಟ್‌ನಲ್ಲಿ: ಗೂಗಲ್ ಟೆಕ್ಸ್ಟ್ ಟು ಸ್ಪೀಚ್ ಎಂಜಿನ್ ಅಂತರ್‌ನಿರ್ಮಿತವಾಗಿರುವುದರಿಂದ ಇದರಲ್ಲಿ ಯಾವುದೇ ಸಮಸ್ಯೆಯಿಲ್ಲದೆಯೇ ಸಕ್ರಿಯಗೊಳಿಸಬಹುದು. ಹೇಗೆಂದರೆ, ಬ್ರೌಸರ್‌ನಲ್ಲಿ ಯಾವುದೇ ವೆಬ್ ಪುಟವನ್ನು ತೆರೆದು, 'ಇತ್ತೀಚೆಗೆ ಬಳಸಿದ' (Recents) ಆ್ಯಪ್‌ಗಳನ್ನು ತೋರಿಸುವ ಶಾರ್ಟ್‌ಕಟ್ ಬಟನ್ (ಸ್ಕ್ರೀನ್‌ನ ಬಲಭಾಗದಲ್ಲಿರುವ ಚೌಕಾಕಾರದ ಬಟನ್) ಒತ್ತಿದಾಗ ಕಂಡುಬರುವ ಮತ್ತೊಂದು ಸ್ಕ್ರೀನ್‌ನಲ್ಲಿ, 'Listen' ಎಂಬುದನ್ನು ಒತ್ತಿದರಾಯಿತು. ಬ್ರೌಸರಿನಲ್ಲಿ ಕಾಣುವುದೆಲ್ಲವನ್ನೂ ಫೋನ್ ಕನ್ನಡದಲ್ಲಿ ಓದಿ ಹೇಳುತ್ತದೆ.

ಉಳಿದ ಆಂಡ್ರಾಯ್ಡ್ ಫೋನ್‌ಗಳಲ್ಲಿ: ಮೊದಲು ಗೂಗಲ್ ಅಸಿಸ್ಟೆಂಟ್ ಎಂಬ ಆ್ಯಪ್ (ಇಲ್ಲದೇ ಇದ್ದರೆ) ಅಳವಡಿಸಿಕೊಳ್ಳಬೇಕು. ಬಳಿಕ, ಗೂಗಲ್ ಅಸಿಸ್ಟೆಂಟ್ ಸೆಟ್ಟಿಂಗ್ಸ್‌ಗೆ ಹೋಗಿ, ಲ್ಯಾಂಗ್ವೇಜಸ್ ಎಂದಿರುವಲ್ಲಿ, ನಾವು ಮಾತನಾಡಬೇಕಿರುವ ಭಾಷೆಯನ್ನು ಹೊಂದಿಸಿಕೊಳ್ಳಬೇಕು. ಗೂಗಲ್ ಅಸಿಸ್ಟೆಂಟ್ ಆ್ಯಪ್ ತೆರೆಯದೆಯೇ ನೇರವಾಗಿ, 'ಒಕೆ ಗೂಗಲ್' ಅಥವಾ 'ಹೇ ಗೂಗಲ್' ಹೇಳಿದಾಕ್ಷಣ ಅದು ಸಕ್ರಿಯವಾಗುವಂತೆ ಮೊದಲೇ ಹೊಂದಿಸಿಟ್ಟುಕೊಳ್ಳಬೇಕಾಗುತ್ತದೆ. ಅದಕ್ಕಾಗಿ, ಗೂಗಲ್ ಅಸಿಸ್ಟೆಂಟ್ ಆ್ಯಪ್ ತೆರೆದು, ಅದಕ್ಕೆ ನಮ್ಮ ಧ್ವನಿಯನ್ನು (ವಾಯ್ಸ್ ಮ್ಯಾಚ್) ಸೇರಿಸಬೇಕಾಗುತ್ತದೆ. ಆ್ಯಪ್ ತೆರೆದಾಗ, ಸ್ಕ್ರೀನ್ ಮೇಲಿರುವ ಸೂಚನೆಗಳನ್ನು ಪಾಲಿಸುತ್ತಾ ಹೋದರಾಯಿತು. ಈ ಧ್ವನಿ ಸಹಾಯಕಕ್ಕೆ ನೀವು ಏನು ಬೇಕಾದರೂ ಆದೇಶ ನೀಡಬಹುದು. ಉದಾಹರಣೆಗೆ, Remind me for the meeting, Call Amma, Tell me a joke ಇತ್ಯಾದಿ ಆದೇಶಗಳನ್ನು ಅದು ಪಾಲಿಸುತ್ತದೆ. ಸ್ಮಾರ್ಟ್ ಫೋನ್ ಮುಟ್ಟದೆಯೇ ಹಲವಾರು ಕೆಲಸಗಳನ್ನು ಮಾಡಬಹುದಾಗಿದೆ.

ಕನ್ನಡದಲ್ಲಿ ಕೊಡುವ ಆದೇಶಗಳನ್ನು ಅರ್ಥ ಮಾಡಿಕೊಳ್ಳುವುದು ಗೂಗಲ್‌ಗೆ ಕೊಂಚ ಕಷ್ಟವಾಗುತ್ತದೆ, ಆದರೆ, ಕನ್ನಡ ಪುಟಗಳನ್ನು ಅದು ಚೆನ್ನಾಗಿ ಓದುತ್ತದೆ. ಓದುವಂತೆ ಹೊಂದಿಸಲು, ಸೆಟ್ಟಿಂಗ್ಸ್ ಆ್ಯಪ್‌ನಲ್ಲಿ, ಗೂಗಲ್ (ಸರ್ವಿಸಸ್) ಆಯ್ಕೆ ಮಾಡಿಕೊಂಡು, ಕೆಳಭಾಗದಲ್ಲಿರುವ 'Settings For Google Apps' ಎಂಬುದನ್ನು ಒತ್ತಿ, ಅದರಲ್ಲಿ 'ಸರ್ಚ್, ಅಸಿಸ್ಟೆಂಟ್ ಆ್ಯಂಡ್ ವಾಯ್ಸ್' ಅಂತ ಇರುವಲ್ಲಿ 'Voice' ಆಯ್ಕೆ ಮಾಡಿಕೊಳ್ಳಬೇಕು. ಅದರಲ್ಲಿ ಪ್ರಧಾನ ಭಾಷೆಯಾಗಿ ಇಂಗ್ಲಿಷ್ ಅನ್ನೂ, ಎರಡನೇ ಭಾಷೆಯಾಗಿ ಕನ್ನಡವನ್ನೂ ಆಯ್ಕೆ ಮಾಡಿಕೊಂಡು ಸೇವ್ ಮಾಡಿಕೊಳ್ಳಿ. ಇಂಗ್ಲಿಷ್ ಏಕೆ ಎಂದರೆ, ಕನ್ನಡದ ಕಮಾಂಡ್‌ಗಳಿಗಿಂತ (ಆದೇಶ-ಸೂಚನೆ) ಇಂಗ್ಲಿಷ್ ಅನ್ನು ಗೂಗಲ್ ಹೆಚ್ಚು ಚೆನ್ನಾಗಿ ಅರ್ಥ ಮಾಡಿಕೊಳ್ಳಬಹುದಾಗಿದೆ.

ಇದಾದ ಬಳಿಕ, ಬ್ರೌಸರಿನಲ್ಲಿ ಯಾವುದಾದರೂ ವೆಬ್ ಪುಟವನ್ನು ಉದಾಹರಣೆಗೆ, Prajavani.net ತೆರೆದು, ಅದರಲ್ಲಿರುವ ಸುದ್ದಿ/ಲೇಖನವನ್ನು ತೆರೆಯಿರಿ. ನಂತರ ಗೂಗಲ್ ಅಸಿಸ್ಟೆಂಟ್ (ಧ್ವನಿ ಸಹಾಯಕ) ತೆರೆದು, (ಅಥವಾ ಮೊದಲೇ ಹೊಂದಿಸಿಟ್ಟಂತೆ, 'ಒಕೆ ಗೂಗಲ್' ಹೇಳಿದ ಬಳಿಕ) Read my screen ಅಂತ ಹೇಳಿದರೆ, ಕನ್ನಡದಲ್ಲೇ ಇಡೀ ವೆಬ್ ಸುದ್ದಿ/ಲೇಖನವನ್ನು ಅದು ನಿಮಗೆ ಓದಿ ಹೇಳುತ್ತದೆ.

ಪ್ರಖರ ಪ್ರಕಾಶವಿರುವ ಸ್ಕ್ರೀನ್‌ನಲ್ಲಿ ಹೆಚ್ಚು ಸಮಯ ಓದುವುದರಿಂದ ಕಣ್ಣುಗಳಿಗೆ ಶ್ರಮ ಎಂದಾದರೆ, ಈ ಓದಿ ಹೇಳುವ ಸಹಾಯಕನ ನೆರವನ್ನು ಬಳಸಿಕೊಳ್ಳಬಹುದು.



ಗೂಗಲ್ ಅಸಿಸ್ಟೆಂಟ್ ಆ್ಯಪ್ ತೆರೆದಾಗ

ಸುಭಾಷಿತ

ಜಗತ್ತಿನ ಅತಿದೊಡ್ಡ ಪ್ರಾರ್ಥನೆಯೆಂದರೆ ತಾಳ್ಮೆ.

–ಗೌತಮ ಬುದ್ಧ

ಅಪರಾಧ ಮತ್ತು ಶಿಕ್ಷೆ ಸುಧಾರಣೆಗೆ ಅವಕಾಶ ಇರಲಿ

ಶಕ್ತಿ ಮಿಲ್ಸ್ ಆವರಣದಲ್ಲಿ ನಡೆದಿದ್ದ ಅತ್ಯಾಚಾರ ಪ್ರಕರಣದ ಮೂವರು ಅಪರಾಧಿಗಳಿಗೆ ವಿಚಾರಣಾ ನ್ಯಾಯಾಲಯವೊಂದು ವಿಧಿಸಿದ್ದ ಗಲ್ಲು ಶಿಕ್ಷೆಯನ್ನು ಬಾಂಬೆ ಹೈಕೋರ್ಟ್ ಜೀವಾವಧಿ ಶಿಕ್ಷೆಯನ್ನಾಗಿ ಪರಿವರ್ತಿಸಿದೆ. ಇದು ಸ್ವಾಗತಾರ್ಹ ತೀರ್ಮಾನ. ಆದರೆ, ಈ ಪ್ರಕರಣದ ತೀರ್ಪಿನಲ್ಲಿ ಹೈಕೋರ್ಟ್ ಹೇಳಿರುವ ಕೆಲವು ಮಾತುಗಳ ಬಗ್ಗೆ ಮುಂದೆ ಪ್ರಶ್ನೆಗಳು ಮೂಡಬಹುದು. ಮುಂಬೈನ ಮಹಾಲಕ್ಷ್ಮಿ ರೇಸ್‌ಕೋರ್ಸ್ ಸಮೀಪದ ಶಕ್ತಿ ಮಿಲ್ಸ್ ಆವರಣದಲ್ಲಿ ಇಬ್ಬರು ಮಹಿಳೆಯರ ಮೇಲೆ ಈ ಮೂವರು ಸಾಮೂಹಿಕ ಅತ್ಯಾಚಾರ ಎಸಗಿದ್ದರು. ಈ ಘಟನೆ ನಡೆದದ್ದು 2013ರಲ್ಲಿ. ಈ ಅಪರಾಧಕ್ಕಾಗಿ ಇವರಿಗೆ ಮರಣದಂಡನೆಯನ್ನು ವಿಧಿಸಲಾಗಿತ್ತು. ಭಾರತೀಯ ದಂಡ ಸಂಹಿತೆಯ (ಐಪಿಸಿ) ಸೆಕ್ಷನ್ 376 (ಇ) ಅಡಿಯಲ್ಲಿ ಇವರಿಗೆ ಶಿಕ್ಷೆ ವಿಧಿಸಲಾಗಿತ್ತು. ದೆಹಲಿಯಲ್ಲಿ 2012ರಲ್ಲಿ ನಡೆದ ನಿರ್ಭಯಾ ಪ್ರಕರಣದ ನಂತರದಲ್ಲಿ ಐಪಿಸಿಗೆ ತಂದ ತಿದ್ದುಪಡಿಗಳ ಅಡಿಯಲ್ಲಿ ಈ ಶಿಕ್ಷೆ ಪ್ರಕಟಿಸಲಾಗಿತ್ತು. ಆದರೆ, ಗಲ್ಲು ಶಿಕ್ಷೆಯನ್ನೇ ಕಡ್ಡಾಯವಾಗಿ ವಿಧಿಸಬೇಕು ಎಂದು ಈ ಸೆಕ್ಷನ್ ಹೇಳುವುದಿಲ್ಲ ಎಂದು ಹೈಕೋರ್ಟ್ ಸರಿಯಾಗಿಯೇ ಹೇಳಿದೆ. ಅಪರಾಧಿಗಳಿಗೆ ಮರಣದಂಡನೆಯನ್ನೇ ವಿಧಿಸಬೇಕು ಎಂದು ಸಾರ್ವಜನಿಕ ವಲಯದಲ್ಲಿ ವ್ಯಕ್ತವಾಗುವ ಒತ್ತಾಯಕ್ಕೆ ನ್ಯಾಯಾಲಯಗಳು ಮಣಿಯ ಬೇಕಾಗಿಲ್ಲ ಎನ್ನುವ ಮಾತನ್ನೂ ಕೋರ್ಟ್ ಹೇಳಿದೆ. ಈ ಮಾತಿನ ಅರ್ಥ, ಮರಣದಂಡನೆಯು ಮಾಡಿದ ತಪ್ಪಿನ ತೀವ್ರತೆಗಿಂತ ಹೆಚ್ಚು ಎಂಬುದಾಗಿದೆ.

ಅಪರಾಧಿಗಳಿಗೆ ಶಿಕ್ಷೆ ವಿಧಿಸುವ ನಮ್ಮ ಕಾನೂನು ವ್ಯವಸ್ಥೆಯು ದ್ವೇಷ ತೀರಿಸಿಕೊಳ್ಳುವಂತೆ ಇರಬೇಕಾಗಿಲ್ಲ

ಈ ಪ್ರಕರಣದ ಅಪರಾಧಿಗಳಿಗೆ 'ಜೀವಿತಾವಧಿ ವರೆಗೆ ಕಠಿಣ ಜೈಲುವಾಸ ವಿಧಿಸಬೇಕು. ಇದರಲ್ಲಿ ವಿನಾಯಿತಿ ಇರಕೂಡದು. ಅವರಿಗೆ ಪೆರೋಲ್ ನೀಡುವಂತೆ ಇಲ್ಲ. ಆಗ ನೊಂದವರಿಗೆ ನ್ಯಾಯ ಸಿಕ್ಕಂತಾಗುತ್ತದೆ' ಎಂದು ಹೈಕೋರ್ಟ್ ಹೇಳಿದೆ. ಆದರೆ, ಈ ತೀರ್ಪಿನಲ್ಲಿನ ಕೆಲವು ಮಾತುಗಳು ನ್ಯಾಯದಾನದ ವಿಚಾರವಾಗಿ ತಪ್ಪುಕಲ್ಪನೆಗಳನ್ನು ಆಧರಿಸಿ ಆಡಿರುವಂತೆ ಕಾಣಿಸುತ್ತಿವೆ. ಅಪರಾಧಿಗಳು 'ಸುಧಾರಣೆ ಕಾಣುವ ಹಂತವನ್ನೂ ಮೀರಿದ್ದಾರೆ', ಅಪರಾಧಿಗಳು 'ಸಮಾಜದ ಜೊತೆ ಸೇರಿಕೊಳ್ಳಲು ಅರ್ಹರಲ್ಲ' ಎಂದು ಹೈಕೋರ್ಟ್ ಹೇಳಿದೆ. ಮರಣ ದಂಡನೆಯನ್ನು ರದ್ದುಗೊಳಿಸಿದ್ದರೂ, ಈ ಮಾತುಗಳು ಸ್ವೀಕಾರಾರ್ಹ ಅಲ್ಲ. ಅಪರಾಧಿಗಳಿಗೆ ಶಿಕ್ಷೆ ವಿಧಿಸುವ ನಮ್ಮ ಕಾನೂನು ವ್ಯವಸ್ಥೆಯು ದ್ವೇಷ ತೀರಿಸಿಕೊಳ್ಳು-ವಂತೆ ಇರಬೇಕಾಗಿಲ್ಲ. ನಮ್ಮಲ್ಲಿ ಅತ್ಯಂತ ಅಪರೂಪದ ಪ್ರಕರಣಗಳಲ್ಲಿ ಮರಣದಂಡನೆಗೆ ಅವಕಾಶ ಇದೆ ಎಂಬುದು ನಿಜ. ಆದರೆ, ಆದರ್ಶ ನ್ಯಾಯದಾನ ವ್ಯವಸ್ಥೆಯು ಅಪರಾಧಿಯ ಮನಃಪರಿವರ್ತನೆ ಕಡೆಗೆ ಗಮನ ನೀಡುವಂತೆ ಇರಬೇಕು. ಪ್ರತೀ ವ್ಯಕ್ತಿಗೆ ತನ್ನನ್ನು ತಾನು ಸುಧಾರಿಸಿಕೊಳ್ಳುವ ಸಾಮರ್ಥ್ಯ ಹಾಗೂ ಹಕ್ಕು ಇದೆ ಎಂಬ ನೆಲೆಯಲ್ಲಿ ನಮ್ಮ ನ್ಯಾಯಶಾಸ್ತ್ರವು ಕಾರ್ಯ ನಿರ್ವಹಿಸಬೇಕು. ಇಂಥದ್ದೊಂದು ಆಶಯವು ತೀರಾ ಆದರ್ಶಮಯವಾಗಿ ಕಂಡರೂ, ನೈತಿಕವಾಗಿ ಅದು ಸರಿಯಾದ ನಿಲುವು ಆಗುತ್ತದೆ. ನಮ್ಮಲ್ಲಿ ಕೆಲವರು ಜೈಲು ಶಿಕ್ಷೆಯ ಪರಿಕಲ್ಪನೆಯನ್ನು ತಪ್ಪಾಗಿ ಅರ್ಥ ಮಾಡಿಕೊಂಡಿದ್ದಾರೆ. ಅಪರಾಧ ಎಸಗಿದವರಿಗೆ ಜೈಲು ಶಿಕ್ಷೆ ವಿಧಿಸುವುದು ಆ ವ್ಯಕ್ತಿಯನ್ನು ಸಮಾಜದಿಂದ ದೂರ ಮಾಡಬೇಕು ಎಂಬ ಒಂದೇ ಉದ್ದೇಶದಿಂದ ಅಲ್ಲ. ಬದಲಿಗೆ, ತಪ್ಪು ಮಾಡಿದವರು ತನ್ನ ತಪ್ಪನ್ನು ಅರ್ಥ ಮಾಡಿಕೊಳ್ಳಬೇಕು, ಸಮಾಜದ ಜೊತೆ ಒಂದಾಗಿ ಜೀವಿಸುವುದರ ಮಹತ್ವವನ್ನು ಅರಿಯಬೇಕು ಎಂಬ ಉದ್ದೇಶದಿಂದ ಜೈಲು ಶಿಕ್ಷೆಯನ್ನು ವಿಧಿಸಲಾಗುತ್ತದೆ. ಅಪರಾಧ ಎಸಗಿದ ವ್ಯಕ್ತಿಗೆ ನೀಡುವ ಮರಣದಂಡನೆಯು ತನ್ನನ್ನು ತಾನು ಸುಧಾರಣೆಗೆ ಒಡ್ಡಿಕೊಳ್ಳುವ ಹಕ್ಕು ಆತನಿಗೆ ಇಲ್ಲ ಎಂದು ಹೇಳುತ್ತದೆ. ಅಲ್ಲದೆ, ಅಪರಾಧಿಗಳು ತಮ್ಮಲ್ಲಿ ತಂದುಕೊಳ್ಳಬಹುದಾದ ಯಾವುದೇ ಸುಧಾರಣೆಯು ಸಮಾಜಕ್ಕೆ ಅಪ್ರಸ್ತುತ ಎಂಬ ಅರ್ಥವನ್ನು ಬಹಳ ದೀರ್ಘ ಅವಧಿಯ ಜೈಲುವಾಸದ ಶಿಕ್ಷೆಯು ಧ್ವನಿಸುತ್ತದೆ.

ಅತ್ಯಂತ ದೀರ್ಘ ಅವಧಿಯ ಜೈಲುವಾಸವು ನಿಜವಾದ ನ್ಯಾಯದಾನದ ಪರಿಕಲ್ಪನೆಗೆ ತಕ್ಕುದಾಗಿ ಇಲ್ಲ. ಆದರ್ಶ ಸ್ಥಿತಿಯಲ್ಲಿ, ಅಪರಾಧಿಗೆ ಶಿಕ್ಷೆಯನ್ನೂ ವಿಧಿಸಬೇಕು ಮತ್ತು ಆತನಿಗೆ ಸುಧಾರಣೆಗೆ ತನ್ನನ್ನು ಒಡ್ಡಿಕೊಳ್ಳಬೇಕಾದ ಅಗತ್ಯವನ್ನೂ ಮನಗಾಣಿಸಬೇಕು. ಅಪರಾಧಿಗೆ ನೀಡುವ ಶಿಕ್ಷೆಯು ತಪ್ಪಿಗೆ ಆತನನ್ನು ಉತ್ತರದಾಯಿ ಮಾಡುವುದಲ್ಲದೆ, ಅವನಿಗೆ ತಪ್ಪು ತಿದ್ದಿಕೊಳ್ಳುವ ಅವಕಾಶವನ್ನೂ ಕೊಡುತ್ತದೆ. ಅತ್ಯಂತ ಕಠಿಣವಾದ ಹಾಗೂ ಜೀವನಪೂರ್ತಿ ಜಾರಿಯಲ್ಲಿ ಇರುವ ಶಿಕ್ಷೆಗಳು ಉನ್ನತ ಮಟ್ಟದ ಸಮಾಜವೊಂದಕ್ಕೆ ಹೊಂದಿಕೆಯಾಗವು. 2011ರಲ್ಲಿ 77 ಜನರನ್ನು ಹತ್ಯೆ ಮಾಡಿದ, ನಾರ್ವೆ ದೇಶದ ಆ್ಯಂಡರ್ಸ್ ಬ್ರೇವಿಕ್ ಎಂಬ ವ್ಯಕ್ತಿಯು 21 ವರ್ಷಗಳ ಜೈಲುವಾಸವನ್ನು ಅನುಭವಿಸುತ್ತಿದ್ದಾನೆ. ಆ ದೇಶದಲ್ಲಿ ವಿಧಿಸುವ ಅತಿ ದೀರ್ಘ ಅವಧಿಯ ಶಿಕ್ಷೆ ಇದು. ಮರಣದಂಡನೆ ಹಾಗೂ ಅತ್ಯಂತ ದೀರ್ಘ ಅವಧಿಯ ಜೈಲುವಾಸದ ಶಿಕ್ಷೆಗಳು ಅಪರಾಧ ಕೃತ್ಯಗಳನ್ನು ಪೂರ್ಣವಾಗಿ ನಿಗ್ರಹಿಸುವುದೂ ಇಲ್ಲ. ಈ ಮಾತಿಗೆ ಭಾರತ, ಅಮೆರಿಕ ಸೇರಿದಂತೆ ಹಲವು ದೇಶಗಳಲ್ಲಿ ಆಧಾರಗಳು ಸಿಗುತ್ತವೆ. ಈ ಬಗೆಯ ಶಿಕ್ಷೆಗಳು ತಪ್ಪು. ಇವು ಶಿಕ್ಷೆಯು ಮಾನವೀಯವಾಗಿ ಇರಬೇಕು ಎಂಬ ಪರಿಕಲ್ಪನೆಗೆ ವಿರುದ್ಧ.

ದಿನದ ಟ್ವೀಟ್

ಪರಸ್ಪರ ಸಂಬಂಧವಿಲ್ಲ

ಗ್ವಾಟೆಮಾಲಾದ ಅನಕ್ಷರಸ್ಥ ರೈತರಿಂದ ಹಿಡಿದು ಹಾರ್ವರ್ಡ್ ಪ್ರಾಧ್ಯಾಪಕರವರೆಗೆ ಹಲವು ಬಗೆಯ ಜನರೊಂದಿಗೆ ನಡೆಸಿದ ನಿಕಟ ಸಂವಾದವನ್ನು ಆಧರಿಸಿ ಹೇಳುವುದಾದರೆ, ಶಿಕ್ಷಣ ಮತ್ತು ಬುದ್ಧಿವಂತಿಕೆಯ ನಡುವೆ ಪರಸ್ಪರ ಹೆಚ್ಚಿನ ಸಂಬಂಧವಿಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದೇನೆ.

ಮಾರ್ಟಿನ್ ಕಲ್‌ಡಾರ್ಫ್, ಸಾಂಕ್ರಾಮಿಕ ರೋಗಶಾಸ್ತ್ರಜ್ಞ

ಕಿಡಿನುಡಿ

ವಿಧಾನಪರಿಷತ್ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಗಳನ್ನು ಬಿಜೆಪಿ ಅಥವಾ ಕಾಂಗ್ರೆಸ್ ಎಲ್ಲಿಯೂ ಬೆಂಬಲಿಸಿಲ್ಲ. ನಮ್ಮ ಪಕ್ಷಕ್ಕೆ ಬಿಜೆಪಿ, ಕಾಂಗ್ರೆಸ್ ಈ ಎರಡೂ ಮಿತ್ರಪಕ್ಷಗಳಲ್ಲ. ಎರಡೂ ಶತ್ರುಗಳೇ. ಅವರಿಗೆ ಅಗತ್ಯವಿದ್ದಾಗ ಮಾತ್ರ ಮಿತ್ರರಾಗಲು ಬರುತ್ತಾರೆ.



ಎಚ್‌.ಡಿ.ಕುಮಾರಸ್ವಾಮಿ
ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಭಾನುವಾರ, 8-12-1996

• **ಭ್ರಷ್ಟಾಚಾರ: ಜಯಲಲಿತಾ ಬಂಧನ 21ರವರೆಗೆ ನ್ಯಾಯಾಂಗ ವಶಕ್ಕೆ**

ಚೆನ್ನೈ, ಡಿ. 7 (ಯುಎನ್‌ಐ, ಪಿಟಿಐ)– ತಮಿಳುನಾಡು ಸರ್ಕಾರ ರೂ. 65 ಕೋಟಿ ವೆಚ್ಚದಲ್ಲಿ ಹಳ್ಳಿಗಳಿಗೆ ವಿತರಿಸಲು ಖರೀದಿಸಿದ 45,000 ಬಣ್ಣದ ಟಿ.ವಿ.ಗಳಲ್ಲಿ ರೂ. 8.5 ಕೋಟಿ ಮೊತ್ತದ ರುಷುವತ್ತು ಪಡೆದಿದ್ದಾರೆ ಎಂಬ ಆರೋಪದ ಮೇಲೆ ಮಾಜಿ ಮುಖ್ಯಮಂತ್ರಿ ಜೆ. ಜಯಲಲಿತಾ ಅವರನ್ನು ರಾಜ್ಯ ಸಿಐಡಿ ಪೊಲೀಸರು ಇಂದು ಬೆಳಿಗ್ಗೆ ಬಂಧಿಸಿದರು.

ಅವರನ್ನು ನಂತರ ಮುಖ್ಯ ಸೆಷನ್ಸ್ ನ್ಯಾಯಾಧೀಶ ಎ.ರಾಮಮೂರ್ತಿ ಅವರ ನಿವಾಸದಲ್ಲಿ ಹಾಜರುಪಡಿಸಲಾಯಿತು. ನ್ಯಾಯಾಧೀಶರು ಜಯಲಲಿತಾ ಅವರನ್ನು ಈ ತಿಂಗಳ 21ರವರೆಗೆ ನ್ಯಾಯಾಂಗ ಕಸ್ಟಡಿಗೆ ಕಳುಹಿಸಿದರು. ನಂತರ ಜಯಲಲಿತಾ ಅವರನ್ನು ಸೆಂಟ್ರಲ್ ಜೈಲಿಗೆ ಕಳುಹಿಸಲಾಯಿತು.

ಭ್ರಷ್ಟಾಚಾರ ಪ್ರಕರಣಗಳಲ್ಲಿ ಆರೋಪಿಯಾಗಿರುವ ಜಯಲಲಿತಾ ಅವರು ನಿರೀಕ್ಷಣಾ ಜಾಮೀನು ಕೋರಿ ಸಲ್ಲಿಸಿದ್ದ 7 ಅರ್ಜಿಗಳನ್ನು ಮದ್ರಾಸ್ ಹೈಕೋರ್ಟ್ ನಿನ್ನೆ ತಿರಸ್ಕರಿಸಿತ್ತು. ಇಂದು ಬೆಳಿಗ್ಗೆ 7.15ಕ್ಕೆ ಜಯಲಲಿತಾ ಅವರ ಮನೆ 'ವೇದಾಂತ ನಿಲಯಂ' ಅನ್ನು ಪ್ರವೇಶಿಸಿದ ಸಿಐಡಿ ಪೊಲೀಸರು ಅವರನ್ನು ಬಂಧಿಸಿದರು. ಮುಂಜಾಗ್ರತಾ ಕ್ರಮವಾಗಿ ಎಐಎಡಿಎಂಕೆಯ 2000 ಕಾರ್ಯಕರ್ತರನ್ನು ಬಂಧಿಸಲಾಯಿತು.

• **ದಳದಲ್ಲಿ ಸದ್ಯಕ್ಕೆ ಕದನವಿರಾಮ**

ಬೆಂಗಳೂರು, ಡಿ. 7– ರಾಜ್ಯ ಜನತಾದಳದ ಭಿನ್ನಮತೀಯ ಶಾಸಕರು ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿ, ಭಿನ್ನಾಭಿಪ್ರಾಯದ ಬಗ್ಗೆ ಬಿಚ್ಚು ಮನಸ್ಸಿನ ಚರ್ಚೆ ನಡೆಸಿದ ಫಲಶ್ರುತಿಯಂತೆ ಭಿನ್ನಮತವೆಂಬ ಬೀಸೋದೊಣ್ಣೆಯಿಂದ ಸದ್ಯಕ್ಕೆ ಪಟೇಲ್ ಪಾರಾಗಿದ್ದಾರೆ.

50 ವರ್ಷಗಳ ಹಿಂದೆ

ಬುಧವಾರ, 8-12-1971

• **ಜೆಸ್ಸೂರು, ಸಿಲ್ಹೆಟ್, ಮೆಹರ್‌ಪುರ ಪತನ; ಕೊಮಿಲ್ಲಾಗೆ ಮುತ್ತಿಗೆ**

ನವದೆಹಲಿ, ಡಿ. 7– ಬಾಂಗ್ಲಾದೇಶದಲ್ಲಿ ಪ್ರತಿಷ್ಠಿತ ಆಯಕಟ್ಟಿನ ಕೇಂದ್ರಗಳಾದ ಜೆಸ್ಸೂರು, ಸಿಲ್ಹೆಟ್, ಮೆಹರ್‌ಪುರಗಳ ಪತನ ಭಾರತೀಯ ಪಡೆಗಳ ಇಂದಿನ ಮಹತ್ತರ ಸಾಧನೆ. ಪೂರ್ವ ವಲಯದಲ್ಲಿ ಕೊಮಿಲ್ಲಾ ಮುತ್ತಿಗೆಗೆ ಒಳಗಾಗಿದ್ದು ಯಾವ ಗಳಿಗೆಯಲ್ಲಾ-ದರೂ ಪತನಗೊಳ್ಳುವ ಸ್ಥಿತಿಯಲ್ಲಿದೆ.

ಲಾಲ್ ಮುನೀರ್ ಹಾತ್, ಜೇಂಡಿಯಾ ಮುಂತಾದ ಸ್ಥಳಗಳು ವಿಮೋಚನೆಗೊಂಡಿವೆ.

• **ಪಾಕ್ ಆಕ್ರಮಿತ ಕಾಶ್ಮೀರದ ಕೆಲವು ಭಾಗಗಳು ವಿಮುಕ್ತ**

ಶ್ರೀನಗರ, ಡಿ. 7– ತಿತ್ವಾಲ್ ವಿಭಾಗದ ಎದುರಿಗೆ ಇರುವ ಪಾಕ್ ಆಕ್ರಮಿತ ಕಾಶ್ಮೀರದ ಕೆಲವು ಭಾಗಗಳನ್ನು ಭಾರತೀಯ ಸಶಸ್ತ್ರ ಸೈನಿಕರು ವಿಮೋಚನೆಗೊಳಿಸಿದರು ಎಂದು ಅಧಿಕೃತ ವಕ್ತಾರರು ಇಂದು ತಿಳಿಸಿದರು.

ಪಾಕಿಸ್ತಾನಿ ಸೈನಿಕರೊಡನೆ ಹೋರಾಟ ನಡೆಸಿ ಈ ಪ್ರದೇಶಗಳನ್ನು ಸ್ವಾಧೀನ ಪಡಿಸಿಕೊಳ್ಳಲಾಯಿತೆಂದೂ ಈ ವಕ್ತಾರರು ಹೇಳಿದರು.

ಸಂಪೂರ್ಣ ಸಾವಯವ ಕೃಷಿನೀತಿ ಅಳವಡಿಕೆಯ ತಪ್ಪಿನಿಂದ ಅದು ಕಲಿತದ್ದರಲ್ಲಿ ಎಲ್ಲರಿಗೂ ಪಾಠವಿದೆ

ಶ್ರೀಲಂಕಾ ಮಾಡಿಕೊಂಡ ಎಡವಟ್ಟು

ವಿಶ್ಲೇಷಣೆ

ಪ್ರೊ. ಶಾಂತು ಶಾಂತಾರಾಮ್

ಶ್ರೀಲಂಕಾ ಸರ್ಕಾರಕ್ಕೆ ಯಾರು ಕಿವಿ ಊದಿದರೋ ಗೊತ್ತಿಲ್ಲ, ಇದ್ದಕ್ಕಿದ್ದಂತೆ ಇಡೀ ದೇಶವನ್ನು 'ಸಂಪೂರ್ಣ ಸಾವಯವ ಕೃಷಿ ದೇಶ' ಎಂದು ಘೋಷಿಸಿಕೊಂಡು, ಹಸಿರುಕ್ರಾಂತಿಯ ಸಕಲ ಕೃಷಿ ಸಲಕರಣೆಗಳು ಮತ್ತು ಕೃಷಿ ಒಳಸುರಿಗಳನ್ನು ನಿಷೇಧಿಸಿಬಿಟ್ಟಿತು. ಹೀಗೆ ಘೋಷಿಸಿದ ಒಂದೇ ವರ್ಷದಲ್ಲಿ, ದೇಶಕ್ಕೆ ಬೇಕಾಗುವಷ್ಟು ದವಸ ಧಾನ್ಯಗಳನ್ನು ಬೆಳೆಯಲಾಗದೆ, ಆಹಾರ ಭದ್ರತೆಯನ್ನು ಕಳೆದುಕೊಂಡು, ಎಚ್ಚೆತ್ತು, ತನ್ನ ಮೂರ್ಖತನದ ಆದೇಶವನ್ನು ಹಿಂಪಡೆಯಿತು. ಬೇರೆ ಎಷ್ಟೋ ದೇಶಗಳು ಇದೇ ಎಡವಟ್ಟನ್ನು ಮಾಡಲು ಯೋಚಿಸುತ್ತಿವೆ. ಅವುಗಳಲ್ಲಿ ಭಾರತವೂ ಒಂದು.

ಈ ವಿಷಯದಲ್ಲಿ ಹಲವಾರು ಸಂಘ–ಸಂಸ್ಥೆಗಳು ಭಾರತ ಸರ್ಕಾರದ ಕಿವಿ ಊದುವ ಕೆಲಸ ಮಾಡುತ್ತಿವೆ. ದೇಶದಲ್ಲಿ ಸಿಕ್ಕಿಂ ಮಾತ್ರ ತನ್ನನ್ನು ಶೇಕಡ ನೂರರಷ್ಟು 'ಸಾವಯವ ಕೃಷಿ ರಾಜ್ಯ' ಎಂದು ಘೋಷಿಸಿಕೊಂಡು ವರ್ಷಗಳೇ ಕಳೆದಿವೆ. ಕೃಷಿಗೆ ಸಂಬಂಧಿಸಿದಂತೆ ಸಿಕ್ಕಿಂ ಅಷ್ಟೊಂದು ಪ್ರಮುಖ ರಾಜ್ಯವಲ್ಲವಾದ್ದರಿಂದ ಅದರ ಸಾವಯವ ಕೃಷಿ ನೀತಿಯಿಂದ ಆಗುತ್ತಿರುವ ಸಾಧಕ-ಬಾಧಕಗಳನ್ನು ಕೂಲಂಕಷವಾಗಿ ಪರಿಶೀಲಿಸಲು ಸಾಧ್ಯವಾಗಿಲ್ಲ.

ಕೇರಳ ಕೂಡ ಸಾವಯವ ಕೃಷಿ ಮತ್ತು ಸುಭಾಷ್ ಪಾಳೇಕರ್ ಅವರ ಶೂನ್ಯ ಬಂಡವಾಳದ ನೈಸರ್ಗಿಕ ಕೃಷಿ ವಿಧಾನಗಳ ಬಗ್ಗೆ ಆಕಾಂಕ್ಷೆ ವ್ಯಕ್ತಪಡಿಸಿದೆ. ಪ್ರಧಾನಿ ನರೇಂದ್ರ ಮೋದಿಯವರು ಸಹ ಸಾವಯವ ಕೃಷಿ ಕುರಿತು ಆಗಿಂದಾಗ್ಗೆ ಒಲವು ತೋರುತ್ತಾ ಬಂದಿದ್ದಾರೆ. ಹಾಗಾಗಿ ಈ ಕೃಷಿಯ ಪ್ರತಿಪಾದಕರು, ಮೋದಿಯವರ ಅಧಿಕಾರಾ-ವಧಿಯಲ್ಲೇ ನೂತನ ಸಾವಯವ ಕೃಷಿ ಪದ್ಧತಿ ಘೋಷಣೆ-ಯಾಗಿಬಿಟ್ಟರೆ ತಮ್ಮ ಪ್ರಯತ್ನಗಳಿಗೆ ಜಯ ಸಿಕ್ಕಿದಂತಾಗು-ತ್ತದೆ ಎಂದು ಹಾತೊರೆಯುತ್ತಿದ್ದಾರೆ.

ಮತ್ತೊಂದು ಗಹನವಾದ ವಿಷಯವೆಂದರೆ, ಆಧುನಿಕ ತಂತ್ರಜ್ಞಾನದಿಂದ ಆವಿಷ್ಕರಿಸಿದ ತಳಿಗಳಿಗೆ 2012ರಲ್ಲಿ ಕೇಂದ್ರ ಸರ್ಕಾರ ಹಾಕಿದ ನಿರ್ಬಂಧವನ್ನು ತೆಗೆದುಹಾಕುವ ಮಾತು ಒತ್ತಟ್ಟಿಗಿರಲಿ, ಅದರ ಬಗ್ಗೆ ತುಟಿಪಿಟಿಕ್ ಅನ್ನುವ ಲಕ್ಷಣ ಸಹ ಕಾಣದಿರುವುದು. ಕೃಷಿ ವಿಜ್ಞಾನಿಗಳು ಸರ್ಕಾರಗಳಿಗೆ ಯಾವುದೇ ರೀತಿಯ ಖಚಿತ ಮಾರ್ಗದರ್ಶನ ನೀಡಲು ಹೆದರುತ್ತಾರೆ. ಇದಕ್ಕಿರುವ ಕಾರಣಗಳಲ್ಲಿ, ತಂತ್ರಜ್ಞಾನ ವಿರೋಧಿಗಳು ಅವರನ್ನು ಬಹುರಾಷ್ಟ್ರೀಯ ಕಂಪನಿಗಳ ದಲ್ಲಾಳಿಗಳೆಂದು ಕರೆದು ಅವಮಾನಿಸುವುದು ಸಹ ಒಂದು. ಇದು ಸಾವಯವ ಕೃಷಿ ಆಸಕ್ತರಿಗೆ ಹೇಳಿ ಬಡಿಸಿದ ರಸದೌತಣ. ಯಾಕೆಂದರೆ ಸಾವಯವ ಮತ್ತು ನೈಸರ್ಗಿಕ ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನದ ಅಳವಡಿಕೆಗೆ ಅವಕಾಶ ಕಡಿಮೆ.

ಯಾವುದೇ ಕೃಷಿ ಪದ್ಧತಿಯಲ್ಲಿ ಮೊದಲಿಗೆ ಬೇಕಾದದ್ದು ಅತ್ಯುನ್ನತ ಇಳುವರಿ ಕೊಡುವ ಮತ್ತು ರೋಗರುಜಿನಗಳಿಗೆ ಮಣಿಯದ ಬೀಜಗಳು. ಸಾವಯವ ಕೃಷಿಯಲ್ಲಿ ಮೊದಲಿಗೆ ನಿಷೇಧಿತ ಸಾಲಿನಲ್ಲಿರುವುದು ಅಂಥ ಬೀಜಗಳೇ. ಪ್ರಯೋಜನವಿಲ್ಲದ ಬೀಜಗಳನ್ನು ಸಾವಯವ ಕೃಷಿ ಪದ್ಧತಿಯಡಿ ಬೆಳೆಸಿದರೇನು ಅಥವಾ ಆಧುನಿಕ ಕೃಷಿ ವಿಧಾನದಲ್ಲಿ ಬೆಳೆಸಿದರೇನು? ಅಂದರೆ ವಿಜ್ಞಾನಕ್ಕೂ ಆಧುನಿಕ ತಂತ್ರಜ್ಞಾನಕ್ಕೂ ಸಾವಯವ ಕೃಷಿಗೂ ಎಣ್ಣೆ-ಸೀಗೆಕಾಯಿಯ ಸಂಬಂಧ.

ಭಾರತ ಸರ್ಕಾರವೇನಾದರೂ ಅಪ್ಪಿತಪ್ಪಿ ಒತ್ತಡ ಗಳಿಗೆ ಮಣಿದು, ಸಂಪೂರ್ಣ ಸಾವಯವ ಕೃಷಿ ನೀತಿ ಘೋಷಿಸಿಬಿಟ್ಟರೆ ದೇಶದ ಆಹಾರ ಭದ್ರತೆಗೆ ವಿದಾಯ ಹೇಳಬೇಕಾಗುತ್ತದೆ. ಸದ್ಯಕ್ಕೆ ಕೇಂದ್ರ ಕೃಷಿ ಸಚಿವಾಲಯವು ಸಾವಯವ ಮತ್ತು ವೇದಾಧಾರಿತ ಕೃಷಿ ಪದ್ಧತಿಗಳ ಮೇಲೆ ಸಂಶೋಧನೆ ನಡೆಸಬೇಕೆಂದು ಕೃಷಿ ಅನುಸಂಧಾನ ವಿಜ್ಞಾನಿಗಳ ಮೇಲೆ ಲಘುವಾಗಿ ಒತ್ತಾಯ ಹೇರುತ್ತಿದೆ. ದೇಶದಲ್ಲಿ ಸಂಪೂರ್ಣವಾಗಿ ಸಾವಯವ ಕೃಷಿ ನೀತಿಯನ್ನು ಅಳವಡಿಸಿಕೊಂಡರೆ, ಆಹಾರ ಭದ್ರತೆಗೆ ಕುಂದು ಬರುವುದಲ್ಲದೆ, ಆಹಾರ ಪದಾರ್ಥಗಳ ಬೆಲೆ ಏರಿಕೆಯಾಗಿ, ಎಂದೂ ಕಾಣದ ಹಾಹಾಕಾರವನ್ನು ಎದುರಿಸಬೇಕಾಗುತ್ತದೆ.

ಶ್ರೀಲಂಕಾದಂತಹ ಕಡಿಮೆ ಜನಸಂಖ್ಯೆಯುಳ್ಳ ಸಣ್ಣ ದ್ವೀಪರಾಷ್ಟ್ರದ ಆಹಾರ ಪೂರೈಕೆಯನ್ನೇ ಸಾಧಿಸಲಾಗದ ಸಾವಯವ ಕೃಷಿ ವಿಧಾನದಿಂದ, ಜನದುಬ್ಬರದ ಭಾರತ ದೇಶದ ಆಹಾರ ಪೂರೈಕೆಯನ್ನು ಸಾಧಿಸಲು ಸಾಧ್ಯವೇ? ಮುಖ್ಯವಾಗಿ, ಪ್ರಮುಖ ಆಹಾರ ಬೆಳೆಗಳಾದ ಭತ್ತ ಮತ್ತು ಗೋಧಿಯನ್ನು ಸಾವಯವ ಕೃಷಿ ಪದ್ಧತಿಯ ಮೂಲಕ ಸಂಪೂರ್ಣವಾಗಿ ದೇಶದಲ್ಲೆಲ್ಲಾ ಬೆಳೆಯಲು ಸಾಧ್ಯವಿಲ್ಲ. ಯಾಕೆಂದರೆ ಆ ಪ್ರಮಾಣದ ಕೃಷಿಗೆ ಬೇಕಾಗುವಷ್ಟು ಸಾವಯವ ಗೊಬ್ಬರ ಸಿಗುವುದಿಲ್ಲ. ಇದೊಂದು ರೀತಿಯಲ್ಲಿ, ಯಾವುದೋ ಒಂದು ಯಂತ್ರಕ್ಕೆ ಒಂದು ಕಡೆಯಿಂದ ಆಲೂಗಡ್ಡೆಯನ್ನು ಹಾಕಿದರೆ ಮತ್ತೊಂದು ಕಡೆಯಿಂದ ಚಿನ್ನದ ಗಟ್ಟಿಗಳು ಹೊರಬೀಳುತ್ತವೆ ಎಂದು ರಾಜಕಾರಣಿಯೊಬ್ಬರು ಹಿಂದೊಮ್ಮೆ ಹೇಳಿದ್ದ ಮಾತಿನಂತಿದೆ. ಸಾವಯವ ಕೃಷಿಕರು ಒತ್ತಿ ಹೇಳುವಂತೆ, ಸಾವಯವ ಕೃಷಿಯಿಂದ ಬೆಳೆಯುವ ಬೆಳೆಗಳಲ್ಲಿ ಅಧಿಕ ಪೌಷ್ಟಿಕಾಂಶ ಇರುವುದಿಲ್ಲ ಮತ್ತು ಇಂತಹ ಬೆಳೆಗಳಿಂದ ಜನರ ಆರೋಗ್ಯ ಸುಧಾರಿಸುತ್ತದೆ ಎಂಬುದಕ್ಕೆ ಅಧಿಕೃತ ಮಾಹಿತಿಗಳಿಲ್ಲ.

ಸಾವಯವ ಕೃಷಿಯಿಂದ ಲಾಭವೇ ಇಲ್ಲ ಎಂದು ಹೇಳಲಾಗದು. ಬಹುಮುಖ್ಯವಾದ ಲಾಭವೆಂದರೆ, ಅತಿಯಾಗಿ ಬಳಸುವ ರಾಸಾಯನಿಕಗಳಿಂದ ಪರಿಸರದ ಮೇಲಾಗುವ ಹಾನಿಯ ಪ್ರಮಾಣವನ್ನು ಕಡಿಮೆ ಮಾಡಬಹುದು. ಆದರೆ, ರಾಸಾಯನಿಕಗಳಿಲ್ಲದೆ ಸಮೃದ್ಧಿಯಾಗಿ ಬೆಳೆಗಳನ್ನು ಬೆಳೆಯುವುದು ಅಸಾಧ್ಯ.

ಹೀಗೆ ಬೆಳೆಯದೇ ಹೋದರೆ ಕೃಷಿ ಪದಾರ್ಥಗಳ ಬೆಲೆಗಳನ್ನು ಅನಿವಾರ್ಯವಾಗಿ ಹೆಚ್ಚಿಸಬೇಕಾಗುತ್ತದೆ. ರಾಸಾಯನಿಕಗಳು ಎಂದರೆ ಜನರ ಮನಸ್ಸಿನಲ್ಲಿ ಭಯ ಉಂಟುಮಾಡುವುದು ಸರಿಯಲ್ಲ. ಜೀವವೆಲ್ಲಾ ರಾಸಾ-ಯನಿಕಗಳಿಂದ ತುಂಬಿದೆ. ರಾಸಾಯನಿಕಗಳಿಲ್ಲದೆ ಜೀವವೂ ಇಲ್ಲ, ಜೀವನವೂ ಇಲ್ಲ. ಕೃತಕ ರಾಸಾಯನಿಕಗ-ಳನ್ನು ಅವುಗಳ ಸಾಧಕ- ಬಾಧಕ ಅರಿತು ಇತಿಮಿತಿಯಲ್ಲಿ ಬಳಸಿದರೆ ಭಯಪಡುವ ಅಗತ್ಯವಿಲ್ಲ.

ಕೃಷಿಯಲ್ಲಿ ಕೃತಕ ರಾಸಾಯನಿಕಗಳ ಬಳಕೆಗೆ ಸಂಬಂಧಿಸಿದಂತೆ ರಾಸಾಯನಿಕ ನಿಯಂತ್ರಣ ಕಾಯ್ದೆಗಳನ್ನು ಎಲ್ಲಾ ರಾಷ್ಟ್ರಗಳು ರೂಪಿಸಿಕೊಂಡಿವೆ. ಅಲ್ಲದೆ ಪ್ರತಿವರ್ಷ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಭೆ ಸೇರುವ ತಜ್ಞರು, ವಿಚಾರ ವಿನಿಮಯ ಮಾಡಿಕೊಂಡು, ಹೊಸದಾಗಿ ಕಂಡುಕೊಂಡಿರುವ ಸುರಕ್ಷಾ ಕ್ರಮಗಳು ಮತ್ತು ಪರಿಣಾಮಕಾರಿ ಬಳಕೆಗೆ ಸಂಬಂಧಿಸಿದ ಮಾಹಿತಿಗಳನ್ನು ವಿಮರ್ಶಿಸಿ, ನಿಯಂತ್ರಣಕ್ಕೆ ಸೂಚನೆಗಳನ್ನು ನೀಡುತ್ತಾರೆ. ಆ ಮಾರ್ಗ ಅನುಸರಿಸಿ ರಾಸಾಯನಿಕಗಳನ್ನು ಬಳಸಿದರೆ ಎಲ್ಲರಿಗೂ ಒಳಿತು.

ಸಾವಯವ ಕೃಷಿ ಪದ್ಧತಿಯಿಂದ ಬರೀ ಹಣ್ಣು, ತರಕಾರಿಗಳನ್ನು ಸಣ್ಣ ಪ್ರಮಾಣದಲ್ಲಿ ಲಾಭದಾಯಕವಾಗಿ ಬೆಳೆಯಬಹುದು. ಮನೆಗಳು ಮತ್ತು ಕಟ್ಟಡಗಳ ಮೇಲ್ಛಾವಣಿ ಮೇಲೆ, ಮನೆಗಳ ಮುಂದಿನ ಅಥವಾ ಹಿಂದಿನ ಅಂಗಳಗಳಲ್ಲಿ ಸ್ವಂತಕ್ಕೆ ಬೆಳೆದು ಪ್ರಯೋಜನ ಪಡೆಯಬಹುದು. ಜೊತೆಗೆ ಕೆಲ ಪಂಚತಾರಾ ಹೋಟೆಲುಗಳಿಗೆ ತಲುಪಿಸಿ ಒಂದಷ್ಟು ಹಣ ಗಳಿಸಬಹುದು. ಇದನ್ನು 'ಅರ್ಬನ್ ಅಗ್ರಿಕಲ್ಚರ್' ಎಂದು ಕರೆಯುತ್ತಾರೆ. ಸದ್ಯಕ್ಕೆ ಜಗತ್ತಿನಾದ್ಯಂತ ಸಾವಯವ ಮಾರುಕಟ್ಟೆಯ ವಹಿವಾಟಿನ ಪ್ರಮಾಣ ಸುಮಾರು 7.5 ಲಕ್ಷ ಕೋಟಿ ರೂಪಾಯಿಯಷ್ಟು ಎಂದು ಅಂದಾಜಿಸಲಾಗಿದೆ. ಅಂದರೆ ಸರಾಸರಿ ಸಾವಯವ ಕೃಷಿಯು ಜಗತ್ತಿನ ಕೃಷಿಯಲ್ಲಿ ಶೇಕಡ 3ರಿಂದ 4ರಷ್ಟು ಮಾತ್ರ.

ಸಾವಯವ ಕೃಷಿಕರು ತಮ್ಮ ಮಾರುಕಟ್ಟೆ ಪಾಲನ್ನು ಹೆಚ್ಚಿಸಲು ಹಾತೊರೆಯುತ್ತಿದ್ದಾರೆ. ಅದಕ್ಕೆ ಏನೇ ಅಡ್ಡಿ ಬಂದರೂ ಅದನ್ನು ಅವರು ಶತಾಯಗತಾಯ ವಿರೋಧಿಸುತ್ತಾರೆ. ಆಧುನಿಕ ಜೈವಿಕ ತಂತ್ರಜ್ಞಾನದ ಆವಿಷ್ಕಾರಗಳು ರೈತರಿಗೆ ಲಾಭದಾಯಕವಾಗಿ ತೋರಿ ಅವರು ಅವುಗಳನ್ನೇ ಅವಲಂಬಿಸಿಬಿಡಬಹುದು ಎನ್ನುವ ಭಯ ಅವರಲ್ಲಿದೆ. ಉದಾಹರಣೆಗೆ, ಭಾರತದಲ್ಲಿ ಅಧಿಕೃತವಾಗಿ ಅನುಮೋದಿಸಿದ ಒಂದೇ ಜೈವಿಕ ತಂತ್ರಜ್ಞಾನದ ಬೆಳೆ ಅಂದರೆ ಬಿ.ಟಿ. ಹತ್ತಿ ಹಾಗೂ ಅದು ಸುಮಾರು ಶೇ 95ರಷ್ಟು ಹತ್ತಿ ಬೆಳೆಗಾರರಲ್ಲಿ ಪಡೆದಿರುವ ಮಾನ್ಯತೆ.

ಜಗತ್ತಿನ ತಾಪಮಾನ ಮತ್ತು ಹವಾಮಾನ ಬದಲಾವಣೆಯಿಂದ ಕೃಷಿಯ ಮೇಲಾಗುವ ಪರಿಣಾಮಗಳ ಬಗ್ಗೆ ಎಲ್ಲರೂ ಅರಿಯಬೇಕಾದ ತುರ್ತು ಇದೆ. ಎರಡೂ ತರಹದ ಕೃಷಿ ಪದ್ಧತಿಯನ್ನು ಯಾವ ಬಗೆಯಲ್ಲಿ ಸಂಯೋಜಿಸಿದರೆ ರೈತರು ಮತ್ತು ಪರಿಸರಕ್ಕೆ ಲಾಭವಾಗುತ್ತದೆ ಎನ್ನುವುದರ ಬಗ್ಗೆ ಸಾವಯವ ಕೃಷಿಕರು ಹಾಗೂ ಆಧುನಿಕ ಕೃಷಿ ವಿಜ್ಞಾನಿಗಳು ಜೊತೆಗೂಡಿ ಯೋಚಿಸಿ, ಅದನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸ ಬೇಕು.

ಲೇಖಕ: ಕೃಷಿ ತಜ್ಞ, ಪ್ರಾಧ್ಯಾಪಕ, ಪೂರ್ವ ಮೇರಿಲ್ಯಾಂಡ್ ವಿಶ್ವವಿದ್ಯಾಲಯ, ಅಮೆರಿಕ

ಚುರುಮುರಿ

ಮೊಟ್ಟೆಪಾಡು

• ಮಣ್ಣೆರಾಜು

'ಸ್ಕೂಲ್ ಸಿಲೆಬಸ್‌ನಲ್ಲಿ ಮೊಟ್ಟೆ ಸೇರಿಲ್ಲ ಅಲ್ಲವೇನ್ರೀ?' ಸುಮಿ ಕೇಳಿದಳು.

'ಇಲ್ಲ, ಮೊಟ್ಟೆ ಚಿತ್ರ ಬರೆದು ಭಾಗಗಳನ್ನು ಗುರುತಿಸಿ, ಮೊಟ್ಟೆಯ ಉಪಯೋಗ, ಅಪಯೋಗ ತಿಳಿಸಿ ಎನ್ನುವ ಪ್ರಶ್ನೆಗಳೂ ಪರೀಕ್ಷೆಯಲ್ಲಿ ಇರುವುದಿಲ್ಲ. ಮೊಟ್ಟೆ ತಿನ್ನುವ ಮಕ್ಕಳಿಗೆ ಗ್ರೇಸ್ ಮಾರ್ಕ್ಸ್, ತಿನ್ನದವರಿಗೆ ಅಂಕ ಕಡಿತ ಮಾಡುವ ನಿಯಮವೂ ಇಲ್ಲ' ಎಂದ ಶಂಕ್ರಿ.

'ಶಾಲಾ ಮಕ್ಕಳು ಆರೋಗ್ಯವಂತರಾಗಿ-ರಲಿ ಎಂದು ಸರ್ಕಾರ ಕ್ಷೀರಭಾಗ್ಯದ ಜೊತೆಗೆ ಮೊಟ್ಟೆಭಾಗ್ಯ ನೀಡಿದೆ. ಆದರೆ ಮೊಟ್ಟೆ ಬೇಕು ಎಂದು ಕೆಲವರು, ಬೇಡ ಎಂದು ಕೆಲವರು ಕೋಳಿ ಜಗಳ ಶುರು ಮಾಡಿದ್ದಾರಲ್ಲಾ'.

'ಕೋಳಿ ಕೇಳಿ ಮಸಾಲೆ ಅರೆಯಬಾರದು, ಮೊಟ್ಟೆ ಇಷ್ಟ ಎನ್ನುವ ಮಕ್ಕಳು ತಿನ್ನಬಹುದು, ಅನಿಷ್ಟ ಎನ್ನುವವರು ಸುಮ್ಮನಿರಬಹುದು ಎಂದು ಸರ್ಕಾರ ಹೇಳಿದೆ'.

'ಕೆಲವರಿಗೆ ಮೊಟ್ಟೆ, ಉಳಿದವರಿಗೆ ಲೊಟ್ಟೆ ಅನ್ನುವಂತಾದರೆ ಸರ್ಕಾರದ ಸೌಲಭ್ಯದಲ್ಲಿ ತಾರತಮ್ಯವಾಗುವುದಿಲ್ಲವೇ?' ಕೇಳಿದಳು ಸುಮಿ.

'ಹೌದು, ಮೊಟ್ಟೆ ಹೆಸರಲ್ಲಿ ಶಾಲಾ ಮಕ್ಕಳಲ್ಲಿ ಅಸಮಾನತೆ, ಜಾತೀಯತೆ ಮೂಡಿಸಲಾಗುತ್ತಿದೆ ಎನ್ನುವವರು, ಹಾಗೇನಾಗುವುದಿಲ್ಲ ಎನ್ನುವವರ ನಡುವೆ ಮೊಟ್ಟೆ ಎಸೆದಾಟ ಶುರುವಾಗಿದೆ'.

'ಕೋಳಿ ಉತ್ಪನ್ನವಾಗಿರುವ ಮೊಟ್ಟೆ ಮಾಂಸಾಹಾರಿ ಅಲ್ವೇನ್ರೀ?'

'ಅದು ಹೌದಾದರೆ ಹಸುವಿನ ಉತ್ಪನ್ನ ಹಾಲು ಕೂಡಾ ಅಂಥದ್ದೇ ಆಹಾರ ಅಲ್ವೇ ಎಂದು ವಾದಿಸುವವರೂ ಇದ್ದಾರೆ. ಹೀಗಾಗಿ, ಮೊಟ್ಟೆ ವಿವಾದವು ಕೋಳಿ ಮೊದಲೊ, ಮೊಟ್ಟೆ ಮೊದಲೊ ಎನ್ನುವಷ್ಟೇ ಜಟಿಲವಾಗಿದೆ'.

'ಹಾಗಲ್ಲಾರೀ, ಮೊಟ್ಟೆ ಕೊಟ್ಟರೆ ಸಾಲದು, ಬಿಸಿಯೂಟದಲ್ಲಿ ಕೋಳಿ ಊಟವೂ ಬೇಕು ಎನ್ನುವ ಬೇಡಿಕೆ ಬಂದರೆ ಶಾಲೆಯಲ್ಲಿ ಪಂಕ್ತಿಭೇದ ಶುರುವಾಗಿ ರಗಳೆ ಆಗುತ್ತಲ್ರೀ...'

'ಅಂಥಾ ಸಂದರ್ಭ ಎದುರಾದಾಗ, ಇಂಗ್ಲಿಷ್ ಮೀಡಿಯಂ, ಕನ್ನಡ ಮೀಡಿಯಂ ಶಾಲೆ ಥರಾ ವೆಜಿಟೇರಿಯನ್, ನಾನ್ ವೆಜಿಟೇರಿಯನ್ ಶಾಲೆ ಅಂತ ಪ್ರತ್ಯೇಕ ವ್ಯವಸ್ಥೆ ಮಾಡಬೇಕಾಗುತ್ತದೆ' ಎಂದ ಶಂಕ್ರಿ.

ಸಂಗತ

ಮೊಬೈಲ್ ಮೋಹ: ಯಾಕೀ ತಹತಹ?

ಕೋವಿಡ್ ತಂದೊಡ್ಡಿರುವ ಅಡ್ಡಪರಿಣಾಮಗಳಲ್ಲಿ, ಮಕ್ಕಳಲ್ಲಿ ತಲೆದೋರಿರುವ ಮೊಬೈಲ್ ಗೀಳೂ ಒಂದು

• ದೀಪಾ ಹಿರೇಗುತ್ತಿ

ಮಗ ಹೇಗೆ ಓದುತ್ತಾನೆ ಎಂದು ವಿಚಾರಿಸಲು ಮೊನ್ನೆ ನಮ್ಮ ಕಾಲೇಜಿಗೆ ಪ್ರಥಮ ಪಿಯು ಹುಡುಗನೊಬ್ಬನ ತಾಯಿ ಬಂದಿದ್ದರು. ಸ್ಟಾಫ್‌ರೂಮಿಗೆ ಅವನನ್ನು ಕರೆಸಿದೆವು. ನಮ್ಮ ಕನ್ನಡ ಉಪನ್ಯಾಸಕರು 'ಕನ್ನಡದ ಮೊದಲನೇ ಪಾಠ ಯಾವುದು ಹೇಳು' ಎಂದು ಕೇಳಿದರು. ಉಹ್ಞೂಂ, ಅವನಿಗೆ ನೆನಪಿಗೇ ಬರಲಿಲ್ಲ! ಆತ ಹತ್ತನೇ ತರಗತಿಯಲ್ಲಿ ಶೇಕಡ ಎಪ್ಪತ್ತಕ್ಕಿಂತ ಹೆಚ್ಚು ಅಂಕ ತೆಗೆದವನೇ, ಎರಡು ತಿಂಗಳಿಂದ ಪಾಠ ಕೇಳಿದವನೇ!

ನಮ್ಮ ಮನೆಯ ಬದಿಯಿಂದಲೇ ಹಾದು ಹೋಗುವ ಕಾಲುದಾರಿಯು ಹಳ್ಳಿಯೊಂದಕ್ಕೆ ತಲುಪುತ್ತದೆ. ಆ ಊರಿಂದ ದಿನವೂ ಬೆಳಿಗ್ಗೆ ಪಟ್ಟಣದ ಹೋಟೆಲೊಂದಕ್ಕೆ ಕೆಲಸ ಮಾಡಲು ಬರುವ ಮಹಿಳೆಯೊಬ್ಬರು ಸಿಕ್ಕಿದ್ದರು. 'ನನ್ನ ಮೊಮ್ಮಗಳು ನಿಮ್ಮ ಕಾಲೇಜಿನಲ್ಲಿಯೇ ಓದುವುದು' ಎಂದರು. 'ಮನೆಯಲ್ಲಿ ಓದುತ್ತಾಳಾ?' ಎಂದು ಕೇಳಿದೆ. 'ಹೌದು, ರಾತ್ರಿ ಒಂದು ಗಂಟೆಯವರೆಗೂ ಓದುತ್ತಾಳೆ' ಎಂದರು. 'ಅವಳು ಓದುವಾಗ ಮೊಬೈಲ್ ಕೈಲಿದ್ದರೆ ದಯವಿಟ್ಟು ತೆಗೆದಿಡಿ' ಎಂದಷ್ಟೇ ಹೇಳಿದೆ.

ದೀರ್ಘಕಾಲದಿಂದ ಗೈರುಹಾಜರಾಗಿದ್ದ ವಿದ್ಯಾರ್ಥಿ ಯೊಬ್ಬನ ಮನೆಗೆ ಕರೆ ಮಾಡಿದರೆ ಅವನ ತಾಯಿ ನಂಬಲೇ ಇಲ್ಲ. ಮಾರನೇ ದಿನ ಕರೆಸಿ ಹಾಜರಿ ಪುಸ್ತಕ ತೋರಿಸಿದ ಮೇಲೆ ಆಘಾತಕ್ಕೊಳಗಾದರು. ದಿನವೂ ಕಾಲೇಜಿಗೆ ಹೋಗುತ್ತೇನೆಂದು ಬಸ್ಸು ಹತ್ತಿ ಪೇಟೆಗೆ ಬಂದು ಬಸ್‌ಸ್ಟ್ಯಾಂಡಿನಲ್ಲಿ ಮೊಬೈಲ್ ಆಡುತ್ತ ಕುಳಿತು, ಕಾಲೇಜು ಸಮಯ ಆದ ಮೇಲೆ ವಾಪಸ್ ಹೋಗುತ್ತಿದ್ದ ಆತ!

ಕೋವಿಡ್– 19 ಮಾಡಿದ ಅನಾಹುತಗಳ ಬಗ್ಗೆ ನಮಗೆಲ್ಲ ಗೊತ್ತೇ ಇದೆ. ಸಾವು, ಅನಾರೋಗ್ಯ ದಂತಹ ನೇರ ಪರಿಣಾಮಗಳೇ ಅರಗಿಸಿಕೊಳ್ಳಲಾ-ರದಂಥವು. ಅದರ ಪರೋಕ್ಷ ಪರಿಣಾಮಗಳು ಈಗ ಕಣ್ಣೆದುರು ಬರುತ್ತಿವೆ. ಅದರಲ್ಲೂ ಹೈಸ್ಕೂಲು ಮತ್ತು ಕಾಲೇಜು ವಿದ್ಯಾರ್ಥಿಗಳ ವರ್ತನೆಯಲ್ಲಿ ಆಗಿರುವ ನೇತ್ಯಾತ್ಮಕ ಬದಲಾವಣೆಗಳಂತೂ ಕಣ್ಣುಕುಕ್ಕುವಂತಿವೆ. ವರ್ಷಗಟ್ಟಲೆ ಮೊಬೈಲ್ ಕೈಲಿ ಹಿಡಿದ ಮಕ್ಕಳಿಗೆ, ಪರೀಕ್ಷೆಯನ್ನೇ ಬರೆಯದೆ ಅಥವಾ ಅತೀ ಸುಲಭ ಪರೀಕ್ಷೆ ಎದುರಿಸಿ ಮುಂದಿನ ತರಗತಿಗೆ ದಾಟಿಕೊಂಡ ಮಕ್ಕಳಿಗೆ ಓದು ಬೇಡವಾಗುತ್ತಿದೆ. ಗಂಟೆಗಟ್ಟಲೆ ಕೂತು ತರಗತಿಯಲ್ಲಿ ಪಾಠ ಕೇಳುವ ಮನಸ್ಸೂ ಇಲ್ಲ-ವಾಗುತ್ತಿದೆ. ಮೊಬೈಲ್ ಕೈಲಿದ್ದಾಗ ಅಂಟಿಕೊಂಡ ಆನ್‌ಲೈನ್ ಆಟದ, ಯುಟ್ಯೂಬ್, ಇನ್‌ಸ್ಟಾಗ್ರಾಮ್ ಇತ್ಯಾದಿಗಳ ಹವ್ಯಾಸ ಗೀಳಾಗಿ ಪರಿವರ್ತನೆ ಹೊಂದಿ ಈಗ ಅವರ ಕೈಮೀರಿ ಹೋಗಿದೆ. ಮಕ್ಕಳಿಗೇ ಸ್ವಂತ ಮೊಬೈಲ್ ಕೊಡಿಸಿದ್ದರೆ ಕಥೆ ಮುಗಿದೇಹೋಯಿತು. ಉಳಿದವರು ಪಾಠ ಇದೆ, ನೋಟ್ಸ್ ಇದೆ ಎಂದು ಸುಳ್ಳು ಹೇಳುತ್ತ ಮೊಬೈಲ್ ಸದಾ ಕೈಲಿ ಇರುವ ಹಾಗೆ ನೋಡಿಕೊಳ್ಳುತ್ತಿದ್ದಾರೆ. ಆನ್‌ಲೈನ್ ಆಟದ ಮೋಡಿಗೆ ಬಿದ್ದ ಹುಡುಗರಿಗಂತೂ ಆ ಆಟದಲ್ಲಿ ಒಳ್ಳೆಯ ಸಾಧನೆ ಮಾಡಿದವರೇ ಆರಾಧ್ಯದೈವಗಳು! ಇನ್ನು ಆಟದಲ್ಲಿ ಒಂದಿಷ್ಟು ಹಣ ಬಂದುಬಿಟ್ಟರಂತೂ ಅದನ್ನೇ ಕೆರಿಯರ್ ಮಾಡಿಕೊಳ್ಳುವ ಹುಚ್ಚು ಬಯಕೆ ಮಕ್ಕಳಲ್ಲಿ! ಇದರ ಪರಿಣಾಮ, ತರಗತಿಯಲ್ಲಿ ಪಟಪಟನೆ ಉತ್ತರ ಹೇಳುವ ಜಾಣ ಮಕ್ಕಳೂ ಮನೆಯಲ್ಲಿ ಅಭ್ಯಾಸ ಮಾಡದ ಕಾರಣಕ್ಕೆ ಕಡಿಮೆ ಅಂಕ ಗಳಿಸುತ್ತಿದ್ದಾರೆ.

ಕಾಲೇಜಿಗೆ ಮೊಬೈಲ್ ತರಬಾರದೆಂಬ ನಿಯಮ ಇರುವುದರಿಂದ ಗಂಟೆಗಟ್ಟಲೆ ಮೊದಲೇ ಕಾಲೇಜಿಗೆಂದು ಹೊರಟು, ಸಮಯ ಆಗುವವರೆಗೂ ಮೊಬೈಲ್‌ನಲ್ಲಿ ಮುಳುಗಿ ನಂತರ ಅದನ್ನು ಯಾವುದಾದರೂ ಅಂಗಡಿಯಲ್ಲಿ ಇಟ್ಟು ಮತ್ತೆ ಕಾಲೇಜು ಮುಗಿದ ನಂತರ ತೆಗೆದುಕೊಂಡು, ಗಂಟೆಗಟ್ಟಲೆ ಹಿಡಿದುಕೊಂಡು ನಂತರ ಮನೆಗೆ ಹೋಗುವುದು ತಾಲ್ಲೂಕು ಕೇಂದ್ರಗಳ ಬಹುತೇಕ ಮಕ್ಕಳ ಸ್ಥಿತಿ. ಅರ್ಧ ಗಂಟೆ ಊಟದ ಅವಧಿಯಲ್ಲಿ ಕೂಡ ಓಡೋಡಿ ಬಂದು ಮೊಬೈಲ್ ನೋಡಿ ಓಡುವಂತಹ ತುರ್ತು ಇರುತ್ತದೆ ಎಂದರೆ ಮೊಬೈಲ್ ಅವರನ್ನು ಆವಾಹಿಸಿರುವ ಪರಿಗೆ ದಿಗಿಲಾಗುತ್ತದೆ. 'ಪಾಪ, ನನ್ನ ಮಗ ರಾತ್ರಿ ಎರಡು ಗಂಟೆಯವರೆಗೂ ಓದುತ್ತಾನೆ' ಎಂದು ಯಾವುದಾದರೂ ಪಾಲಕರು ಹೇಳಿದರೆ ನನ್ನ ಮೊದಲ ಪ್ರಶ್ನೆ 'ಮೊಬೈಲ್ ಕೈಲಿರುತ್ತಾ' ಎಂಬುದು. ಅವರ ಉತ್ತರ 'ಹೌದು' ಎಂದೇ ಆಗಿರುತ್ತದೆ. 'ಮೊದಲು ಮೊಬೈಲ್ ಕಿತ್ತಿಡಿ. ಮೊಬೈಲ್ ಇಲ್ಲದೇ ಓದಲು ಹೇಳಿ, ಹತ್ತು ಗಂಟೆಯೊಳಗೆ ಹಾಸಿಗೆ ಸೇರುತ್ತಾರೆ ನೋಡಿ' ಎಂದು ಹೇಳಿ ಕಳಿಸುತ್ತೇನೆ.

ಮೊಬೈಲ್ ಹುಚ್ಚಿನಿಂದ ಕಲಿಕೆಯಲ್ಲಿ ಹಿಂದುಳಿದಿರುವಿಕೆ ಮಾತ್ರವಲ್ಲ. ಹದಿಹರೆಯದ ಮಕ್ಕಳು ಲೈಂಗಿಕ ಆಕರ್ಷಣೆಗೂ ಒಳಗಾಗಿ ತಪ್ಪು ಹೆಜ್ಜೆ ಇಡುವ ಸಾಧ್ಯತೆ ಇಲ್ಲದೇ ಇಲ್ಲ.

ಇವಕ್ಕೆಲ್ಲ ಪರಿಹಾರ ತಾಳ್ಮೆಯಿಂದಲೇ ಆಗಬೇಕು. ವಿದ್ಯಾಭ್ಯಾಸದ ಮಹತ್ವವನ್ನು ಅವರಿಗೆ ಮನದಟ್ಟಾಗುವ ಹಾಗೆ ತಿಳಿಸಿ ಹೇಳಬೇಕು. ಮಕ್ಕಳ ಶಾಲೆ, ಕಾಲೇಜಿಗೆ ಪಾಲಕರು ಆಗಾಗ್ಗೆ ಭೇಟಿ ನೀಡಬೇಕು. ಗಂಟೆಗಟ್ಟಲೆ ಮೊಬೈಲ್ ಹಿಡಿದುಕೊಳ್ಳಲು ಅವಕಾಶ ಕೊಡದಿದ್ದರೆ ಒಳ್ಳೆಯದು. ಅವಶ್ಯಕತೆ ಬಿದ್ದರೆ ವೈದ್ಯರ ಹತ್ತಿರ ಕೌನ್ಸೆಲಿಂಗ್ ಕೂಡ ಮಾಡಿಸಬಹುದು. ಆದಷ್ಟು ಬೇಗ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕಿರುವುದು ಇಂದಿನ ತುರ್ತು.

ವಾಚಕರ ವಾಣಿ

ಕಸ್ತೂರಿರಂಗನ್ ವರದಿ: ರಾಜಕೀಯ ಬೇಡ

ಕಸ್ತೂರಿರಂಗನ್ ವರದಿಯನ್ನು ತಿರಸ್ಕರಿಸುವಂತೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿರುವುದನ್ನು ನೋಡಿದರೆ, 'ಕಾಡು ಬೆಳೆಸಿ ನಾಡು ಉಳಿಸಿ' ಎಂಬ ಹೇಳಿಕೆಗೆ ಅರ್ಥವೇನಿದೆ ಎಂಬ ಪ್ರಶ್ನೆ ಮೂಡುತ್ತದೆ. ಈ ವರದಿಯಲ್ಲಿ ಗಣನೆಗೆ ತೆಗೆದುಕೊಂಡ ಗ್ರಾಮಗಳಲ್ಲಿ ಹೆಚ್ಚಿನವನ್ನು ಪರಿಸರಸೂಕ್ಷ್ಮ ವ್ಯಾಪ್ತಿಯಿಂದ ಹೊರಗಿಡಲಾಗಿದ್ದು, ಇದರಲ್ಲಿ ಜನರಿಗೆ ಮಾರಕವಾಗುವ ಅಥವಾ ಒಕ್ಕಲೆಬ್ಬಿಸುವ ಅಂಶಗಳಿಲ್ಲ. ವರದಿಯಲ್ಲಿರುವ ಅಂಶಗಳ ಬಗ್ಗೆ ಸ್ಥಳೀಯರಲ್ಲಿ ಅರಿವು ಮೂಡಿಸಿ ಅವರ ತಳಮಳ, ಆತಂಕವನ್ನು ದೂರ ಮಾಡಬೇಕಾದುದು ಸರ್ಕಾರ ಮತ್ತು ಜನನಾಯಕರ ಕರ್ತವ್ಯ. ಆದರೆ ಇದನ್ನು ಚುನಾವಣಾ ರಾಜಕೀಯಕ್ಕಾಗಿ ಬಳಸಿಕೊಳ್ಳುತ್ತಿರುವುದು ವಿಷಾದನೀಯ. ಈ ವರದಿಯನ್ನು ತಿರಸ್ಕರಿಸುವುದು ದೇಶದ ನೈಸರ್ಗಿಕ ಸಂಪನ್ಮೂಲದ ಮೇಲೆ ಪರಿಣಾಮ ಬೀರುತ್ತದೆ.

ಪಶ್ಚಿಮಘಟ್ಟವು ವೈವಿಧ್ಯಮಯ ಪ್ರಾಣಿ, ಪಕ್ಷಿ, ಸಸ್ಯ ವರ್ಗವನ್ನು ಹೊಂದಿದ್ದು, ಕೆಲವು ಪ್ರಭೇದಗಳು ಅಳಿವಿನಂಚಿನಲ್ಲಿವೆ. ಇವುಗಳ ರಕ್ಷಣೆ ಪ್ರತಿಯೊಬ್ಬ ಪ್ರಜೆಯ ಕರ್ತವ್ಯ. ಇಂತಹ ವಿಷಯಗಳು ರಾಜಕೀಯ ಲಾಭಕ್ಕೆ ಬಳಕೆಯಾಗುವುದು ಬೇಡ.

ಬಿ.ಎಸ್.ಚೈತ್ರ, ಜಾಲಿಕಟ್ಟೆ, ಚಿತ್ರದುರ್ಗ

ಟೊಮೆಟೊ ದರ ನಿಯಂತ್ರಿಸಿ

ಕೆಲವು ದಿನಗಳಿಂದ ರಾಜ್ಯದಲ್ಲಿ ಟೊಮೆಟೊ ದರವು ಕೆ.ಜಿ ಗೆ ₹ 100ರ ಗಡಿ ದಾಟಿದೆ. ಬಡ ಹಾಗೂ ಮಾಧ್ಯಮ ವರ್ಗದ ಜನರು ಅಡುಗೆಗೆ ಬಳಸದಂತಾಗಿದೆ. ಟೊಮೆಟೊಗೆ ಬಂದಿರುವ ಬಂಗಾರದ ಬೆಲೆಯ ಲಾಭ ರೈತನಿಗೆ ಸಿಕ್ಕಿದೆಯೇ? ಅಥವಾ ದಲ್ಲಾಳಿಗಳು ಮತ್ತು ವ್ಯಾಪಾರಿಗಳೇ ಇದರ ಕೃತಕ ಅಭಾವ ಸೃಷ್ಟಿಸಿ ಲಾಭ ಮಾಡಿಕೊಳ್ಳುತ್ತಿದ್ದಾರೋ?! ಸರ್ಕಾರ ಕೂಡಲೇ ಟೊಮೆಟೊ ದರವನ್ನು ನಿಯಂತ್ರಿಸಬೇಕು.

ಚನ್ನಕೇಶವ ಜಿ.ಕೆ., ತರೀಕೆರೆ

ಕ್ಷೇತ್ರ ಬಿಟ್ಟುಕೊಡುವುದೆಂದರೆ...

'ಸ್ವಕ್ಷೇತ್ರದಲ್ಲಿ ಗೆಲ್ಲುವ ಯೋಗ್ಯತೆ ಇಲ್ಲಂದ್ರ ಇಲ್ಲಿ ಯಾಕ ನಿಲ್ಲಬೇಕು? ನಮಗೆ ಯಾಕ ಗಂಟ ಬಿದ್ರಿ ನೀವು' ಎಂದು 'ಈ ಬಾರಿಯ ಚುನಾವಣೆಯಲ್ಲೂ ಬಾದಾಮಿಯಿಂದಲೇ ಸ್ಪರ್ಧಿಸುತ್ತೇನೆ' ಎಂದ ಸಿದ್ದರಾಮಯ್ಯನವರಿಗೆ, ಕಳೆದ ಬಾರಿಯ ಚುನಾವಣೆಯಲ್ಲಿ ಅವರಿಗಾಗಿ ಆ ಕ್ಷೇತ್ರವನ್ನು ಬಿಟ್ಟುಕೊಟ್ಟಿದ್ದ ಮಾಜಿ ಶಾಸಕ ಬಿ.ಬಿ.ಚಿಮ್ಮನಕಟ್ಟಿ ಪ್ರಶ್ನಿಸಿದ್ದಾರೆ. ಅವರ ಈ ಆಕ್ರೋಶ ಸರಿಯಾಗಿಯೇ ಇದೆ. ಕ್ಷೇತ್ರ ಬಿಟ್ಟುಕೊಡುವುದೆಂದರೆ ಸುಲಭದ ಸಂಗತಿಯಲ್ಲ. ಯಾವುದೋ ಕಾರಣಕ್ಕೆ ಹೀಗೆ ಬಿಟ್ಟುಕೊಡುವವರು ನಂತರದ ವರ್ಷಗಳಲ್ಲಿ ಜನಮಾನಸದಿಂದ ಮರೆಯಾಗುವ ಸಾಧ್ಯತೆ ಹೆಚ್ಚು. ಇದೇ ಚಿಮ್ಮನಕಟ್ಟಿ ಅವರ ಮನದ ನೋವಿಗೆ ಕಾರಣ. ಚಿಮ್ಮನಕಟ್ಟಿ ಅವರ ನೇರವಂತಿಕೆಗೆ ಮತ್ತು ಧೈರ್ಯಕ್ಕೆ ಮೆಚ್ಚುಗೆ ಸೂಚಿಸಬೇಕು.

ಇಂದಿರಾ ಗಾಂಧಿ ಚಿಕ್ಕಮಗಳೂರಿನಲ್ಲಿ, ಸೋನಿಯಾ ಗಾಂಧಿ ಬಳ್ಳಾರಿಯಲ್ಲಿ, ರಾಹುಲ್ ಗಾಂಧಿ ಕೇರಳದ ವಯನಾಡಿನಲ್ಲಿ, ದೇವೇಗೌಡರು ತುಮಕೂರಿನಲ್ಲಿ, ಎಸ್.ಎಂ.ಕೃಷ್ಣ ಚಾಮರಾಜಪೇಟೆಯಲ್ಲಿ, ಅನಂತನಾಗ್ ಬಸವನಗುಡಿಯಲ್ಲಿ ಸ್ಪರ್ಧಿಸಿದ್ದು ಗಮನಾರ್ಹ. ಈ ಪಟ್ಟಿ ಬಹಳಷ್ಟು ದೊಡ್ಡದಿದೆ. ಇದಕ್ಕೆ ಸಾಂವಿಧಾನಿಕ ಮಾನ್ಯತೆ ಇದೆಯಾದರೂ ಸೋಲಿನ ಭೀತಿಯೇ ಅತಿಮುಖ್ಯ ಕಾರಣ. ಇಂತಹದ್ದರ ಜೊತೆಗೆ ಎರಡೆರಡು ಕ್ಷೇತ್ರಗಳಲ್ಲಿ ಸ್ಪರ್ದಿಸುವವರೂ ಇದ್ದಾರೆ.

ನರೇಂದ್ರ ಮೋದಿ, ರಾಹುಲ್ ಗಾಂಧಿ ಮುಂತಾದವರು ಇದಕ್ಕೆ ನಿದರ್ಶನ. ಇಂತಹ ಬೆಳವಣಿಗೆಗೆ ಚುನಾವಣಾ ಆಯೋಗ ತಡೆಹಾಕಿದರೆ ನಿಸ್ಪೃಹ ಜನಸೇವಕರಿಗೆ ಅವಕಾಶ ತಪ್ಪದು. ಜೊತೆಗೆ ಉಪಚುನಾವಣೆಯಂತಹ ಅನಗತ್ಯ ಖರ್ಚುಗಳಿಗೂ ಕಡಿವಾಣ ಬೀಳುತ್ತದೆ. ಸದರಿ ಕ್ಷೇತ್ರದಲ್ಲಿ ಕನಿಷ್ಠ ಐದು ವರ್ಷಗಳ ಕಾಲ ವಾಸವಿದ್ದವರಿಗೆ ಮಾತ್ರ ಸ್ಪರ್ಧಿಸಲು ಅವಕಾಶ ನೀಡಲಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಅಂಬೇಡ್ಕರ್ ಕೊಡುಗೆ ಅರಿಯೋಣ

ಅಂಬೇಡ್ಕರ್ ನಮ್ಮನ್ನು ಬಿಟ್ಟುಹೋಗಿ ಕೆಲವು ದಶಕಗಳೇ ಕಳೆದುಹೋಗಿವೆ. ಅವರು ಬಿತ್ತಿದ ದೂರದೃಷ್ಟಿಯ ಯೋಜನೆಯ ಬೀಜಗಳು ಇಂದಿಗೂ ಫಲ ನೀಡುತ್ತಿವೆ. ಅವುಗಳನ್ನು ಪ್ರತಿವರ್ಗದ ಜನರೂ ಅನುಭವಿಸುತ್ತಿದ್ದರೂ ಅಂಬೇಡ್ಕರ್ ಅವರು ಬರೀ ದಲಿತರ ಶ್ರೇಯೋಭಿವೃದ್ಧಿಗೆ ದುಡಿದು ಹೋಗಿದ್ದಾರೆ ಎಂಬಂತೆ ಕೆಲವರು ಬಾಲಿಶ ಭಾವನೆಗಳನ್ನು ಹೊಂದಿರುವುದು ಈ ದೇಶದ ದುರಂತ. ಒಬ್ಬ ಮಹಿಳೆ ತನ್ನ ಮಾತೃತ್ವದ ಹೆರಿಗೆಯ ರಜಾ ದಿನಗಳನ್ನು ಮಗುವಿನೊಂದಿಗೆ ಕಳೆಯಲು ಮೂರು ತಿಂಗಳವರೆಗೆ ಸಂಬಳಸಹಿತ ರಜೆ ನೀಡುವ ಕಾನೂನು ರೂಪಿಸುವಲ್ಲಿ ಅಂಬೇಡ್ಕರ್ ಪ್ರಮುಖ ಪಾತ್ರ ವಹಿಸಿದ್ದರು.

ಒಬ್ಬ ಮನುಷ್ಯ ದಿನದಲ್ಲಿ ಹನ್ನೆರಡು ಗಂಟೆ ಕರ್ತವ್ಯ ನಿರ್ವಹಿಸುವುದರಿಂದ ಇತರ ದಿನನಿತ್ಯದ ಕೆಲಸಗಳಿಗೆ ತೊಡಕು ಉಂಟಾಗುತ್ತದೆ ಎಂಬ ದೂರದೃಷ್ಟಿಯಿಂದ ಕರ್ತವ್ಯದ ವೇಳೆಯನ್ನು ಎಂಟು ಗಂಟೆಗಳಿಗೆ ಇಳಿಸುವಲ್ಲಿ ಸಫಲರಾದರು. ದೇಶದ ಅರ್ಥವ್ಯವಸ್ಥೆಯ ಬಗ್ಗೆ ಸ್ಪಷ್ಟ ಕಲ್ಪನೆ ಹೊಂದಿದ್ದ ಅವರು, ತಮ್ಮ 'ದಿ ಪ್ರಾಬ್ಲಮ್ ಆಫ್ ದಿ ರುಪಿ' ಎಂಬ ಗ್ರಂಥದಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪನೆ ಮತ್ತು ಪ್ರತೀ ಇಪ್ಪತ್ತು ವರ್ಷಗಳಿಗೊಮ್ಮೆ ನೋಟು ಅಮಾನ್ಯೀಕರಣದ ಬಗ್ಗೆ ಉಲ್ಲೇಖಿಸಿದ್ದಾರೆ.

ಹೀಗೆ ಅವರ ಸಾಧನೆಯ ಪಟ್ಟಿ ವಿಸ್ತಾರಗೊಳ್ಳುತ್ತಲೇ ಸಾಗುತ್ತದೆ. ಇಷ್ಟೆಲ್ಲಾ ದೂರದೃಷ್ಟಿಯ ಯೋಜನೆಗಳು ಕೇವಲ ದಲಿತರಿಗಾಗಿ ಮೀಸಲಾದವುಗಳೇ? ಅವರನ್ನು ಬರೀ ಮೀಸಲಾತಿಯ ನಾಯಕರನ್ನಾಗಿ ಮಾತ್ರ ನೋಡಿ, ಭಾರತದ ಇತಿಹಾಸದಲ್ಲಿ ಅವರಿಗೆ ಸಿಗಬೇಕಾದ ಸೂಕ್ತ ಸ್ಥಾನಮಾನಗಳು ಇಂದಿಗೂ ಸಿಗದಿರುವುದು ಅತ್ಯಂತ ನೋವಿನ ಸಂಗತಿ.

ಸುಜ್ಜಲೂರು ವಿಜಿ, ವಾಟಾಳು, ಟಿ.ನರಸೀಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಇಟಿಎಫ್ ಜನಪ್ರಿಯತೆಯ ನಾಗಾಲೋಟ

• ವಿಜಯ್ ಜೋಷಿ

ವರ್ಷದ ಆರಂಭದಲ್ಲಿ ‘ಪ್ರಜಾವಾಣಿ’ಗೆ ನೀಡಿದ್ದ ಸಂದರ್ಶನದಲ್ಲಿ ಪೇಟಿಎಂ ಮನಿ ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ವರುಣ್ ಶ್ರೀಧರ್ ಅವರು ವಿನಿಮಯ ವಹಿವಾಟು ನಿಧಿಗಳ (ಇಟಿಎಫ್) ಬಗ್ಗೆ ಒಂದೆರಡು ಮಾತುಗಳನ್ನು ಆಡಿದ್ದರು. ‘ಭಾರತದಲ್ಲಿ ಇಂದು ಇಟಿಎಫ್ ಮಾರುಕಟ್ಟೆ ಬಹಳ ಚಿಕ್ಕದಿದೆ. ಆದರೆ, ಅಮೆರಿಕದಲ್ಲಿ ಸಣ್ಣ ಹೂಡಿಕೆದಾರರಲ್ಲಿ ಬಹುತೇಕರು ಇಟಿಎಫ್‌ಗಳ ಮೂಲಕ ಹೂಡಿಕೆ ಮಾಡುತ್ತಾರೆ’ ಎಂದು ಅವರು ಹೇಳಿದ್ದರು. ಇಟಿಎಫ್‌ಗಳು ಅತ್ಯಂತ ಕಡಿಮೆ ಶುಲ್ಕ ಪಡೆಯುವ ಹೂಡಿಕೆ ಉತ್ಪನ್ನಗಳಾಗಿರುವ ಕಾರಣ, ಮುಂದಿನ ವರ್ಷಗಳಲ್ಲಿ ಭಾರತದ ಹಣಕಾಸು ಉತ್ಪನ್ನಗಳ ಮಾರುಕಟ್ಟೆಯಲ್ಲಿ ಇವು ದೊಡ್ಡ ಪಾಲು ಪಡೆಯಬಹುದು ಎಂಬ ಮಾತನ್ನೂ ಅವರು ಹೇಳಿದ್ದರು.

ಶ್ರೀಧರ್ ಅವರ ಮಾತಿಗೆ ಇಂಬುಕೊಡುವಂತೆ ಇವೆ ಇಟಿಎಫ್‌ಗೆ ಸಂಬಂಧಿಸಿದ ಅಂಕಿ–ಅಂಶಗಳು. ಸೆಪ್ಟೆಂಬರ್‌ಗೆ ಕೊನೆಗೊಂಡ ತ್ರೈಮಾಸಿಕದಲ್ಲಿ ದೇಶದಲ್ಲಿ ಚಾಲ್ತಿಯಲ್ಲಿ ಇರುವ ಇಟಿಎಫ್ ಹೂಡಿಕೆ ಖಾತೆಗಳ ಸಂಖ್ಯೆಯು 69.05 ಲಕ್ಷ. ಈ ಅವಧಿಯಲ್ಲಿ ಚಿನ್ನದ ಇಟಿಎಫ್ ಖಾತೆಗಳ ಸಂಖ್ಯೆ 24.59 ಲಕ್ಷ. ಒಂದು ವರ್ಷದ ಹಿಂದೆ, ಅಂದರೆ 2020ರ ಸೆಪ್ಟೆಂಬರ್ ತ್ರೈಮಾಸಿಕದ ಕೊನೆಯಲ್ಲಿ ದೇಶದಲ್ಲಿನ ಇಟಿಎಫ್ ಖಾತೆಗಳ ಸಂಖ್ಯೆ 28.67 ಲಕ್ಷ ಮಾತ್ರ. ಚಿನ್ನದ ಇಟಿಎಫ್ ಖಾತೆಗಳ ಸಂಖ್ಯೆಯು 7.59 ಲಕ್ಷ ಆಗಿತ್ತು. ಮಾಮೂಲಿ ಇಟಿಎಫ್ ಖಾತೆಗಳ ಪ್ರಮಾಣವು ಒಂದು ವರ್ಷದಲ್ಲಿ ಶೇಕಡ 140.84ರಷ್ಟು ಹೆಚ್ಚಳ ಆಗಿದೆ. ಚಿನ್ನದ ಇಟಿಎಫ್ ಖಾತೆಗಳ ಪ್ರಮಾಣವು ಶೇಕಡ 223.97ರಷ್ಟು ಏರಿಕೆ ದಾಖಲಿಸಿದೆ! ಈ ಏರಿಕೆಯ ಪ್ರಮಾಣವು ದೇಶದಲ್ಲಿ ಇಟಿಎಫ್‌ಗಳು ಪಡೆದುಕೊಳ್ಳುತ್ತಿರುವ ಜನಪ್ರಿಯತೆಯನ್ನು ಹೇಳುತ್ತಿವೆ.

ಈ ವರ್ಷದ ಜುಲೈ–ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ದೇಶದಲ್ಲಿ ಆರು ಇಟಿಎಫ್‌ಗಳು ಹೊಸದಾಗಿ ಶುರುವಾಗಿವೆ. ದೇಶದ ಹಣಕಾಸು ಉತ್ಪನ್ನಗಳ ಮಾರುಕಟ್ಟೆಯಲ್ಲಿ ಪ್ರಸ್ತುತ ಇರುವ ಇಟಿಎಫ್ ಯೋಜನೆಗಳ ಸಂಖ್ಯೆಯು 103 (11 ಚಿನ್ನದ ಇಟಿಎಫ್ ಯೋಜನೆಗಳನ್ನು ಹೊರತುಪಡಿಸಿ). ಹಿಂದಿನ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಇಟಿಎಫ್ ಯೋಜನೆಗಳ ಸಂಖ್ಯೆಯು 83 (11 ಚಿನ್ನದ ಇಟಿಎಫ್ ಯೋಜನೆಗಳನ್ನು ಹೊರತುಪಡಿಸಿ) ಮಾತ್ರ ಆಗಿತ್ತು.

ಮ್ಯೂಚುವಲ್ ಫಂಡ್‌ಗಳ ಮೂಲಕ ಮಾಡುವ ಹೂಡಿಕೆಗಳಿಗೂ ಇಟಿಎಫ್‌ಗಳ ಮೂಲಕ ಮಾಡುವ ಹೂಡಿಕೆಗಳಿಗೂ ಒಂದಿಷ್ಟು ವ್ಯತ್ಯಾಸ ಇದೆ. ಮ್ಯೂಚುವಲ್ ಫಂಡ್‌ಗಳಲ್ಲಿನ ಹೂಡಿಕೆಯ ಹಣವನ್ನು ವೃತ್ತಿಪರ ಫಂಡ್ ನಿರ್ವಾಹಕರು ನಿಭಾಯಿಸುತ್ತಾರೆ. ಯಾವ ಕಂಪನಿಯ ಷೇರುಗಳಲ್ಲಿ ಹೂಡಿಕೆ ಮಾಡಬೇಕು, ಯಾವ ಕಂಪನಿಯ ಷೇರುಗಳಲ್ಲಿ ಎಷ್ಟು ಪ್ರಮಾಣದಲ್ಲಿ ಹಣ ಹೂಡಿಕೆ ಮಾಡಬೇಕು, ಷೇರುಗಳಿಂದ ಹಣವನ್ನು ಯಾವಾಗ ಹಿಂದಕ್ಕೆ ಪಡೆಯಬೇಕು, ಮತ್ತೆ ಯಾವಾಗ ಹೂಡಿಕೆ ಮಾಡಬೇಕು ಎಂಬುದನ್ನೆಲ್ಲ ನಿರ್ವಾಹಕರು ಸಕ್ರಿಯವಾಗಿ ತೀರ್ಮಾನಿಸುತ್ತ ಇರುತ್ತಾರೆ. ಇದಕ್ಕಾಗಿಯೇ ಅವರು ಹೂಡಿಕೆದಾರರಿಂದ ಶುಲ್ಕವನ್ನು ಪಡೆಯುತ್ತಾರೆ. ಮ್ಯೂಚುವಲ್ ಫಂಡ್ ನಿರ್ವಹಣೆಗೆ ನೀಡುವ ಶುಲ್ಕವನ್ನು ವೆಚ್ಚ ಅನುಪಾತ (expense ratio) ಎಂಬ ಹೆಸರಿನಿಂದ ಗುರುತಿಸಲಾಗುತ್ತದೆ. ಮ್ಯೂಚುವಲ್ ಫಂಡ್‌ಗಳಲ್ಲಿನ ಹೂಡಿಕೆಗೆ ನೀಡಬೇಕಿರುವ ಶುಲ್ಕವು ಇಟಿಎಫ್ ಹೂಡಿಕೆಗೆ ಕೊಡಬೇಕಿರುವ ಶುಲ್ಕಕ್ಕಿಂತ ತುಸು ಹೆಚ್ಚು ಇರುತ್ತದೆ.

ಇಟಿಎಫ್ ಹೂಡಿಕೆಗಳು ನಿರ್ದಿಷ್ಟ ಸೂಚ್ಯಂಕಗಳಲ್ಲಿನ ಕಂಪನಿಗಳ ಅಥವಾ ನಿರ್ದಿಷ್ಟ ವಲಯದ ಕಂಪನಿಗಳ ಷೇರುಗಳಲ್ಲಿ ವಿನಿಯೋಗ ಆಗಿರುತ್ತವೆ. ಉದಾಹರಣೆಗೆ, ಬಿಎಸ್‌ಇ ಸೆನ್ಸೆಕ್ಸ್ ಇಟಿಎಫ್‌ನಲ್ಲಿನ ಹೂಡಿಕೆಗಳು ಸೆನ್ಸೆಕ್ಸ್‌ನ ಭಾಗವಾಗಿರುವ ಮೂವತ್ತು ಕಂಪನಿಗಳ ಷೇರುಗಳಲ್ಲಿ ವಿನಿಯೋಗ ಆಗಿರುತ್ತವೆ. ಬೇರೆ ಬೇರೆ ಆಸ್ತಿ ನಿರ್ವಹಣಾ ಕಂಪನಿಗಳು ಸೆನ್ಸೆಕ್ಸ್ ಇಟಿಎಫ್ ಹೂಡಿಕೆ ಆಯ್ಕೆಯನ್ನು ಒದಗಿಸುತ್ತಿವೆ. ಇಲ್ಲಿ ಫಂಡ್ ನಿರ್ವಾಹಕರ ಪಾತ್ರ ತೀರಾ ಕಡಿಮೆ. ಹಾಗಾಗಿ ಇಟಿಎಫ್‌ಗಳಲ್ಲಿನ ಶುಲ್ಕ ಕೂಡ ಕಡಿಮೆ. ಸೆನ್ಸೆಕ್ಸ್ ಇಟಿಎಫ್, ಸೆನ್ಸೆಕ್ಸ್‌ಗಿಂತ ಹೆಚ್ಚಿನ ಲಾಭಾಂಶ ತಂದುಕೊಡುವ ಯತ್ನ ನಡೆಸುವುದಿಲ್ಲ. ಬದಲಿಗೆ, ಸೆನ್ಸೆಕ್ಸ್ ಎಷ್ಟು ಪ್ರಮಾಣದ ಲಾಭ ತಂದುಕೊಡುವುದೋ, ಅಷ್ಟೇ ಲಾಭವನ್ನು ತಾನೂ ತಂದುಕೊಡುವ ಕೆಲಸ ಮಾಡುತ್ತದೆ.

ಆಕರ್ಷಣೆ ಹೆಚ್ಚಳ ಏಕೆ?

ಇಟಿಎಫ್‌ಗಳು ಸಣ್ಣ ಹೂಡಿಕೆದಾರರ ಆಕರ್ಷಣೆಗೆ ಕಾರಣ ಆಗುತ್ತಿರುವುದು ಏಕೆ ಎಂಬ ಪ್ರಶ್ನೆಗೆ ಮೋತಿಲಾಲ್ ಓಸ್ವಾಲ್ ಆಸ್ತಿ ನಿರ್ವಹಣಾ ಕಂಪನಿ ಒಂದಿಷ್ಟು ಕಾರಣಗಳನ್ನು ಪಟ್ಟಿ ಮಾಡಿದೆ. ‘ಹೂಡಿಕೆದಾರರು ಇಟಿಎಫ್‌ಗಳ ಮೂಲಕ ಸುಲಭವಾಗಿ, ಕಡಿಮೆ ವೆಚ್ಚದಲ್ಲಿ ಮತ್ತು ಪರಿಣಾಮಕಾರಿಯಾಗಿ ಹೂಡಿಕೆ ಮಾಡಬಹುದು. ಇಟಿಎಫ್‌ಗಳು ಭಾರತದ ಹಣಕಾಸು ಉತ್ಪನ್ನಗಳ ಮಾರುಕಟ್ಟೆಯನ್ನು ಪ್ರವೇಶಿಸಿ ಎರಡು ದಶಕಗಳು ಕಳೆದಿವೆ. ಆದರೆ ಇವು ಜನಪ್ರಿಯತೆ ಪಡೆದುಕೊಳ್ಳುತ್ತಿರುವುದು ಐದು ವರ್ಷಗಳಿಂದ ಈಚೆಗೆ. ಈಚಿನ ವರ್ಷಗಳಲ್ಲಿ ಸಣ್ಣ ಹೂಡಿಕೆದಾರರು ಇಟಿಎಫ್‌ಗಳಲ್ಲಿ ಹಣ ಹೂಡಿಕೆ ಮಾಡುವುದು ಹೆಚ್ಚುತ್ತಿದೆ. ಇದರ ಜೊತೆಯಲ್ಲೇ, ನೌಕರರ ಭವಿಷ್ಯ ನಿಧಿ ಸಂಘಟನೆ (ಇಪಿಎಫ್‌ಒ) ಕೂಡ ಇಲ್ಲಿ ಹೂಡಿಕೆ ಮಾಡುತ್ತಿದೆ’ ಎಂದು ಮೋತಿಲಾಲ್ ಓಸ್ವಾಲ್ ಆಸ್ತಿ ನಿರ್ವಹಣಾ ಕಂಪನಿಯ ಪ್ಯಾಸಿವ್ ಫಂಡ್ ಸಂಶೋಧನಾ ವಿಭಾಗದ ಉಪಾಧ್ಯಕ್ಷ ಮಹಾವೀರ್ ಕಸ್ವಾ ‘ಪ್ರಜಾವಾಣಿ’ಗೆ ತಿಳಿಸಿದರು.

ಜಾಗತಿಕ ಮಟ್ಟದಲ್ಲಿ ಈಗಿನ ಸಂದರ್ಭದಲ್ಲಿ ಹೆಚ್ಚು ಹೆಚ್ಚು ಜನ ಹೂಡಿಕೆದಾರರು ಇಟಿಎಫ್‌ಗಳಲ್ಲಿ (ಹಾಗೂ ಇಂಡೆಕ್ಸ್ ಫಂಡ್‌ಗಳಲ್ಲಿ) ದೊಡ್ಡ ಮೊತ್ತದ ಹೂಡಿಕೆ ಆರಂಭಿಸಿದ್ದಾರೆ. ಅವರು ತಮ್ಮ ಹೂಡಿಕೆಯ ಪ್ರಧಾನ ಭಾಗವನ್ನು ಇಟಿಎಫ್‌ಗಳಲ್ಲಿ ತೊಡಗಿಸುತ್ತಿದ್ದಾರೆ. ನಿರ್ವಾಹಕರು ಸಕ್ರಿಯವಾಗಿ ತೊಡಗಿಸಿಕೊಳ್ಳುವ ಫಂಡ್‌ಗಳಿಗಿಂತಲೂ (ಉದಾಹರಣೆಗೆ, ಮ್ಯೂಚುವಲ್ ಫಂಡ್‌ಗಳು) ಹೆಚ್ಚಾಗಿ ಅಲ್ಲಿ ಹೂಡಿಕೆದಾರರು ಫಂಡ್ ನಿರ್ವಾಹಕರ ಸಕ್ರಿಯ ಪಾತ್ರದ ಅಗತ್ಯ ಇಲ್ಲದ ಇಟಿಎಫ್‌ನಂತಹ ಉತ್ಪನ್ನಗಳಲ್ಲಿ ಪ್ರಧಾನವಾಗಿ ಹೂಡಿಕೆ ಮಾಡುತ್ತಿದ್ದಾರೆ. ಭಾರತದಲ್ಲಿ ಕೂಡ ಹೂಡಿಕೆದಾರರು ತಮ್ಮ ಹೂಡಿಕೆ ಹಣವನ್ನು ಪ್ರಧಾನವಾಗಿ ಇಟಿಎಫ್ ಅಥವಾ ಇಂಡೆಕ್ಸ್ ಫಂಡ್‌ಗಳಲ್ಲಿ ತೊಡಗಿಸಬಹುದು ಎಂದು ಅವರು ಹೇಳಿದರು.

ಇಟಿಎಫ್‌ಗಳಲ್ಲಿ ಹೂಡಿಕೆ ಮಾಡುವ ಸಂದರ್ಭದಲ್ಲಿ ಹೂಡಿಕೆದಾರರು ಹೆಚ್ಚಿನ ಪ್ರಮಾಣದ ಫಂಡ್ ನಿರ್ವಹಣಾ ಶುಲ್ಕವನ್ನು ಪಾವತಿ ಮಾಡುವ ಅಗತ್ಯ ಇಲ್ಲ. ಬೇರೆ ಬೇರೆ ಹೂಡಿಕೆ ಆಯ್ಕೆಗಳಿಗೆ ಹೋಲಿಸಿ ನೋಡಿದರೆ, ಇಟಿಎಫ್‌ಗಳಲ್ಲಿನ ಹೂಡಿಕೆಗೆ ತೆರಿಗೆ ಕಡಿಮೆ ಇರುವುದು ಗೊತ್ತಾಗುತ್ತದೆ. ಷೇರುಗಳಲ್ಲಿ ಹೂಡಿಕೆ ಮಾಡಿದಾಗ ಸಿಗುವ ಷೇರು ಪ್ರಮಾಣಪತ್ರದ ಮಾದರಿಯಲ್ಲಿಯೇ ಇಟಿಎಫ್ ಹೂಡಿಕೆಗಳಿಗೂ ಪ್ರಮಾಣಪತ್ರ ಸಿಗುತ್ತದೆ. ಸರಿಯಾದ ಮಾಹಿತಿಯೊಂದಿಗೆ, ಸೂಕ್ತವಾದ ಇಟಿಎಫ್‌ನಲ್ಲಿ ಹೂಡಿಕೆ ಮಾಡುವ ಬಗ್ಗೆ ಸಣ್ಣ ಹೂಡಿಕೆದಾರರು ಗಮನ ಹರಿಸಬಹುದು ಎಂದು ಹೂಡಿಕೆ ಸಂಪನ್ಮೂಲ ವ್ಯಕ್ತಿ ಎಂ.ಎಸ್. ಶರತ್ ‘ಪ್ರಜಾವಾಣಿ’ ಜೊತೆ ಅನಿಸಿಕೆ ಹಂಚಿಕೊಂಡರು.

ಉತ್ತಮ ಲಾಭ ನೀಡಿರುವ ಕೆಲವು ಇಟಿಎಫ್‌ಗಳು

ಎಸ್‌ಬಿಐ ಇಟಿಎಫ್ ಐ.ಟಿ., ನಿಪ್ಪಾನ್ ಇಂಡಿಯಾ ಇಟಿಎಫ್ ನಿಫ್ಟಿ ಐ.ಟಿ., ಐಸಿಐಸಿಐ ಪ್ರುಡೆನ್ಷಿಯಲ್ ಐ.ಟಿ. ಇಟಿಎಫ್, ಕೋಟಕ್ ಪಿಎಸ್‌ಯು ಬ್ಯಾಂಕ್ ಇಟಿಎಫ್, ಮೋತಿಲಾಲ್ ಓಸ್ವಾಲ್ ಮಿಡ್‌ಕ್ಯಾಪ್ 100 ಇಟಿಎಫ್

(ಮಾಹಿತಿ: ಮ್ಯೂಚುವಲ್‌ಫಂಡ್‌ಇಂಡಿಯಾ.ಕಾಂ) (ಇಲ್ಲಿ ಉಲ್ಲೇಖಿಸಿರುವ ಇಟಿಎಫ್ ಹೆಸರುಗಳು ಮಾಹಿತಿಗಾಗಿ ಮಾತ್ರ. ಇವು ಹೂಡಿಕೆ ಶಿಫಾರಸು ಅಲ್ಲ.)

ಇಟಿಎಫ್ ಹೂಡಿಕೆಗಳಿಂದ ಪ್ರಯೋಜನ ಏನು?

ಇಟಿಎಫ್‌ಗಳಲ್ಲಿನ ಹೂಡಿಕೆಗಳನ್ನು ಫಂಡ್ ನಿರ್ವಹಣೆ ಮಾಡುವವರು ಸಕ್ರಿಯವಾಗಿ ಗಮನಿಸುತ್ತ ಇರುವುದಿಲ್ಲ. ಬದಲಿಗೆ, ಇಟಿಎಫ್‌ಗಳು ನಿರ್ದಿಷ್ಟ ಸೂಚ್ಯಂಕವೊಂದರ ಏರಿಕೆಗೆ ಅನುಗುಣವಾಗಿ ಹೂಡಿಕೆದಾರರಿಗೆ ಲಾಭ ತಂದುಕೊಡುತ್ತವೆ. ಕಳೆದ ಕೆಲವು ವರ್ಷಗಳಿಂದ ಹೂಡಿಕೆದಾರರ ಗಮನವು ಇಟಿಎಫ್‌ಗಳ ಕಡೆ ಹರಿದಿದೆ. ಇದಕ್ಕೆ ಕೆಲವು ಮುಖ್ಯ ಕಾರಣಗಳು ಇವೆ.

- **ವೆಚ್ಚ ಕಡಿಮೆ:** ಇಟಿಎಫ್‌ಗಳು ನಿರ್ದಿಷ್ಟ ಸೂಚ್ಯಂಕವೊಂದರಲ್ಲಿನ ಕಂಪನಿಗಳ ಷೇರುಗಳಲ್ಲಿ ಹೂಡಿಕೆ ಮಾಡುತ್ತವೆ. ಹಾಗಾಗಿ, ಇಲ್ಲಿ ಹೂಡಿಕೆಗೆ ಕಂಪನಿಗಳನ್ನು ಆಯ್ಕೆ ಮಾಡಿಕೊಳ್ಳುವ ಸಂದರ್ಭದಲ್ಲಿ ತೀರಾ ಆಳವಾದ, ದುಬಾರಿಯಾದ ಸಂಶೋಧನೆಗಳ ಅಗತ್ಯ ಇಲ್ಲ. ಸಾಮಾನ್ಯ ಸಂದರ್ಭಗಳಲ್ಲಿ ಇಟಿಎಫ್‌ಗಳಲ್ಲಿನ ಹೂಡಿಕೆಗೆ ಪಾವತಿ ಮಾಡಬೇಕಿರುವ ಶುಲ್ಕದ ಪ್ರಮಾಣವು ಶೇಕಡ 0.05ರಿಂದ ಶೇ 0.50ರವರೆಗೆ ಇರುತ್ತದೆ.
- **ತಕ್ಷಣಕ್ಕೆ ನಗದಾಗಿ ಪರಿವರ್ತಿಸಿಕೊಳ್ಳಬಹುದು:** ಇಟಿಎಫ್ ಯೂನಿಟ್‌ಗಳನ್ನು ಷೇರು ಮಾರುಕಟ್ಟೆಗಳಲ್ಲಿ ಷೇರಿನ ಮಾದರಿಯಲ್ಲಿ ಮಾರಾಟ ಮಾಡಬಹುದು, ಖರೀದಿ ಮಾಡಬಹುದು. ಅಂದರೆ, ಇಟಿಎಫ್ ಯೂನಿಟ್‌ಗಳನ್ನು ಹೂಡಿಕೆದಾರರು ಕ್ಷಣಾರ್ಧದಲ್ಲಿ ಮಾರಾಟ ಮಾಡಬಹುದು ಹಾಗೂ ಖರೀದಿ ಮಾಡಬಹುದು. ಇಲ್ಲಿ ಹೂಡಿಕೆ ಹಣದ ನಗದೀಕರಣ ಸುಲಭ.
- **ಲಾಭಾಂಶ ಕಡಿಮೆಯಾಗುವ ಭಯ ಬೇಡ:** ಹೂಡಿಕೆ ಮಾಡಿರುವ ಇಟಿಎಫ್‌ಗಳು, ನಿರ್ದಿಷ್ಟ ಸೂಚ್ಯಂಕಕ್ಕಿಂತ ಕಡಿಮೆ ಪ್ರಮಾಣದ ಲಾಭಾಂಶ ನೀಡುತ್ತವೆ ಎಂಬ ಆತಂಕ ಅನಗತ್ಯ. ಸೂಚ್ಯಂಕ ಯಾವ ಪ್ರಮಾಣದಲ್ಲಿ ಏರಿಕೆ ಕಾಣುವುದೋ, ಇಟಿಎಫ್‌ನಲ್ಲಿನ ಹೂಡಿಕೆ ಕೂಡ ಅದೇ ಪ್ರಮಾಣದಲ್ಲಿ ಲಾಭಾಂಶ ತಂದುಕೊಡುತ್ತದೆ.
- **ಸರಳ:** ಫಂಡ್ ನಿರ್ವಾಹಕರು ಸಕ್ರಿಯವಾಗಿ ನಿಭಾಯಿಸುವ ಮ್ಯೂಚುವಲ್ ಫಂಡ್‌ಗಳಿಗಿಂತ ಇಟಿಎಫ್‌ಗಳು ಭಿನ್ನ. ಇಲ್ಲಿನ ಹೂಡಿಕೆಗಳು ಹೇಗೆ ವಿನಿಯೋಗ ಆಗುತ್ತಿವೆ ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಸುಲಭ. ವರ್ಷಗಳು ಕಳೆದಂತೆಲ್ಲ ಫಂಡ್ ನಿರ್ವಾಹಕರು ಹಣವನ್ನು ತೊಡಗಿಸುವ ಶೈಲಿಯಲ್ಲಿ ಬದಲಾವಣೆ ಆದರೆ ಏನು ಮಾಡುವುದು ಎಂಬ ಆತಂಕ ಇಲ್ಲಿ ಇಲ್ಲ. ತಾವು ಹೂಡಿಕೆ ಮಾಡುತ್ತಿರುವ ಸೂಚ್ಯಂಕವು ವರ್ಷಗಳಿಂದ ಹೇಗೆ ವರ್ತಿಸಿದೆ ಎಂಬುದು ತಿಳಿದಿದ್ದರೆ, ಹೂಡಿಕೆದಾರರಿಗೆ ತಮ್ಮ ಹೂಡಿಕೆಯ ವಿಚಾರವಾಗಿ ಇರುವ ರಿಸ್ಕ್‌ಗಳು ಏನು, ಸಿಗಬಹುದಾದ ಲಾಭದ ಪ್ರಮಾಣ ಎಷ್ಟು ಎಂಬುದು ಕೂಡ ಗೊತ್ತಾಗುತ್ತದೆ.

(ಮಾಹಿತಿ: ಮೋತಿಲಾಲ್ ಓಸ್ವಾಲ್ ಆಸ್ತಿ ನಿರ್ವಹಣಾ ಕಂಪನಿಯ ಮಹಾವೀರ್ ಕಸ್ವಾ)

ಇಟಿಎಫ್ ಖಾತೆಗಳ ಸಂಖ್ಯೆ ಏರಿಕೆ ಆಗಿದ್ದು ಹೀಗೆ



(ಮಾಹಿತಿ: ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ)

ಪ್ರಜಾವಾಣಿ ಗ್ರಾಫಿಕ್ಸ್

ರದ್ದತಿಯ ವಿಶ್ವಾಸ ವ್ಯಕ್ತಪಡಿಸಿದ ಸಂಸದ

‘ಆಫ್‌ಸ್ಪದಿಂದ ಏನೂ ಒಳಿತಾಗಿಲ್ಲ’

• ಶೆಮಿನ್ ಜಾಯ್

ಪ್ರಜಾವಾಣಿ ಸಂದರ್ಶನ

ಕೆ.ಜೆ.ಕೆನ್‌ಯೆ ರಾಜ್ಯಸಭಾ ಸದಸ್ಯ

ನಾಗಾಲ್ಯಾಂಡ್‌ನಲ್ಲಿ ನಾಗರಿಕರು ಸೈನಿಕರ ಗುಂಡೇಟಿಗೆ ಬಲಿಯಾಗಿದ್ದು ಇಡೀ ದೇಶಕ್ಕೆ ಆಘಾತ ನೀಡಿದೆ. ‘ಇದು ತಪ್ಪು ಗ್ರಹಿಕೆಯಿಂದ ಆದ ಅವಘಡ’ ಎಂದು ಸೇನೆ ಮತ್ತು ಸರ್ಕಾರವು ಹೇಳಿವೆ. ನಾಗರಿಕರ ಹತ್ಯೆಯಾಗಿರುವ ಕಾರಣ ವಿಶೇಷ ತನಿಖಾ ತಂಡ ತನಿಖೆ ನಡೆಸುತ್ತಿದೆ. ಜತೆಯಲ್ಲಿಯೇ ಪ್ರತಿಭಟನೆಗಳೂ ನಡೆಯುತ್ತಿವೆ. ಸೇನೆಗೆ ವಿಶೇಷಾಧಿಕಾರ ನೀಡುವ ‘ಸಶಸ್ತ್ರ ಪಡೆಗಳ (ವಿಶೇಷ ಅಧಿಕಾರ) ಕಾಯ್ದೆ–1958 (ಆಫ್‌ಸ್ಪ)’ ರದ್ದುಪಡಿಸಿ ಎಂಬ ಕೂಗು ಬಲವಾಗುತ್ತಿದೆ. ನಾಗಾಲ್ಯಾಂಡ್‌ನಿಂದ ರಾಜ್ಯಸಭೆ ಸದಸ್ಯರಾಗಿರುವ ಕೆ.ಜೆ.ಕೆನ್‌ಯೆ ಅವರು, ಈ ಬಗ್ಗೆ ‘ಪ್ರಜಾವಾಣಿ’ ಜತೆಗೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡಿದ್ದಾರೆ.

• ಶನಿವಾರದ್ದು ಅತ್ಯಂತ ದುರದೃಷ್ಟಕರ ಘಟನೆ. ಈ ಘಟನೆ ಬಗ್ಗೆ ನೀವೇನು ಹೇಳುತ್ತೀರಿ?

ಇದನ್ನು ನಾವು ಎಂದೂ ನಿರೀಕ್ಷಿಸಿರಲಿಲ್ಲ. ಇದು ಆಘಾತದಂತೆ ಎರಗಿತು. ಈ ಬಗ್ಗೆ ನಾವು ನಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದ್ದೇವೆ.

• ಕೇಂದ್ರ ಗೃಹ ಸಚಿವ ಅಮಿತ್ ಶಾ ಸಂಸತ್ತಿನಲ್ಲಿ ಈ ಘಟನೆ ಬಗ್ಗೆ ಹೇಳಿಕೆ ನೀಡಿದ್ದಾರೆ. ಅವರ ಹೇಳಿಕೆಯಿಂದ ನಿಮಗೆ ಸಮಾಧಾನವಾಯಿತೇ?

ಘಟನೆಗೆ ಕಾರಣಗಳೇನು ಎಂದು ಗೃಹ ಸಚಿವರು ಮುಂದಿಟ್ಟ ಅಂಶಗಳನ್ನು ಇನ್ನಷ್ಟೇ ಖಚಿತಪಡಿಸಿಕೊಳ್ಳಬೇಕಿದೆ. ನಾಗಾಲ್ಯಾಂಡ್ ಸರ್ಕಾರವು ವಿಶೇಷ ತನಿಖಾ ತಂಡವನ್ನು ರಚಿಸಿದೆ. ತನಿಖೆ ಮುಗಿದು ವರದಿ ದೊರೆತ ನಂತರ, ಗೃಹ ಸಚಿವರ ಹೇಳಿಕೆಯನ್ನು ಪರಾಮರ್ಶಿಸಬಹುದು. ಆದರೆ ಅವರು ಪ್ರಾಮಾಣಿಕವಾಗಿ ಪಶ್ಚಾತ್ತಾಪ ವ್ಯಕ್ತಪಡಿಸುವ ಮೂಲಕ ಹಿಂದಿನ ಸರ್ಕಾರಗಳಿಗಿಂತ ಭಿನ್ನವಾದ ಪ್ರತಿಕ್ರಿಯೆ ನೀಡಿದರು. ಅದನ್ನು ನಾವು ಪ್ರಶಂಸಿಸಬೇಕು. ಇದು ಮಹತ್ವದ ಬದಲಾವಣೆ.

• ಆಫ್‌ಸ್ಪವನ್ನು ರದ್ದುಪಡಿಸಬೇಕು ಎಂಬ ಬೇಡಿಕೆ ಇದೆ. ಈಶಾನ್ಯ ಭಾರತದ ಎರಡು ರಾಜ್ಯಗಳ ಮುಖ್ಯಮಂತ್ರಿಗಳು ಮತ್ತೆ ಇದೇ ಬೇಡಿಕೆ ಇಟ್ಟಿದ್ದಾರೆ. ನಿಮ್ಮ ಬೇಡಿಕೆ ಏನು?

ಇಲ್ಲಿ ಆಫ್‌ಸ್ಪ ಕಾಯ್ದೆಯೇ ನಿಜವಾದ ಅಪರಾಧಿ. ವೈರತ್ವ ಬೆಳೆಯಲು ಈ ಕಾಯ್ದೆಯೇ ಪ್ರಮುಖ ಕಾರಣ. ಇದರಿಂದ ಏನೂ ಒಳಿತಾಗಿಲ್ಲ. ಇದು ರಾಷ್ಟ್ರೀಯ ಹಿತಾಸಕ್ತಿಗೆ ಮಾರಕ. ಇಂತಹ ಕಾಯ್ದೆಗಳು ಇದ್ದರೆ, ಇಂತಹ ಘಟನೆಗಳು ಮರುಕಳಿಸುತ್ತಲೇ ಇರುತ್ತವೆ. ತಮ್ಮದೇ ಜನರ ಮೇಲೆ ಇಷ್ಟೆಲ್ಲಾ ದೌರ್ಜನ್ಯ ನಡೆಸುವ ಅಧಿಕಾರವನ್ನು ಸೇನೆಗೆ ಇದೊಂದೇ ಕಾಯ್ದೆ ನೀಡಿದೆ. ಈ ಕಾಯ್ದೆಯ ಬಗ್ಗೆ 60 ವರ್ಷಗಳ ಹಿಂದೆ ಆರಂಭವಾದ ಚರ್ಚೆ, ಈಗಲೂ ನಡೆಯುತ್ತಿದೆ. ಇಂತಹ ಘಟನೆಗಳು ಮರುಕಳಿಸಬಾರದು ಎಂದರೆ, ಈ ಕಾಯ್ದೆ ರದ್ದಾಗಲೇಬೇಕು.

• ಆಫ್‌ಸ್ಪ ಕಾಯ್ದೆಯನ್ನು ರದ್ದುಪಡಿಸುವ ಈ ಬೇಡಿಕೆಯನ್ನು ಸರ್ಕಾರ ಒಪ್ಪುತ್ತದೆ ಎಂದು ನೀವು ಭಾವಿಸಿದ್ದೀರಾ?

ಸ್ವಾತಂತ್ರ್ಯಾನಂತರದಿಂದ ಇರುವ ದೊಡ್ಡ ಸಮಸ್ಯೆಗಳ ಬಗ್ಗೆ ಸರ್ಕಾರ ಆತ್ಮಾವಲೋಕನ ಮಾಡಿಕೊಳ್ಳುತ್ತಿರುವ ರೀತಿಯನ್ನು ಗಮನಿಸಿದರೆ, ಸರ್ಕಾರ ಒಪ್ಪುತ್ತದೆ ಎಂಬ ಆತ್ಮವಿಶ್ವಾಸವಿದೆ. ಇದು ವಸಾಹತುಶಾಹಿ ಕಾಲದಿಂದಲೂ ಉಳಿದುಕೊಂಡು ಬಂದಿದೆ. ಇದನ್ನು ನಾವ್ಯಾಕೆ ಮರುಪರಿಶೀಲಿಸಬಾರದು? ಇದು ದೇಶದ ಏಕತೆ ಮತ್ತು ಸಮಗ್ರತೆಗೆ ದೊಡ್ಡ ತಡೆ. ಇದರಿಂದ ಏನೂ ಒಳಿತಾಗಿಲ್ಲ. ಸರಿಯಾಗಿ ಯೋಚಿಸುವ ನಾಗರಿಕರು ಈ ಕಾಯ್ದೆ ರದ್ದತಿಯ ಬೇಡಿಕೆಯನ್ನು ಬೆಂಬಲಿಸುತ್ತಾರೆ ಎಂಬ ವಿಶ್ವಾಸ ನನಗಿದೆ.

• ನಾಗಾ ಶಾಂತಿ ಪ್ರಕ್ರಿಯೆಯ ಮೇಲೆ ಈ ಘಟನೆ ಪರಿಣಾಮ ಬೀರುತ್ತದೆಯೇ?

ಈ ಘಟನೆಯು, ನಾಗಾ ಶಾಂತಿ ಪ್ರಕ್ರಿಯೆಯ ಹಳಿತಪ್ಪಿಸುವ ಅಪಾಯವಿದೆ. ಇದು ಗಂಭೀರವಾದ ಸವಾಲು. ಇಡೀ ಪ್ರಕ್ರಿಯೆಯೇ ಸ್ಥಗಿತವಾಗಬಹುದು. ಹೀಗಾಗಿ ಇದನ್ನು ಬಹು ಎಚ್ಚರಿಕೆಯಿಂದ ನಿಭಾಯಿಸಬೇಕು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಈಗ ಚಲಾವಣೆಯಲ್ಲಿರುವ ₹500 ಮುಖಬೆಲೆಯ ನೋಟಿನ ಬಳಕೆ ಕುರಿತ ವಿಡಿಯೊವೊಂದು ಚರ್ಚೆಗೆ ಗ್ರಾಸವಾಗಿದೆ. 500 ರೂಪಾಯಿಯ ಎಲ್ಲ ನೋಟುಗಳೂ ಅಸಲಿಯಲ್ಲ ಎಂದು ತಿಳಿಸಲು ಈ ವಿಡಿಯೊ ಯತ್ನಿಸುತ್ತದೆ. ನೋಟಿನ ಒಂದು ಬದಿಯಲ್ಲಿ ಮಹಾತ್ಮಾ ಗಾಂಧೀಜಿ ಅವರ ಚಿತ್ರ ಹಾಗೂ ಆರ್‌ಬಿಐ ಗವರ್ನರ್ ಅವರ ಸಹಿಯ ನಡುವಿನ ಜಾಗದಲ್ಲಿ ಹಸಿರು ಪಟ್ಟಿಯೊಂದು ಇದೆ. ಇದರ ಮೇಲೆ ಇಂಗ್ಲಿಷ್‌ನಲ್ಲಿ ‘ಆರ್‌ಬಿಐ’ ಎಂದೂ, ಹಿಂದಿ ಭಾಷೆಯಲ್ಲಿ ‘ಭಾರತ್’ ಎಂದೂ ಮುದ್ರಿಸಲಾಗಿದೆ. ‘ಈ ಹಸಿರು ಪಟ್ಟಿಯು ಗವರ್ನರ್ ಸಹಿಯ ಸಮೀಪದಲ್ಲಿದ್ದರೆ ಅದು ಅಸಲಿ ನೋಟು. ಗಾಂಧೀಜಿ ಚಿತ್ರದ ಸಮೀಪ ಇದ್ದರೆ ಅದು ನಕಲಿ ನೋಟು’ ಎಂಬುದಾಗಿ ವಿಡಿಯೊದಲ್ಲಿ ವಿವರಿಸಲಾಗಿದೆ.

ಗಾಂಧೀಜಿ ಚಿತ್ರದ ಸಮೀಪ ಹಸಿರುಪಟ್ಟಿ ಹೊಂದಿರುವ ₹500 ಮುಖಬೆಲೆಯ ನೋಟುಗಳು ಚಲಾವಣೆಗೆ ಯೋಗ್ಯವಲ್ಲ ಎಂಬ ವಾದವನ್ನು ಕೇಂದ್ರ ಸರ್ಕಾರ ಅಲ್ಲಗಳೆದಿದೆ. ‘ಎರಡೂ ರೀತಿಯ ನೋಟುಗಳು ಚಲಾವಣೆಗೆ ಅರ್ಹವಾಗಿವೆ. ದಾರಿ ತಪ್ಪಿಸುವಂತಹ ಇಂತಹ ವಿಡಿಯೊಗಳ ಬಗ್ಗೆ ಎಚ್ಚರಿಕೆಯಿಂದ ಇರಿ’ ಎಂದು ಪಿಐಬಿ ಫ್ಯಾಕ್ಟ್ ಚೆಕ್ ಜನರಿಗೆ ಮನವಿ ಮಾಡಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ದೇವ ಭಾವ

ಎನಗೆ ಸುಖವಿಲ್ಲವದರಿಂ ದೇವರಿರನೆನ್ನು - |
ವನುಮಿತಿಯ ನೀಂ ಗೆಯ್ಯೆ, ಸುಖಿಯದೇನೆನುವಂ? ||
ತನುಬಾಹ್ಯಕರಣದನುಭವಕಿಂತ ಸೂಕ್ಷ್ಮತರ - |
ದನುಭವವ ನೀನರಸೊ – ಮಂಕುತಿಮ್ಮ || 514 ||

ಪದ-ಅರ್ಥ: ಸುಖವಿಲ್ಲವದರಿಂ = ಸುಖವಿಲ್ಲ + ಅದರಿಂ(ಅದರಿಂದ), ದೇವರಿರನೆನ್ನುವನುಮಿತಿಯ = ದೇವರು + ಇರನು + ಎನ್ನುವ + ಅನುಮಿತಿಯ(ಊಹೆಯನ್ನು), ಗೆಯ್ಯೆ = ಮಾಡಿದರೆ, ಸುಖಿಯದೇನೆನುವಂ = ಸುಖಿಯು + ಅದೇನು + ಎನುವಂ(ಎನ್ನುತ್ತಾನೆ), ತನುಬಾಹ್ಯಕರಣದನುಭವಕಿಂತ = ತನು = ಬಾಹ್ಯಕರಣ(ಇಂದ್ರಿಯಗಳ) + ಅನುಭವಕಿಂತ, ಸೂಕ್ಷ್ಮತರದನುಭವವ = ಸೂಕ್ಷ್ಮತರದ + ಅನುಭವವ, ನೀನರಸೊ = ನೀನು + ಅರಸೊ(ಹುಡುಕಾಡು)

ವಾಚ್ಯಾರ್ಥ: ಎನಗೆ ಯಾವ ಸುಖವೂ ಇಲ್ಲ, ಆದ್ದರಿಂದ ದೇವರಿಲ್ಲ ಎನ್ನುವ ಊಹೆಯಿಂದ ಹೊರಟವನು ಒಬ್ಬನಾದರೆ, ಸುಖಿಯಾಗಿದ್ದವನು ದೇವರೆಂದರೇನು ಎನ್ನುತ್ತಾನೆ. ದೇಹದ, ಇಂದ್ರಿಯಗಳ ಅನುಭವಗಳಿಗಿಂತ ಸೂಕ್ಷ್ಮತರವಾದ ಅನುಭವವನ್ನು ನೀನು ಅರಸು.

ವಿವರಣೆ: ಮನೆಯ ಫೋನ್ ಕೆಟ್ಟು ಎಷ್ಟು ದಿನವಾಯಿತು. ಎಷ್ಟು ತಕರಾರು ಮಾಡಿದರೂ ಯಾರೂ ಬಂದು ರಿಪೇರಿ ಮಾಡುತ್ತಿಲ್ಲ. ಫೋನ್ ಇಲಾಖೆಯವರು ಇಲ್ಲವೇ ಇಲ್ಲ. ನನ್ನ ತೊಂದರೆಗಳಿಗೆ ಸರ್ಕಾರಕ್ಕೆ ಏನೆಲ್ಲ ವಿನಂತಿ ಮಾಡಿದೆ, ಏನೂ ಫಲವಿಲ್ಲ, ಸರ್ಕಾರವೇ ಇಲ್ಲ. ಯಾವಾಗಿನಿಂದ ಕೂಗುತ್ತಿದ್ದೇನೆ, ಯಾವ ಪ್ರತಿಸ್ಪಂದನೆಯೂ ಇಲ್ಲ, ಆದ್ದರಿಂದ ಹೊರಗೆ ಯಾರೂ ಇಲ್ಲ, ಹೀಗೆ ಸಾಗುತ್ತದೆ ನಮ್ಮ ವಾದ ಸರಣಿ. ನಮಗೆ ಸಿಗದಿದ್ದರೆ ಅದು ಇಲ್ಲ ಎಂಬ ಸಿದ್ಧಾಂತ. ನಾವು ಭಗವಂತನನ್ನು ಹಾಗೆಯೇ ತಿಳಿಯುತ್ತೇವೆ. ನಮಗೆಷ್ಟು ಕಷ್ಟ, ನಮ್ಮ ದುಃಖಗಳಿಗೆ ಮಿತಿಯೇ ಇಲ್ಲ. ದೇವರೆಂಬುವವನು ಇದ್ದಿದ್ದರೆ ಬಂದು ನಮ್ಮ ರಕ್ಷಣೆ ಮಾಡಬೇಕಿತ್ತಲ್ಲ. ಹಾಗೆ ಮಾಡದಿರುವುದರಿಂದ ದೇವರೆಂಬುವನು ಇಲ್ಲವೇ ಇಲ್ಲ ಎಂಬ ತೀರ್ಮಾನಕ್ಕೆ ಬರುತ್ತೇವೆ. ನಮ್ಮ ಪ್ರಕಾರ ದೇವರೆಂದರೆ ಒಬ್ಬ ಸೂಪರ್ ಮ್ಯಾನ್. ಅವನು ಯಾರಿಗೆ, ಯಾವಾಗ, ಏನು ಸಹಾಯ ಮಾಡಬೇಕು ಎಂದು ಕಾಯ್ದುಕೊಂಡಿದ್ದು, ಕಷ್ಟಕಂಡ ತಕ್ಷಣ ಧಾವಿಸಿ ಬಂದು ಪರಿಹಾರ ಮಾಡಬೇಕು. ನಮ್ಮ ಪ್ರಕಾರ ದೇವರು ದುಃಖಹರ್ತ, ಸುಖಕರ್ತಾ. ಅಂದರೆ ನಮ್ಮ ದುಃಖಗಳನ್ನೆಲ್ಲ ದೂರಮಾಡಿ ಸುಖವನ್ನು ನೀಡುವುದು ಅವನ ಕರ್ತವ್ಯ.

ಕಗ್ಗ ಈ ಮಾತನ್ನು ಹೇಳುತ್ತದೆ. ನನಗೆ ಸುಖವಿಲ್ಲವಾದ್ದರಿಂದ ದೇವರಿಲ್ಲ. ಎನ್ನುವ ತೀರ್ಮಾನಕ್ಕೆ ನಾವು ಬರುವುದಾದರೆ, ಸುಖವಾಗಿರುವವನು ಏನೆನ್ನಬೇಕು? ಅವನು ಸುಖವಾಗಿದ್ದರೆ ದೇವರಿದ್ದಾನೆ ಎನ್ನಬೇಕೇ? ಹಾಗಾದರೆ ಕೆಲವರಿಗೆ ಇದ್ದಾನೆ, ಕೆಲವರಿಗೆ ಇಲ್ಲ ಎನ್ನಲಾದೀತೇ? ಭಗವಂತನನ್ನು, ನಮಗೆ ದೊರೆತದ್ದರಿಂದ ಮತ್ತು ದೊರೆಯದಿದ್ದುದರಿಂದ ತಿಳಿಯಲಾಗುವುದಿಲ್ಲ. ಭಗವಂತನ ಇರುವಿಕೆ ಒಂದು ಅನುಭವ. ಅವನು ನಿತ್ಯ, ನಿರಾಕಾರ. ಅದು ಚಿಂತನೆಗೆ ನಿಲುಕದ ತತ್ವ.

ನಮ್ಮ ಇಂದ್ರಿಯಗಳಿಗೆ ದಕ್ಕುವ ವಿಶ್ವದ ಮೂಲವಸ್ತು ಪ್ರಕೃತಿ. ಅದಕ್ಕೆ ಗುಣವಿದೆ, ರೂಪವಿದೆ. ಅದರ ಪರಮಾಧಾರ ಚೈತನ್ಯವನ್ನೇ ದೃಷ್ಟಾರರು ದೇವರು, ದೈವ, ಪರಮಾತ್ಮ ಎಂದು ಕರೆದರು. ಜಗತ್ತು ದೃಷ್ಟಿಗೋಚರ ಆದರೆ ದೇವರು ಭಾವಗೋಚರ. ನೋಡುವ ಕಾರ್ಯಕ್ಕೆ ಕರಣಗಳು ಬೇಕು. ಆದರೆ ದೈವದ ಕ್ಷೇತ್ರ ಪ್ರವೇಶಿಸಿದೊಡನೆ ಶಬ್ದಗಳು, ಕರಣಗಳು ಅಡಗಿ ಹೋಗುತ್ತವೆ. ಮನ ಅಮನವಾಗುತ್ತದೆ, ದಿಕ್ಕುಗಳ ಭೇದ ಅಡಗುತ್ತದೆ. ಈ ಎಲ್ಲ ಭೇದಗಳು ಕರಗಿ ಹೋದಾಗ ಉಳಿಯುವುದು ದೇವ-ಭಾವ. ಅದು ನಿರಪೇಕ್ಷ ಸತ್ಯದ ಅರಿವು. ಆ ಸೂಕ್ಷ್ಮದ ಅನುಭವವನ್ನು ಅರಸುವುದೇ ಸಾಧನೆ. ❖

ದಿನ ಭವಿಷ್ಯ

ಬುಧವಾರ ಡಿಸೆಂಬರ್ 8, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಹಿಮಂತ ಋತು ಮೃಗಶಿರ ಮಾಸ ಶುಕ್ಲಪಕ್ಷ ಪಕ್ಷ ಮಳೆ ನಕ್ಷತ್ರ ಜ್ಯೇಷ್ಠ ಪಂಚಮಿ ಗಂ. 50-49 (ರಾ. 2-55) ಬುಧವಾರ ನಿತ್ಯ ನಕ್ಷತ್ರ ಶ್ರವಣ ಗಂ. 54-36 (ರಾ. 4-26) ಧ್ರುವ ನಾಮ ಯೋಗ ಗಂ. 31-5 ಬವ ಕರಣ ಗಂ. 23-2 ವಿಷ ಗಂ. 6-18 ಅಮೃತ ಗಂ 29-18 : ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00 : ಸುರ್ಯೋದಯ: 6-33 ಸೂರ್ಯಾಸ್ತ: 5-49 ಅದೃಷ್ಟ ಸಂಖ್ಯೆ 8

ಮೇಷ: ಅತಿಯಾದ ಕೆಲಸದ ನಡುವೆಯೂ ಸಂತಸದ ದಿನ. ಸುಗಮವಾದ ಜೀವನ ನಡೆಸುವ ಸಲುವಾಗಿ ಉತ್ತಮ ಮಾರ್ಗದ ಬಗೆಗೆ ಚಿಂತನೆ ನಡೆಸುವಿರಿ. ಕುಟುಂಬವರ್ಗದವರೊಂದಿಗೆ ಚರ್ಚಿಸಿ ಉತ್ತಮ ನಿರ್ಣಯ ಕೈಗೊಳ್ಳುವಿರಿ.

ವೃಷಭ: ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗ ಪ್ರಾಪ್ತವಾಗುವ ಸಾಧ್ಯತೆ. ಅಧಿಕಾರ ಹಾಗೂ ಗೌರವಾದರಗಳು ಪ್ರಾಪ್ತವಾಗುವವು. ಹೊಸ ಯೋಜನೆ ಕೈಗೊಳ್ಳಲು ಸಕಾಲ. ಒಟ್ಟಾರೆ ಹರ್ಷದಾಯಕ ದಿನವಾಗಿರುವುದು.

ಮಿಥುನ: ಆರ್ಥಿಕ ವಿಷಯಕ್ಕೆ ಸಂಬಂಧಿಸಿದಂತೆ ಹೊಸದೊಂದು ನಿರ್ಧಾರ ಕೈಗೊಳ್ಳಲಿದ್ದೀರಿ. ನಿಮ್ಮ ನಿರ್ಧಾರ ಕಠಿಣವೆನಿಸಿದರೂ ಉತ್ತಮ ಫಲ ನೀಡಲಿದೆ. ಕಾರ್ಯಕ್ಷೇತ್ರದಲ್ಲಿ ಮೆಚ್ಚುಗೆಯ ಮಾತುಗಳನ್ನು ಆಲಿಸಲಿದ್ದೀರಿ.

ಕರ್ಕಾಟಕ: ನಿಮ್ಮ ಚಿಂತನೆಯು ಸರಿಯಾದ ಮಾರ್ಗದಲ್ಲಿದ್ದು ಉತ್ತಮ ತಿರುವನ್ನು ಪಡೆದುಕೊಳ್ಳುವುದು. ಬಹುದಿನಗಳ ನಿಮ್ಮ ಬಯಕೆಗಳು ಈಡೇರಿ ಸಂತಸ. ಆರೋಗ್ಯದಲ್ಲಿ ವಾತ, ಪಿತ್ತ ಮುಂತಾಗಿ ಸಣ್ಣ ಕಿರುಕುಳ ಸಾಧ್ಯತೆ.

ಸಿಂಹ: ಪ್ರತಿಭಾವಂತರ ಮಾರ್ಗದರ್ಶನ ನಿಮ್ಮ ಕಾರ್ಯದ ಬೆಂಬಲಕ್ಕೆ ದೊರಕಲಿದೆ. ಆಸ್ತಿ ಖರೀದಿ ವಿಚಾರದಲ್ಲಿ ಸಲಹೆ ದೊರಕಲಿದೆ. ನಿಮ್ಮ ಸ್ಪಷ್ಟ ನಿಲುವಿನಿಂದಾಗಿ ಮುಂದಾಗಬಹುದಾದ ಅನಾಹುತದಿಂದ ಪಾರಾಗಲಿದ್ದೀರಿ.

ಕನ್ಯಾ: ಗುರುತರವಾದ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿಭಾಯಿಸುವ ಮೂಲಕ ಹಿರಿಯರ, ಅಧಿಕಾರಿಗಳ ಪ್ರಶಂಸೆಗೆ ಪಾತ್ರರಾಗಲಿದ್ದೀರಿ. ಆರ್ಥಿಕ ವಿಷಯದಲ್ಲಿ ತೊಂದರೆಗಳಿಲ್ಲದೇ ಸುಗಮವಾಗಿರುವುದು.

ತುಲಾ: ಸದಾ ನೆನಪಿನಲ್ಲುಳಿಯಬಹುದಾದ ಸತ್ಕಾರ್ಯವೊಂದರಲ್ಲಿ ತೊಡಗುವಿರಿ. ಆರ್ಥಿಕ ಸಂಪನ್ಮೂಲವನ್ನವಲಂಬಿಸಿ ಬದುಕನ್ನು ನಿಭಾಯಿಸುವ ಕಲೆ ರೂಢಿಸಿಕೊಳ್ಳುವಿರಿ. ಸಂಗಾತಿಯ ಮನ ಗೆದ್ದು ಸಂತಸ.

ವೃಶ್ಚಿಕ: ಆರ್ಥಿಕಾಭಿವೃದ್ಧಿಯ ಸುಲಭ ಮಾರ್ಗವೊಂದರ ಬಗ್ಗೆ ಚಿಂತಿಸುವಿರಿ. ಹೊಸ ಉದ್ಯೋಗದತ್ತ ಮನ ಮಾಡುವಿರಿ. ಅನೇಕ ದಿನಗಳಿಂದ ಕಿರಿ ಕಿರಿ ಉಂಟುಮಾಡುತ್ತಿದ್ದ ಆರೋಗ್ಯದಲ್ಲಿ ಸುಧಾರಣೆ. ಆತ್ಮವಿಶ್ವಾಸ ನಿಮ್ಮದಾಗಲಿದೆ.

ಧನು: ಸ್ಥಳ ವಾ ಉದ್ಯೋಗದಲ್ಲಿ ಬದಲಾವಣೆ. ಗಳಿಕೆಯಲ್ಲಿಯೂ ಪ್ರಗತಿ. ತಪ್ಪು ನಡೆಯಿಂದಾಗಿ ಮಾನಸಿಕ ಹಿಂಸೆ ಅನುಭವಿಸುವ ಸಾಧ್ಯತೆ. ನಿಮ್ಮ ಪ್ರಾಮಾಣಿಕತೆಯೇ ನಿಮಗೆ ಶ್ರೀ ರಕ್ಷೆಯಾಗಲಿದೆ.

ಮಕರ: ಬಂಧು ಬಾಂಧವರೊಂದಿಗೆ ಸಂತಸದ ದಿನವನ್ನಾಗಿಸಿಕೊಳ್ಳಲಿದ್ದೀರಿ. ಸಾಂಸ್ಕೃತಿಕ, ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವ ಸಾಧ್ಯತೆ. ವಿಶೇಷವಾಗಿ ಮಹಿಳೆಯರು ಆರೋಗ್ಯದ ವಿಚಾರದಲ್ಲಿ ಉತ್ತಮ ಪ್ರಗತಿ.

ಕುಂಭ: ಚಿಂತೆಗಳು ದೂರವಾಗಿ ನೆಮ್ಮದಿ. ದಿನವಿಡೀ ಲವಲವಿಕೆಯಿಂದ ಕಾಲ ಕಳೆಯುವಿರಿ. ಆಯಾಸದಿಂದಾಗಿ ಆಲಸ್ಯ – ಅನಾರೋಗ್ಯದ ಸಾಧ್ಯತೆಯೂ ಕಂಡುಬರುತ್ತಿದೆ. ಆರೋಗ್ಯದೆಡೆಗೆ ಎಚ್ಚರಿಕೆ ಅಗತ್ಯ.

ಮೀನ: ಅನೇಕ ದಿನಗಳಿಂದ ನೆನೆಗುದಿಗೆ ಬಿದ್ದಿದ್ದ ಸಂಬಂಧದ ವಿಚಾರ ಮತ್ತೆ ಗರಿಗೆದರುವ ಸಾಧ್ಯತೆ. ಮಕ್ಕಳ ವೈವಾಹಿಕ ಜೀವನದ ಬಗ್ಗೆ ಚಿಂತನೆ ನಡೆಸಲಿದ್ದೀರಿ. ಉದ್ಯೋಗಾಕಾಂಕ್ಷಿಗಳಿಗೆ ಉತ್ತಮ ಅವಕಾಶ ಸಿಗಲಿದೆ.

ನಿಮ್ಮ ಜನ್ಮದಿನ 8-ಡಿಸೆಂಬರ್ ಇಂದು ಅತ್ಯಂತ ಶುಭದಾಯಕ. ಉತ್ತಮ ಶಾರೀರವನ್ನು ಹೊಂದಿದವರಾಗಿದ್ದು, ಆರೋಗ್ಯವಂತರೂ ಆಗಿರುವಿರಿ. ಅನುಭವದ ಕೊರತೆ ಇರುವ ವ್ಯವಹಾರದಿಂದಾಗಿ ಕೈ ಸುಟ್ಟುಕೊಳ್ಳುವ ಸಾಧ್ಯತೆ ಇದ್ದು, ವಿದ್ಯಾಬಲದ ಮೇಲಿನ ನೌಕರಿ ಅಥವಾ ಉದ್ಯೋಗ ನಿಮಗೆ ಅನುಕೂಲಕರವಾಗಿರುವುದು.

ಪದಬಂಧ 4801

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಸಮತೂಕವಿಲ್ಲದಿರುವಿಕೆ (4)
3.ನಿರ್ಭಾಗ್ಯಳಾದ ಹೆಂಗಸು (4)
5.ಕ್ರೂರವಾದ ಕೊಲೆ (3)
6.ಆಕರದಲ್ಲಿರುವ ಕೈ! (2)
8.ಉರಗದ ಎದೆ ಕಾಣುತ್ತಿದೆಯೇ? (2)
9.ಸಂಪೂರ್ಣ ಹಾನಿ (4)
10.ಶಾಕಾಹಾರವನ್ನು ಹೀಗೂ ಹೇಳುವರು (4)
11.ಕೊಳವೆ ಇಲ್ಲಿದೆ (2)
12.ಉಲ್ಟಾಪಲ್ಟಾ ಬಿದ್ದಿರುವ ಶರ (2)
14.ಲಿಖಿತ ಮೂಲಕ ಮಾಡಿಕೊಳ್ಳುವ ಅರ್ಜಿ (3)
16.ಅಕ್ಕಿ ತೊಳೆದ ನೀರು (4)
17.ನಮ್ಮ ಹೆಮ್ಮೆಯ ಕನ್ನಡ ನಾಡು (4)

ಮೇಲಿಂದ ಕೆಳಕ್ಕೆ

1.ಒಂದೇ ಒಂದು ಎಂದು ಹೀಗೆ ಹೇಳಿ (3)
2.ಹಸುವಿನ ಮರಿ ಉಲ್ಟಾ ನಿಂತಿದೆಯಲ್ಲಾ? (2)
3.ಅಬಲೆಗೆ ಕಾಣಿಸಿದ ತರಂಗ! (2)
4.ಅತಿಶಯವಾದುದು ಅಥವಾ ವಿಶೇಷವಾದುದು! (3)
7.ರುಚಿಕರವಾದ ಭೋಜನ (5)
8.ಕೆಲಸಕ್ಕೆ ಬೇಕಾದ ಸಾಧನ (5)
11.ನಾವೆಯನ್ನು ನಡೆಸುವವನು (3)
13.ಬಾಲ ಹಚ್ಚಿಕೊಂಡಿರುವ ಹುಡುಗ (3)
14.ಕಡಿಗತ್ತಿಯನ್ನು ಹೀಗೂ ಹೇಳುವರು (2)
15.ಕವಿತೆ ಬರೆಯುವವನು ಏಕೋ ತಿರುಗಿದ್ದಾನಲ್ಲಾ? (2)



4800ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಜಾಯಮಾನ 3.ಅಸ್ತಿಭಾರ 5.ಕನ್ನಡ 6.ದ್ರವ 8.ವಿಮೋಹ 10.ರಮಿಸು 13.ರಸ 15.ಪರೋಕ್ಷ 16.ಅವಭೃಥ 17.ರಸಹೀನ

ಮೇಲಿಂದ ಕೆಳಕ್ಕೆ: 1.ಜಾಲಂಧ್ರ 2.ನಕಲು 3.ಅಡವಿ 7.ವರ್ಣಸಂಕರ 9.ಹಲಾಲುಕೋರ 11.ಸುಪಥ 12.ಅಕ್ಷರ 14.ಸದನ

ಸುಡೊಕು 5187

	7	9			3		8	1
				8		2		9
8	1		2	6		7	3	
	8					1		5
	9	2	8	1	5		6	
5						8		
9		7	5					6
	5				2		4	
4	3		6		1			2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5186 ಸುಡೊಕು

9	2	8	3	6	7	4	5	1
3	6	4	9	1	5	8	7	2
5	7	1	2	4	8	9	6	3
7	4	2	6	3	9	1	8	5
8	3	9	5	7	1	2	4	6
1	5	6	8	2	4	3	9	7
2	8	5	1	9	6	7	3	4
4	9	3	7	5	2	6	1	8
6	1	7	4	8	3	5	2	9

ಭಾರಿ ಮೊತ್ತ ಬಾಕಿ: ಸ್ಪೈಸ್‌ಜೆಟ್ ಜಪ್ತಿಗೆ ಆದೇಶ

ಚೆನ್ನೈ (ಪಿಟಿಐ): ಭಾರಿ ಮೊತ್ತ ಬಾಕಿ ಉಳಿಸಿಕೊಂಡಿರುವ ಪ್ರಕರಣದಲ್ಲಿ ಸ್ವಿಸ್ ಕಂಪನಿಯ ಅರ್ಜಿಗೆ ಸಂಬಂಧಿಸಿದಂತೆ ಖಾಸಗಿ ವೈಮಾನಿಕ ಸಂಸ್ಥೆ ಸ್ಪೈಸ್‌ಜೆಟ್ ಅನ್ನು ಮುಚ್ಚಲು ಹಾಗೂ ಅದರ ಆಸ್ತಿಯನ್ನು ಜಪ್ತಿ ಮಾಡಲು ಮದ್ರಾಸ್ ಹೈಕೋರ್ಟ್ ಮಂಗಳವಾರ ಆದೇಶಿಸಿದೆ.

ಈ ಮಧ್ಯೆ ವೈಮಾನಿಕ ಸಂಸ್ಥೆಯು, 'ಐದು ಮಿಲಿಯನ್ ಡಾಲರ್‌ಗೆ ಸರಿಸಮಾನವಾದ ಮೊತ್ತವನ್ನು (ಸುಮಾರು ₹ 37.72 ಕೋಟಿ) ಎರಡು ವಾರದಲ್ಲಿ ಠೇವಣಿ ಇಡಬೇಕು ಎಂಬ ಷರತ್ತು ವಿಧಿಸಿ ಕೋರ್ಟ್, ಮೂರು ವಾರದ ಅವಧಿಗೆ ಈ ಆದೇಶಕ್ಕೆ ತಡೆಯಾಜ್ಞೆ ನೀಡಿದೆ' ಎಂದು ತಿಳಿಸಿದೆ. ಮೇಲ್ಮನವಿ ಸಲ್ಲಿಸುವುದು ಸೇರಿದಂತೆ ಸೂಕ್ತ ಪರಿಹಾರ ಕ್ರಮಗಳನ್ನು ಸಂಸ್ಥೆಯು ಕೈಗೊಳ್ಳಲಿದೆ ಎಂದು ತಿಳಿಸಿದೆ.

ಕಂಪನಿ ಕಾಯ್ದೆ 1956 ಅನ್ವಯ ಸ್ಪೈಸ್‌ಜೆಟ್ ಸಂಸ್ಥೆಯ ವಿರುದ್ಧ ಕ್ರಮ ಜರುಗಿಸಬೇಕು ಹಾಗೂ ಆಸ್ತಿ ಜಪ್ತಿ ಪ್ರಕ್ರಿಯೆ ಜಾರಿಗೊಳಿಸಲು ಅಧಿಕೃತವಾಗಿ ಬರಖಾಸ್ತುದಾರರನ್ನು ನೇಮಿಸಬೇಕು ಎಂದು ಕೋರಿ ಸ್ವಿಟ್ಜರ್‌ಲೆಂಡ್ ಕಾಯ್ದೆಯಡಿ ನೋಂದಣಿಯಾಗಿರುವ ಕ್ರೆಡಿಟ್ ಸ್ಯೂಸ್ ಎ.ಜಿ ಸಂಸ್ಥೆಯು ಅರ್ಜಿ ಸಲ್ಲಿಸಿತ್ತು.

ಮುಂಬೈ ಧಾರಣೆ

ಶೇಂಗಾ

7-12-2021

ಜಾವಾ 70/80(ಹೊಸ)	10750-10800
ಜಾವಾ 80/90(ಹೊಸ)	10350-10400
ದಪ್ಪ ಮಧ್ಯಪ್ರದೇಶ(ಹೊಸ)	10050-10100
ದಪ್ಪ ಗುಜರಾತ್(ಹೊಸ)	8600-8700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1340 (1340)
ಒಂದು ವಾರದ ಡೆಲಿವರಿ	1335 (1335)
ಸೋಯಾ ಕಚ್ಚಾ	1185 (1180)
ಪಾಮ್ ವಾರದ ಡೆಲಿವರಿ	1194 (1183)
ಸೂರ್ಯಕಾಂತಿ ಎಣ್ಣೆ ಕಚ್ಚಾ	1210 (1190)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
47,650 (47,750)
ಬೆಳ್ಳಿ ಕೆ.ಜಿ
61,100 (60,950)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,912
ಇಂದಿನ ಅಂತ್ಯ	17,176
▲	264
ದಿನದ ಗರಿಷ್ಠ	17,251

ವಿನಿಮಯ ದರ

$ ಡಾಲರ್	75.44
£ ಪೌಂಡ್	100.09
€ ಯುರೊ	85.05
¥ ಯೆನ್ (100ಕ್ಕೆ)	66.35

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹505
12 ಮೊಟ್ಟೆಗೆ	₹66
ಮೈಸೂರು	
100 ಮೊಟ್ಟೆಗೆ	₹505

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1330 (1330)
ಸೋಯಾ (ರಿಫೈನ್ಡ್)	₹1235(1227)
ಸೂರ್ಯಕಾಂತಿ (ರಿಫೈನ್ಡ್)	₹1280 (1270)
ಪಾಮೋಲಿನ್	₹1196 (1185)

ಆರೋಪಪಟ್ಟಿ ಸಲ್ಲಿಕೆಗೆ ಕೋರ್ಟ್ ಆದೇಶ

ನವದೆಹಲಿ (ಪಿಟಿಐ): ಗುಂಪುದಾಳಿಯಲ್ಲಿ ತಂದೆ–ಮಗನ ಕೊಲೆ ಪ್ರಕರಣದಲ್ಲಿ ಕಾಂಗ್ರೆಸ್ ಮುಖಂಡ ಸಜ್ಜನ್ ಕುಮಾರ್ ವಿರುದ್ಧ ದೋಷಾರೋಪ ಪಟ್ಟಿ ಅಂತಿಮಗೊಳಿಸಲು ದೆಹಲಿಯ ಕೋರ್ಟ್ ಆದೇಶಿಸಿದೆ.

ತಗ್ಗಿದ ಓಮೈಕ್ರಾನ್ ಭೀತಿ: ಜಿಗಿದ ಷೇರುಪೇಟೆ

ಮುಂಬೈ (ಪಿಟಿಐ): ಎರಡು ದಿನಗಳಿಂದ ಇಳಿಕೆಯ ಹಾದಿಯಲ್ಲಿ ಸಾಗಿದ್ದ ದೇಶದ ಷೇರುಪೇಟೆ ಸೂಚ್ಯಂಕಗಳು ಮಂಗಳವಾರ ಭರ್ಜರಿ ಏರಿಕೆ ದಾಖಲಿಸಿದವು. ಕೊರೊನಾ ವೈರಾಣುವಿನ ಓಮೈಕ್ರಾನ್ ರೂಪಾಂತರಿ ತಳಿ ಕುರಿತ ಭಯ ತಗ್ಗಿದ ಕಾರಣ ಜಾಗತಿಕ ಮಾರುಕಟ್ಟೆಗಳಲ್ಲಿ ಉತ್ಸಾಹದ ವಹಿವಾಟು ನಡೆಯಿತು. ಇದರ ಪರಿಣಾಮವು ಭಾರತದ ಷೇರು ಮಾರುಕಟ್ಟೆಗಳ ಮೇಲೆಯೂ ಆಯಿತು.

ಓಮೈಕ್ರಾನ್ ತಳಿಯು ಬಹಳ ವೇಗವಾಗಿ ಹರಡಬಲ್ಲುದಾದರೂ ಅದರ ಪ್ರಭಾವವು ಡೆಲ್ಟಾ ತಳಿಯ ಪ್ರಭಾವಕ್ಕಿಂತ ಕಡಿಮೆ ಎಂದು ಆರಂಭಿಕ ಸಂಶೋಧನೆಗಳು ಕಂಡುಕೊಂಡಿರುವುದು ಮಾರುಕಟ್ಟೆಗಳು ಸಮಾಧಾನದ ನಿಟ್ಟುಸಿರು ಬಿಡುವಂತೆ ಮಾಡಿದವು ಎಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಲೋಹ ಮತ್ತು ಬ್ಯಾಂಕಿಂಗ್ ವಲಯದಲ್ಲಿ ಕಡಿಮೆ ಬೆಲೆಗೆ ಸಿಗುತ್ತಿರುವ ಷೇರುಗಳ ಖರೀದಿಗೆ ಹೂಡಿಕೆದಾರರು ಮುಂದಾದರು. ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು ತುಸು ಚೇತರಿಕೆ ಕಂಡುಕೊಂಡಿದ್ದು ಕೂಡ ಷೇರು ಮಾರುಕಟ್ಟೆ ಸೂಚ್ಯಂಕಗಳ ಏರಿಕೆಗೆ ಕಾರಣವಾಯಿತು. 886 ಅಂಶ ಏರಿಕೆ ಕಂಡ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 57,633 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿತು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 264 ಅಂಶ ಜಿಗಿತ ಕಂಡು, 17,176 ಅಂಶಗಳಲ್ಲಿ ವಹಿವಾಟು ಮುಗಿಸಿತು.

'ಭಾರತೀಯ ರಿಸರ್ವ್ ಬ್ಯಾಂಕ್‌ನ ಹಣಕಾಸು ನೀತಿ ಸಮಿತಿಯು ರೆಪೊ ಮತ್ತು ರಿವರ್ಸ್ ರೆಪೊ ದರಗಳಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವ ಸಾಧ್ಯತೆ ಇದೆ. ಸಮಿತಿಯು ತನ್ನ ತೀರ್ಮಾನವನ್ನು ಬುಧವಾರ ಬೆಳಿಗ್ಗೆ ಪ್ರಕಟಿಸಲಿದೆ. ಈ ಹಿನ್ನೆಲೆಯಲ್ಲಿ ಭಾರತದ ಷೇರು ಮಾರುಕಟ್ಟೆಗಳಲ್ಲಿ ಬ್ಯಾಂಕಿಂಗ್ ಮತ್ತು ಹಣಕಾಸು ವಲಯದ ಕಂಪನಿಗಳ ಷೇರುಗಳ ಮೌಲ್ಯ ಹೆಚ್ಚಳ ಕಂಡಿತು' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇಕಡ 2.26ರಷ್ಟು ಹೆಚ್ಚಳ ಆಗಿದ್ದು ಪ್ರತಿ ಬ್ಯಾರೆಲ್‌ಗೆ 74.73 ಅಮೆರಿಕನ್ ಡಾಲರ್‌ಗೆ ತಲುಪಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಪ್ರಶ್ನೋತ್ತರ

ಯು.ಪಿ.ಪುರಾಣಿಕ್
ಬ್ಯಾಂಕಿಂಗ್-ಹಣಕಾಸು ತಜ್ಞ
uppuranik@gmail.com
ಮೊ: 9448015300

ಲಕ್ಷ್ಮಿ ಗೌಡ, ಕನಕಪುರ

● **ಪ್ರಶ್ನೆ: ಬ್ಯಾಂಕ್‌ಗಳಲ್ಲಿ ಸಾಲ ಪಡೆದಾಗ ನಾವು ಕೊಡುವ ಬಡ್ಡಿಗೆ ತೆರಿಗೆ ವಿನಾಯಿತಿ ಇದೆಯೇ ಹಾಗೂ ಬ್ಯಾಂಕ್‌ಗಳಲ್ಲಿ ಇಡುವ ಠೇವಣಿಯಿಂದ ಬರುವ ಬಡ್ಡಿಗೆ ತೆರಿಗೆ ವಿನಾಯಿತಿ ಇದೆಯೇ? ನಾನು ಸರ್ಕಾರಿ ನೌಕರಿಯಲ್ಲಿದ್ದೇನೆ. ನನಗೆ ವೈಯಕ್ತಿಕ ಸಾಲ ಇದೆ ಹಾಗೂ ಬ್ಯಾಂಕ್‌ನಲ್ಲಿ ಠೇವಣಿ ಕೂಡ ಇದೆ. ತೆರಿಗೆ ಉಳಿಸಲು ನಮ್ಮಂತಹ ನೌಕರರರಿಗೆ ಉತ್ತಮ ಯೋಜನೆಗಳಿದ್ದರೆ ತಿಳಿಸಿ. ನಿಮ್ಮ ಅಭಿಮಾನಿ ನಾನು. 'ಪ್ರಜಾವಾಣಿ' ಪತ್ರಿಕೆಯನ್ನು ನಮ್ಮ ಮನೆ ಪತ್ರಿಕೆ ಎಂದೇ ಭಾವಿಸಿದ್ದೇನೆ.**

ಉತ್ತರ: ನಿಮ್ಮ ಅಭಿಮಾನಕ್ಕೆ ಧನ್ಯವಾದ. ನಿಮ್ಮ ಪ್ರಶ್ನೆ ಸರಳವಾಗಿದ್ದರೂ ಉತ್ತರವು ಹಲವರಿಗೆ ಅನುಕೂಲ ಆಗುವಂತಿದೆ. ಶಿಕ್ಷಣ ಸಾಲದ ಸಂಪೂರ್ಣ ಬಡ್ಡಿಗೆ ಸೆಕ್ಷನ್ 80 (ಇ) ಆಧಾರದ ಮೇಲೆ ವಿನಾಯಿತಿ ಇದೆ. ಸೆಕ್ಷನ್ 24 (ಬಿ) ಆಧಾರದ ಮೇಲೆ ಗೃಹ ಸಾಲದ ಬಡ್ಡಿಯಲ್ಲಿ ₹ 2 ಲಕ್ಷಗಳ ತನಕ ವಿನಾಯಿತಿ ಇದೆ. ಉಳಿದ ಯಾವುದೇ ಸಾಲದ ಬಡ್ಡಿಗೆ ತೆರಿಗೆ ವಿನಾಯಿತಿ ಪಡೆಯುವಂತಿಲ್ಲ. ಪಿಪಿಎಫ್, ಪಿಎಫ್ ಹೊರತುಪಡಿಸಿ ಉಳಿದ ಯಾವುದೇ ಠೇವಣಿಯಿಂದ ಬರುವ ಬಡ್ಡಿಯು ರಿಯಾಯಿತಿಗೆ ಒಳಗಾಗಿಲ್ಲ (ಸೆಕ್ಷನ್ 10 (II)). ಇನ್ನು ತೆರಿಗೆ ಉಳಿಸಲು ಸೆಕ್ಷನ್ 80ಸಿ ಆಧಾರದ ಮೇಲೆ ಜೀವ ವಿಮೆ, ಐದು ವರ್ಷಗಳ ಬ್ಯಾಂಕ್ ಠೇವಣಿ, ಪಿಪಿಎಫ್ ಉತ್ತಮ ಹೂಡಿಕೆಗಳು. ವಾರ್ಷಿಕ ಗರಿಷ್ಠ ಮಿತಿ ₹ 1.50 ಲಕ್ಷ. ಇದರ ಹೊರತಾಗಿ ಸೆಕ್ಷನ್ 80ಸಿಸಿಡಿ (1ಬಿ) ಆಧಾರದ ಮೇಲೆ ಎನ್‌ಪಿಎಸ್‌ನಲ್ಲಿ ಗರಿಷ್ಠ ₹ 50 ಸಾವಿರ ಹೂಡಿಕೆ ಮಾಡಬಹುದು. ಒಟ್ಟಿನಲ್ಲಿ ಈ ಎರಡೂ ಸೆಕ್ಷನ್‌ಗಳಿಂದ ಗರಿಷ್ಠ ₹ 2 ಲಕ್ಷವನ್ನು ಒಟ್ಟು ಆದಾಯದಿಂದ ಕಳೆದು ತೆರಿಗೆ ಕೊಡಬಹುದು.

ಕಾರ್ತಿಕ್ ಸಿ.ಆರ್. ಬೆಂಗಳೂರು

● **ಪ್ರಶ್ನೆ: ನನ್ನ ವಯಸ್ಸು 53 ವರ್ಷ. ನನಗೆ 24 ವರ್ಷ ವಯಸ್ಸಿನ ಮಗಳಿದ್ದಾಳೆ. ಅವಳಿಗೆ ಮದುವೆ ಆಗಿಲ್ಲ. ನಾನು ಸರ್ಕಾರಿ ನೌಕರ. ಸ್ವಂತ ಮನೆ ಇದೆ. ನಿಮ್ಮ ಅಂಕಣದಿಂದ ಪ್ರಭಾವಿತನಾಗಿ 5 ವರ್ಷಗಳ ಆರ್.ಡಿ. ಮಾಡಿ 30X40 ಅಳತೆಯ ಎರಡು ನಿವೇಶನಗಳನ್ನು ಕೊಂಡಿದ್ದೇನೆ. ನನ್ನ ಪ್ರಶ್ನೆ; ನಿವೇಶನಗಳಿಗೆ ಉತ್ತಮ ಬೆಲೆ, ಬೇಡಿಕೆ ಇದೆ. ಇವುಗಳನ್ನು ಮಾರಾಟ ಮಾಡಿ ಬ್ಯಾಂಕ್ ಠೇವಣಿ ಇರಿಸಿ, ಮುಂದೆ ಮಗಳ ಮದುವೆಗೆ ಅನುಕೂಲ ಆಗುತ್ತದೆ ಎಂದು ಪತ್ನಿ ಹೇಳುತ್ತಿದ್ದಾಳೆ. ನಮಗೆ ಒಬ್ಬಳೇ ಮಗಳು. ಉಯಿಲು ಬರೆಯುವ ಅವಕಾಶ್ಯಕತೆ ಇದೆಯೇ?**

ಉತ್ತರ: ನೀವೇ ಕಷ್ಟಪಟ್ಟು ಐದು ವರ್ಷಗಳ ಆರ್.ಡಿ. ಮಾಡಿ ಖರೀದಿ ಮಾಡಿರುವ ಎರಡು ನಿವೇಶನಗಳನ್ನು ಬ್ಯಾಂಕ್ ಠೇವಣಿ ಅಥವಾ ಮಗಳ ಮದುವೆ ಸಲುವಾಗಿ ಮಾರಾಟ ಮಾಡುವುದು ಸರಿಯಲ್ಲ. ಹೀಗೆ ಮಾಡಿದಲ್ಲಿ ಮಾರಾಟದಿಂದ ಬಂದ ಲಾಭಕ್ಕೆ ಶೇಕಡ 20ರಷ್ಟು ಬಂಡವಾಳ ವೃದ್ಧಿ ತೆರಿಗೆ ಕೊಡಬೇಕಾಗುತ್ತದೆ. ಈಗ ನಿವೇಶನ ಮಾರಾಟ ಮಾಡಿದರೆ ಮುಂದೆ ಅದೇ ಹಣ ಮತ್ತು ಬಡ್ಡಿಯಿಂದ ಬದಲಿ ನಿವೇಶನ ಕೊಳ್ಳಲು ಸಾಧ್ಯವಿಲ್ಲ. ಮಾರಾಟದ ವಿಚಾರ ಕೈಬಿಟ್ಟು ನೆಮ್ಮದಿಯಿಂದ ಬಾಳಿ. ಇನ್ನು ಕೆಲವು ವರ್ಷಗಳಲ್ಲಿ ನಿಮಗೆ ನಿವೃತ್ತಿಯಿಂದ ದೊಡ್ಡ ಮೊತ್ತ ಬರುವುದರಿಂದ ಮಗಳ ಮದುವೆಗೆ ತೊಂದರೆ ಆಗಲಾರದು. ನಿಮಗೆ ಒಬ್ಬಳೇ ಮಗಳಾದರೂ ಉಯಿಲು ಬರೆಯುವುದು ಸೂಕ್ತ. ನಿಮ್ಮ ಕಾಲಾನಂತರ ನಿಮ್ಮ ಸಂಪೂರ್ಣ ಆಸ್ತಿ ನಿಮ್ಮ ಹೆಂಡತಿಗೆ ದೊರೆಯುವಂತೆ ಉಯಿಲು ಬರೆಯಿರಿ. ಇದರಿಂದ ನಿಮ್ಮ ಹೆಂಡತಿಗೆ ಜೀವನದ ಸಂಜೆಯಲ್ಲಿ ಭದ್ರತೆ ಒದಗಿಸಿದಂತಾಗುತ್ತದೆ. ಮುಂದೆ ನಿಮ್ಮ ಹೆಂಡತಿ, ಮಗಳಿಗೆ ಆಸ್ತಿ ದೊರೆಯಲು ಉಯಿಲು ಬರೆಯಬಹುದು. ಹೆಚ್ಚಿನ ಮಾಹಿತಿ ಬೇಕಿದ್ದರೆ ಕರೆ ಮಾಡಿ.

ಹೇಮಲತಾ, ಊರುಬೇಡ

● **ಪ್ರಶ್ನೆ: ನಾನು ಪ್ರೌಢಶಾಲಾ ಮುಖ್ಯೋಪಾಧ್ಯಾಯಿನಿ. ವಯಸ್ಸು 48 ವರ್ಷ. ತಿಂಗಳ ವೇತನ ₹ 78 ಸಾವಿರ. ನನ್ನ ಪತಿ ವ್ಯಾಪಾರ ಮಾಡುತ್ತಾರೆ. ನಮಗೆ ಒಬ್ಬಳು ಮಗಳು (25 ವರ್ಷ) ಒಬ್ಬ ಮಗ (23 ವರ್ಷ). ಇಬ್ಬರೂ ಬಿ.ಇ. ಮುಗಿಸಿ ಬೆಂಗಳೂರಿನಲ್ಲಿ ಐ.ಟಿ. ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಸ್ವಂತ ಮನೆ ಇದೆ. ನಮಗೆ ನಿಮ್ಮಿಂದ ಆರ್ಥಿಕ ಸಲಹೆ ಬೇಕಾಗಿದೆ. ಬಹಳ ವರ್ಷಗಳಿಂದ ನಿಮ್ಮ ಅಂಕಣ ಓದುತ್ತಿದ್ದೇವೆ. ನಮ್ಮ ಉಪಾಧ್ಯಾಯ ವೃಂದ ಪ್ರತೀ ಬುಧವಾರ ನಿಮ್ಮ ಅಂಕಣದ ಬಗ್ಗೆ ಚರ್ಚೆ ನಡೆಸುತ್ತದೆ. ನಿಮಗೂ, 'ಪ್ರಜಾವಾಣಿ' ಪತ್ರಿಕೆಗೂ ಧನ್ಯವಾದ.**

ಉತ್ತರ: ನಿಮ್ಮ ಪ್ರಶ್ನೆಯಲ್ಲಿ ಉಳಿತಾಯದ ವಿಚಾರ ತಿಳಿಸಿಲ್ಲ. ನಿಮಗೆ ಪಿಂಚಣಿ ಸವಲತ್ತು ಇರಬಹುದೆಂದು ಭಾವಿಸುತ್ತೇನೆ. ಪ್ರಾಯಶಃ ಮಕ್ಕಳ ಓದು ಹಾಗೂ ಇತರೆ ಖರ್ಚಿನಿಂದಾಗಿ ಬಹಳಷ್ಟು ಉಳಿಸಲು ಸಾಧ್ಯವಾಗದಿರಬಹುದು. ನೀವು ಪಿಪಿಎಫ್ ಮಾಡದಿರುವಲ್ಲಿ ವಾರ್ಷಿಕ ಗರಿಷ್ಠ ₹ 1.50 ಲಕ್ಷ (ತಿಂಗಳಿಗೆ ₹ 12,500) ತುಂಬಿರಿ. ಸಾಧ್ಯವಾದರೆ ನಿಮ್ಮ ಪತಿ ಕೂಡಾ ಈ ಮಾರ್ಗ ಅನುಸರಿಸಲಿ. ಇಬ್ಬರೂ ಮಕ್ಕಳು ಪಿಪಿಎಫ್ ಖಾತೆ ತೆರೆದು ಗರಿಷ್ಠ ₹ 1.50 ಲಕ್ಷ ವಾರ್ಷಿಕವಾಗಿ ತುಂಬಲಿ. ಇದರಿಂದ ತೆರಿಗೆ ಉಳಿಸಲು ಅನುಕೂಲ ಆಗುತ್ತದೆ. ನೀವು ಸಾಧ್ಯವಾದರೆ, ಸಾಲ ಮಾಡಿದರೂ ಚಿಂತೆ ಇಲ್ಲ, ಮಕ್ಕಳ ಸಲುವಾಗಿ ಕನಿಷ್ಠ 30X40 ಅಳತೆಯ ಎರಡು ನಿವೇಶನ ಖರೀದಿಸಿ. ಸ್ಥಿರ ಆಸ್ತಿ ಮೇಲಿನ ಹೂಡಿಕೆಗಿಂತ ಮಿಗಿಲಾದ ಹೂಡಿಕೆ ಮತ್ತೊಂದಿಲ್ಲ. ಇದೇ ವೇಳೆ ನಿವೇಶನ ಕೊಳ್ಳಲು ಸಾಧ್ಯವಾಗದಿರುವಲ್ಲಿ ಅಥವಾ ತಡವಾದಲ್ಲಿ, ವೇತನ ಪಡೆಯುವ ಬ್ಯಾಂಕ್‌ನಲ್ಲಿ ₹ 20 ಸಾವಿರದ ಎರಡು (ಒಟ್ಟು ₹ 40 ಸಾವಿರ) ಆರ್.ಡಿ. ಮಾಡಿರಿ. ನೀವು ನಿಮ್ಮ ಪತಿ ಸೇರಿ ₹ 5 ಲಕ್ಷದ ಆರೋಗ್ಯ ವಿಮೆ ಮಾಡಿಸಿರಿ. ಮಕ್ಕಳಿಗೆ ಸಂಬಳದ ಶೇಕಡ 10ರಷ್ಟು ಜೀವ ವಿಮೆ, ಕನಿಷ್ಠ ವಾರ್ಷಿಕ ₹ 50 ಸಾವಿರ ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್‌ಪಿಎಸ್) ಹಾಗೂ 10 ವರ್ಷಗಳ ಅವಧಿಗೆ ₹ 15 ಸಾವಿರ ಅಥವಾ ₹ 20 ಸಾವಿರದ ಆರ್.ಡಿ. ಮಾಡಲು ತಿಳಿಸಿರಿ. ಆರ್ಥಿಕ ಶಿಸ್ತು ಮುಂದಿನ ಜೀವನ ಶೈಲಿಯನ್ನೇ ಬದಲಾಯಿಸುತ್ತದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ
ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ,
ಬೆಂಗಳೂರು–560001. ಇ–ಮೇಲ್: businessdesk@prajavani.co.in

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ವೈಕುಂಠ ಸಮಾರಾಧನೆ

ಶ್ರೀ ಕೆ. ಪ್ರತಾಪ್
17/2/1A, 3rd Cross, Keshavaraj Layout, Cambridge Road, Halasuru, Bangalore - 560008
ತಾ. 29–11–2021 ಸೋಮವಾರದಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ತಾ. 9–12–2021 ಗುರುವಾರದಂದು ವೈಕುಂಠ ಸಮಾರಾಧನೆಯನ್ನು ಸ್ವಗೃಹದಲ್ಲಿ ಏರ್ಪಡಿಸಲಾಗಿದೆ.
ಇಂತಿ ದುಃಖತಪ್ತರು: ಮಗಳು ಪಿ. ಪ್ರೀತಿ, ಅಳಿಯ ಅಭಿಷೇಕ್, ಮೊಮ್ಮಗಳು ಆರ್ವಿ, ಮತ್ತು ಕೇಶವರಾಜ್ ಕುಟುಂಬದವರು
ಫೋನ್: 9972111300, 9480457642.

For Online Classified Booking
Name Change / Education / Property / Job / Services & many more
Log on to :
dhclassifieds.com

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Cook

ಅಡುಗೆಯವರು ಬೇಕಾಗಿದ್ದಾರೆ / COOK WANTED ಪೂರ್ಣಪ್ರಜ್ಞ ವೈಜ್ಞಾನಿಕ ಸಂಶೋಧನಾ ಸಂಸ್ಥೆ,ದೇವನಹಳ್ಳಿ ಕ್ಯಾಂಪಸ್,ಬೆಂಗಳೂರು ಇಲ್ಲಿ ನಿಯತಕಾಲಿಕ ಅಡುಗೆ (ಸಸ್ಯಾಹಾರಿ) ಕೆಲಸ ಮಾಡಲು ಇಚ್ಛಿಸುವವರು ಈ ಕೆಳಕಂಡ ದೂರವಾಣಿ ಸಂಖ್ಯೆಗೆ ಕರೆಮಾಡಿ ಉಚಿತ ಊಟ ಮತ್ತು ವಸತಿ ಲಭ್ಯವಿದೆ. ದೂರವಾಣಿ ಸಂಖ್ಯೆ: 9663075675

General

✓ TOYOTA, ಟಾಟಾಮೋಟಾರ್ಸ್, ಬಿಗ್ ಬಜಾರ್‍ನ ಬ್ರಿಟಾನಿಯಾಗಳಿಗೆ 5th,SSLC, Degree, ITI,Diploma ದವರು ನೇರನೇಮಕಾತಿಯಿದೆ.18,000-60,000 /- ವಸತಿಯೂಟವಿದೆ. 7795837319, 9901312461

ನಮ್ಮ ಕಂಪನಿಯ ಆಯುರ್ವೇದಿಕ್ ಉತ್ಪನ್ನಗಳನ್ನು ನಮ್ಮ ಕಾರುಗಳಲ್ಲಿ ತೆರಳಿ ಪ್ರಮೋಟ್ ಮಾಡಿ ಉಚಿತ ವಸತಿಯೊಂದಿಗೆ ದಿನಕ್ಕೆ 800 -1200 ಸಂಪಾದಿಸಲು ಸಂಪರ್ಕಿಸಿ: 9513670249/ 8904379634

INTERWEAVES FOR Placements of Manager, Marketing and Accountant. on 08/12/2021 from 11:00 am, Kalburgi. Contact: 9686029646.

✓ **ಕಂಪನಿಗಳಿಗೆ ಬೇಕಾಗಿದ್ದಾರೆ.** ಟಾಟಾಮೋಟಾರ್ಸ್, TVS, ಬ್ರಿಟಾನಿಯಾಗಳಿಗೆ SSLC, PUC, Degreeಯವರು ITIನವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,100- 56,000/- ವಸತಿಯೂಟದೊಂದಿಗೆ. 7899778278, 9611715755

WATCHMAN AND ATTENDER required to the reputed PANCHASHEELA EDUCATIONAL GROUP OF INSTITUTIONS at #10, 21st Cross BHEL Layout Pattnargere, RR.Nagar, Bangalore-98. Ex-serviceman and experience in educational institute may apply with resume. Call: 9845655761, 9448669359

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

KALABHYRAVESWARA Polytechnic, Hesaraghatta Faculty Required Computer Science & Maths Contact Principal : 9964623156

Part-Time Jobs

✓ **ಕನ್ನಡ ಮತ್ತುಇಂಗ್ಲೀಷ್** ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Engg/ Production Technical

WANTED SKILLED and experienced Machinists / Grinders with 2-3 years' experience for an AS 9100 export-oriented precision engineering company, situated on Mysore Road. I.T.I trained Freshers can also apply. Call 9620227324 or send Resume to hr@micro-precision.in.

URGENTLY WANTED experienced QA, QC personnel for Electromagnetic products supplied for Defence and Aerospace. Minimum experience of 10 years. Very competitive remuneration. Vita Technology Pvt. Ltd., Contact: 7899752257 / 9686203434 vitatech@vitatechindia.com

Marketing & Sales

ASHA
WALK –IN INTERVIEW 08.12.21 to 15.12.21
WE ARE HIRING FOR ASHA SWEET CENTER
• FIELD SALES MAN (FMCG) PUC /Graduate
• ASM / RSM Graduate/Post Graduate
Experience-1 to 5 Years
Contact : M Shanthakumar HR
9113640514, 08042067853
H.O Sri Vignesh Apartments, Malleshwaram 10th Cross, Bangalore -560003

WALK IN
POTHYS Aalayam of Textiles
K.G. Road, Gandhi Nagar, Bengaluru - 560 009
SALES ASSOCIATES
PUC, 5 to 10 YRS EXP IN SILK SAREES & READY-MADE GARMENTS
SALARY STARTING FROM ₹14,500/- + INCENTIVE (SALARY NEGOTIABLE)
CALL : 84899 02888 / 84899 28971
Email : hrexe@blr.pothys.com
AGE LIMIT MAX 40 YEARS (FOR OUTSTATION CANDIDATES FREE FOOD & ACCOMMODATION)

ಭವಿಷ್ಯ

Astrology

ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್, ನಿಮ್ಮ ಏನೇ ಕಠಿಣ ಸಮಸ್ಯೆ ಇದ್ದರೂ ಉಚಿತ ಭವಿಷ್ಯ, ಖಚಿತ ಪರಿಹಾರ. 9448327541

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

ಗುರು ಕಬೀರ್ ಭಾರತಿ. ಫೋನ್ ಮುಖಾಂತರ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಪ್ರೇಮ, ವ್ಯವಹಾರ, ಶತ್ರು ನಿವಾರಣೆ, ಗಂಡ ಹೆಂಡತಿ ಕಲಹ, ಮದುವೆ, ಕೋರ್ಟ್ ಕೇಸ್, ಕರಿಯರ್, ರಾಜಕೀಯ ಸಂಪರ್ಕಿಸಿ : 9311241624 .

★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್.(ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2 ದಿನದಲ್ಲಿ ಪರಿಹಾರ. 9886755306

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

★ವಶೀಕರಣ ಸ್ಪೆಷಲಿಸ್ಟ್★ ಗಂಡ ಹೆಂಡತಿ ಕಲಹ, ಪ್ರೇಮವಿಚಾರ, ಸಂತಾನ, ಸ್ತ್ರೀಪುರುಷಅನೈತಿಕ ಸಂಬಂಧ ಇನ್ನಿತರ ಸಮಸ್ಯೆಗಳಿಗೆ ಫೋನಿನ ಮುಖಾಂತರ ಪರಿಹಾರ. 9538276534

ಪ್ರವಾಸ

Travel

'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್' ವತಿಯಿಂದ ರಿಯಾಯಿತಿ ದರದಲ್ಲಿ ಸುಲಭ ಕಂತಿನಲ್ಲಿ 15 ದಿನಗಳು. ರೈಲು/ ಬಸ್ಸಿನಲ್ಲಿ ಪೆಬ್ರವರಿ, ಮಾರ್ಚನಲ್ಲಿ ಕಾಶಿಯತ್ರ, ದೆಹಲಿ, ಆಗ್ರ, ಅಲಹಾಬದ್, ಗಯಾ, ಅಯೋಧ್ಯ, ಹರಿದ್ವರ, ಇತ್ಯಾದಿ (ಕೆಲವೇ ಸೀಟುಗಳಿವೆ), ಪ್ರತಿ ತಿಂಗಳು ಅಂಡಮಾನ್ ಹವಳದ್ವೀಪ **Royal Package** 9845560219/ 9739847429.

11-12-2021 ರಿಂದ 5ದಿನಗಳು ರಾಮೇಶ್ವರ, ಕನ್ಯಾಕುಮಾರಿ, ಶ್ರೀರಂಗ, ಮಧುರೈ, ಪಳನಿ.11-12-2021 ರಿಂದ 4 ದಿನಗಳು ಧರ್ಮಸ್ಥಳ, ಕೊಲ್ಲೂರು ಮುಕಾಂಬಿಕ, ಸಿಗಂಧೂರು, ಹೊರನಾಡು, ಕುಕ್ಕೆ ಸುಬ್ರಹ್ಮಣ್ಯ. ಶ್ರೀ ಗುರುರಾಜ ಟ್ರಾವಲ್ಸ್, ಕೋಲಾರ 9900124333, 8123099913, 9611082432

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD — ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB | LOST | REAL ESTATE | NAME CHANGE | EDU | HEALTH
MATRI | AUTO | ASTRO | NOTICE | TRAVEL
condition apply*
WWW.DHCLASSIFIEDS.COM
For more information Contact:
9880856233 | 9731810277 | 9901641752 | 9845114560 | 9886213331
Email: dhclassifieds@deccanherald.co.in

ದೇಶಿ ಕ್ಷಿಪಣಿಯ ಯಶಸ್ವಿ ಪರೀಕ್ಷಾರ್ಥ ಪ್ರಯೋಗ

ಬಾಲಾಸೋರ್, ಒಡಿಶಾ (ಪಿಟಿಐ): ದೇಶಿಯವಾಗಿ ಅಭಿವೃದ್ಧಿಪಡಿಸಿರುವ, ಲಂಬವಾಗಿ ಭೂಮಿಯಿಂದ ಗಗನಮುಖಿಯಾಗಿ ಉಡಾವಣೆ ಮಾಡಬಹುದಾದ ನೂತನ ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗವನ್ನು ಭಾರತ ಮಂಗಳವಾರ ಯಶಸ್ವಿಯಾಗಿ ನಡೆಸಿತು.

ನೌಕಾಪಡೆಗಾಗಿ ಅಭಿವೃದ್ಧಿಪಡಿಸಲಾಗಿರುವ ಈ ಕ್ಷಿಪಣಿಯ ಪರೀಕ್ಷೆಯನ್ನು ಒಡಿಶಾದ ಕರಾವಳಿ ಭಾಗದ ಚಾಂಡಿಪುರ್‌ನಲ್ಲಿ ಮಧ್ಯಾಹ್ನ 3.08ಕ್ಕೆ ನಡೆಸಲಾಯಿತು ಎಂದು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ತಿಳಿಸಿದೆ.

ಕ್ಷಿಪಣಿಯ ವೇಗದ ಗತಿಯನ್ನು ಗಮನಿಸಲು ಹಲವು ಕಣ್ಗಾವಲು ಪರಿಕರಗಳನ್ನು ಬಳಸಲಾಗಿತ್ತು. ಈ ಕ್ಷಿಪಣಿಯ ಕಾರ್ಯವ್ಯಾಪ್ತಿ 50 ಕಿ.ಮೀ ಆಗಿದೆ ಎಂದು ಡಿಆರ್‌ಡಿಒ ಟ್ವೀಟ್ ಮಾಡಿದೆ.

ಕಡಿಮೆ ಸಾಂದ್ರತೆಯ ವಿದ್ಯುನ್ಮಾನ ಗುರಿಯನ್ನು ಕೇಂದ್ರೀಕರಿಸಿ ಪರೀಕ್ಷೆ ನಡೆಸಲಾಯಿತು. ಕ್ಷಿಪಣಿಯನ್ನು ಯುದ್ಧನೌಕೆಗಳಿಗೆ ಅಳವಡಿಸಲಾಗುವುದು ಎಂದು ಡಿಆರ್‌ಡಿಒ ತಿಳಿಸಿದೆ. ಪರೀಕ್ಷಾರ್ಥ ಪ್ರಯೋಗವು ಯಶಸ್ವಿಯಾಗಿ ನಡೆದುದಕ್ಕೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಡಿಆರ್‌ಡಿಒಗೆ ಅಭಿನಂದಿಸಿದ್ದಾರೆ.

ಜನರ ಸ್ಥಳಾಂತರ: ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗದ ಹಿನ್ನೆಲೆಯಲ್ಲಿ ಬಾಲಾಸೋರ್ ಜಿಲ್ಲಾಡಳಿತವು ಉಡಾವಣೆ ಸ್ಥಳದಿಂದ 2.5 ಕಿ.ಮೀ ವ್ಯಾಪ್ತಿಯಲ್ಲಿದ್ದ ಸುಮಾರು 4,500 ಜನರನ್ನು ಸ್ಥಳಾಂತರಿಸಿತ್ತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	500- 550
ನಡುಗೋಲು	600-650
ರಾಶಿ	700-800
ರಾಶಿ ಉತ್ತಮ	800-900
ಜರಡಿ	1000 -1050
ಹೆರಕಿದ್ದು	1200-1300
ಹಸಿರು ಸಾಧಾರಣ	750-850
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	520
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-43500
ಹಳತು	46000-52500
ಭದ್ರಾವತಿ	
ರಾಶಿ	46186-47599
ಚನ್ನಗಿರಿ	
ರಾಶಿ	45459-47509
ಕಾರ್ಕಳ	
ಹೊಸತು	40000-43500
ಹಳತು	8000-53000
ಕುಂದಾಪುರ	
ಹಳೆಚಾಲಿ	50000-51500
ಹೊಸಚಾಲಿ	37500-43500
ಮಂಗಳೂರು	
ಕೋಕ	25100-31000
ಪುತ್ತೂರು	
ಹೊಸತು	27500-43500
ಸಾಗರ	
ಬಿಳಿಗೋಟು	20309-30609
ಚಾಲಿ	37209-46599
ಕೋಕ	19899-19899
ಕೆಂಪುಗೋಟು	36899-39699
ರಾಶಿ	39709-47629
ಸಿಪ್ಪೆಗೋಟು	15689-27120
ಶಿವಮೊಗ್ಗ	
ಬೆಟ್ಟೆ	48019-53519
ಗೊರಬಲು	17005-38869
ರಾಶಿ	44599-47599
ಸರಕು	51200-72669
ಸಿದ್ದಾಪುರ	
ಬಿಳಿಗೋಟು	31689-42289
ಕೋಕ	26611-38289
ಚಾಲಿ	46899-50899
ಹೊಸಚಾಲಿ	33299-38699
ಕೆಂಪುಗೋಟು	23699-33309
ರಾಶಿ	43899-48489
ತಟ್ಟಿಬೆಟ್ಟೆ	32012-41089
ಶಿರಸಿ	
ಬೆಟ್ಟೆ	26099-44099
ಬಿಳಿಗೋಟು	6929-44700
ಚಾಲಿ	38899-50999
ರಾಶಿ	39539-51309
ತುಮಕೂರು	
ರಾಶಿ	45200-46400
ಯಲ್ಲಾಪುರ	
ಬಿಳಿಗೋಟು	32321-42901
ಕೋಕ	24199-34899
ಚಾಲಿ	43012-50826
ಕೆಂಪುಗೋಟು	29015-35699
ರಾಶಿ	46670-54869
ತಟ್ಟಿಬೆಟ್ಟೆ	38850-45995
ರಾಮನಗರ ರೇಷ್ಮೆ	
ಮಿಶ್ರತಳಿ (ಸಿ.ಬಿ)	330-600
ದ್ವಿತಳಿ (ಬಿ.ವಿ)	425-761

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15,300	15,400	15,300	249.85 ಸೆಂಟ್ಸ್
ಎಸಿ	6,750	6,500	6,500	
ಆರ್‌ಪಿ	6,300	-	-	ಲಂಡನ್
ಆರ್‌ಸಿ	3,820	142/kg on O.T	-	2420ಡಾಲರ್ಸ್

ಹೈನುಗಾರಿಕೆ ವಿದ್ಯಾರ್ಥಿಗಳಿಂದ ಉತ್ಪನ್ನಗಳ ತಯಾರಿ–ಮಾರಾಟ

'ಉತ್ಕೃಷ್ಟ' ಉತ್ಪನ್ನ: ಕಲಿಕೆ ಜತೆ ಗಳಿಕೆ

• ಮನೋಹರ್ ಎಂ.

ಬೆಂಗಳೂರು: ಕಲಿಕೆಯ ಹಂತದಲ್ಲೇ ವಿದ್ಯಾರ್ಥಿಗಳನ್ನು ಉದ್ಯಮಿಗಳನ್ನಾಗಿ ಸಜ್ಜುಗೊಳಿಸುವ ಆಶಯದೊಂದಿಗೆ ಹೆಬ್ಬಾಳದ ಹೈನು ವಿಜ್ಞಾನ ಮಹಾವಿದ್ಯಾಲಯದ 'ಡೇರಿ ಎಂಜಿನಿಯರಿಂಗ್' ವಿಭಾಗದಲ್ಲಿ 4ನೇ ವರ್ಷದ ಬಿ.ಟೆಕ್ (ಡಿ.ಟೆಕ್) ವಿದ್ಯಾರ್ಥಿಗಳಿಗೆ ಡೇರಿ ಮತ್ತು ಆಹಾರ ಉತ್ಪನ್ನಗಳ ತಯಾರಿಯಿಂದ ಮಾರಾಟದವರೆಗಿನ ತರಬೇತಿಯನ್ನು ನೀಡಲಾಗುತ್ತಿದೆ.

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ (ಕೆವಿಎಎಫ್‌ಎಸ್‌ಯು) ಅಧೀನದಲ್ಲಿರುವ ಹೈನು ವಿಜ್ಞಾನ ಮಹಾವಿದ್ಯಾಲಯದಲ್ಲಿ 'ಗ್ರಾಮೀಣ ಉದ್ಯಮಶೀಲತೆ ಜಾಗೃತಿ ಅಭಿವೃದ್ಧಿ ಯೋಜನೆ' (ರೆಡಿ) ಕಾರ್ಯಕ್ರಮದಡಿ 'ಡೇರಿ ಎಂಜಿನಿಯರಿಂಗ್' ವಿಭಾಗದ ಏಳನೇ ಸೆಮಿಸ್ಟರ್‌ನ ವಿದ್ಯಾರ್ಥಿಗಳು 'ಉತ್ಕೃಷ್ಟ' ಶೀರ್ಷಿಕೆಯಲ್ಲಿ ಹಾಲಿನ ಮೌಲ್ಯವರ್ಧಿತ ಉತ್ಪನ್ನಗಳನ್ನು ತಯಾರಿಸಿ ಮಾರಾಟ ಮಾಡುತ್ತಿದ್ದಾರೆ. ವಿದ್ಯಾರ್ಥಿಗಳು ತಯಾರಿಸುವ ಶುದ್ಧ ಹಸುವಿನ ತುಪ್ಪ, ಲಸ್ಸೀ, ಯೋಗರ್ಟ್, ಪನೀರ್, ತೆಂಗಿನ ಎಣ್ಣೆ ಉತ್ಪನ್ನಗಳನ್ನು ನಗರದ ನಿವಾಸಿಗಳು ಪ್ರತಿನಿತ್ಯ ಖರೀದಿಸಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಮುಂದಿನ ಹಂತದಲ್ಲಿ ಬೇರೆ ಉತ್ಪನ್ನಗಳನ್ನು ಸಿದ್ಧಪಡಿಸಲು ವಿದ್ಯಾರ್ಥಿಗಳು ಯೋಜನೆ ರೂಪಿಸಿದ್ದಾರೆ.

ಡೇರಿ ಎಂಜಿನಿಯರಿಂಗ್ ವಿದ್ಯಾರ್ಥಿಗಳು ತಾವೇ ತಯಾರಿಸಿದ ಉತ್ಪನ್ನಗಳನ್ನು ಖುಷಿಯಿಂದ ಪ್ರದರ್ಶಿಸಿದರು –ಪ್ರಜಾವಾಣಿ ಚಿತ್ರ:ಎಂ.ಎಸ್‌ಮಂಜುನಾಥ್

'ಕಲಿಕೆ ಹಂತದಲ್ಲೇ ಗಳಿಕೆ' ಘೋಷವಾಕ್ಯಕ್ಕೆ ಪೂರಕವಾಗಿ ವಿದ್ಯಾರ್ಥಿಗಳಿಗೆ ಈ ತರಬೇತಿ ನೀಡಲಾಗುತ್ತಿದೆ. ಪದವಿ ಪಡೆದು ಉದ್ಯೋಗಗಳನ್ನು ಪಡೆಯುವ ಬದಲಿಗೆ, ಉದ್ಯಮಿಗಳಾಗಿ ಉದ್ಯೋಗಗಳನ್ನು ಸೃಷ್ಟಿಸುವಂತೆ ಮಾಡುವುದು ಈ ಕಾರ್ಯಕ್ರಮದ ಉದ್ದೇಶ' ಎಂದು ಹೈನು ವಿಜ್ಞಾನ ಮಹಾವಿದ್ಯಾಲಯದ ಡೀನ್ ಎ.ಸಚೀಂದ್ರ ಬಾಬು 'ಪ್ರಜಾವಾಣಿ'ಗೆ ತಿಳಿಸಿದರು.

30ಗಳಲ್ಲಿ 1 ಟನ್ ತುಪ್ಪ ಮಾರಾಟ

ವಿದ್ಯಾರ್ಥಿಗಳು ಒಂದು ತಿಂಗಳಲ್ಲಿ 1 ಟನ್‌ನಷ್ಟು ತುಪ್ಪವನ್ನು ಮಾರಾಟ ಮಾಡಿದ್ದಾರೆ. 100 ಕೆ.ಜಿ ಪನೀರ್, 50 ಲೀಟರ್ ತೆಂಗಿನ ಎಣ್ಣೆ, 100 ಲೀಟರ್ ಯೋಗರ್ಟ್ ಹಾಗೂ 500 ಪ್ಯಾಕೆಟ್ ಲಸ್ಸೀ ಈವರೆಗೆ ಮಾರಾಟವಾಗಿದೆ. 'ಉತ್ಪನ್ನಗಳ ಖರೀದಿಗೆ 9341727772 ಸಂಖ್ಯೆಯ ವಾಟ್ಸ್‌ಆ್ಯಪ್ ಗುಂಪಿಗೆ ಸೇರಿಕೊಳ್ಳಬಹುದು ಅಥವಾ 8748839296, 988053 1245 ಸಂಖ್ಯೆಗಳನ್ನು ಸಂಪರ್ಕಿಸಬಹುದು' ಎಂದು ಡೈರಿ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಜಿ.ಮಹೇಶ್ ಕುಮಾರ್ ನೀಡಿದರು.

ಅಮಾನತು ರದ್ದಾಗುವ ತನಕ ರಾಜ್ಯಸಭೆಯಲ್ಲಿ ಜಂಟಿ ಹೋರಾಟ: ಖರ್ಗೆ ದೃಢನುಡಿ

‘ಕಲಾಪ ಸ್ಥಗಿತಕ್ಕೆ ಸರ್ಕಾರವೇ ಹೊಣೆ’

ನವದೆಹಲಿ (ಪಿಟಿಐ): ರಾಜ್ಯಸಭೆಯ ಕಲಾಪ ಸ್ಥಗಿತಗೊಳ್ಳುತ್ತಿರುವುದಕ್ಕೆ ಸರ್ಕಾರವನ್ನೇ ಹೊಣೆ ಮಾಡಿರುವ ವಿರೋಧ ಪಕ್ಷಗಳ ನಾಯಕರು, 12 ಸಂಸದರ ಅಮಾನತು ಆದೇಶವನ್ನು ಹಿಂಪಡೆಯುವವರೆಗೆ ತಮ್ಮ ಜಂಟಿ ಹೋರಾಟ ಮುಂದುವರಿಯಲಿದೆ ಎಂದು ಮಂಗಳವಾರ ತಿಳಿಸಿದ್ದಾರೆ.

ಸಂಸತ್ತಿನ ಹೊರಗೆ ಸುದ್ದಿಗಾರರೊಂದಿಗೆ ಮಾತನಾಡಿದ ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಸಂಸದರನ್ನು ಅಮಾನತು ಮಾಡಿರುವುದು ಪ್ರಜಾಸತ್ತೆಗೆ ವಿರುದ್ಧ ಹಾಗೂ ನಿಯಮಬಾಹಿರವಾಗಿದೆ ಎಂದು ದೂರಿದರು.

ಅಮಾನತುಗೊಂಡ ಸಂಸದರನ್ನು ಬೆಂಬಲಿಸಿ ತಮ್ಮ ಧರಣಿ ಮುಂದುವರಿಯಲಿದೆ ಎಂದ ಅವರು, ಈ ವಿಷಯವಾಗಿ ಲೋಕಸಭಾ ಸದಸ್ಯರೂ ಬೆಂಬಲ ನೀಡಬೇಕು ಎಂದು ಆಗ್ರಹಿಸಿದರು.

ಮುಂಗಾರು ಅಧಿವೇಶನದಲ್ಲಿ ‘ಅಶಿಸ್ತಿನ ನಡವಳಿಕೆ’ ತೋರಿದ ಆರೋಪದಲ್ಲಿ ರಾಜ್ಯಸಭೆಯ 12 ಸದಸ್ಯರನ್ನು ಚಳಿಗಾಲದ ಅಧಿವೇಶನ ಅವಧಿ ಮುಗಿಯುವವರೆಗೆ, ಸಭಾಪತಿ ವೆಂಕಯ್ಯ ನಾಯ್ಡು ಅವರು ಅಮಾನತು ಮಾಡಿದ್ದಾರೆ.

‘ಪ್ರತಿಯೊಬ್ಬ ಸದಸ್ಯರ ಹೆಸರನ್ನೂ ಪ್ರತ್ಯೇಕವಾಗಿ ಕೂಗಿ, ಅವರನ್ನು ಯಾಕಾಗಿ ಅಮಾನತು ಮಾಡಲಾಗುತ್ತಿದೆ ಎಂಬುದನ್ನೂ ಹೇಳಬೇಕು. ಆ ನಂತರವಷ್ಟೇ ಅದು ಅಮಾನತು ಎನಿಸಿಕೊಳ್ಳುತ್ತದೆ. ಅದು ಕೂಡ ಆಗಸ್ಟ್ 11ರಂದೇ ಆಗಬೇಕಿತ್ತು’ ಎಂದರು.

‘ಅಧಿವೇಶನವೇ ಮುಕ್ತಾಯವಾದ ಮೇಲೆ, ಹಿಂದಿನ ಅಧಿವೇಶನಕ್ಕೆ ಸಂಬಂಧಪಟ್ಟಂತೆ ಸದಸ್ಯರನ್ನು ಅಮಾನತು ಮಾಡುವ ಅಧಿಕಾರ ಸರ್ಕಾರಕ್ಕಿಲ್ಲ. ಈ ಕ್ರಮವು ಸಂವಿಧಾನಬದ್ಧವಾಗಿಲ್ಲ. ಕಲಾಪ ನಡೆಯುವುದು ಸರ್ಕಾರಕ್ಕೆ ಬೇಕಿಲ್ಲ ಎಂಬುದು ಇದರಿಂದ ವೇದ್ಯವಾಗುತ್ತದೆ’ ಎಂದು ಖರ್ಗೆ ಹೇಳಿದರು.

‘ನಮ್ಮ ದನಿಯನ್ನು ಹತ್ತಿಕ್ಕಲು ಬಿಡುವುದಿಲ್ಲ. ಸರ್ವಾಧಿಕಾರದಿಂದ ಸಂಸತ್ತಿನ ಅಧಿವೇಶನ ನಡೆಯಬೇಕೆಂದು ಪ್ರಧಾನಿ ನರೇಂದ್ರ ಮೋದಿ ಅವರು ಬಯಸುತ್ತಾರೆ. ಅದಕ್ಕೆ ನಾವು ಅವಕಾಶ ಮಾಡಿಕೊಡುವುದಿಲ್ಲ’ ಎಂದರು.

ಕಾಂಗ್ರೆಸ್‌ನ ಆರು ಸಂಸದರು, ತೃಣಮೂಲ ಕಾಂಗ್ರೆಸ್ ಹಾಗೂ ಶಿವಸೇನೆಯ ತಲಾ ಇಬ್ಬರು, ಸಿಪಿಐ ಹಾಗೂ ಸಿಪಿಎಂನ ತಲಾ ಒಬ್ಬ ಸಂಸದರು ಚಳಿಗಾಲದ ಅಧಿವೇಶನ ಆರಂಭವಾದ ದಿನದಂದೇ ಅಮಾನತುಗೊಂಡಿದ್ದು, ಅಂದಿನಿಂದ ಪ್ರತಿಭಟನೆ ನಡೆಸುತ್ತಿದ್ದಾರೆ.

ಸಂತ್ರಸ್ತ ರೈತ ಕುಟುಂಬಗಳಿಗೆ ಉದ್ಯೋಗ–ಪರಿಹಾರಕ್ಕೆ ಆಗ್ರಹ

ಕೃಷಿ ಕಾಯ್ದೆಗಳನ್ನು ವಿರೋಧಿಸಿ, ವರ್ಷದಿಂದ ನಡೆಯುತ್ತಿರುವ ಹೋರಾಟದಲ್ಲಿ ಮೃತಪಟ್ಟ ರೈತರ ಕುಟುಂಬದವರಿಗೆ ಪರಿಹಾರ ಹಾಗೂ ಉದ್ಯೋಗ ಕಲ್ಪಿಸಬೇಕು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮಂಗಳವಾರ ಒತ್ತಾಯಿಸಿದರು.

ಶೂನ್ಯವೇಳೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಅವರು, ವರ್ಷಪೂರ್ತಿ ನಡೆದ ಪ್ರತಿಭಟನೆಯಲ್ಲಿ ಮೃತಪಟ್ಟ ರೈತರ ಮಾಹಿತಿಯೂ ಕೇಂದ್ರ ಸರ್ಕಾರದ ಬಳಿ ಇಲ್ಲ ಎಂದು ವಾಗ್ದಾಳಿ ನಡೆಸಿದರು. ಅಲ್ಲದೇ, ಪಂಜಾಬ್‌ನಲ್ಲಿ ಪರಿಹಾರ ಹಾಗೂ ಉದ್ಯೋಗಾವಕಾಶ ಸೌಲಭ್ಯ ಪಡೆದ ರೈತರ ಪಟ್ಟಿಯನ್ನೂ ಪ್ರಸ್ತುತಪಡಿಸಿದರು.

ಪಂಜಾಬ್ ಸರ್ಕಾರವು 400ಕ್ಕೂ ಹೆಚ್ಚು ರೈತರ ಕುಟುಂಬದವರಿಗೆ ತಲಾ ₹ 5 ಲಕ್ಷ ಪರಿಹಾರ ನೀಡಿದ್ದು, ಈ ಪೈಕಿ 152 ಜನರಿಗೆ ಉದ್ಯೋಗವನ್ನೂ ನೀಡಲಾಗಿದೆ. ಹರಿಯಾಣದ 70 ರೈತರ ಪಟ್ಟಿಯೂ ತಮ್ಮ ಬಳಿ ಇದೆ ಎಂದು ರಾಹುಲ್ ಹೇಳಿದರು.

‘ರೈತ ಹೋರಾಟದಲ್ಲಿ ಅಂದಾಜು 700 ರೈತರು ಮೃತಪಟ್ಟಿದ್ದಾರೆ. ಪ್ರಧಾನಿಯೇ ತಪ್ಪನ್ನು ಒಪ್ಪಿಕೊಂಡಿದ್ದಾರೆ; ರೈತರ ಕ್ಷಮೆ ಕೇಳಿದ್ದಾರೆ. ಆದರೆ, ಎಷ್ಟು ಜನ ರೈತರು ಪ್ರತಿಭಟನೆಯಲ್ಲಿ ಮೃತಪಟ್ಟಿದ್ದಾರೆ ಎಂದು ಕೃಷಿ ಸಚಿವರನ್ನು ಕೇಳಿದರೆ, ತಮಗೆ ಆ ಬಗ್ಗೆ ಮಾಹಿತಿ ಇಲ್ಲ ಎನ್ನುತ್ತಾರೆ’ ಎಂದು ಟೀಕಿಸಿದ ರಾಹುಲ್, ರೈತ ಕುಟುಂಬಗಳಿಗೆ ದೊರೆಯಬೇಕಾದ ಹಕ್ಕನ್ನು ನೀಡಬೇಕು ಎಂದು ಒತ್ತಾಯಿಸಿದರು.

ಈ ವಿಷಯವಾಗಿ ಸರ್ಕಾರವು ಹೇಳಿಕೆ ನೀಡಬೇಕು ಎಂದು ಆಗ್ರಹಿಸಿದ ಕಾಂಗ್ರೆಸ್ ಸದಸ್ಯರು, ಎನ್‌ಸಿಪಿ ಹಾಗೂ ಡಿಎಂಕೆ ಸದಸ್ಯರೊಡಗೂಡಿ ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತ ಸದನದಿಂದ ಹೊರನಡೆದರು.

ಕಲಾಪಕ್ಕೆ ಗೈರು: ಬಿಜೆಪಿ ಸಂಸದರಿಗೆ ಮೋದಿ ತರಾಟೆ

ಸಂಸತ್ ಕಲಾಪಕ್ಕೆ ಗೈರಾಗುವ ಪ್ರವೃತ್ತಿ ಮುಂದುವರಿಸಿರುವ ಬಿಜೆಪಿ ಸಂಸದರನ್ನು ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ತರಾಟೆಗೆ ತೆಗೆದುಕೊಂಡರು. ‘ಮಕ್ಕಳು ಸಹ ಪದೇ ಪದೇ ಹೇಳಿಸಿಕೊಳ್ಳುವುದನ್ನು ಇಷ್ಟಪಡುವುದಿಲ್ಲ. ನಿಮ್ಮೊಳಗೆ ಬದಲಾವಣೆ ತನ್ನಿ. ಇಲ್ಲವಾದರೆ, ಬೇರೆ ರೀತಿಯ ಬದಲಾವಣೆ ತರಬೇಕಾಗುತ್ತದೆ’ ಎಂದು ಪ್ರಧಾನಿ ಹೇಳಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಇಲ್ಲಿನ ಅಂಬೇಡ್ಕರ್ ಅಂತರರಾಷ್ಟ್ರೀಯ ಕೇಂದ್ರದಲ್ಲಿ ನಡೆದ ಬಿಜೆಪಿ ಸಂಸದೀಯ ಸಭೆಯಲ್ಲಿ ಅವರು ಮಾತನಾಡಿದರು. ಸಂಸತ್ ಸಂಕೀರ್ಣದ ಹೊರಗಡೆ ಮೊದಲ ಬಾರಿಗೆ ಸಭೆ ನಡೆಯಿತು. ಸಭೆಯ ವಿದ್ಯಮಾನದ ಬಗ್ಗೆ ಮಾಹಿತಿ ನೀಡಿದ ಕೇಂದ್ರ ಸಚಿವ ಪ್ರಲ್ಹಾದ ಜೋಷಿ, ಸಂಸದರು ತಮ್ಮ ಕ್ಷೇತ್ರಗಳಲ್ಲಿ ಕ್ರೀಡಾಕೂಟಗಳನ್ನು ಏರ್ಪಡಿಸುವಂತೆ ಪ್ರಧಾನಿ ಸೂಚನೆ ನೀಡಿದರು ಎಂದು ಹೇಳಿದರು. ಪದ್ಮ ಪ್ರಶಸ್ತಿ ವಿಜೇತರನ್ನು ಗೌರವಿಸುವ ಕಾರ್ಯಕ್ರಮಗಳನ್ನು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಆಯೋಜಿಸುವಂತೆಯೂ ಪ್ರಧಾನಿ ಸೂಚಿಸಿದರು. ಕಲಾಪಕ್ಕೆ ಗೈರಾಗುವ ಸಂಸದರ ಪ್ರವೃತ್ತಿ ಬಗ್ಗೆ ಬಿಜೆಪಿ ಸಂಸದೀಯ ಸಭೆಯಲ್ಲಿ ಸಾಕಷ್ಟು ಬಾರಿ ಪ್ರಸ್ತಾವವಾಗಿದೆ. ಮೋದಿ ಅವರು ಹಲವು ಬಾರಿ ಈ ಬಗ್ಗೆ ದನಿ ಎತ್ತಿದ್ದಾರೆ.

ಮುಂದುವರಿದ ಗದ್ದಲ

12 ಸಂಸದರ ಅಮಾನತು ಆದೇಶವನ್ನು ರದ್ದುಪಡಿಸುವಂತೆ ಆಗ್ರಹಿಸಿ ರಾಜ್ಯಸಭೆಯಲ್ಲಿ ಮಂಗಳವಾರವೂ ಪ್ರತಿಭಟನೆ ಮುಂದುವರಿದಿದ್ದರಿಂದ, ಯಾವುದೇ ಕಲಾಪ ನಡೆಯಲಿಲ್ಲ.

ಗದ್ದಲದ ನಡುವೆಯೇ, ಸಂತಾನೋತ್ಪತ್ತಿ ನೆರವು (ನಿಯಂತ್ರಣ) ಮಸೂದೆ–2021 ಹಾಗೂ ಬಾಡಿಗೆ ತಾಯ್ತನ (ನಿಯಂತ್ರಣ) ಮಸೂದೆ–2020 ಅನ್ನು ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಅವರು ಮಂಡಿಸಿದರು. ಮೂರು ಬಾರಿ ಸದನವನ್ನು ಮುಂದೂಡಿದರೂ ಯಾವುದೇ ಪ್ರಯೋಜನ ಆಗಿಲ್ಲ.

ಅಮಾನತುಗೊಂಡ ಸಂಸದರು ತಮ್ಮ ವರ್ತನೆಗೆ ಕ್ಷಮೆ ಯಾಚಿಸಿದರೆ, ಕಲಾಪದಲ್ಲಿ ಅವರು ಪಾಲ್ಗೊಳ್ಳಲು ಸಾಧ್ಯ ಎಂಬುದು ಆಡಳಿತ ಪಕ್ಷದ ನಿಲುವಾಗಿದೆ ಎಂದು ಸಚಿವ ಪ್ರಲ್ಹಾದ ಜೋಷಿ ಹೇಳಿದರು.

ಕಲಾಪಕ್ಕೆ ಟಿಆರ್‌ಎಸ್ ಬಹಿಷ್ಕಾರ

ಕೇಂದ್ರ ಸರ್ಕಾರವು ರೈತ ವಿರೋಧಿ ಎಂದು ಕರೆದಿರುವ ಟಿಆರ್‌ಎಸ್ ಪಕ್ಷವು, ಸಂಸತ್ ಅಧಿವೇಶನದ ಉಳಿದ ಅವಧಿಗೆ ಬಹಿಷ್ಕಾರ ಹಾಕಿದೆ. ಪಕ್ಷದ ಸಂಸದರು ಉಭಯ ಸದನಗಳ ಕಲಾಪಗಳಲ್ಲಿ ಭಾಗಿಯಾಗುವುದಿಲ್ಲ ಎಂದು ತಿಳಿಸಿದ್ದು, ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರದಿಂದ ಕೆಳಗಿಳಿಯಬೇಕು ಎಂದು ಅಭಿಪ್ರಾಯಪಟ್ಟಿದೆ. ಲೋಕಸಭೆಯ 9 ಹಾಗೂ ರಾಜ್ಯಸಭೆಯ 7 ಸಂಸದರು ಕಲಾಪದಿಂದ ದೂರವುಳಿಯಲು ನಿರ್ಧರಿಸಿದ್ದಾರೆ.

ಕಪ್ಪು ಬಟ್ಟೆ ಧರಿಸಿದ ಟಿಆರ್‌ಎಸ್ ಸಂಸದರು ಲೋಕಸಭೆ ಹಾಗೂ ರಾಜ್ಯಸಭೆಗಳಲ್ಲಿ ಸರ್ಕಾರದ ವಿರುದ್ಧ ಮಂಗಳವಾರ ಘೋಷಣೆಗಳನ್ನು ಕೂಗಿ ಹೊರನಡೆದರು. ರೈತರ ಬೇಡಿಕೆಗಳ ಬಗ್ಗೆ ಕೇಂದ್ರ ಸರ್ಕಾರ ಸಂವೇದನಾರಹಿತವಾಗಿ ವರ್ತಿಸುತ್ತಿದೆ ಎಂದು ಪಕ್ಷದ ಸಂಸದ ಕೇಶವ ರಾವ್ ಆರೋಪಿಸಿದ್ದಾರೆ.

‘ಎಫ್‌ಸಿಐ ಖರೀದಿ ಹೆಚ್ಚಿಸದ ಕಾರಣ, ತೆಲಂಗಾಣದ ರಸ್ತೆಗಳಲ್ಲಿ ರಾಶಿ ರಾಶಿ ಧಾನ್ಯಗಳು ಕೊಳೆಯುತ್ತಿವೆ. ಯಾವ ಚುನಾಯಿತ ಪ್ರತಿನಿಧಿಯೂ ಸಂಸತ್ ಕಲಾಪವನ್ನು ಬಹಿಷ್ಕರಿಸಲು ಬಯಸುವುದಿಲ್ಲ. ಆದರೆ ಕೇಂದ್ರ ಸರ್ಕಾರದಿಂದ ಸ್ಪಂದನೆ ಸಿಗದ ಕಾರಣ, ಟಿಆರ್‌ಎಸ್ ಬೇರೆ ದಾರಿಯಿಲ್ಲದೆ ಕಲಾಪ ಬಹಿಷ್ಕರಿಸುತ್ತಿದೆ’ ಎಂದು ಹೇಳಿದ್ದಾರೆ.

ಪ್ರವಾಹ

ತಮಿಳುನಾಡಿನ ತಿರುಚ್ಚಿ ಜಿಲ್ಲೆಯಲ್ಲಿ ಭಾರಿ ಮಳೆಯಾಗುತ್ತಿದ್ದು ಅರಿಯಾರ್ ನದಿ ಉಕ್ಕಿ ಹರಿಯುತ್ತಿರುವುದರಿಂದ ವೇರ್ಮಾನಗರ ಜಲಾವೃತಗೊಂಡಿದೆ. ಹಗ್ಗದ ಸಹಾಯದಿಂದ ಜನರು ಮಂಗಳವಾರ ಇಲ್ಲಿಂದ ಹೊರಬಂದರು –ಪಿಟಿಐ ಚಿತ್ರ

ಸಮಾಜವಾದಿ ಪಕ್ಷದ ವಿರುದ್ಧ ಪ್ರಧಾನಿ ಮೋದಿ ವಾಗ್ದಾಳಿ

‘ಕೆಂಪು ಟೋಪಿ ಧರಿಸಿದವರು ಉತ್ತರ ಪ್ರದೇಶಕ್ಕೆ ಅಪಾಯಕಾರಿ’

ಪ್ರಜಾವಾಣಿ ವಾರ್ತೆ



ಲಖನೌ: ‘ಉತ್ತರ ಪ್ರದೇಶದ ಜನರು ಸಮಾಜವಾದಿ ಪಕ್ಷವನ್ನು (ಎಸ್‌ಪಿ) ಬೆಂಬಲಿಸುವ ಮುನ್ನ ಎಚ್ಚರಿಕೆ ವಹಿಸಬೇಕು. ಕೆಂಪು ಟೋಪಿ ಧರಿಸುವವರು ರಾಜ್ಯಕ್ಕೆ ಅಪಾಯಕಾರಿ’ ಎಂದು ಹೇಳುವ ಮೂಲಕ ಎಸ್‌ಪಿ ವಿರುದ್ಧ ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ವಾಗ್ದಾಳಿ ನಡೆಸಿದರು.

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರ ತವರು ಗೋರಖ್‌ಪುರದಲ್ಲಿ ರಾಸಾಯನಿಕ ಗೊಬ್ಬರ ಕಾರ್ಖಾನೆ ಹಾಗೂ ಎಐಐಎಂಎಸ್ ಶಾಖೆ ಉದ್ಘಾಟಿಸಿದ ನಂತರ ನಡೆದ ಬಹಿರಂಗ ಸಭೆಯಲ್ಲಿ ಅವರು ಮಾತನಾಡಿದರು.

‘ಕೆಂಪು ಟೋಪಿ ಧರಿಸುವ ಈ ಜನರಿಗೆ ಸಾಮಾನ್ಯ ಜನರ ಬಗ್ಗೆ ಕಳಕಳಿ ಇಲ್ಲ. ಕೆಂಪು ಬಣ್ಣ ಅಪಾಯದ ಸಂಕೇತ. ರೆಡ್ ಕ್ಯಾಪ್ (ಕೆಂಪು ಟೋಪಿ) ಎಂದರೆ, ಉತ್ತರ ಪ್ರದೇಶ ಪಾಲಿಗೆ ‘ರೆಡ್ ಅಲರ್ಟ್’ ಇದ್ದ ಹಾಗೆ’ ಎಂದು ಟೀಕಿಸಿದರು.

ಗೋರಖ್‌ಪುರದಲ್ಲಿ ರಾಸಾಯನಿಕ ಗೊಬ್ಬರ ಕಾರ್ಖಾನೆ ಹಾಗೂ ಎಐಐಎಂಎಸ್ ಶಾಖೆಯ ಉದ್ಘಾಟನೆಯ ಜೊತೆಗೆ ಪ್ರಧಾನಿ ಅವರು ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್‌ನ (ಐಸಿಎಂಆರ್) ಪ್ರಾದೇಶಿಕ ವೈದ್ಯಕೀಯ ಸಂಶೋಧನಾ ಕೇಂದ್ರವನ್ನೂ ಉದ್ಘಾಟಿಸಿದರು. ಇವು ಒಟ್ಟು ₹ 9,600 ಕೋಟಿ ಯೋಜನೆಗಳಾಗಿವೆ.

‘ಬಿಜೆಪಿಯ ಸೂರ್ಯ ಅಸ್ತಮಿಸುವುದು ನಿಶ್ಚಿತ’

‘ಬಿಜೆಪಿಯ ಸೂರ್ಯ ಅಸ್ತಮಿಸುವುದು ನಿಶ್ಚಿತ. ಬಿಜೆಪಿಯವರು ರೈತರ ಮೇಲೆ ದೌರ್ಜನ್ಯ ಎಸಗಿದ್ದಾರೆ. ರೈತರನ್ನು ವಾಹನದ ಚಕ್ರಕ್ಕೆ ಸಿಲುಕಿಸಿ ತುಳಿದಿದ್ದಾರೆ. ಚುನಾವಣೆಯಲ್ಲಿ ಬಿಜೆಪಿ ನಿರ್ನಾಮವಾಗಲಿದೆ’ ಎಂದು ಸಮಾಜವಾದಿ ಪಕ್ಷದ (ಎಸ್‌ಪಿ) ಅಧ್ಯಕ್ಷ ಅಖಿಲೇಶ್ ಯಾದವ್ ಹೇಳಿದರು.

ರಾಷ್ಟ್ರೀಯ ಲೋಕದಳ (ಆರ್‌ಎಲ್‌ಡಿ) ಜೊತೆಗಿನ ಚುನಾವಣಾ ಮೈತ್ರಿಯ ಅಂಗವಾಗಿ ಮೀರತ್‌ನಲ್ಲಿ ಮಂಗಳವಾರ ನಡೆದ ಉಭಯ ಪಕ್ಷಗಳ ಮೊದಲನೇ ಜಂಟಿ ರ‍್ಯಾಲಿಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ರೈತರ ಕೋಪವು ಬಿಜೆಪಿಗೆ ದುಬಾರಿಯಾಗಲಿದೆ. ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ರೈತರು ಬಿಜೆಪಿಗೆ ತಕ್ಕ ಪಾಠ ಕಲಿಸಲಿದ್ದಾರೆ ಎಂದರು.

ಪೊಲೀಸ್ ಹಾಕಿ: ಉತ್ತರಪ್ರದೇಶ ಎದುರು ಡ್ರಾ

ಕ್ವಾರ್ಟರ್‌ಫೈನಲ್‌ಗೆ ಕೆಎಸ್‌ಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಯಕ ಎನ್.ಬಿ. ಪ್ರದೀಪ್ ಕರ್ನಾಟಕ ತಂಡಕ್ಕೆ ಆಪತ್ಬಾಂಧವರಾದರು. ಅವರು ಕೊನೆಯ ಹಂತದಲ್ಲಿ ಗಳಿಸಿದ ಗೋಲಿನ ಬಲದಿಂದ ತಂಡವು ಅಖಿಲ ಭಾರತ ಪೊಲೀಸ್ ಹಾಕಿ ಚಾಂಪಿಯನ್‌ಷಿಪ್‌ನಲ್ಲಿ ಸೋಲಿನಿಂದ ಪಾರಾಯಿತು; ಕ್ವಾರ್ಟರ್‌ಫೈನಲ್‌ಗೂ ಲಗ್ಗೆಯಿಟ್ಟಿತು.

ಫೀಲ್ಡ್‌ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ‘ಡಿ’ ಗುಂಪಿನ ಪಂದ್ಯದಲ್ಲಿ ಮಂಗಳವಾರ ಕರ್ನಾಟಕ ಪೊಲೀಸ್ (ಕೆಎಸ್‌ಪಿ) 1–1ರಿಂದ ಉತ್ತರಪ್ರದೇಶ ಪೊಲೀಸ್ ಎದುರು ಡ್ರಾ ಸಾಧಿಸಿತು.

ತವರಿನ ಅಭಿಮಾನಿಗಳ ಹರ್ಷೋದ್ಗಾರಗಳ ನಡುವೆ ಕಣಕ್ಕಿಳಿದ ಆತಿಥೇಯ ತಂಡವು ಪಂದ್ಯದಲ್ಲಿ ಹಲವು ಅವಕಾಶಗಳನ್ನು ಸೃಷ್ಟಿಸಿಕೊಂಡರೂ ಗೋಲಿನಲ್ಲಿ ಪರಿವರ್ತಿಸುವಲ್ಲಿ ವಿಫಲವಾಯಿತು. ಮೂರು ಕ್ವಾರ್ಟರ್‌ಗಳ ಅವಧಿ ಗೋಲುರಹಿತವಾಗಿತ್ತು. 49ನೇ ನಿಮಿಷದಲ್ಲಿ ಉತ್ತರಪ್ರದೇಶ ತಂಡವು ಅರವಿಂದ್ ಗೌಂಡ್ ಮೂಲಕ ಖಾತೆ ತೆರೆಯಿತು.

ಕರ್ನಾಟಕ 54ನೇ ನಿಮಿಷದಲ್ಲಿ ಸಮಬಲ ಸಾಧಿಸಿತು. ಸೊಗಸಾದ ಫೀಲ್ಡ್ ಗೋಲು ಹೊಡೆದ ಪ್ರದೀಪ್ ಅವರು ತಂಡ ನಿಟ್ಟುಸಿರು ಬಿಡುವಂತೆ ಮಾಡಿದರು.

ಬುಧವಾರ ನಡೆಯಲಿರುವವ ಎಂಟರಘಟ್ಟದ ಪಂದ್ಯದಲ್ಲಿ ಕರ್ನಾಟಕವು ಜಾರ್ಖಂಡ್ ಎದುರಿಸಲಿದೆ.

‘ಬಿ’ ಗುಂಪಿನ ರೋಚಕ ಸೆಣಸಾಟದಲ್ಲಿ ಪಂಜಾಬ್ ಪೊಲೀಸ್ 5–1ರಿಂದ ಬಿಎಸ್‌ಎಫ್ ಜಲಂಧರ್ ಎದುರು, ‘ಸಿ’ ಗುಂಪಿನಲ್ಲಿ ಒಡಿಶಾ ಪೊಲೀಸ್ 11–0ರಿಂದ ಗುಜರಾತ್ ಪೊಲೀಸ್ ವಿರುದ್ಧ, ‘ಎ’ ಗುಂಪಿನಲ್ಲಿ ಸಿಆರ್‌ಪಿಎಫ್ ಜಲಂಧರ್ 6–0ರಿಂದ ಮಧ್ಯಪ್ರದೇಶ ಪೊಲೀಸ್ ಎದುರು ಗೆಲುವು ಸಾಧಿಸಿದವು.

ಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ ಸಿಆರ್‌ಪಿಎಫ್ ದೆಹಲಿ–ಐಟಿಬಿಪಿ ಜಲಂಧರ್, ಪಂಜಾಬ್ ಪೊಲೀಸ್–ಸಿಐಎಸ್‌ಎಫ್ ದೆಹಲಿ, ಒಡಿಶಾ ಪೊಲೀಸ್–ತಮಿಳುನಾಡು ಪೊಲೀಸ್, ಕರ್ನಾಟಕ ಪೊಲೀಸ್– ಜಾರ್ಖಂಡ್ ಪೊಲೀಸ್ ಸೆಣಸಲಿವೆ.

ಕರ್ನಾಟಕ ತಂಡದ ಎಸ್. ಚೇತನ್‌ಕುಮಾರ್ (ಬಿಳಿ ಮತ್ತು ಕೆಂಪು ಪೋಷಾಕು) ಹಾಗೂ ಉತ್ತರಪ್ರದೇಶ ತಂಡದ ತಾರಿಷ್ ಮೋಹ್ ಅವರು ಚೆಂಡಿಗಾಗಿ ಪೈಪೋಟಿ ನಡೆಸಿದರು– ಪ್ರಜಾವಾಣಿ ಚಿತ್ರ/ ವಿ.ಪುಷ್ಕರ್

ಯುಎಇ: ಜ.1ರಿಂದ ವಾರಕ್ಕೆ ನಾಲ್ಕೂವರೆ ದಿನ ಕೆಲಸ!

ದುಬೈ (ಪಿಟಿಐ): ಕೆಲಸ ಮತ್ತು ಜೀವನದ ನಡುವೆ ಸಮತೋಲನ ಕಾಪಾಡುವ ಪ್ರಯತ್ನವಾಗಿ ವಾರಕ್ಕೆ ನಾಲ್ಕೂವರೆ ದಿನವಷ್ಟೇ ಕೆಲಸ ಮಾಡುವ ಹೊಸ ಪದ್ಧತಿಯನ್ನು ಸಂಯುಕ್ತ ಅರಬ್ ಒಕ್ಕೂಟ (ಯುಎಇ) ಮಂಗಳವಾರ ಪ್ರಕಟಿಸಿದ್ದು, ಜನವರಿ 1ರಿಂದ ಇದು ಜಾರಿಗೆ ಬರಲಿದೆ ಎಂದು ತಿಳಿಸಿದೆ.

‘ಉತ್ಪಾದಕತೆ ಹೆಚ್ಚಿಸುವ ಮತ್ತು ಕೆಲಸದೊಂದಿಗೆ ಜೀವನವನ್ನು ಸಮತೋಲನಗೊಳಿಸುವ ನಿಟ್ಟಿನಲ್ಲಿ ನೌಕರ ಸ್ನೇಹಿ ಕ್ರಮ ಇದಾಗಿದ್ದು, ವಾರಕ್ಕೆ ನಾಲ್ಕೂವರೆ ದಿನ ಕೆಲಸದ ಅವಧಿಯನ್ನು ಜಾರಿಗೆ ತರುತ್ತಿರುವ ಜಗತ್ತಿನ ಮೊದಲ ದೇಶ ನಮ್ಮದು’ ಎಂದು ಯುಎಇ ಸರ್ಕಾರಿ ಮಾಧ್ಯಮ ಕಚೇರಿಯ ಪ್ರಕಟಣೆ ತಿಳಿಸಿದೆ.

ರಾಜ್ಯಸಭೆಗೆ ಲಿಖಿತ ಉತ್ತರ ನೀಡಿದ ಕೇಂದ್ರ ಸರ್ಕಾರ

‘ಪನಾಮಾ, ಪ್ಯಾರಡೈಸ್ ದಾಖಲೆ: ₹20,353 ಕೋಟಿ ಅಘೋಷಿತ ಆದಾಯ ವರ್ಗ’

ನವದೆಹಲಿ (ಪಿಟಿಐ): ಪನಾಮಾ ಮತ್ತು ಪ್ಯಾರಡೈಸ್ ದಾಖಲೆಗಳಲ್ಲಿ ಸೋರಿಕೆಯಾಗಿರುವ ಮಾಹಿತಿ ಪ್ರಕಾರ, ಭಾರತದ ಜತೆ ನಂಟು ಹೊಂದಿರುವ 930 ಕಂಪನಿಗಳ ಖಾತೆಗಳಿಗೆ ₹20,353 ಕೋಟಿ ಅಘೋಷಿತ ಆದಾಯವನ್ನು ವರ್ಗಾಯಿಸಲಾಗಿದೆ ಎಂದು ಕೇಂದ್ರ ಸರ್ಕಾರವು ರಾಜ್ಯಸಭೆಗೆ ಮಂಗಳವಾರ ಮಾಹಿತಿ ನೀಡಿದೆ.

ಪನಾಮಾ ಮತ್ತು ಪ್ಯಾರಡೈಸ್ ದಾಖಲೆಗಳ ಬಿಡುಗಡೆ ಬಳಿಕ, ಈವರೆಗೆ ₹153.88 ಕೋಟಿ ತೆರಿಗೆ ಸಂಗ್ರಹ ಮಾಡಲಾಗಿದೆ ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯಸಚಿವ ಪಂಕಜ್ ಚೌಧರಿ ಅವರು ಲಿಖಿತ ಉತ್ತರ ನೀಡಿದ್ದಾರೆ. ಆದಾಯ ತೆರಿಗೆ ಮೊದಲಾದ ಕಾಯ್ದೆಗಳನ್ನು ಉಲ್ಲಂಘನೆ ಮಾಡಿದ ವ್ಯಕ್ತಿಗಳ ವಿರುದ್ಧ ತೆರಿಗೆ ಇಲಾಖೆಯು ಸೂಕ್ತ ಕ್ರಮ ತೆಗೆದುಕೊಂಡಿದೆ ಎಂದು ಅವರು ಹೇಳಿದ್ದಾರೆ.

ನೇರ ತೆರಿಗೆ ಕಾನೂನಿನಡಿಯಲ್ಲಿ, ಶೋಧ ಕಾರ್ಯಾಚರಣೆ, ವಶಪಡಿಸಿಕೊಳ್ಳುವಿಕೆ, ವಿಚಾರಣೆ, ಆದಾಯದ ಮೌಲ್ಯಮಾಪನ ಮತ್ತು ಮರುಮೌಲ್ಯಮಾಪನ, ಬಡ್ಡಿಯೊಂದಿಗೆ ತೆರಿಗೆ ವಿಧಿಸುವುದು, ದಂಡ ವಿಧಿಸುವುದು, ಕ್ರಿಮಿನಲ್ ನ್ಯಾಯಾಲಯಗಳಲ್ಲಿ ದೂರುಗಳನ್ನು ಸಲ್ಲಿಸುವಂತ ಕ್ರಮ ತೆಗೆದುಕೊಳ್ಳಲಾಗಿದೆ. ಕಪ್ಪು ಹಣ (ಬಹಿರಂಗಪಡಿಸದ ವಿದೇಶಿ ಆದಾಯ ಮತ್ತು ಆಸ್ತಿಗಳು) ಮತ್ತು ತೆರಿಗೆ ಹೇರಿಕೆ ಕಾಯ್ದೆ–2015ರ ಅಡಿಯಲ್ಲಿ ಪನಾಮಾ ಮತ್ತು ಪ್ಯಾರಡೈಸ್ ದಾಖಲೆಗಳಿಗೆ ಸಂಬಂಧಿಸಿದ 52 ಪ್ರಕರಣಗಳಲ್ಲಿ ದೂರು ದಾಖಲಿಸಲಾಗಿದೆ ಎಂದು ತಿಳಿಸಿದ್ದಾರೆ.

‘ಪಂಡೋರಾ ದಾಖಲೆಗಳಲ್ಲಿ ಹಲವು ಭಾರತೀಯರ ಹೆಸರುಗಳು ಬಹಿರಂಗವಾಗಿದ್ದು, ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ವಿವಿಧ ದೇಶಗಳ ಜತೆ ಸಮನ್ವಯ ಸಾಧಿಸಲು ಹಾಗೂ ತ್ವರಿತ ವಿಚಾರಣೆ ನಡೆಸಲು ವಿವಿಧ ಸಂಸ್ಥೆಗಳ ಗುಂಪಿಗೆ (ಎಂಎಜಿ) ಹೊಣೆ ವಹಿಸಲಾಗಿದೆ ಎಂದರು.

‘ಹೃದಯಗಳ ಬೆಸೆಯುವಲ್ಲಿ ಮೋದಿ ವಿಫಲ’

ಜಮ್ಮು: ಜಮ್ಮು ಮತ್ತು ಕಾಶ್ಮೀರದ ಸದ್ಯದ ಪರಿಸ್ಥಿತಿಯು ಗಂಭೀರವಾಗಿದ್ದು, ಇಲ್ಲಿನ ಜನರ ಹೃದಯಗಳ ಅಂತರ ಹಾಗೂ ದೆಹಲಿಯ ಅಂತರವನ್ನು ತೊಡೆದು ಹಾಕುತ್ತೇನೆ ಎಂದಿದ್ದ ಪ್ರಧಾನಿ ನರೇಂದ್ರ ಮೋದಿ ಅವರ ಭರವಸೆಯು ಈಗ ಹುಸಿಯಾಗಿದೆ ಎಂದು ಸಂಸದ ಫಾರೂಕ್ ಅಬ್ದುಲ್ಲಾ ಟೀಕಿಸಿದರು.

ಜಮ್ಮುವಿನಲ್ಲಿ ಮಂಗಳವಾರ ನಡೆದ ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ಸಮಾವೇಶದಲ್ಲಿ ಮಾತನಾಡಿದರು.

ಮೋದಿಯವರು ಯಾವ ಹೃದಯವನ್ನೂ ಬೆಸೆಯಲಿಲ್ಲ. ದೆಹಲಿಯಲ್ಲಿ ಜೂನ್ 24ರಂದು ಜಮ್ಮು ಕಾಶ್ಮೀರದ ನಾಯಕರ ಸಭೆ ನಡೆಸಿದ ನಂತರ ಕಣಿವೆ ಪ್ರದೇಶದಲ್ಲಿ ಏನೇನು ಬದಲಾವಣೆ ಆಗಿದೆ ಎಂದು ಫಾರೂಕ್ ಅಬ್ದುಲ್ಲಾ ಪ್ರಶ್ನಿಸಿದರು.

ಬಿಎಫ್‌ಸಿಗೆ ಭರ್ಜರಿ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಘಟಿತ ಆಟವಾಡಿದ ಬಿಎಫ್‌ಸಿ ಆಟಗಾರರು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಟೂರ್ನಿಯಲ್ಲಿ ಭರ್ಜರಿ ಜಯ ಗಳಿಸಿದರು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಪಂದ್ಯದಲ್ಲಿ ಮಂಗಳವಾರ ಬಿಎಫ್‌ಸಿ 4–0ಯಿಂದ ಎಎಸ್‌ಸಿ ಸೆಂಟರ್ ಎಫ್‌ಸಿ ತಂಡವನ್ನು ಸೋಲಿಸಿತು. ತಂಡದ ಪರ ರಾಹುಲ್ ರಾಜು (44ನೇ ನಿಮಿಷ), ಜಗದೀಪ್ ಸಿಂಗ್ (65ನೇ ನಿಮಿಷ), ಲಾಲ್‌ಥಾಂಗ್ಲಿನಾ (84ನೇ ನಿಮಿಷ) ಮತ್ತು ರಾಬಿನ್ ಯಾದವ್ (88ನೇ ನಿಮಿಷ) ಗೋಲು ದಾಖಲಿಸಿದರು.

ಮತ್ತೊಂದು ಪಂದ್ಯದಲ್ಲಿ ಎಫ್‌ಸಿ ಬೆಂಗಳೂರು ಯುನೈಟೆಡ್ 3–1ರಿಂದ ಬಿಯುಎಫ್‌ಸಿ ಎದುರು, ಬೆಂಗಳೂರು ಈಗಲ್ಸ್ ಎಫ್‌ಸಿ 1–0ರಿಂದ ಕೊಡಗು ಎಫ್‌ಸಿ ಎದುರು ಜಯ ಸಾಧಿಸಿದವು.

ಬೆಂಗಳೂರು ಈಗಲ್ಸ್ ಎಫ್‌ಸಿಯ ನಿಕೇತ್ ಎನ್. (ಬಿಳಿ ಪೋಷಾಕು) ಹಾಗೂ ಕೊಡಗು ಎಫ್‌ಸಿ ತಂಡದ ಸಂಗಾಯ್ ದುಂಡಲ್ ಭುಟಿಯಾ ಚೆಂಡಿನ ಮೇಲೆ ನಿಯಂತ್ರಣ ಸಾಧಿಸಲು ಪೈಪೋಟಿ ನಡೆಸಿದರು– ಪ್ರಜಾವಾಣಿ ಚಿತ್ರ/ ಬಿ.ಎಚ್. ಶಿವಕುಮಾರ್

ಚಳಿಗಾಲದ ಒಲಿಂಪಿಕ್ಸ್; ಅಮೆರಿಕ ಬಹಿಷ್ಕಾರ- ಚೀನಾ ಆಕ್ರೋಶ

ಬೀಜಿಂಗ್ (ಎಪಿ): ಮುಂದಿನ ವರ್ಷ ನಡೆಯಲಿರುವ ಚಳಿಗಾಲದ ಒಲಿಂ ಪಿಕ್ ಕೂಟವನ್ನು ರಾಜತಾಂತ್ರಿಕವಾಗಿ ಬಹಿಷ್ಕರಿಸಿರುವ ಅಮೆರಿಕದ ಕ್ರಮವು ಒಲಿಂಪಿಕ್ ಕ್ರೀಡಾಸ್ಫೂರ್ತಿಗೆ ವಿರುದ್ಧವಾಗಿದೆ ಎಂದು ಚೀನಾ ಆಕ್ರೋಶ ವ್ಯಕ್ತಪಡಿಸಿದೆ.

‘ಅಮೆರಿಕವು ಕ್ರೀಡೆಯನ್ನು ರಾಜಕೀಯಕರಣಗೊಳಿಸುತ್ತಿದೆ. ದೇಶಗಳ ನಡುವೆ ಬಿರುಕು ಮೂಡಿಸುವ ಹುನ್ನಾರ ಇದಾಗಿದೆ. ಗುಂಪುಗಾರಿಕೆಯನ್ನು ಪ್ರಚೋದಿಸುತ್ತಿದೆ. ಆದರೆ ಇದಕ್ಕೆಲ್ಲ ನಾವು ಜಗ್ಗುವುದಿಲ್ಲ. ಯಾರಾದರೂ ಬರಲಿ, ಬಿಡಲಿ ಬೀಜಿಂಗ್ ಚಳಿಗಾಲದ ಒಲಿಂಪಿಕ್ಸ್ ಯಶಸ್ವಿಯಾಗಿ ನಡೆ ಯುವುದು ಖಚಿತ’ ಎಂದು ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ ಝಾವೊ ಲಿಜೇನ್ ಹೇಳಿದ್ದಾರೆ.

ಐಎಸ್‌ಎಲ್: ಹೈದರಾಬಾದ್ ಎದುರಾಳಿ

ಬೆಂಗಳೂರಿಗೆ ಜಯದ ತವಕ

ಬ್ಯಾಂಬೋಲಿಮ್ (ಪಿಟಿಐ): ಜಯದ ಲಯಕ್ಕೆ ಮರಳುವ ತವಕದಲ್ಲಿರುವ ಬೆಂಗಳೂರು ಎಫ್‌ಸಿ ಮತ್ತು ಹೈದರಾಬಾದ್ ಎಫ್‌ಸಿ ತಂಡಗಳು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಬುಧವಾರ ಮುಖಾಮುಖಿಯಾಗಲಿವೆ.

ಐಎಸ್‌ಎಲ್ ಟೂರ್ನಿಯಲ್ಲಿ ಸುನಿಲ್ ಚೆಟ್ರಿ ನಾಯಕತ್ವದ ಬೆಂಗಳೂರು ತಂಡವು ಹೈದರಾಬಾದ್ ಎದುರು ಒಂದು ಪಂದ್ಯವನ್ನೂ ಸೋತಿಲ್ಲ. ಇದುವರೆಗೆ ಆಡಿದ ನಾಲ್ಕು ಪಂದ್ಯಗಳ ಪೈಕಿ ಒಂದರಲ್ಲಿ ಜಯ ಸಾಧಿಸಿದರೆ ಮೂರು ಪಂದ್ಯಗಳನ್ನು ಡ್ರಾ ಮಾಡಿಕೊಂಡಿದೆ.

ಸುನಿಲ್ ಚೆಟ್ರಿ

ಈ ಆವೃತ್ತಿಯಲ್ಲಿ ಮೂರು ಪಂದ್ಯಗಳನ್ನು ಆಡಿರುವ ಹೈದರಾಬಾದ್ ಎಫ್‌ಸಿ ನಾಲ್ಕು ಪಾಯಿಂಟ್ಸ್ ಕಲೆಹಾಕಿದೆ. ಬೆಂಗಳೂರು ತಂಡವನ್ನು ಮಣಿಸುವ ವಿಶ್ವಾಸದಲ್ಲಿದೆ.

ಪಂದ್ಯ ಆರಂಭ: ರಾತ್ರಿ 7.30

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಕ್ರಿಕೆಟ್: ಕರ್ನಾಟಕ ತಂಡಕ್ಕೆ ಹಿನ್ನಡೆ

ಬೆಂಗಳೂರು: ಕರ್ನಾಟಕ 19 ವರ್ಷದೊಳಗಿನವರ ಕ್ರಿಕೆಟ್ ತಂಡವು ವಿಶಾಖಪಟ್ಟಣದಲ್ಲಿ ನಡೆಯುತ್ತಿರುವ ಕೂಚ್ ಬೆಹಾರ್ ಟೂರ್ನಿಯಲ್ಲಿ ಹರಿಯಾಣ ಎದುರು ಹಿನ್ನಡೆ ಅನುಭವಿಸಿದೆ.

ಸಂಕ್ಷಿಪ್ತ ಸ್ಕೋರ್: ಹರಿಯಾಣ: 1ನೇ ಇನಿಂಗ್ಸ್: 98.3 ಓವರ್‌ಗಳಲ್ಲಿ 208 (ಯಶ್ ವರ್ಧನ್ 68, ಅಖಿಲ್ ಆಹ್ಲಾವತ್ 31; ಯಶೋವರ್ಧನ್ ಪರಂತಾಪ್ 33ಕ್ಕೆ 3). 2ನೇ ಇನಿಂಗ್ಸ್: 12 ಓವರ್‌ಗಳಲ್ಲಿ 3 ವಿಕೆಟ್‌ಗೆ 48. ಕರ್ನಾಟಕ: 1ನೇ ಇನಿಂಗ್ಸ್: 65.2 ಓವರ್‌ನಲ್ಲಿ 149 (ಸ್ಮರಣ್ 31, ಭರದ್ವಾ 39ಕ್ಕೆ 5, ಆಶಿರ್ವಾದ್ 18ಕ್ಕೆ 3).

ಗೋವಾ ಜಯಭೇರಿ

ಗೋವಾ: ಗೋವಾ ಫುಟ್‌ಬಾಲ್ ಕ್ಲಬ್ ಐಎಸ್‌ಎಲ್ ಪಂದ್ಯದಲ್ಲಿ ಮಂಗಳವಾರ 4–3ರಿಂದ ಈಸ್ಟ್ ಬೆಂಗಾಲ್ ವಿರುದ್ಧ ರೋಚಕ ಜಯ ಸಾಧಿಸಿತು.

ಗೋವಾ ತಂಡದ ಅಲ್ಬರ್ಟೊ 14ನೇ ನಿಮಿಷದಲ್ಲಿ ಗೋಲು ಖಾತೆ ತೆರೆದರು. ಬೆಂಗಾಲ್ ತಂಡದ ಅಂಟೋನಿಯೊ ಪೆರೊಸೊವಿಚ್ (26ನೇ ನಿ)ಗೋವಾದ ಜಾರ್ಜ್ ಒರ್ಲಿಜ್ ಮೆಂಡೊನ್ಸಾ (32ನೇ ನಿ.) ಬೆಂಗಾಲ್ ತಂಡದ ಅಮೀರ್ ಡರ್‌ಸೆವಿಚ್ 37ನೇ ನಿಮಿಷ ಗೋಲು ಹೊಡೆದರೆ, ಬೆಂಗಾಲ್‌ನ ಅಂಟೋನಿಯೊ 44ನೇ ನಿಮಿಷದಲ್ಲಿ ಗೋವಾಕ್ಕೆ ಉಡುಗೊರೆ ಗೋಲು ನೀಡಿದರು. 59ನೇ ನಿಮಿಷದಲ್ಲಿ ತಮ್ಮ ತಂಡದ ಪರ ಗೋಲು ಹೊಡೆದರು. 79ನೇ ನಿಮಿಷದಲ್ಲಿ ಅಲ್ಬರ್ಟೊ ಮತ್ತೊಮ್ಮೆ ಕಾಲ್ಚಳಕ ತೋರಿದರು.

ಮೈಸೂರು ರೇಸ್

ವಚನ್ ಗೆಲ್ಲುವ ನಿರೀಕ್ಷೆ

ಬಾಬಾಬುಡನ್‌ಗಿರಿ ಪ್ಲೇಟ್ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ವಚನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ

1ನೇ ರೇಸ್: ಸ್ಮಾರ್ಟ್ ಕ್ಯಾಡಿಲಾಕ್ 4, ಎವರ್ಲಿ 5, ಫನಮ್‌ಬುಲಿಸ್ಟ್ 6

2ನೇ ರೇಸ್: ಅಸ್ತಾರ 1, ಮಾಂಟೆ ಗ್ರೀಕೊ 5, ವರ್ಜೀನಿಯಾ ಕ್ವೀನ್ 7

3ನೇ ರೇಸ್: ಅಶ್ವ ಫಿಗಾರೊ 2, ಸೂಪರ್‌ಬ್ರಾಟ್ 10, ಕಾನ್‌ಸ್ಪಿರೆಸಿ 5

4ನೇ ರೇಸ್: ವಚನ್ 6, ಡಿ ಹಂಟರ್ 3, ಸೆಗೆರ 4

5ನೇ ರೇಸ್: ಕ್ರೆಸೆಂಡೊ 1, ಡಿವೋಷನ್ 2, ಡಿ ಬ್ರದರ್ 3

6ನೇ ರೇಸ್: ಅಶ್ವ ವಿಕ್ರಾಂತ್ 5, ಡಿ ಥರ್ಟೀನ್ ಟ್ವೆಲ್ವ್ 6, ಸ್ಪೋರ್ಟೊ 3

7ನೇ ರೇಸ್: ಫ್ರಾಸ್ಟೆಡ್ 4, ರಾಯಲ್ ಕಮಾಂಡ್ 5, ಥಿಯಾಸ್ ಗ್ಲೋರಿ 8

ಉತ್ತಮ ಬೆಟ್: ಅಶ್ವ ಫಿಗಾರೊ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಸಂಕ್ಷಿಪ್ತ ಸುದ್ದಿ

ಹಾಕಿ: ಕರ್ನಾಟಕ ತಂಡಕ್ಕೆ ರಾಹಿಲ್ ನಾಯಕತ್ವ

ಬೆಂಗಳೂರು: ಮಹಾರಾಷ್ಟ್ರದ ಪುಣೆಯಲ್ಲಿ ನಡೆಯಲಿರುವ ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗೆ ಕರ್ನಾಟಕ ತಂಡವನ್ನು ಪ್ರಕಟಿಸಲಾಗಿದೆ. ಇದೇ 11ರಿಂದ ಡಿಸೆಂಬರ್ 22ರವರೆಗೆ ನಿಗದಿಯಾಗಿರುವ ಚಾಂಪಿಯನ್‌ಷಿಪ್‌ನಲ್ಲಿ ರಾಜ್ಯ ತಂಡಕ್ಕೆ ಮೊಹಮ್ಮದ್ ರಾಹಿಲ್ ನಾಯಕರಾಗಿ ಆಯ್ಕೆಯಾಗಿದ್ದಾರೆ.

ಕರ್ನಾಟಕ ತಂಡವು ‘ಸಿ’ ಗುಂಪಿನಲ್ಲಿ ಸ್ಥಾನ ಪಡೆದಿದೆ. ಪುದುಚೇರಿ, ಜಮ್ಮು ಮತ್ತು ಕಾಶ್ಮೀರ ಮತ್ತು ಅರುಣಾಚಲ ಪ್ರದೇಶ ತಂಡಗಳೂ ಇದೇ ಗುಂಪಿನಲ್ಲಿವೆ.

ತಂಡ: ಮೊಹಮ್ಮದ್ ರಾಹಿಲ್ (ನಾಯಕ), ಶರತ್ ಸೋಮಣ್ಣ (ಗೋಲ್ ಕೀಪರ್), ದೀಕ್ಷಿತ್ ಎಸ್.ಪಿ, ಅನ್ಸರ್ ಅಲಿ, ಭರತ್ ಕುಮಾರ್ ಕೆ.ಆರ್, ಪುನೀತ್ ಆರ್, ಲಿಖಿತ್ ಬಿ.ಎಂ, ಸೋಮಣ್ಣ ಬಿ.ಪಿ, ಶಮಂತ್ ಸಿ.ಎಸ್, ಹರೀಶ್ ಮುತಗಾರ, ಚಿರಂತ್ ಸೋಮಣ್ಣ ಎನ್.ಡಿ, ಮಣಿಕಂಠ ಬಿಜವಾಡ, ಸೂರ್ಯ ಎನ್.ಎಂ, ಬೋಪಣ್ಣ ಕೆ.ಸಿ, ಯತೀಶ್ ಕುಮಾರ್ ಬಿ, ಸುಬ್ರಮಣಿ ಎ.ಸಿ (ಗೋಲ್ ಕೀಪರ್), ಅಚ್ಚಯ್ಯ ಡಿ.ಎಂ, ಪವನ್ ಮಡಿವಾಳರ. ಮ್ಯಾನೇಜರ್: ಧರ್ಮೇಂದ್ರ ಜಿ.ಆರ್. ಕೋಚ್: ಪ್ರದೀಪ್ ಕುಮಾರ್ ಆರ್.ಪಿ.

ಅಮನ್‌ಗೆ ಪ್ರಶಸ್ತಿ

ಜೋಹಾನ್ಸ್‌ಬರ್ಗ್ (ಪಿಟಿಐ): ಭಾರತದ ಅಮನ್ ಫರೋಗ್ ಸಂಜಯ್ ಅವರು ದಕ್ಷಿಣ ಆಫ್ರಿಕಾ ಅಂತರರಾಷ್ಟ್ರೀಯ ಫ್ಯೂಚರ್ ಸಿರೀಸ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡಿದ್ದಾರೆ.

ಭಾನುವಾರ ನಡೆದ ಜಿದ್ದಾಜಿದ್ದಿ ಫೈನಲ್ ಪಂದ್ಯದಲ್ಲಿ ಅಮನ್ 15-21, 21-16, 21-12ರಿಂದ ದಕ್ಷಿಣ ಆಫ್ರಿಕಾದ ರಾಬರ್ಟ್ ಸಮರ್ಸ್ ಎದುರು ಜಯಿಸಿದರು. ಖೇಲೊ ಇಂಡಿಯಾ ಯೂತ್ ಗೇಮ್ಸ್ ಚಾಂಪಿಯನ್ ಆಗಿರುವ ಅಮನ್, ಕಳೆದ ವಾರ ಬೋಟ್ಸ್‌ವಾನಾ ಅಂತರರಾಷ್ಟ್ರೀಯ ಫ್ಯೂಚರ್ ಸಿರೀಸ್ ಟೂರ್ನಿಯಲ್ಲೂ ಚಾಂಪಿಯನ್ ಆಗಿದ್ದರು.

ಉದ್ಯೋಗ ವಾಣಿ

INDO-MIM COMPLEXITY SIMPLIFIED

Walk-in interview for Precision Machining Division

Indo MIM Private Limited the world's fastest growing and largest installed MIM capacity Company. Engaged in Metal Injection Molding (MIM) technology, based at Bangalore. Indo-MIM has achieved a leadership in the field of MIM providing precision engineered products to more than 30 countries worldwide.

Indo-MIM Private Limited is expanding its Business in Precision Machining and looking for

CNC TURNING/ TURNMILL SETTER

Primary Responsibilities

- Operating & Setting turning/4-axis turnmill machines
- Trouble shooting and problem solving
- Maintaining in process inspection report & 5's

Skills Required

- Knowledge about root cause analysis
- Program knowledge in Fanuc/ siemens control
- Knowledge in part prove out on Turnmill machine
- Knowledge in GD&T drawing study & inspection method
- Knowledge in Aerospace standard.

Qualifications, Skills & Abilities

- Should be DME / BE Mech.
- Experience Minimum 5 to 15 years
- Preferably aerospace background

Date: 11th December, 2021 Reporting Time 8.30 AM

Venue: Hotel Sakthi Residency, # 555, Telephone Exchange Road, Opp. Bus Stand, Hosur-635109.

Work Location: Doddaballapura, Bangalore

Contact Number: +919740016032

Email Address: manohar.g@indo-mim.com

WANTED

PRINCIPAL & LECTURERS

FOR A REPUTED PU SCIENCE COLLEGE IN DHARWAD

PRINCIPAL

We are looking for an outstanding candidate for the post of **Principal with minimum 15 years of teaching and administrative experience.** Candidate with a proven track record in Academics and Administration as Principal in reputed PU Science college is preferred. Candidates between the age group of 40-50 need to apply.

LECTURERS

Require lecturers in **MATHEMATICS, BIOLOGY, PHYSICS, CHEMISTRY** for our integrated coaching. Candidates with expert knowledge and deep experience in training for **NEET & JEE** exams for minimum 10 years need to apply.

Competitive salary and benefits package offered. Higher Salary considerable for deserving candidates.

Candidates who wish to join from next academic year shall also apply.

Interested candidates may submit detailed CV along with necessary testimonials before 12th Dec, 2021 to

hrdpuc@gmail.com

ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿ ಇಂದಿನಿಂದ

ಮನೀಷ್ ಬಳಗಕ್ಕೆ ಪುದುಚೇರಿ ಸವಾಲು

ತಿರುವನಂತಪುರ: ಭಾರತ ಕ್ರಿಕೆಟ್ ತಂಡದಲ್ಲಿ ಸ್ಥಾನ ಪಡೆಯಲು ಕಾತರಿಸುತ್ತಿರುವ ಮನೀಷ್ ಪಾಂಡೆ, ಬುಧವಾರ ಆರಂಭವಾಗಲಿರುವ ವಿಜಯ್ ಹಜಾರೆ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ಕರ್ನಾಟಕ ತಂಡವನ್ನು ಮುನ್ನಡೆಸಲಿದ್ದಾರೆ.

ಮಂಗಳಪುರಂ ಕ್ರೀಡಾಂಗಣದಲ್ಲಿ ನಡೆಯಲಿರುವ ಬಿ ಗುಂಪಿನ ಮೊದಲ ಪಂದ್ಯದಲ್ಲಿ ಕರ್ನಾಟಕವು ಪುದುಚೇರಿ ಎದುರು ಕಣಕ್ಕಿಳಿಯಲಿದೆ. ಈಚೆಗೆ ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಮನೀಷ್ ಬಳಗವು ರನ್ನರ್ಸ್ ಅಪ್ ಆಗಿತ್ತು. ರೋಚಕ ಫೈನಲ್‌ನಲ್ಲಿ ತಮಿಳುನಾಡು ತಂಡವು ಚಾಂಪಿಯನ್ ಆಗಿತ್ತು.

ಅನುಭವಿ ಬೌಲರ್‌ಗಳಿಲ್ಲದ ತಂಡವನ್ನು ಮನೀಷ್ ಫೈನಲ್‌ನವರೆಗೆ ಮುನ್ನಡೆಸಿದ್ದರು. ತಮ್ಮ ಅಮೋಘ ಬ್ಯಾಟಿಂಗ್ ಮತ್ತು ಚುರುಕಾದ ಫೀಲ್ಡಿಂಗ್‌ನಿಂದಾಗಿ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದ್ದರು. ವಿದ್ಯಾಧರ್ ಪಾಟೀಲ, ಎಂ.ಬಿ. ದರ್ಶನ್, ವೈಶಾಖ್ ವಿಜಯಕುಮಾರ್ ಬೌಲಿಂಗ್ ವಿಭಾಗದ ಉದಯೋನ್ಮುಖ ಪ್ರತಿಭೆಗಳಾಗಿವೆ. ಅನುಭವಿ ರೋನಿತ್ ಮೋರೆ ಮತ್ತು ಪ್ರಸಿದ್ಧ ಕೃಷ್ಣ ಮರಳಿದರೆ, ತಂಡದ ಬಲ ಹೆಚ್ಚುವ ನಿರೀಕ್ಷೆ ಇದೆ.

ಸ್ಪಿನ್ನರ್ ಕೆ.ಸಿ. ಕಾರ್ಯಪ್ಪ ಮತ್ತು ಜೆ ಸುಚಿತ್ ತಮಗಿರುವ ಅಲ್ಪಸ್ವಲ್ಪ ಅನುಭವವನ್ನು ಟಿ20 ಟೂರ್ನಿಯಲ್ಲಿ ಸಮರ್ಥವಾಗಿ ಬಳಸಿಕೊಂಡರು. ಆದರೆ, 50–50ರ ಮಾದರಿಯಲ್ಲಿ ಅನುಭವಿ ಆಲ್‌ರೌಂಡರ್, ಸ್ಪಿನ್ನರ್ ಶ್ರೇಯಸ್ ಗೋಪಾಲ್ ಅವರಿಗೆ ಅವಕಾಶ ಕೊಡುವ ಸಾಧ್ಯತೆ ಹೆಚ್ಚಿದೆ. ಒಂದೊಮ್ಮೆ ಶ್ರೇಯಸ್ ಆಡಿದರೆ, ಕಾರ್ಯಪ್ಪಗೆ ಅವಕಾಶ ಸಿಗುವುದು ಸಂಶಯ. ತಿರುವನಂತಪುರದ ಪಿಚ್ ಸ್ಪಿನ್ನರ್‌ಗಳಿಗೆ ನೆರವಾದರೆ ಮೂವರು ಸ್ಪಿನ್ನರ್ ಮತ್ತು ಇಬ್ಬರು ಮಧ್ಯಮ ವೇಗಿಗಳನ್ನು ಕಣಕ್ಕಿಳಿಸಲು ಪಾಂಡೆ ಮನಸ್ಸು ಮಾಡಬಹುದು.

ಪವನ್ ದೇಶಪಾಂಡೆ

ಭಾರತ ಎ ತಂಡದಲ್ಲಿರುವ ದೇವದತ್ತ ಪಡಿಕ್ಕಲ್, ಗಾಯಗೊಂಡಿರುವ ಕೆ.ಎಲ್. ರಾಹುಲ್, ಭಾರತ ತಂಡದಲ್ಲಿ ಆಡುತ್ತಿರುವ ಮಯಂಕ್ ಅಗರವಾಲ್ ಲಭ್ಯರಿಲ್ಲ. ಆದ್ದರಿಂದ ಪಾಂಡೆ, ಕರುಣ್ ನಾಯರ್, ರೋಹನ್ ಕದಂ, ಆರ್. ಸಮರ್ಥ್ ಅವರ ಜವಾಬ್ದಾರಿ ಹೆಚ್ಚಿದೆ. ಹೊಸ ಪ್ರತಿಭೆ ಅಭಿನವ್ ಮನೋಹರ್, ಇಲ್ಲಿಯೂ ಉತ್ತಮವಾಗಿ ಆಡುವ ಭರವಸೆ ಮೂಡಿಸಿದ್ದಾರೆ.

ಮನೀಷ್ ಬಳಗಕ್ಕೆ ಮೊದಲ ಪಂದ್ಯದಲ್ಲಿ ಪುದುಚೇರಿ ಕಠಿಣ ಸವಾಲು ಒಡ್ಡಲಿಕ್ಕಿಲ್ಲ. ಆದರೆ, ಗುಂಪಿನಲ್ಲಿ ಬಲಾಢ್ಯ ತಂಡಗಳು ಇವೆ. ಆದರೆ, ಪ್ರತಿ ಪಂದ್ಯದಲ್ಲಿ ಜಯಿಸುವುದು ಮಹತ್ವದ್ದಾಗಿದೆ. ಪುದುಚೇರಿ ತಂಡದಲ್ಲಿ ಕನ್ನಡಿಗ ಪವನ್ ದೇಶಪಾಂಡೆ ಇದ್ದಾರೆ. ತಂಡದ ನಾಯಕತ್ವವನ್ನು ದಾಮೋದರನ್ ರೋಹಿತ್ ವಹಿಸಿದ್ದಾರೆ. ನಾಲ್ಕು ಬಾರಿ ಚಾಂಪಿಯನ್ ಆಗಿರುವ ಕರ್ನಾಟಕ ತಂಡವು ಶುಭಾರಂಭದ ವಿಶ್ವಾಸದಲ್ಲಿದೆ.

ಕರ್ನಾಟಕದ ಪಂದ್ಯಗಳು

ದಿನಾಂಕ	ಎದುರಾಳಿ	ಕ್ರೀಡಾಂಗಣ
ಡಿ 8	ಪುದುಚೇರಿ	ಮಂಗಳಪುರಂ
ಡಿ.9	ತಮಿಳುನಾಡು	ಗ್ರೀನ್‌ಫೀಲ್ಡ್
ಡಿ 11	ಮುಂಬೈ	ಮಂಗಳಪುರಂ
ಡಿ. 12	ಬರೋಡಾ	ಗ್ರೀನ್‌ಫೀಲ್ಡ್
ಡಿ. 14	ಬಂಗಾಳ	ಸೇಂಟ್ ಝೇವಿಯರ್ ಕೆಸಿಎ

* ಎಲ್ಲ ಪಂದ್ಯಗಳೂ ಬೆಳಿಗ್ಗೆ 9ಕ್ಕೆ ಆರಂಭ

ಪ್ರಮುಖ ಅಂಶಗಳು

38	ಟೂರ್ನಿಯಲ್ಲಿ ಆಡಲಿರುವ ತಂಡಗಳು
5	ತಮಿಳುನಾಡು ಗೆದ್ದಿರುವ ಟ್ರೋಫಿಗಳ ಸಂಖ್ಯೆ. ಇದು ಗರಿಷ್ಠ ಸಾಧನೆ
4	ಹಾಲಿ ಚಾಂಪಿಯನ್ ಮುಂಬೈ ಜಯಿಸಿರುವ ಟ್ರೋಫಿಗಳು
4	ಕರ್ನಾಟಕ ತಂಡವು ಗೆದ್ದಿರುವ ಟ್ರೋಫಿಗಳು

ಮನೀಷ್ ಪಾಂಡೆ

ತಂಡಗಳು

ಕರ್ನಾಟಕ: ಮನೀಷ್ ಪಾಂಡೆ (ನಾಯಕ), ಆರ್. ಸಮರ್ಥ್, ಕರುಣ್ ನಾಯರ್, ರೋಹನ್ ಕದಂ, ರೋನಿತ್ ಮೋರೆ, ಶ್ರೇಯಸ್ ಗೋಪಾಲ್, ಬಿ.ಆರ್. ಶರತ್, ವಿ. ಕೌಶಿಕ್, ಜೆ. ಸುಚಿತ್, ಮನೋಜ್ ಭಾಂಡಗೆ, ಕೆ.ಸಿ. ಕಾರ್ಯಪ್ಪ, ರಿತೇಶ್ ಭಟ್ಕಳ, ಅಭಿನವ್ ಮನೋಹರ್, ಕೆ.ವಿ.ಸಿದ್ಧಾರ್ಥ್, ಅನಿರುದ್ಧ ಜೋಶಿ, ಡಿ. ನಿಶ್ಚಲ್, ಎನ್. ನಿಶ್ಚಿತ್, ವಿದ್ಯಾಧರ್ ಪಾಟೀಲ, ಎಂ.ಬಿ. ದರ್ಶನ್, ವೈಶಾಖ್ ವಿಜಯಕುಮಾರ್, ಪ್ರಸಿದ್ಧ ಕೃಷ್ಣ, ಆದಿತ್ಯ ಸೋಮಣ್ಣ.

ಪುದುಚೇರಿ: ದಾಮೋದರನ್ ರೋಹಿತ್ (ನಾಯಕ), ಪಾರಸ್ ಡೋಗ್ರಾ, ವಿಘ್ನೇಶ್ವರನ್ ಮಾರಿಮುತ್ತು, ಸುಬ್ರಮಣಿಯನ್ ಆನಂದ್, ಪ್ರೇಮರಾಜ್ ರಾಜವೇಲು, ಇಕ್ಲಾಸ್ ನಹಾ, ಪವನ್ ದೇಶಪಾಂಡೆ, ಎಸ್. ಸುರೇಶ್ ಕುಮಾರ್, ಫಬೀದ್ ಅಹಮದ್, ಎ. ಅರವಿಂದರಾಜ್, ಕಾರ್ತಿಕ್ ಸುಕುಮಾರನ್, ರಾಮಚಂದ್ರನ್ ರಘುಪತಿ, ಸಾಗರ್ ಉದೇಶಿ, ರಘು ಶರ್ಮಾ, ಕಣ್ಣನ್ ವಿಘ್ನೇಸ್, ಅಲಫಾ ಪ್ರತಿಭನ್, ಸಾಗರ್ ತ್ರಿವೇದಿ, ಸುಭೋದ್ ಭಟ್ಟಿ, ಶ್ರೀಧರ್ ಅಶ್ವಥ್

ಬುಧವಾರ ಇನ್ನುಳಿದ ಪಂದ್ಯಗಳು (ಬಿ ಗುಂಪು)
ಬರೋಡಾ–ಬಂಗಾಳ (ಗ್ರೀನ್‌ಫೀಲ್ಡ್ ಕ್ರೀಡಾಂಗಣ)
ತಮಿಳುನಾಡು–ಮುಂಬೈ (ಸೇಂಟ್ ಝೇವಿಯರ್ ಕಾಲೇಜು ಮೈದಾನ)
ಪಂದ್ಯ ಆರಂಭ: ಬೆಳಿಗ್ಗೆ 9

ರೂಟ್–ಪ್ಯಾಟ್ ಜಿದ್ದಾಜಿದ್ದಿ

ಗಾಬಾದಲ್ಲಿ ಆ್ಯಷಸ್ ಟೆಸ್ಟ್ ಕ್ರಿಕೆಟ್ ಸರಣಿ ಇಂದಿನಿಂದ

ಬ್ರಿಸ್ಬೇನ್ (ಎಪಿ): ಟೆಸ್ಟ್ ಕ್ರಿಕೆಟ್‌ನ ರೋಚಕ ಸರಣಿಗಳಲ್ಲಿ ಪ್ರಮುಖವಾಗಿರುವ ಆ್ಯಷಸ್ ಸರಣಿಯಲ್ಲಿ ಈ ಬಾರಿ ವಿಶ್ವದ ಶ್ರೇಷ್ಠ ಬೌಲರ್‌ಗಳಲ್ಲಿ ಒಬ್ಬರಾಗಿರುವ ಪ್ಯಾಟ್ ಕಮಿನ್ಸ್ ಮತ್ತು ಕಲಾತ್ಮಕ ಬ್ಯಾಟ್ಸ್‌ಮನ್ ಜೋ ರೂಟ್ ನಡುವೆ ಹಣಾಹಣಿ ನಡೆಯಲಿದೆ.

1950ರಿಂದ ಇಲ್ಲಿಯವರೆಗಿನ ಅವಧಿಯಲ್ಲಿ ಇದೇ ಮೊದಲ ಸಲ ಆಸ್ಟ್ರೇಲಿಯಾ ತಂಡಕ್ಕೆ ಬೌಲರ್ ಸಾರಥ್ಯ ವಹಿಸಿರುವುದು ವಿಶೇಷ. ಕಳೆದೊಂದು ವರ್ಷದಿಂದ ಟೆಸ್ಟ್ ಕ್ರಿಕೆಟ್‌ನಲ್ಲಿ ರನ್‌ಗಳ ರಾಶಿ ಹಾಕುತ್ತಿರುವ ರೂಟ್ ಅವರ ನಾಯಕತ್ವಕ್ಕೆ ಈ ಸರಣಿ ಸವಾಲಾಗುವ ನಿರೀಕ್ಷೆ ಇದೆ.

‘ಬೌಲಿಂಗ್ ಮತ್ತು ಬ್ಯಾಟಿಂಗ್‌ನಲ್ಲಿ ಪರಿಣತರಾಗಿರುವ ಇಬ್ಬರು ನಾಯಕರ ಹಣಾಹಣಿ ಇದಾಗಿದೆ. ಅತ್ಯಂತ ಕುತೂಹಲಕಾರಿ ಹೋರಾಟ ನಡೆಯುವ ನಿರೀಕ್ಷೆ ಇದೆ’ ಎಂದು ಇಂಗ್ಲೆಂಡ್ ವಿಕೆಟ್‌ಕೀಪರ್ ಜೋಸ್ ಬಟ್ಲರ್ ಹೇಳಿದ್ದಾರೆ.

ಆದರೆ ಇಂಗ್ಲೆಂಡ್‌ನ ಅನುಭವಿ ಬೌಲರ್ ಜಿಮ್ಮಿ ಆ್ಯಂಡರ್ಸನ್ ಈ ಬಾರಿ ಲಭ್ಯರಿಲ್ಲ. ಇದರಿಂದಾಗಿ ರೂಟ್ ಸ್ವಲ್ಪ ಒತ್ತಡದಲ್ಲಿದ್ದಾರೆ. ಕೆಲವು ತಿಂಗಳುಗಳ ಹಿಂದೆ ಭಾರತದ ಎದುರು ಇಂಗ್ಲೆಂಡ್ ತನ್ನ ತವರಿನಲ್ಲಿಯೇ ಸರಣಿಯಲ್ಲಿ ಹಿನ್ನಡೆ ಅನುಭವಿಸಿತ್ತು. ಆಸ್ಟ್ರೇಲಿಯಾ ಕೂಡ ಸತತ ಎರಡು ಬಾರಿ ಬಾರ್ಡರ್–ಗಾವಸ್ಕರ್ ಟ್ರೋಫಿ ಟೂರ್ನಿಯಲ್ಲಿ ಭಾರತದ ಎದುರು ತನ್ನ ತವರಿನಲ್ಲಿಯೇ ಶರಣಾಗಿದೆ.

ಅದರಲ್ಲೂ ಗಾಬಾ ಪಂದ್ಯದಲ್ಲಿ ಹೋದ ಡಿಸೆಂಬರ್‌ನಲ್ಲಿ ಭಾರತ ತಂಡವು ಐತಿಹಾಸಿಕ ಜಯ ದಾಖಲಿಸಿತ್ತು. ರೂಟ್ ಬಳಗವೂ ಅಂತಹದ ಜಯವನ್ನು ಸಾಧಿಸುವತ್ತ ಚಿತ್ತ ನೆಟ್ಟಿದೆ.

ಆ್ಯಷಸ್ ಟ್ರೋಫಿಯೊಂದಿಗೆ ಇಂಗ್ಲೆಂಡ್ ತಂಡದ ನಾಯಕ ಜೋ ರೂಟ್ ಮತ್ತು ಆಸ್ಟ್ರೇಲಿಯಾ ತಂಡದ ಪ್ಯಾಟ್ ಕಮಿನ್ಸ್– ಎಎಫ್‌ಪಿ ಚಿತ್ರ

ಟಿ20 ವಿಶ್ವಕಪ್ ವಿಜಯದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಡೇವಿಡ್ ವಾರ್ನರ್, ಅನುಭವಿ ಉಸ್ಮಾನ್ ಖ್ವಾಜಾ, ಸ್ಟೀವ್ ಸ್ಮಿತ್ ಮತ್ತು ಲಾಬುಷೇನ್ ಆತಿಥೇಯ ತಂಡದ ಬ್ಯಾಟಿಂಗ್ ಶಕ್ತಿಯಾಗಿದ್ದಾರೆ. ಕಮಿನ್ಸ್‌ಗೆ ಸ್ಟಾರ್ಕ್, ಸ್ಪಿನ್ನರ್ ಲಯನ್ ಮತ್ತು ವೇಗಿ ಹ್ಯಾಜಲ್‌ವುಡ್ ಅವರ ಜೊತೆ ಇದೆ.

ಇಂಗ್ಲೆಂಡ್ ಬೌಲಿಂಗ್‌ನಲ್ಲಿ ಮಾರ್ಕ್ ವುಡ್, ಒಲಿ ರಾಬಿನ್ಸನ್, ಕ್ರಿಸ್ ವೋಕ್ಸ್ ಮತ್ತು ಬ್ರಾಡ್ ಅವರ ಆಟವೇ ಪ್ರಮುಖವಾಗಲಿದೆ. ವೇಗಿಗಳ ನೆಚ್ಚಿನ ತಾಣವಾಗಿರುವ ಗಾಬಾದಲ್ಲಿ ಮೇಲುಗೈ ಸಾಧಿಸಲು ನಿಕಟ ಪೈಪೋಟಿಯ ನಿರೀಕ್ಷೆಯಂತೂ ಇದೆ.

ತಂಡಗಳು: ಆಸ್ಟ್ರೇಲಿಯಾ: ಪ್ಯಾಟ್ ಕಮಿನ್ಸ್ (ನಾಯಕ), ಡೇವಿಡ್ ವಾರ್ನರ್, ಮಾರ್ಕಸ್ ಹ್ಯಾರಿಸ್, ಮಾರ್ನಸ್ ಲಾಬುಷೇನ್, ಸ್ಟೀವನ್ ಸ್ಮಿತ್, ಟ್ರಾವಿಸ್ ಹೆಡ್, ಕ್ಯಾಮರಾನ್ ಗ್ರೀನ್, ಅಲೆಕ್ಸ್ ಕ್ಯಾರಿ (ವಿಕೆಟ್‌ಕೀಪರ್), ಮಿಚೆಲ್ ಸ್ಟಾರ್ಕ್, ನೇಥನ್ ಲಯನ್, ಜೋಶ್ ಹ್ಯಾಜಲ್‌ವುಡ್, ಉಸ್ಮಾನ್ ಖ್ವಾಜಾ, ಮಿಚೆಲ್ ನೆಸರ್, ಜೇ ರಿಚರ್ಡ್ಸನ್, ಮಿಚೆಲ್ ಸ್ವಿಪ್ಸನ್.

ಇಂಗ್ಲೆಂಡ್: ಜೋ ರೂಟ್ (ನಾಯಕ), ರೋರಿ ಬರ್ನ್ಸ್,ಹಸೀಬ್ ಹಮೀದ್, ಡೇವಿಡ್ ಮಲಾನ್, ಬೆನ್ ಸ್ಟೋಕ್ಸ್, ಒಲಿ ಪೋಪ್, ಜೋಸ್ ಬಟ್ಲರ್ (ವಿಕೆಟ್‌ಕೀಪರ್), ಒಲಿ ರಾಬಿನ್ಸನ್, ಮಾರ್ಕ್ ವುಡ್, ಕ್ರಿಸ್ ವೋಕ್ಸ್, ಸ್ಟುವರ್ಟ್ ಬ್ರಾಡ್, ಜ್ಯಾಕ್ ಲೀಚ್.

ಪಂದ್ಯ ಆರಂಭ: ಬೆಳಿಗ್ಗೆ 5.30

ದಕ್ಷಿಣ ಆಫ್ರಿಕಾಕ್ಕೆ ಡೀನ್ ನಾಯಕ

ಜೋಹಾನ್ಸ್‌ಬರ್ಗ್ (ಪಿಟಿಐ): ಆತಿಥೇಯ ದಕ್ಷಿಣ ಆಫ್ರಿಕಾ ತಂಡವನ್ನು ಭಾರತ ತಂಡದ ಎದುರಿನ ಸರಣಿಯಲ್ಲಿ ಡೀನ್ ಎಲ್ಗರ್ ಮುನ್ನಡೆಸುವರು.


ಡೀನ್ ಎಲ್ಗರ್

ಇದೇ 26ರಿಂದ ಆರಂಭವಾಗುವ ಟೆಸ್ಟ್ ಸರಣಿಯಲ್ಲಿ ಆಡುವ ತಂಡವನ್ನು ಕ್ರಿಕೆಟ್ ದಕ್ಷಿಣ ಆಫ್ರಿಕಾ ಮಂಗಳವಾರ ಪ್ರಕಟಿಸಿದೆ.ವೇಗಿ ಸಿಸಾಂದ ಮಗಾಲಾ ಮತ್ತು ವಿಕೆಟ್ ಕೀಪರ್ ರಿಯಾನ್ ರಿಕೆಲ್ಟನ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ತಂಡ: ಡೀನ್ ಎಲ್ಗರ್ (ನಾಯಕ), ತೆಂಬಾ ಬವುಮಾ (ಉಪನಾಯಕ), ಕ್ವಿಂಟನ್ ಡಿಕಾಕ್ (ವಿಕೆಟ್‌ಕೀಪರ್), ಕಗಿಸೊ ರಬಾಡ, ಸರೆಲ್ ಎರ್ವಿ, ಬೆರನ್ ಹೆನ್ರಿಕ್ಸ್, ಜಾರ್ಜ್ ಲಿಂಡೆ, ಕೇಶವ್ ಮಹಾರಾಜ್, ಲುಂಗಿ ಗಿಡಿ, ಏಡನ್ ಮರ್ಕರಮ್, ವಿಯಾನ್ ಮಲ್ಡಾರ್, ಎನ್ರಿಚ್ ನಾರ್ಕಿಯಾ, ಕೀಗನ್ ಪೀಟ ರ್ಸನ್, ರೆಸಿ ವ್ಯಾನ್ ಡರ್ ಡಸೆ, ಕೈಲ್ ವೆರೆಯನ್, ಮಾರ್ಕೊ ಜೆನ್ಸೆನ್, ಗ್ಲೆಂಟನ್ ಸ್ಟುಮನ್, ಪ್ರೆನೆಲನ್, ಸುಬ್ರೆ ಯನ್, ಸಿಸಾಂದಾ ಮಗಾಲಾ, ರಿಯಾನ್ ರಿಕೆಲ್ಟನ್, ಡನೆ ಒಲಿವರ್.

ಮೊಣಕೈ ಗಾಯ: ವಿರಾಮ ತೆಗೆದುಕೊಳ್ಳಲಿರುವ ಕೇನ್

ವೆಲ್ಲಿಂಗ್ಟನ್ (ಪಿಟಿಐ): ನ್ಯೂಜಿಲೆಂಡ್ ಕ್ರಿಕೆಟ್ ತಂಡದ ನಾಯಕ ಕೇನ್ ವಿಲಿಯಮ್ಸನ್ ಮೊಣಕೈ ನೋವಿನಿಂದ ಬಳಲುತ್ತಿದ್ದು, ಮುಂದಿನ ಎರಡು ತಿಂಗಳು ಆಟದಿಂದ ಹೊರಗುಳಿಯುವ ಸಾಧ್ಯತೆ ಇದೆ ಎಂದು ಕೋಚ್ ಗ್ಯಾರಿ ಸ್ಟೆಡ್ ತಿಳಿಸಿದ್ದಾರೆ.

2022ರ ಫೆಬ್ರವರಿಯಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ನಡೆಯಲಿರುವ ಟೆಸ್ಟ್ ಸರಣಿ ವೇಳೆಗೆ ವಿಲಿಯಮ್ಸನ್ ತಂಡಕ್ಕೆ ಮರಳಲಿದ್ದಾರೆ ಎಂದು ಅವರು ಹೇಳಿದ್ದಾರೆ.

ವಿಲಿಯಮ್ಸನ್

ಭಾರತ ತಂಡದ ವಿರುದ್ಧ ಇತ್ತೀಚೆಗೆ ಮುಕ್ತಾಯಗೊಂಡ 2ನೇ ಟೆಸ್ಟ್ ಪಂದ್ಯಕ್ಕೂ ಮೊದಲು ವಿಲಿಯಮ್ಸನ್ ಗಾಯಗೊಂಡಿದ್ದರು. ವೈದ್ಯರ ಸಲಹೆಯಂತೆ ಅವರು ಶಸ್ತ್ರಚಿಕಿತ್ಸೆಗೆ ಒಳಗಾಗಲಿದ್ದು, ಕನಿಷ್ಠ ಎಂಟರಿಂದ ಒಂಬತ್ತು ವಾರ ವಿಶ್ರಾಂತಿ ಪಡೆಯುವುದು ಖಚಿತ ಎಂದು ಮೂಲಗಳು ತಿಳಿಸಿವೆ.

ಕ್ರಿಕೆಟ್: ಹನುಮ, ಇಶಾನ್ ಅರ್ಧಶತಕ

ಬ್ಲೂಮ್‌ಫೌಂಟೇನ್ : ಹನುಮವಿಹಾರಿ ಮತ್ತು ಇಶಾನ್ ಕಿಶನ್ ಅವರ ಅಮೋಘ ಬ್ಯಾಟಿಂಗ್ ಬಲದಿಂದ ಭಾರತ ಎ ತಂಡವು ದಕ್ಷಿಣ ಆಫ್ರಿಕಾಕ್ಕೆ ದಿಟ್ಟ ತಿರುಗೇಟು ನೀಡಿದೆ.

ಇಲ್ಲಿ ನಡೆಯುತ್ತಿರುವ ‘ಟೆಸ್ಟ್’ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಆತಿಥೇಯ ತಂಡವು 268 ರನ್ ಗಳಿಸಿತು. ಅದಕ್ಕುತ್ತರವಾಗಿ ಭಾರತ ತಂಡವು 76.5 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 229 ರನ್ ಗಳಿಸಿತು.

ಆರಂಭಿಕ ಬ್ಯಾಟ್ಸ್‌ಮನ್ ಪೃಥ್ವಿ ಶಾ, ಅಭಿಮನ್ಯು ಈಶ್ವರ್ನ ಮತ್ತು ದೇವದತ್ತ ಪಡಿಕ್ಕಲ್ ಅವರ ವೈಫಲ್ಯದಿಂದಾಗಿ ತಂಡವು ಬೇಗ ಕುಸಿಯುವ ಆತಂಕ ಎದುರಿಸಿತ್ತು. ಆದರೆ, ಹನುಮವಿಹಾರಿ (63; 170ಎ 6ಬೌಂಡರಿ, 1ಸಿಕ್ಸರ್) ಮತ್ತು ಇಶಾನ್ ಕಿಶನ್ (ಬ್ಯಾಟಿಂಗ್ 86; 141ಎ, 12ಬೌಂಡರಿ, 1ಸಿಕ್ಸರ್) ಐದನೇ ವಿಕೆಟ್ ಜೊತೆಯಾಟದಲ್ಲಿ 115 ರನ್ ಸೇರಿಸಿದರು. ಮೊದಲ ಇನಿಂಗ್ಸ್ ಚುಕ್ತಾ ಮಾಡಲು ಇನ್ನು 39 ರನ್‌ಗಳನ್ನು ಮಾತ್ರ ಭಾರತ ಎ ತಂಡ ಗಳಿಸಬೇಕಿದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ದಕ್ಷಿಣ ಆಫ್ರಿಕಾ: 94.5 ಓವರ್‌ಗಳಲ್ಲಿ 268, ಭಾರತ: 76.5 ಓವರ್‌ಗಳಲ್ಲಿ 6ಕ್ಕೆ229 (ಅಭಿಮನ್ಯು ಈಶ್ವರನ್ 28, ಹನುಮವಿಹಾರಿ 63, ಇಶಾನ್ ಕಿಶನ್ ಬ್ಯಾಟಿಂಗ್ 86, ಲುಥೊ ಸಿಪಾಮ್ಲಾ 63ಕ್ಕೆ3)

ಭಾರತ ತಂಡದಲ್ಲಿ ಮೂವರು ಕನ್ನಡಿಗರು?

ನವದೆಹಲಿ (ಪಿಟಿಐ): ದಕ್ಷಿಣ ಆಫ್ರಿಕಾ ಪ್ರವಾಸಕ್ಕೆ ತೆರಳಲಿರುವ ಭಾರತ ತಂಡದಲ್ಲಿ ಮೂವರು ಕನ್ನಡಿಗರು ಸ್ಥಾನ ಪಡೆಯುವ ಸಾಧ್ಯತೆ ಇದೆ.

ಈಚೆಗೆ ನ್ಯೂಜಿಲೆಂಡ್ ಎದುರಿನ ಟೆಸ್ಟ್‌ನಲ್ಲಿ ಶತಕ ಗಳಿಸಿದ ಮಯಂಕ್ ಅಗರವಾಲ್, ಗಾಯದಿಂದ ಚೇತರಿಸಿಕೊಂಡಿರುವ ಕೆ.ಎಲ್. ರಾಹುಲ್ ಮತ್ತು ಮಧ್ಯಮವೇಗಿ ಪ್ರಸಿದ್ಧಕೃಷ್ಣ ಅವರು ಸ್ಥಾನ ಪಡೆಯುವ ನಿರೀಕ್ಷೆ ಇದೆ.

21 ಆಟಗಾರರ ತಂಡವನ್ನು ಪ್ರಕಟಿಸುವ ಸಾಧ್ಯತೆ ಇದ್ದು, ಆವೇಶ್ ಖಾನ್, ಪ್ರಿಯಾಂಕ್ ಪಾಂಚಾಲ್ ಅವರಿಗೂ ಅವಕಾಶ ಸಾಧ್ಯತೆ ಇದೆ.

ಸಂಭವನೀಯ ತಂಡ: ವಿರಾಟ್ ಕೊಹ್ಲಿ (ನಾಯಕ), ರೋಹಿತ್ ಶರ್ಮಾ, ಕೆ.ಎಲ್. ರಾಹುಲ್, ಚೇತೇಶ್ವರ್ ಪೂಜಾರ, ಅಜಿಂಕ್ಯ ರಹಾನೆ, ಶ್ರೇಯಸ್ ಅಯ್ಯರ್, ರಿಷಭ್ ಪಂತ್ (ವಿಕೆಟ್‌ಕೀಪರ್), ಆರ್. ಅಶ್ವಿನ್, ರವೀಂದ್ರ ಜಡೇಜ, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್, ಉಮೇಶ್ ಯಾದವ್, ಪ್ರಸಿದ್ಧಕೃಷ್ಣ, ಆವೇಶ್ ಖಾನ್, ದೀಪಕ್ ಚಾಹರ್, ವೃದ್ಧಿಮಾನ್ ಸಹಾ (ವಿಕೆಟ್‌ಕೀಪರ್), ಮಯಂಕ್ ಅಗರವಾಲ್, ಶುಭಮನ್ ಗಿಲ್, ಹನುಮವಿಹಾರಿ, ಅಭಿಮನ್ಯು ಈಶ್ವರನ್, ಪ್ರಿಯಾಂಕ್ ಪಾಂಚಾಲ್, ಜಯಂತ್ ಯಾದವ್.

ಮಯಂಕ್ ಆಗರವಾಲ್

ಸಂಕ್ಷಿಪ್ತ ಸುದ್ದಿ

ಫೆಬ್ರುವರಿಯಲ್ಲಿ ಎರಡು ಎಟಿಪಿ ಟೂರ್ನಿ

ಬೆಂಗಳೂರು: ಮುಂದಿನ ವರ್ಷದ ಫೆಬ್ರುವರಿಯಲ್ಲಿ ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯು ಎರಡು ಎಟಿಪಿ ಚಾಲೆಂಜರ್ ಟೂರ್ನಿಗಳನ್ನು ಆಯೋಜಿಸಲಿದೆ.

2020ರಲ್ಲಿ ಇಲ್ಲಿ ಕೊನೆಯ ಬಾರಿಗೆ ಎಟಿಪಿ ಟೂರ್ನಿ ಆಯೋಜನೆಯಾಗಿತ್ತು. ಇದೀಗ ಎರಡು ಟೂರ್ನಿಗಳನ್ನು ಒಂದೇ ತಿಂಗಳಲ್ಲಿ ನಡೆಸಲು ಸಂಸ್ಥೆ ಸಿದ್ಧವಾಗಿದೆ.

‘ಇದು ಭಾರತದ ಆಟಗಾರರಿಗೆ ಉತ್ತಮ ಅವಕಾಶವಾಗಿದೆ. ಎಟಿಪಿ ರ‍್ಯಾಂಕಿಂಗ್‌ನಲ್ಲಿ ಬಡ್ತಿ ಗಳಿಸಲು ಸದಾವಕಾಶ’ ಎಂದು ಮೂಲಗಳು ತಿಳಿಸಿವೆ.

ಡ್ರ್ಯಾಗ್ ರೇಸ್: ಮುದ್ದಪ್ಪ ದಾಖಲೆ

ಪುಣೆ (ಪಿಟಿಐ): ಹೇಮಂತ್ ಮುದ್ದಪ್ಪ ಲೊನಾವಳದಲ್ಲಿ ನಡೆಯುತ್ತಿರುವ ಎಫ್‌ಎಂಎಸ್‌ಸಿಐ ಡ್ರ್ಯಾಗ್ ರೇಸ್ 600 ಸಿಸಿ ವಿದೇಶಿ ಬೈಕ್‌ಗಳ ಮುಕ್ತ ರೇಸ್‌ನಲ್ಲಿ ರಾಷ್ಟ್ರೀಯ ದಾಖಲೆ ನಿರ್ಮಿಸಿದರು.

ಆ್ಯಂಬಿ ವ್ಯಾಲಿ ಏರ್‌ಸ್ಟ್ರಿಪ್‌ನಲ್ಲಿ ಮಂಗಳವಾರ ನಡೆದ ರೇಸ್‌ನಲ್ಲಿ ಕೊಡಗಿನ 31 ವರ್ಷದ ಮುದ್ದಪ್ಪ 9.522 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ದಾಖಲೆ ಬರೆದರು.

ಚಿಕಿತ್ಸೆಗೆ ತೆರಳಿದ ಹಾರ್ದಿಕ್ ಪಾಂಡ್ಯ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ತಮ್ಮ ಗಾಯದ ಆರೈಕೆಗಾಗಿ ಮುಂಬೈಗೆ ತೆರಳಿದ್ದಾರೆ. ಇದರಿಂದಾಗಿ ಅವರು ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಬರೋಡಾ ತಂಡದಲ್ಲಿ ಕಣಕ್ಕಿಳಿಯುವುದಿಲ್ಲ.

ಟಿ20 ವಿಶ್ವಕಪ್ ಟೂರ್ನಿಯಲ್ಲಿ ಅವರು ಬೌಲಿಂಗ್ ಮಾಡಿರಲಿಲ್ಲ.

‘ಕಳೆದ ಮೂರು ವರ್ಷಗಳಲ್ಲಿ ಹಾರ್ದಿಕ್ ಮುಂಬೈಗೆ ಪುನಶ್ಚೇತನಕ್ಕಾಗಿ ತೆರಳುವುದಾಗಿ ತಿಳಿಸಿದ್ದಾರೆ’ ಎಂದು ಬರೋಡ ಕ್ರಿಕೆಟ್ ಸಂಸ್ಥೆ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಬಡ್ಡಿ ಸಂಸ್ಥೆ ಚುನಾವಣೆ: ಸ್ಪರ್ಧಿಗಳ ಭವಿಷ್ಯ ಲಕೋಟೆಯಲ್ಲಿ

ಬೆಂಗಳೂರು: ಕರ್ನಾಟಕ ರಾಜ್ಯ ಕಬಡ್ಡಿ ಸಂಸ್ಥೆಯ ಪದಾಧಿಕಾರಿಗಳ ಚುನಾವಣೆಯು ಕಂಠೀರವ ಕ್ರೀಡಾಂಗಣದಲ್ಲಿರುವ ಸಂಸ್ಥೆಯ ಕಚೇರಿಯಲ್ಲಿ ಮಂಗಳವಾರ ನಡೆಯಿತು.

ಆದರೆ ಹೈಕೋರ್ಟ್ ಸೂಚನೆಯ ಮೇರೆಗೆ ಆರು ಸದಸ್ಯ ಸಂಸ್ಥೆಗಳ ಮತಗಳನ್ನು ಲಕೋಟೆಯಲ್ಲಿ ಭದ್ರಪಡಿಸಲಾಗಿದ್ದು, ಫಲಿತಾಂಶವನ್ನು ತಡೆಹಿಡಿಯಲಾಗಿದೆ. ‘2018ರಲ್ಲಿ ಸಂಸ್ಥೆಯ ಚುನಾವಣೆ ನಡೆಸಲು ಉದ್ದೇಶಿಸಿದಾಗ ತಮಗೂ ಮತದಾನದ ಹಕ್ಕು ನೀಡಬೇಕೆಂದು ಹಾವೇರಿ, ಕೊಪ್ಪಳ, ಹಾಸನ, ಚಾಮರಾಜನಗರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಸ್ಥೆಗಳ ಕೋರಿದ್ದವು. ಈ ಘಟಕಗಳಿಗೆ ಮತದಾನದ ಹಕ್ಕು ನೀಡುವಂತೆ ಹೈಕೋರ್ಟ್ ಸೂಚಿಸಿತ್ತು. ಆದರೆ ಮತಗಳನ್ನು ಲಕೋಟೆಯಲ್ಲಿ ಹಾಕಲು ತಿಳಿಸಿತ್ತು. ಈ ಮತಗಳು ಲಕೋಟೆಯಲ್ಲಿ ಇರುವುದರಿಂದ ಎಣಿಕೆ ಪ್ರಕ್ರಿಯೆ ಆಗಲಿಲ್ಲ’ ಎಂದು ಅಧಿಕೃತ ಮೂಲಗಳು ತಿಳಿಸಿವೆ.

‘ಒಟ್ಟು 56 ಮತಗಳು ಚಲಾವಣೆಯಾಗಿದ್ದು, ವಿವಿಧ ಹುದ್ದೆಗಳಿಗೆ 24 ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ’ ಎಂದು ಹೆಸರು ಹೇಳಲು ಇಚ್ಛಿಸದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಸಂಸ್ಥೆಯ ಅಧ್ಯಕ್ಷ ಸ್ಥಾನಕ್ಕೆ ಪ್ರಸಾದ್ ಬಾಬು, ಹನುಮಂತೇಗೌಡ, ಕಾರ್ಯದರ್ಶಿ ಸ್ಥಾನಕ್ಕೆ ಮುನಿರಾಜು, ಪಿಳ್ಳಪ್ಪ, ಖಜಾಂಚಿ ಸ್ಥಾನಕ್ಕೆ ನಂದಕುಮಾರ್ ಪಾಟೀಲ, ಕೃಷ್ಣಮೂರ್ತಿ, ಸಂಘಟನಾ ಕಾರ್ಯದರ್ಶಿ ಸ್ಥಾನಕ್ಕೆ ವಿ.ಜಯರಾಂ, ಬಿ.ಸಿ.ಸುರೇಶ್ ಸ್ಪರ್ಧಿಸಿದ್ದಾರೆ. ಚೇರಮನ್ ಆಗಿ ರಾಕೇಶ್ ಅವಿರೋಧವಾಗಿ ಆಯ್ಕೆ ಆಗಿದ್ದರು.